ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ. ಪದವಿಗಾಗಿ ಅರ್ಪಿಸಿದ ಮಹಾಪ್ರಬಂಧ

ಸಂಶೋಧಕ

ಪ್ರಕಾಶ ಬಳ್ಳಾರಿ

ಮಾರ್ಗದರ್ಶಕರು

ಡಾ. ಸ.ಚಿ. ರಮೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೯

343

ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ. ಪದವಿಗಾಗಿ ಅರ್ಪಿಸಿದ ಮಹಾಪ್ರಬಂಧ

ಸಂಶೋಧಕ

ಪ್ರಕಾಶ ಬಳ್ಳಾರಿ

ಮಾರ್ಗದರ್ಶಕರು

ಡಾ. ಸ.ಚಿ. ರಮೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೯

ಪ್ರಮಾಣಪತ್ರ

'ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನ' ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ|| ಸ.ಚಿ. ರಮೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲೀ, ಇತರೆ ಯಾವುದೇ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

(ಪ್ರಕಾಶ ಬಳ್ಳಾರಿ)
ಸಂಶೋಧಕ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : ೨7-11-೨೦೦೯

ದೃಢೀಕರಣ ಪತ್ರ

ಶ್ರೀ ಪ್ರಕಾಶ ಗವಿಸಿದ್ದಪ್ಪ ಬಳ್ಳಾರಿ ಇವರು 'ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನ' ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಲೀ ಬಳಸಿಕೊಂಡಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಸ.ಚಿ. ರಮೇಶ)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 27-11-2009

ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

ಅಧ್ಯಾಯ - ೧ ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

ಪ್ರವೇಶ :

ಹೈದರಾಬಾದ್ - ಕರ್ನಾಟಕ ಎಂದರೆ ನೆನಪಾಗುವುದು ಮುಸಲ್ಮಾನರ ಆಳ್ವಿಕೆ. ೧೩ ನೇ ಶತಮಾನದಿಂದ ಸ್ವಾತಂತ್ರ್ಯ ಸಿಗುವವರೆಗೂ ಕೊಪ್ಪಳವು ಮುಸಲ್ಮಾನ ರಾಜರುಗಳ ಆಡಳಿತಕ್ಕೆ ಒಳಪಟ್ಟಿತ್ತು. ಭಾರತ ದೇಶ ೧೯೪೭ ಆಗಸ್ಟ್ ೧೫ ರಂದು ಸ್ವಾತಂತ್ರ್ಯ ಪಡೆದರೂ, ಹೈ.ಕ. ಭಾಗ ೧೩ ತಿಂಗಳು ನಂತರದಲ್ಲಿ (೧೭-೦೯-೧೯೪೮) ನಿಜಾಮಶಾಹಿಯ ಕಪಿಮುಷ್ಠಿಯಿಂದ ಬಿಡುಗಡೆಗೊಂಡಿತು. ಸುಮಾರು ಆರು ಶತಮಾನಗಳಿಂದ ಮುಸಲ್ಮಾನ ಅರಸರುಗಳ ಕೈಯಲ್ಲಿ ಆಳಲ್ಪಟ್ಟ ಕೊಪ್ಪಳ ಸಹಜವಾಗಿಯೇ ಮುಸಲ್ಮಾನರ ಒಂದು ಭದ್ರಕೋಟೆಯಂತಾಗಿತ್ತು. ಅಂತೆಯೇ ಇಲ್ಲಿನ ಪ್ರದೇಶಗಳಲ್ಲಿ ಹಿಂದಿ, ಉರ್ದು ಭಾಷೆಯ ಪ್ರಭಾವ ಹೆಚ್ಚಾಗುತ್ತಾ ಹೋಯಿತು. ''ಹಾಗೆಯೇ ಹೈದರಾಬಾದ್-ಕರ್ನಾಟಕವು ಅಧಿಕೃತವಾಗಿ ೦೩-೦೪-೧೩೪೭ ರಲ್ಲಿ ಕಲಬುರ್ಗಿಯಲ್ಲಿ ಬಹಮನಿ ರಾಜ್ಯ ಸ್ಥಾಪನೆಯಾದ ನಂತರ ನಿರಂತರವಾಗಿ ಮುಸ್ಲಿಂ ಸಂಸ್ಕೃತಿ ಮತ್ತು ಉರ್ದು ಭಾಷೆಯ ವಿಪರೀತ ಪ್ರಭಾವ ಮತ್ತು ಬಳಕೆಯಿಂದಾಗಿ ಇಲ್ಲಿಯ ಸಂಸ್ಕೃತಿ ಮತ್ತು ಕನ್ನಡ ಭಾಷೆ ಜನರ ಅರಿವಿನಿಂದ ದೂರ ಸರಿದವು''[೧]. ಆದರೂ ಇಲ್ಲಿನ ಕನ್ನಡ ಭಾಷೆ ಅನ್ಯ ಭಾಷೆಯ ಆಳ್ವಿಕೆ, ದಬ್ಬಾಳಿಕೆಗಳ ನಡುವೆಯೂ, ಹಲವಾರು ಏರಿಳಿತಗಳನ್ನು ಕಂಡು ತನ್ನತನವನ್ನು ಉಳಿಸಿಕೊಂಡು ಬಂದಿದೆಯಾದರೂ, ಹೈದರಾಬಾದ್ - ಕರ್ನಾಟಕ ಪ್ರದೇಶದ ಕನ್ನಡ ಭಾಷೆಯಲ್ಲಿ ಹಿಂದಿ, ಉರ್ದು ಪದಗಳ ಬಳಕೆ ನೋಡಿದಾಗ ಕನ್ನಡ ಭಾಷೆಯ ಮೇಲೆ ಉರ್ದು ಭಾಷೆಯ ಪ್ರಭಾವ, ಪರಿಣಾಮ ಆಗಿರುವುದು ಸಹಜವಾಗಿದೆ.

ಈ ದಿಸೆಯಲ್ಲಿ ಡಾ. ವೀರಣ್ಣ ದಂಡೆಯವರು ಈ ಹೈದರಾಬಾದ್ - ಕರ್ನಾಟಕ ಪ್ರದೇಶವನ್ನು ಫಿನ್‌ಲ್ಯಾಂಡಿಗೆ ಹೋಲಿಸಿದ್ದಾರೆ. ಅವರ ಅಭಿಪ್ರಾಯದಂತೆ ಹೈದರಾಬಾದ್ - ಕರ್ನಾಟಕದ ಇತಿಹಾಸ ಹೆಚ್ಚು ಕಡಿಮೆ ಫಿನ್‌ಲ್ಯಾಂಡಿನ ಇತಿಹಾಸವನ್ನೇ ಹೋಲುತ್ತದೆ. ಏಕೆಂದರೆ ''ಫಿನ್‌ಲ್ಯಾಂಡ್ ಸುಮಾರು ೫೦೦ ವರ್ಷಗಳವರೆಗೆ ಗುಲಾಮಗಿರಿಯನ್ನು ಅನುಭವಿಸಿದ ದೇಶ''[೨]. ಆ ಗುಲಾಮಗಿರಿ ಆಡಳಿತದಲ್ಲಿ ತನ್ನ ಮಾತೃ ಸಂಸ್ಕೃತಿ, ಭಾಷೆ, ತನ್ನತನವನ್ನು ಮರೆಯಬೇಕಾದ ಅನಿವಾರ್ಯತೆ ಒದಗಿತ್ತು. ಆದರೂ ಅಲ್ಲಿನ ಜನಪದ ಭಾಷೆಯೇ ಫಿನ್‌ಲ್ಯಾಂಡಿನ ಮಾತೃಭಾಷೆ ಫಿನ್ನಿಷ್ ಭಾಷೆಯನ್ನು, ಫಿನ್‌ಲ್ಯಾಂಡಿನ ಸಂಸ್ಕೃತಿಯನ್ನು ಜೀವಂತವಾಗಿಡಲು ಕಾರಣವಾಗಿತ್ತು. ಮುಂದೆ ಇಂತಹದೇ ಆದ ಜನಪದ ಕಾವ್ಯಶೋಧನೆಯೇ ಅಲ್ಲಿಯ ಜನರಲ್ಲಿ ಪರಕೀಯ ಗುಲಾಮಗಿರಿಯಿಂದ ಸ್ವತಂತ್ರವಾಗಲು ಕಾರಣವಾಗಿದ್ದು, ಮಾತೃಭಾಷೆಯ, ಮಾತೃಸಂಸ್ಕೃತಿಯ ಮಹತ್ವ ಏನೆಂಬುದು ತಿಳಿಸುತ್ತದೆ.

ಹಾಗೆ ನೋಡಿದರೆ ಹೈದರಾಬಾದ್-ಕರ್ನಾಟಕ ಪ್ರದೇಶದ ಇತಿಹಾಸವೂ ಫಿನ್‌ಲ್ಯಾಂಡ್ ದೇಶದ ಇತಿಹಾಸಕ್ಕಿಂತ ಭಿನ್ನವಾದುದೇನಲ್ಲ. ಏಕೆಂದರೆ ಸುಮಾರು ೬೦೦ ವರ್ಷಗಳಷ್ಟು ಕಾಲ ಹೈದರಾಬಾದ್ - ಕರ್ನಾಟಕ ಪ್ರದೇಶದ ಭಾಷೆ, ಸಂಸ್ಕೃತಿಯ ಮೇಲೆ ಅನ್ಯಭಾಷೆಗಳ ದಬ್ಬಾಳಿಕೆ, ಪ್ರಭಾವ ಹೆಚ್ಚಾಗಿತ್ತು. ಆದರೂ ಇಂತಹ ಪರಿಸ್ಥಿತಿಯಲ್ಲಿಯೂ ಇಲ್ಲಿನ ಮಾತೃಭಾಷೆಯಾದ ಕನ್ನಡದ ತಿರುಳು ಇರುವ ನಾಡೆಂದು ಈ ಭಾಗದ ಕೊಪ್ಪಳ, ರಾಯಚೂರು ಪ್ರದೇಶಗಳು ಕರೆಸಿಕೊಂಡಿದ್ದವು. ಇಲ್ಲಿನ ಭಾಷೆಯ

ಉಳಿವೂ ಜನಪದ ಸಾಹಿತ್ಯದಿಂದಲೇ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮುಂದೆ ಇದೇ ಜನಪದ ಸಾಹಿತ್ಯದ ಪ್ರಕಾರವಾದ ಲಾವಣಿ, ಗೀಗಿ ಹಾಡುಗಳು, ಕೋಲಾಟದ ಪದಗಳು, ಭುಲಾಯಿ ಹಾಡುಗಳು ಮುಂತಾದವು ಹೈದರಾಬಾದ್ ನಿಜಾಮನ ಆಳ್ವಿಕೆಯ ವಿರುದ್ಧ ಬಂಡೆದ್ದು, ಭಾರತ ಒಕ್ಕೂಟಕ್ಕೆ ಸೇರಲು ಕಾರಣವಾಯಿತು ಎನ್ನುವದು ನಿಜ ಸಂಗತಿಯಾಗಿದೆ. ಜನಪದ ಸಾಹಿತ್ಯದ ಪ್ರಭಾವವೂ ಹೈದರಾಬಾದ್ - ಕರ್ನಾಟಕ ವಿಮೋಚನಾ ಹೋರಾಟಕ್ಕೆ ಒಂದು ಪ್ರಮುಖವಾದ, ಪ್ರಬಲವಾದ ಅಸ್ತ್ರವಾಗಿತ್ತು.

ಎರಡು ನೂರಕ್ಕೂ ಹೆಚ್ಚು ವರ್ಷಗಳ ಕಾಲ ಈ ಸ್ಥಳ ಮುಸ್ಲಿಮ್‌ರ ಆಡಳಿತಕ್ಕೆ ಒಳಗಾಗಿದ್ದರಿಂದ ಇಲ್ಲಿ ಮುಸ್ಲಿಮ್ ಸಾಹಿತ್ಯ, ಸಂಸ್ಕೃತಿ ಹುಲುಸಾಗಿ ಬೆಳೆಯಲು ಕಾರಣವಾಯಿತು. ಅನೇಕ ಮುಸ್ಲಿಮ್ ಗ್ರಂಥಗಳಲ್ಲಿ ಕೊಪ್ಪಳದ ಉಲ್ಲೇಖವಿದೆ. ನಾನಾ ಹೆಸರುಗಳಿಂದ ಕೊಪ್ಪಳವನ್ನು ಉಲ್ಲೇಖಿಸಲಾಗಿದೆ. ಅನೇಕ ಉರ್ದು ಲಿಪಿಗಳಿವೆ, ಪುಸ್ತಕಗಳಿವೆ. ಮುಸ್ಲಿಮ್ ಶಿಲ್ಪ ಕಲೆಯ ಆಕಾರದ ಕಮಾನುಗಳಿವೆ, ಗೋರಿಗಳಿವೆ, ದರಗಾಗಳಿವೆ, ಮಸೀದಿಗಳಿವೆ, ಮುಸ್ಲಿಮ್ ಶಾಲೆಗಳಾದ ಮದರಸಾಗಳಿವೆ.

ಕೊಪ್ಪಳ ಹೈದರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟದ್ದರಿಂದ ನಾವು ಹೈ.ಕ. ಭಾಗಕ್ಕೆ ಸೇರಿದವರಾಗಿದ್ದೇವೆ. ಆದ್ದರಿಂದ ಇಲ್ಲಿನ ಪ್ರದೇಶಗಳಲ್ಲಿನ ಸಾಹಿತ್ಯದಲ್ಲಿ ಉರ್ದು ಮಾದರಿಯ 'ಗಜಲ್' ಬಹುಮುಖ್ಯವಾಗಿ ಗಮನ ಸೆಳೆಯುತ್ತದೆ. ಉರ್ದು ಸಾಹಿತ್ಯವೂ ಈ ಪ್ರದೇಶದಲ್ಲಿ ಬಹಳಷ್ಟು ಬೆಳೆದಿದೆ. ಈ ನಿಟ್ಟಿನಲ್ಲಿ ಭಾವೈಕ್ಯತೆ ತಾಣವಾಗಿರುವ ಹೈ.ಕ ಪ್ರದೇಶದಲ್ಲಿ ಮೊಹರಂ ಹಬ್ಬ ಹಾಗೂ ಉರ್ದು ಸಾಹಿತ್ಯದ ಭಾಗವಾಗಿರುವ ರಿವಾಯತ್ (ಮೊಹರಂ) ಪದಗಳೂ ಬಹುಮುಖ್ಯವಾಗಿ ಪ್ರಚಲಿತದಲ್ಲಿವೆ.

ಹೈದರಾಬಾದ್ - ಕರ್ನಾಟಕದಲ್ಲಿ ದೊರೆಯುವ ಜನಪದ ಸಾಹಿತ್ಯ ಅತ್ಯಂತ ವಿಶಿಷ್ಟವಾದುದಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಹೀಗೆ ಹಲವು ವರ್ಷಗಳವರೆಗೆ ಮುಸಲ್ಮಾನರ ಆಳ್ವಿಕೆಗೆ, ಸಂಸ್ಕೃತಿಗೆ ಒಳಗಾಗಿದ್ದ ಈ ಪ್ರದೇಶದಲ್ಲಿ ಸಹಜವಾಗಿಯೇ ಆ ಸಂಸ್ಕೃತಿಯ ಛಾಯೆ ಮೂಡಿದೆ ಎನ್ನಬಹುದು. ''ಇಲ್ಲಿ ಬಹುಸಂಖ್ಯಾತರ ಸಂಸ್ಕೃತಿ ಎಷ್ಟೋ ಅಂಶಗಳನ್ನು ಮುಸ್ಲಿಮರಿಂದ ಸ್ವೀಕರಿಸಿದೆ. ಈ ಭಾಗದಲ್ಲಿ ಭುಲಾಯಿ ಹಾಡುಗಳನ್ನು 'ಚಪ್ಪಳಗಿ ಹಾಡು' ಎಂದು ಕರೆಯುತ್ತಾರೆ. ಚಪ್ಪಾಳೆ ಬಾರಿಸುತ್ತ ಇವನ್ನು ಹಾಡುವುದರಿಂದ ಈ ಹೆಸರು ಬಂದಿರುವ ಸಾಧ್ಯತೆಯಿದೆ''[೩].

ಮುಸಲ್ಮಾನರ ಪ್ರಸಿದ್ಧ 'ಮೊಹರಂ' ಹಬ್ಬವನ್ನು ಇಲ್ಲಿ ಬಹುತೇಕ ಎಲ್ಲರೂ ಆಚರಿಸುತ್ತಾರೆ. ಹಿಂದೂ - ಮುಸಲ್ಮಾನರೆಂಬ ಭೇದ-ಭಾವವಿಲ್ಲದೆ ಕೋಮುಸೌಹಾರ್ದತೆಯಿಂದ ಆಚರಿಸಲಾಗುತ್ತಿರುವ ಮೊಹರಂ ಹಬ್ಬವನ್ನು ನಾವು ಮುಸಲ್ಮಾನರ ಸಂಸ್ಕೃತಿಯಿಂದ ಸ್ವೀಕರಿಸಲಾಗಿದೆ. ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಹೈದರಾಬಾದ್ - ಕರ್ನಾಟಕ ಪ್ರದೇಶದಲ್ಲಿ ಮೊಹರಂ ಹಾಡುಗಳು ಅಧಿಕ ಸಂಖ್ಯೆಯಲ್ಲಿವೆ. ಇದು ಮುಸ್ಲಿಮ್ ಆಚರಣೆಯಾದರೂ, ಹಾಡುಗಳು ಕೇವಲ ಏಕ ಸಂಸ್ಕೃತಿ, ಏಕ ಜಾತಿಗೆ ಮೀಸಲಾಗಿರದೆ

ಬಹುಸಂಖ್ಯಾತರ ಕಥಾವಸ್ತುವುಳ್ಳ, ಪುರಾಣ ಕಥೆಗಳುಳ್ಳ, ಹಿಂದೂ ಪೌರಾಣಿಕ, ಧಾರ್ಮಿಕ ಭಾವನೆಗಳ ಕಥಾ ವಸ್ತುವುಳ್ಳ ಹಾಡುಗಳು ಮೊಹರಂ ಹಾಡುಗಳ ಸಮಯದಲ್ಲಿ ಬಳಕೆಗೆ ಬಂದಿವೆ. ''ಇವು ಮುಸ್ಲಿಮ್ ಸಂಪ್ರದಾಯದ ಹಾಡುಗಳಾಗಿದ್ದರೂ, ಶಿವ, ಶಂಕರ ಭವಸಾಗರ, ಮಹಾದೇವ, ಶ್ರೀ ಹರಿ ಮುಂತಾದ ಹಿಂದೂ ಧರ್ಮಸ್ಪರ್ಶಿ ಪದಗಳ ಬಳಕೆ ಧಾರಾಳವಾಗಿದೆ. ಶರಣ, ಅನುಭಾವ, ನಿರಂಜನ, ನಿರಂಕಾರ, ಕಾಲಜ್ಞಾನ ಮುಂತಾದ ವೀರಶೈವ ಪಾರಿಭಾಷಿಕ ಪದಗಳು, ಅಲ್ಲಮಪ್ರಭು, ಬಸವಣ್ಣ ಮುಂತಾದ ವ್ಯಕ್ತಿನಾಮಗಳನ್ನು ಕವಿಗಳು ಬಳಸಿಕೊಂಡಿದ್ದಾರೆ''[೪]. ಸೂಫಿ ಸಂತರಾದ ನಬೀ ಹಬೀಬರನ್ನು ಜನಪದರು ಹಾಡುಗಳಲ್ಲಿ ಶರಣ ಎಂದೇ ಸಂಬೋಧಿಸುತ್ತಾರೆ. ಮುಗ್ಧ ಜನಪದರಲ್ಲಿ ಏಕದೇವೋಪಾಸನೆಯನ್ನು ಕಾಣುತ್ತೇವೆ.

ಹೈದರಾಬಾದ್ - ಕರ್ನಾಟಕ ಪ್ರದೇಶದ ಭಾಗವಾಗಿರುವ ಕೊಪ್ಪಳ ಸಹಜವಾಗಿಯೇ ಈ ಎಲ್ಲ ಅಂಶಗಳಿಂದ ಮುಸಲ್ಮಾನ ಸಂಸ್ಕೃತಿಯ ಈ ಪ್ರಸಿದ್ಧ 'ಮೊಹರಂ' ಹಬ್ಬದ ಪ್ರಮುಖ ತಾಣವಾಗಿ ಪರಿಣಮಿಸಿದೆ. ಈ ದಿಸೆಯಲ್ಲಿ ಎರಡು ಸಂಸ್ಕೃತಿಗಳು ತಮ್ಮ ತಮ್ಮ ಸಂಸ್ಕೃತಿಯ ಮಿಲನದಿಂದ ಕೋಮು ಸೌಹಾರ್ದತೆಯ ವಾತಾವರಣವನ್ನು ಹುಟ್ಟುಹಾಕಿ, ಏಕತೆ ಮೆರೆಯಲು ಕಾರಣವಾಗಿವೆ ಎನ್ನಬಹುದು. ಕೇವಲ ಧಾರ್ಮಿಕತೆಯಲ್ಲಿ ಅಲ್ಲದೇ, ಜಾನಪದ ಸಾಹಿತ್ಯದಲ್ಲಿಯೂ ಎರಡೂ ಭಾಷೆಗಳ ಬಳಕೆಯಾಗಿರುವುದು ಕಾಣಸಿಗುತ್ತದೆ. ಹೈದರಾಬಾದ್ - ಕರ್ನಾಟಕ ಪ್ರದೇಶದ ಭಾಷೆ ಹಿಂದಿ ಅಥವಾ ಉರ್ದು ಮಿಶ್ರಿತ ಕನ್ನಡ ಭಾಷೆಯಾಗಿದೆ. ಇದರಲ್ಲಿ ಎರಡೂ ಸಂಸ್ಕೃತಿಗಳ ಅಥವಾ ಭಾಷೆಗಳ ಪ್ರಭಾವವಿದೆ.

ಕೊಪ್ಪಳ ಜಿಲ್ಲೆಯೂ ಹಿಂದೂ - ಮುಸ್ಲಿಮ್ ಭಾವೈಕ್ಯತೆಯ ತಾಣವಾಗಿದ್ದು, ಅಂತೆಯೇ ಹಲವಾರು ಮಸೀದಿ, ಮಠ-ಮಾನ್ಯಗಳು ಎಲ್ಲ ಜಾತಿಯ ಭಕ್ತಿ ಭಾವದ ಕೇಂದ್ರಗಳಾಗಿವೆ. ಉದಾಹರಣೆಗಾಗಿ ಯಲಬುರ್ಗಾ ತಾಲೂಕಿನ ತಳಕಲ್ಲ ಗ್ರಾಮದ ಮೌಲಾಹುಸೇನ ದರ್ಗಾ ಶತಮಾನಗಳಿಂದಲೂ ಜಾತ್ಯಾತೀತ ಮನೋಭಾವನೆಯ ಧಾರ್ಮಿಕ ಕೇಂದ್ರವಾಗಿ ಐತಿಹಾಸಿಕತೆಯನ್ನು ಹೊಂದಿವೆ. ಕುದರಿಮೋತಿಯ ಹಜರತ್ ಹುಸೇನಿ ಆಲಂ ದರ್ಗಾ ಕೂಡಾ ಪ್ರಮುಖ ಮೊಹರಂ ಕೇಂದ್ರದ ತಾಣವಾಗಿ ರಾಯಚೂರು ಜಿಲ್ಲೆಯಲ್ಲಿ ಮುದಗಲ್ ಯಾವ ರೀತಿ ಮೊಹರಂ ಹಬ್ಬದ ಆಚರಣೆಯ ಪ್ರಸಿದ್ಧ ಕೇಂದ್ರವಾಗಿದೆಯೋ ಅದೇ ರೀತಿ ಕೊಪ್ಪಳ ಜಿಲ್ಲೆಯಲ್ಲಿ ಕುದರಿಮೋತಿ ಮೊಹರಂ ಹಬ್ಬದ ಕೇಂದ್ರ ಸ್ಥಳವಾಗಿ ಮುಂಚೂಣಿಯಲ್ಲಿದೆ. ಇದೇ ಯಲಬುರ್ಗಾ ತಾಲೂಕಿನ ಮಂಗಳೂರು, ಕಿನ್ನಾಳ ಇನ್ನಿತರ ಪ್ರಮುಖ ಗ್ರಾಮಗಳಲ್ಲಿಯೂ ಹಿಂದೂ ಮುಸ್ಲಿಮ್ ಭಾವೈಕ್ಯತೆಯ ತಾಣಗಳಿವೆ.

ಕೊಪ್ಪಳ ತಾಲೂಕಿನಲ್ಲಿ ಕೊಪ್ಪಳದ ಮರ್ದಾನಗೈಬ ದರ್ಗಾ, ಸಿರಸಪ್ಪಯ್ಯನ ಮಠ, ಖಾದರಲಿಂಗ, ಯಮನೂರಪ್ಪನ ದರ್ಗಾ, ಗವಿಮಠ ಹಾಗೂ ಇದೇ ತಾಲೂಕಿನ ಇತರ ಗ್ರಾಮಗಳಾದ ಹಾಲವರ್ತಿಯ ಜಡೀಸ್ವಾಮಿ ದರ್ಗಾ (ಯಮನೂರಪ್ಪ ದರ್ಗಾ), ಬಿಸರಳ್ಳಿ, ಹಲಗೇರಿ, ಬಹಾದ್ದೂರ

ಬಂಡಿ,ಹಿರೇಸಿಂಧೋಗಿ, ಕುಟುಗನಹಳ್ಳಿ, ಹ್ಯಾಟಿ ಮೊದಲಾದ ಪ್ರಮುಖ ಗ್ರಾಮಗಳಲ್ಲಿಯೂ ಕೋಮುಸೌಹಾರ್ದತೆಯ ಭಾವೈಕ್ಯತೆ ತಾಣಗಳಿದ್ದು ಹಾಗೆಯೇ ಗಂಗಾವತಿ, ಕುಷ್ಟಗಿ ತಾಲೂಕುಗಳಲ್ಲಿಯೂ ಹಿಂದೂ - ಮುಸ್ಲಿಮ್ ಭಾವೈಕ್ಯತೆಯ, ಕೋಮು ಸೌಹಾರ್ದತೆಯ ಕೇಂದ್ರಗಳಿದ್ದು ಎಲ್ಲ ಜನಾಂಗಕ್ಕೆ ಸೇರಿದ ಜನರು ಪರಸ್ಪರ ಅನ್ಯೋನ್ಯತೆಯಿಂದಿದ್ದಾರೆ.

ಪ್ರಸ್ತುತವಾಗಿ ಹೆಚ್ಚುತ್ತಿರುವ ಕೋಮು ಗಲಭೆ, ದುಷ್ಟಶಕ್ತಿಗಳ ಹೆಚ್ಚಳ, ಸಂಸ್ಕೃತಿ ಹೀನ ಆಚರಣೆಗಳ ಮಧ್ಯೆಯೂ ಹೈದರಾಬಾದ - ಕರ್ನಾಟಕ ಪ್ರದೇಶವಾದ ಕೊಪ್ಪಳ ಮತ್ತು ಕೊಪ್ಪಳ ಜಿಲ್ಲೆಯ ಎಲ್ಲ ತಾಲೂಕುಗಳ ಗ್ರಾಮಗಳಲ್ಲಿನ ಧಾರ್ಮಿಕ ಕೇಂದ್ರಗಳು ಕೋಮು ಸೌಹಾರ್ದತೆಗೆ ಕುಂದು ಬರದಂತೆ ತಮ್ಮ ಪೂರ್ವ ಪರಂಪರೆಯನ್ನು ಉಳಿಸಿಕೊಂಡು ಬಂದಿವೆ. ''ಭಾವೈಕ್ಯದ ಪ್ರತೀಕವಾದ ಮೊಹರಂ ಹಬ್ಬದ ಆಚರಣೆ ಬಹಳ ವಿಶಿಷ್ಟವಾದುದು. ಹಿಂದೂ, ಮುಸ್ಲಿಂ ಎಂಬ ಭೇದವಿಲ್ಲದೇ ಎಲ್ಲರೂ ಒಟ್ಟಾಗಿ ಕಲೆತು ಈ ಹಬ್ಬವನ್ನು ವೈವಿಧ್ಯಮಯವಾಗಿ ಆಚರಿಸುತ್ತಾರೆ''[೫]. ಇಂತಹ ಹಬ್ಬಗಳ ಆಚರಣೆ ಇಂದಿನ ದಿನಮಾನಗಳಲ್ಲಿ ಅತ್ಯಂತ ಅವಶ್ಯಕತೆಯಿದ್ದು, ಜನರಲ್ಲಿ ಏಕತೆಯನ್ನು, ಕೋಮು ಸೌಹಾರ್ದತೆಯನ್ನು, ಜಾತ್ಯಾತೀತ ಭಾವನೆಯನ್ನು, ನೈತಿಕ ಗುಣಮಟ್ಟಗಳ ಪರಿಸರದ ಪ್ರಭಾವವನ್ನು ಮೂಡಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ.

ಅಂತೆಯೇ ಹೈದರಾಬಾದ - ಕರ್ನಾಟಕ ಪ್ರದೇಶದ ಭಾಗವಾಗಿರುವ ಕೊಪ್ಪಳ ಪ್ರದೇಶದಲ್ಲಿಯೂ ಸಹಜವಾಗಿಯೇ ಮೊಹರಂ ಹಬ್ಬದ ಛಾಯೆ ದಟ್ಟವಾಗಿ ಮೂಡಿ ಬಂದಿದೆ. ಇಲ್ಲಿ ಮೊಹರಂ ಹಬ್ಬವನ್ನು ಕೇವಲ ಒಂದು ಜಾತಿಗೆ ಸೀಮಿತವಾದ ಜನರು ಆಚರಿಸದೇ ಸರ್ವ ಜನಾಂಗದವರೂ ಕೂಡಿ ಭಾವೈಕ್ಯತೆಯಿಂದ ಆಚರಣೆ ಮಾಡುತ್ತಾರೆ. ಹಬ್ಬದ ಪ್ರಯುಕ್ತ ಹಾಡಲಾಗುವ ಮೊಹರಂ ಹಾಡುಗಳು ಅಥವಾ ರಿವಾಯತ್ ಹಾಡುಗಳ ಪ್ರದರ್ಶನದ ಸಂದರ್ಭದಲ್ಲಿಯೂ ಜಾತಿ, ಮತ, ಭೇದ-ಭಾವವಿಲ್ಲದೇ ಎಲ್ಲರೂ ಒಂದೆಡೆ ಸೇರಿ ಹಾಡಿಗೆ ತಕ್ಕಂತೆ ತಾಳವನ್ನೂ, ತಾಳಕ್ಕೆ ತಕ್ಕಂತೆ ಚಪ್ಪಾಳೆ, ಶಹಬ್ಬಾಶ್‌ಗಿರಿಯ ಪ್ರೋತ್ಸಾಹವನ್ನೂ ನೀಡುತ್ತಾ ಹಾಡಿನ ಜೊತೆಗೆ ಬೆರೆಯುತ್ತಾರೆ.

ಇಂಥ ಮಹತ್ವವುಳ್ಳ ಮೊಹರಂ ಆಚರಣೆ ಹಾಗೂ ಪದಗಳ ಬಗ್ಗೆ ಜನಜಾಗೃತಿ ಮೂಡಿಸಬೇಕಾದ ಅವಶ್ಯಕತೆಯಿದೆ. ಕೆಲವರಿಗೆ ಇದು ಕೇವಲ ಒಂದು ಧರ್ಮಕ್ಕೆ ಸೀಮಿತವಾದ ಕಲೆ ಎಂದು ತಿಳಿದುಕೊಂಡಿದ್ದಾರೆ. ಮೊಹರಂ ಪದಗಳ ಅರ್ಥ, ವಿಸ್ತಾರ, ಮಹತ್ವದ ಬಗ್ಗೆ ಅದರ ಹಿನ್ನೆಲೆ, ಬೆಳೆದು ಬಂದ ಬಗೆ, ಮೊಹರಂ ಹಾಡುಗಳಲ್ಲಿ ವ್ಯಕ್ತವಾಗಿರುವ ನೋವು, ಐತಿಹಾಸಿಕ ಘಟನೆಗಳ ಸುರುಳಿ ಮೊದಲಾದವುಗಳ ಬಗ್ಗೆ ಧರ್ಮಕ್ಕಾಗಿ ತ್ಯಾಗ ಮಾಡಿದ ವ್ಯಕ್ತಿಗಳ ಚರಿತ್ರೆ, ಹಾಡುಗಳ ಪ್ರಾಸಬದ್ಧ ಶೈಲಿ, ಹಾಡುಗಳಲ್ಲಿ ವ್ಯಕ್ತವಾಗುವ ಧಾಟಿ, ತಾಳ ಮೊದಲಾದವುಗಳನ್ನು ಗಮನಿಸಿದಾಗ ಇದೊಂದು ಅದ್ಭುತ ಜನಪದ ಶೈಲಿ ಎಂಬುದರಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವದಿಲ್ಲ.

ವಯೋವೃದ್ಧರು ಸಾಯುತ್ತಲೇ ಅವರ ಹಿಂದೆಯೇ ಅಳಿಯುತ್ತಿರುವ ಜನಪದ ಸಾಹಿತ್ಯವನ್ನು

ಉಳಿಸಬೇಕಾದ ಅನಿವಾರ್ಯತೆ ಇರುವುದರಿಂದ, ಈ ಜನಪದವನ್ನು ಗ್ರಾಂಥಿಕ ರೂಪದಲ್ಲಿ ಕಾಪಾಡಬೇಕಾದ ಅವಶ್ಯಕತೆ ಇದೆ. ಆ ದಿಶೆಯಲ್ಲಿ 'ನನ್ನ ಕೊಪ್ಪಳ ಜಿಲ್ಲೆಯ ಮೊಹರಂ ಪದಗಳು - ಒಂದು ಅಧ್ಯಯನ' ಸಂಶೋಧನಾ ಪ್ರಬಂಧವನ್ನು ಈಗಾಗಲೇ ಮಂಡಿಸಿದ್ದೇನೆ. ಈಗ ಜನಪದದ ಒಂದು ಭಾಗವಾಗಿರುವ, ಕೋಮು ಸೌಹಾರ್ದತೆಯ ತಾಣವಾಗಿರುವ ಕುದರಿಮೋತಿ ಮೊಹರಂ ಆಚರಣೆಯನ್ನು ಕರ್ನಾಟಕದಾದ್ಯಂತ ಸಾದರಪಡಿಸುವ ಉದ್ದೇಶದಿಂದ 'ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನ' ಎಂಬ ವಿಷಯವಾಗಿ ಪಿ.ಎಚ್.ಡಿ. ಮಹಾಪ್ರಬಂದವನ್ನು ಮಂಡಿಸುತ್ತಿದ್ದೇನೆ.

ಅಧ್ಯಯನದ ಉದ್ದೇಶಗಳು :

೧) ಪ್ರಸ್ತುತ ಅಧ್ಯಯನದ ಕೇಂದ್ರವಾಗಿರುವ 'ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನ' ಈ ಪ್ರಬಂಧವು ಬಹುಸಂಸ್ಕೃತಿಯ ಆಚರಣೆಯ ಪರಂಪರೆಯನ್ನು ಜನರಲ್ಲಿ ಬಿಂಬಿಸುತ್ತದೆ. ಮುಸ್ಲಿಮೇತರ ವ್ಯಕ್ತಿಗಳು ಮುಸ್ಲಿಮ್‌ರ ಜೊತೆಗೂಡಿ ಆಚರಿಸುವ ಈ ಹಬ್ಬವು ಜನರಲ್ಲಿ ಐಕ್ಯತೆಯನ್ನು, ಸೌಹಾರ್ದಯುತ ವಾತಾವರಣವನ್ನು ನಿರ್ಮಾಣ ಮಾಡುತ್ತದೆ. ಇದುವರೆಗೆ ಈ ಸಂಶೋಧನೆಯ ಕುರಿತು ಪತ್ರಿಕೆಗಳಲ್ಲಿ ಸಣ್ಣ-ಪುಟ್ಟ ಲೇಖನಗಳು ಪ್ರಕಟವಾಗಿದ್ದರೂ ಅವು ಅಪರಿಪೂರ್ಣವಾಗಿವೆ. ಈಗ ನನ್ನ ಅಧ್ಯಯನದ ಉದ್ದೇಶದಿಂದ ಈ ಆಚರಣೆಯ ಕುರಿತು ಸಮಗ್ರವಾದ ಒಟ್ಟು ಆಚರಣೆಯನ್ನು ಜನರಲ್ಲಿ ತಿಳಿಸುವುದು ಅಧ್ಯಯನದ ಉದ್ದೇಶವಾಗಿದೆ.

೨) ಈಗಾಗಲೇ 'ಕುದರಿಮೋತಿ ಮೊಹರಂ ಆಚರಣೆ'ಯು ಕೊಪ್ಪಳ ಜಿಲ್ಲೆಯಲ್ಲಿ ಹೆಸರುವಾಸಿಯಾಗಿದ್ದರೂ, ಬಹುತೇಕ ಜನರಲ್ಲಿ ಇದರ ಬಗ್ಗೆ ಹೆಚ್ಚಿನ ಅರಿವು ಇರುವುದಿಲ್ಲ. ಕೇವಲ ಸುಶಿಕ್ಷಿತರಿಗೆ ಮಾತ್ರ ಮತ್ತು ಕುದರಿಮೋತಿ ಗ್ರಾಮಕ್ಕೆ ಹೊಂದಿಕೊಂಡಿರುವ ಗ್ರಾಮಗಳಿಗೆ ಮಾತ್ರ ಈ ಆಚರಣೆಯ ಪರಿಚಯ ಉಂಟು. ಈ ನನ್ನ ಸಂಶೋಧನಾ ಅಧ್ಯಯನದಿಂದ ಕೊಪ್ಪಳ ಜಿಲ್ಲೆಯಾದ್ಯಂತ ಅಲ್ಲದೇ ನಾಡಿನಾದ್ಯಂತ ಈ ಆಚರಣೆಯ ಕುರಿತು ತಿಳಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಈ ಆಚರಣೆಯ ಬಗ್ಗೆ ಕೇವಲ ಇದ್ದ ಮಾಹಿತಿ ಅಷ್ಟೇ ಅಲ್ಲದೇ ಕ್ಷೇತ್ರಕಾರ್ಯದ ಮೂಲಕ ತಾರ್ಕಿಕ ನೆಲೆಗಟ್ಟಿನಲ್ಲಿ ನಿಂತು ಚರ್ಚಿಸುವುದು ಆ ಮೂಲಕ ಅಲಕ್ಷಿತ ಧಾರ್ಮಿಕ ಪರಂಪರೆಗಳನ್ನು ಗಟ್ಟಿಗೊಳಿಸುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ.

೩) ಉತ್ತರ ಕರ್ನಾಟಕದ ಧಾರ್ಮಿಕತೆಯು ನಿಜವಾದ ಜೀವಾಳವಿದ್ದಂತೆ. ಪ್ರತಿಯೊಂದು ದೈವಕ್ಕೂ ಎಲ್ಲಿಲ್ಲದ ಮಹತ್ವದ ಭಾವನೆ ಮತ್ತು ಪೂಜ್ಯನೀಯ ಸ್ಥಾನ-ಮಾನ ಇದೆ. ಅದಕ್ಕಾಗಿಯೇ ಈ ಭಾಗದ ಸುತ್ತ-ಮುತ್ತ ಇಂತಹ ಬಹುಸಂಸ್ಕೃತಿಯ ಮತ್ತು ಸೌಹಾರ್ದಯುತ ಆಚರಣೆಗಳು ಸಹಜವಾಗಿ ನೆಲೆಸಿರುತ್ತವೆ. ಕೊಪ್ಪಳ ಜಿಲ್ಲೆಯಲ್ಲಿ ಭಾವೈಕ್ಯತೆಯನ್ನು ಸಾರುವ ಮರ್ದಾನ ಗೈಬ್ ದರ್ಗಾ, ಸಿರಸಪ್ಪಯ್ಯನ

ಮಠ, ಖಾದರಲಿಂಗ, ಹಾಲವರ್ತಿಯ ಜಡಿ ತಾತ ಮಠ, ತಳಕಲ್‌ನ ಮೌಲಾಹುಸೇನ್ ದರ್ಗಾ, ಬಹಾದ್ದೂರ ಬಂಡಿಯ ಯಮನೂರ ಸಾಬ ದರ್ಗಾ, ಅದೇ ರೀತಿ ಕುದರಿಮೋತಿಯ ಈ 'ಮೊಹರಂ ಆಚರಣೆ'ಯು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಬದಲಾಗುತ್ತಿರುವ ಇತ್ತೀಚಿನ ಜೀವನಕ್ರಮಗಳಲ್ಲಿ ಇಂತಹ ವಾತಾವರಣವಿರುವ ಗ್ರಾಮಗಳು ವಿರಳ. ಕಾರಣ ಅಪರೂಪದ ಈ ಗ್ರಾಮದಲ್ಲಿನ ಮೊಹರಂ ಆಚರಣೆಯ ಕುರಿತು ಚರ್ಚಿಸುವುದು, ಸಂಶೋಧಿಸುವುದು ಅಧ್ಯಯನದ ಒಳನೋಟವಾಗಿದೆ.

೪) ಮೊಹರಂ ಹಬ್ಬದ ಆಚರಣೆಗಳು ಜನಪದರ ಬದುಕಿನ ಭಾಗಗಳಾಗಿವೆ. ಅದೇ ರೀತಿ ಇಲ್ಲಿ ನಡೆಯುವ ಧಾರ್ಮಿಕ ವಿಧಿ-ವಿಧಾನಗಳು, ಸಂಪ್ರದಾಯಗಳು, ಹರಕೆಗಳು, ಜನಪದ ಕಲೆಗಳು ಎಷ್ಟರ ಮಟ್ಟಿಗೆ ಜನಪದರಲ್ಲಿ ಪ್ರಭಾವ ಬೀರಿವೆ. ಇಂತಹ ನಂಬಿಕೆ, ಆಚರಣೆಗಳು, ದೈವತ್ವದ ಮೇಲಿನ ಭಕ್ತಿಗಾಗಿಯೋ? ಸಮಾಜದ ನಿಲುವಿಗಾಗಿಯೋ? ಜೊತೆ ಜೊತೆಗೆ ಧಾರ್ಮಿಕ, ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮಷ್ಟಿಗಳನ್ನು ಏಕೀಕರಿಸುವಲ್ಲಿ ಅವುಗಳು ಸಹಕಾರಿಯಾಗುತ್ತವೆಯೋ? ಕೆಲವೊಮ್ಮೆ ಒತ್ತಾಯಪೂರ್ವಕವಾಗಿ ಹೇರಲಾಗುತ್ತಿದೆಯೋ? ಅಥವಾ ಒತ್ತಾಸೆಯ ಭ್ರಮೆಯೊಳಗೆ ಅನುಸರಿಸಲಾಗುತ್ತಿದೆಯೋ ಎಂಬ ನಂಬಿಕೆಗಳ ಪರಿಕಲ್ಪನೆಯನ್ನು ಇತ್ತೀಚಿನ ಬೆಳವಣಿಗೆಗೆ ವಿವಿಧ ಆಯಾಮಗಳ ಮೂಲಕ ಸೈದ್ಧಾಂತಿಕ ಚರ್ಚೆಗೆ ಅವಕಾಶ ಕೊಡುವಂತೆ ಪ್ರಸ್ತಾಪಿಸುವುದು ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

೫) ಈ ಮೊಹರಂ ಹಬ್ಬದಲ್ಲಿ ನಾಡಿನ ಮೂಲೆ ಮೂಲೆಗಳಿಂದ ಪ್ರತೀ ಎರಡು ವರ್ಷಗಳಿಗೊಮ್ಮೆ ದೇಶದ ಎಲ್ಲ ಮೂಲೆಗಳಿಂದ ಅಲೆಮಾರಿ ಜನಾಂಗದವರಾದ ವೇಷಗಾರರು, ಸುಡುಗಾಡು ಸಿದ್ಧರು, ಸಿಂಧೊಳ್ಳರು, ದೊಂಬರು, ಹಾವಾಡಿಗರು, ಜಾತಿಗಾರರು ಹೀಗೆ ಮೊದಲಾದವರು ಆಗಮಿಸುವುದು ವಿಶೇಷವಾಗಿದೆ. ಈ ಅಲೆಮಾರಿ ಜನಾಂಗದವರು ಈ ಆಚರಣೆಯಲ್ಲೇ ಏಕೆ ಭಾಗವಹಿಸುತ್ತಾರೆ? ಎಂಬಂತಹ ಪ್ರಶ್ನೆಗಳು ಮೊದಮೊದಲು ಮೂಡುತ್ತವೆ. ಸಂಶೋಧನಾ ಅಧ್ಯಯನದಿಂದ ತಿಳಿದು ಬಂದಿರುವುದೇನೆಂದರೆ ಈ ಗ್ರಾಮದ ಆಚರಣೆಯು ಅಲೆಮಾರಿ ಜನಾಂಗದವರಿಗೆ ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ಮತ್ತೊಮ್ಮೆ ಹುಟ್ಟಿಸುತ್ತದೆ. ಈ ಕಾರಣದಿಂದ ಅಲೆಮಾರಿ ಜನಾಂಗದವರು ಕುದರಿಮೋತಿ ಗ್ರಾಮದಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ಒಂದೆಡೆ ಸೇರುತ್ತಾರೆ. ಇದೇ ನೆಪದಲ್ಲಿ ತಮ್ಮ ಕೊಡುವ-ತೆಗೆದುಕೊಳ್ಳುವ ವ್ಯವಹಾರಗಳನ್ನು, ತಂಟೆ-ತಕರಾರುಗಳನ್ನು ಬಗೆಹರಿಸಿಕೊಂಡು ಮತ್ತೆ ಅಲೆಮಾರಿ ಬದುಕಿಗೆ ಸಾಗುತ್ತಾರೆ. ಈ ಅಧ್ಯಯನದಿಂದ ಜನರಲ್ಲಿ ಬುಡಕಟ್ಟು ಸಂಸ್ಕೃತಿಯ ನೆಲೆಗಟ್ಟುಗಳು, ಅವರ ನಂಬಿಕೆ, ಆಚರಣೆಗಳು ಹೇಗಿರುತ್ತವೆ ಎಂಬುದನ್ನು ತಿಳಿಸುವ ಉದ್ದೇಶದಿಂದ ಸಂಶೋಧನೆ ಗಮನಾರ್ಹವಾಗಿದೆ.

೬) ಈ ಮೊಹರಂ ಆಚರಣೆಯಲ್ಲಿ, ಆಚರಣೆಯ ಜೊತೆಗೆ ಪರಂಪರೆಯ ಹಿನ್ನೆಲೆಯನ್ನು ಪ್ರತಿಬಿಂಬಿಸುವ ರಿವಾಯತ್ ಪದಗಳಲ್ಲಿ ಹಲವು ಪ್ರಕಾರಗಳಲ್ಲಿ ನೋಡಬಹುದು. ಅವುಗಳೆಂದರೆ

ಚರಿತ್ರೆಯ ಪದಗಳು, ಆಧ್ಯಾತ್ಮಿಕ ಪದಗಳು, ಕಥಾನಕ ಪದಗಳು, ಸವಾಲ್-ಜವಾಬ್ ಪದಗಳು, ಸಲಾಮ್ ಪದಗಳು. ಈ ಎಲ್ಲ ಪದಗಳು ಮೌಖಿಕ ವಾಹಿನಿಯಲ್ಲಿ ಜೀವಂತವಾಗಿರುವುದು ಕಾಣುತ್ತೇವೆ. ಕಾಲಕ್ರಮೇಣ ಈ ಪದಗಳನ್ನು ಬಲ್ಲ ವಯೋವೃದ್ಧರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿರುವುದರಿಂದ ಇಂತಹ ಪದಗಳನ್ನು ಬರವಣಿಗೆಯ ರೂಪದಲ್ಲಿ ಉಳಿಸುವ ಮತ್ತು ಅವುಗಳ ಅರ್ಥವನ್ನು ಜನರಿಗೆ ತಿಳಿಸುವ ಹೊಸ ಬಗೆಯ ಸಾಮಾಜಿಕ ಕಳಕಳಿಯಿಂದಾಗಿ ಒಟ್ಟು ರಿವಾಯತ್ ಪದಗಳನ್ನು ಸಂಗ್ರಹಿಸಿ, ಆ ಮೂಲಕ ಮೊಹರಂ ಹಬ್ಬದ ಆಚರಣೆಯನ್ನು, ಆಚರಣೆಯ ಉಸಿರಾಗಿರುವ ರಿವಾಯತ್ ಪದಗಳನ್ನೂ ಜೀವಂತ ಉಳಿಸುವುದು ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

ಅಧ್ಯಯನದ ಮಹತ್ವ:

ಭಾರತ ದೇಶದಲ್ಲಿ ಹಬ್ಬಗಳಿಗೆ ಕೊರತೆಯಿಲ್ಲ. ಹಬ್ಬಗಳು, ದೈವಾರಾಧನೆ, ನಂಬಿಕೆ ಮತ್ತು ಸಂಪ್ರದಾಯಗಳ ಮುಂದುವರಿದ ಭಾಗಗಳು. ''ಅವುಗಳ ಬೇರು ಮಾಟಗಳಲ್ಲಿ ಅವಿತಿದೆ. ನಿಸರ್ಗಾರಾಧನೆಯಲ್ಲಿ ಪಸರಿಸಿದೆ. ಅವು ಕೃಷಿ ಸಂಸ್ಕೃತಿಯಲ್ಲಿ ಸ್ಪಷ್ಟರೂಪವನ್ನು ಪಡೆದು, ಕಾಲಾನಂತರದಲ್ಲಿ ವಿಕಾಸಗೊಳ್ಳುತ್ತ ಜಟಿಲವಾದದ್ದುಂಟು. ಪ್ರತಿಯೊಂದು ಯುಗದ ಜನರೂ ಆ ಆ ಕಾಲದ ಅಭಿರುಚಿ, ಮನೋಧರ್ಮಗಳಿಗನುಗುಣವಾಗಿ, ತಂತಮ್ಮ ಕಲ್ಪನೆಗಳಿಗನುಸಾರವಾಗಿ ಅವುಗಳ ರೂಪ ಸ್ವರೂಪಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡದ್ದುಂಟು''[೧]. ಅಲ್ಲದೇ ವಿವಿಧ ಬಗೆಯ ಆಚರಣೆಯ ವಿಧಾನಗಳಿಂದ ತಮ್ಮ ತಮ್ಮ ಸಂಪ್ರದಾಯಗಳಿಗನುಗುಣವಾಗಿ ಹಬ್ಬದ ಸಡಗರ, ಸಂಭ್ರಮ ಕಂಡವರು. ''ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟು ಪಡೆದುವು''[೨] ಎಂದು ಹೇಳಬಹುದು.

ಹಬ್ಬಗಳನ್ನು ನಾಲ್ಕು ಪ್ರಕಾರಗಳಾಗಿ ವಿಂಗಡಿಸಬಹುದು. ಮತೀಯ ಹಬ್ಬ, ಸಾಮಾಜಿಕ ಹಬ್ಬ, ರಾಷ್ಟ್ರೀಯ ಹಬ್ಬ ಮತ್ತು ವೈಯಕ್ತಿಕ ಹಬ್ಬಗಳು. ಆಯಾ ಧರ್ಮಗಳಿಗೆ ಸೇರಿದವರು, ತಮ್ಮ ಇಷ್ಟದೇವತೆಗಳ ಉತ್ಸವವನ್ನು ಪ್ರತಿವರ್ಷ ಸಾರ್ವತ್ರಿಕವಾಗಿ ಆಚರಿಸುತ್ತಾರೆ. ದೀಪಾವಳಿ, ಗೌರಿ ಗಣೇಶ ಉತ್ಸವ, ವಿಜಯ ದಶಮಿ, ಪಂಚಮಿ, ಶಿವರಾತ್ರಿ, ಕೃಷ್ಣ ಜನ್ಮಾಷ್ಟಮಿ, ರಾಮನವಮಿ, ಕಾಮನ ಹಬ್ಬ ರಂಜಾನ್, ಮೊಹರಂ, ಕ್ರಿಸ್‌ಮಸ್, ಬುದ್ಧ ಜಯಂತಿ, ಮಹಾವೀರ ಜಯಂತಿ, ಬಕ್ರೀದ್ ಮೊದಲಾದವುಗಳು ಮತೀಯ ಗುಂಪಿಗೆ ಸೇರಿದವುಗಳಾಗಿವೆ.

ಕೆಲವು ಮನೆತನಗಳಿಗೆ ಅಥವಾ ಊರಿಗಷ್ಟೇ ಮೀಸಲಾದ ಆಚರಣೆಗಳನ್ನು ಸಾಮಾಜಿಕ ಹಬ್ಬಗಳೆಂದು ಕರೆಯುತ್ತಾರೆ. ಸಂಕ್ರಾಂತಿ, ಓಣಂ, ಹುತ್ತರಿ ಹಬ್ಬ, ಎಳ್ಳೆ ಪೂಜೆ, ಸುಗ್ಗಿಯ ಉತ್ಸವ ಮೊದಲಾದ ಕೃಷಿ ಉತ್ಸವಗಳಿಗೆ ಸಂಬಂಧಿಸಿದ ಉತ್ಸವಗಳನ್ನು ಸಾಮಾಜಿಕ ಹಬ್ಬಗಳಲ್ಲಿ ಸೇರಿಸುತ್ತಾರೆ. ಜಾತಿ, ಕುಲ, ಗೋತ್ರ, ಲಿಂಗ, ವರ್ಣ, ಬೇಧಗಳಿಲ್ಲದೇ ಒಂದು ರಾಷ್ಟ್ರದ ಎಲ್ಲ ಜನರು ಒಂದಾಗಿ

ಆಚರಿಸುವ ಉತ್ಸವಗಳನ್ನು ರಾಷ್ಟ್ರೀಯ ಹಬ್ಬಗಳೆಂದು ಹೆಸರಿಸಬಹುದು. ಸರ್ವ ತ್ಯಾಗದ ಮೂಲಕ ರಾಷ್ಟ್ರಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ ಬಸವ, ನಾನಕ್, ಅಂಬೇಡ್ಕರ್, ಗಾಂಧೀಜಿ, ಡಾ. ರಾಧಾಕೃಷ್ಣನ್, ಜವಾಹರಲಾಲ್ ನೆಹರೂ, ಸುಭಾಸ್‌ಚಂದ್ರ ಭೋಸ್, ರಾಮಕೃಷ್ಣ ಪರಮಹಂಸ, ಅರವಿಂದ, ಸ್ವಾಮಿ ವಿವೇಕಾನಂದ ಮೊದಲಾದವರ ಜನ್ಮೋತ್ಸವಗಳನ್ನು ವೈಯಕ್ತಿಕ ಹಬ್ಬಗಳೆಂದು ಪರಿಗಣಿಸಬಹುದು.

ಇಂತಹ ನಾಲ್ಕು ಪ್ರಕಾರಗಳಲ್ಲಿನ ಮತೀಯ ಹಬ್ಬಗಳಲ್ಲೊಂದಾದ ಭಾವೈಕ್ಯತೆಯನ್ನು ಸಾರುವ ಮೊಹರಂ ಹಬ್ಬ ಒಂದಾಗಿದೆ. ಮೊಹರಂ ಹಬ್ಬ ಕರ್ನಾಟಕದಾದ್ಯಂತ ಎಲ್ಲ ಹಳ್ಳಿಗಳಲ್ಲಿ ಆಚರಿಸಲಾಗುತ್ತಿದೆ. ಯಾವುದೇ ಊರಿನಲ್ಲಿ ಮುಸ್ಲಿಂ ಸಮುದಾಯದವರಿಲ್ಲದಿದ್ದರೂ ಬೇರೆ ಊರಿನಿಂದ ಮುಸ್ಲಿಮರನ್ನು ಕರೆಯಿಸಿ ಪೀರಲ ಹಬ್ಬ, ಪೀರಾನ ಹಬ್ಬ, ಅಲಾವಿ ಹಬ್ಬವನ್ನು ಆಚರಿಸಲಾಗುತ್ತಿದೆ. ಸಾಮಾನ್ಯವಾಗಿ ಇದನ್ನು ಮೊಹರಂ ಹಬ್ಬವೆಂದು ಕರೆಯುತ್ತಾರೆ. ಮೊಹರಂ ಪದಗಳು ಕನ್ನಡ ಜನಪದಗಳಲ್ಲಿ ನಾಡಿನಾದ್ಯಂತ ಕಂಡು ಬರುತ್ತವೆ. ಭಕ್ತಿಯಿಂದ ಕೂಡಿ ಕನ್ನಡ, ಉರ್ದು ಶೋಕಗೀತೆಗಳನ್ನು ಹಾಡುತ್ತಾರೆ. ಇದಕ್ಕೆ ಮೊಹರಂ ಪದ ಇಲ್ಲವೆ ರಿವಾಯತ್ ಪದಗಳೆನ್ನುವರು. ಇದಕ್ಕೆ ಕೊಪ್ಪಳ ಜಿಲ್ಲೆಯೂ ಹೊರತಾಗಿಲ್ಲ. ಇವುಗಳಿಗೆ ರಿವಾಯತ್ ಪದಗಳೆಂದೂ, ಅಲಾವಿ ಪದಗಳೆಂದೂ, ಕರ್ಬಲಾ ಪದಗಳೆಂದೂ ಕರೆಯುತ್ತಾರೆ. ಭಾವೈಕ್ಯತೆಯ ಪ್ರತೀಕವಾದ ಮೊಹರಂ ಹಬ್ಬದ ಆಚರಣೆ ಕೊಪ್ಪಳ ಜಿಲ್ಲೆಯಲ್ಲಿ ಬಹಳ ವಿಶಿಷ್ಟವಾದುದು. ಹಿಂದೂ - ಮುಸ್ಲಿಮ್ ಎನ್ನುವ ಬೇಧ-ಭಾವಗಳಿಲ್ಲದೇ ಬಹು ಸಂಸ್ಕೃತಿಯ ಜನ ಸೇರಿ ಆಚರಿಸುವ ಹಬ್ಬವಾಗಿದೆ. ಮೊಹರಂ ತಿಂಗಳಲ್ಲಿ ಕರ್ಬಲಾ ಮೈದಾನದಲ್ಲಿ ಧರ್ಮದ ಉಳಿವಿಗಾಗಿ ನಡೆದ ಒಂದು ಯುದ್ಧದ ಹಿನ್ನಲೆಯಲ್ಲಿ ಮೊಹರಂ ಹಾಡುಗಳು ಹುಟ್ಟಿಕೊಂಡಿವೆ. ಇವುಗಳಿಗೆ ಮೊಹರಂ ಪದಗಳೆಂದು, ರಿವಾಯತ್ ಪದಗಳೆಂದು ಕರೆಯುತ್ತಾರೆ. ಅಂದರೆ ಶೋಕದಲ್ಲಿ ಹಾಡಲಾಗುವ ಪದಗಳಿಗೆ ರಿವಾಯತ್ ಪದಗಳೆಂದು ಕರೆಯುತ್ತಾರೆ. ಕರ್ಬಲಾದಲ್ಲಿ ನಡೆದ ಧರ್ಮ ಯುದ್ಧದಲ್ಲಿ ಮಡಿದ ಹಸನ್ - ಹುಸೇನ್ ಮೊದಲಾದವರನ್ನು ಕುರಿತು ಸ್ಮರಿಸಿ, ಶೋಕದಲ್ಲಿ ಹಾಡಲಾಗುತ್ತದೆ. ಇವುಗಳಿಗೆ ಮೊಹರಂ ಪದಗಳೆಂದು ಕರೆಯುವುದು ವಾಡಿಕೆ. ಒಟ್ಟಾರೆ ಮೊಹರಂ ಆಚರಣೆಯಲ್ಲಿ ಹಾಡಲಾಗುವ ಈ ಹಾಡುಗಳಿಗೆ ಇನ್ನು ಮುಂದೆ ಮೊಹರಂ ಹಾಡುಗಳೆಂದೇ ಉಲ್ಲೇಖಿಸಿಕೊಂಡು ಹೋಗಿದ್ದೇನೆ.

ಎಲ್ಲ ದೈವಾರಾಧನೆಗಳು ಆ ಜನಾಂಗದ ನಂಬಿಕೆ ಮತ್ತು ದೈವ ಭಕ್ತಿಗೆ ಸಂಬಂಧಿಸಿದ್ದವಾಗಿವೆ. ಇದು ಸಮುದಾದಯದ ಒಗ್ಗಟ್ಟು ಹಾಗೂ ಕಲ್ಯಾಣದ ಮಹತ್ವವೂ ಇದೆ. ಅದರಂತೆ ಮೊಹರಂ ಹಬ್ಬವು ಕೂಡ ಈ ಪ್ರದೇಶದ ಮುಸ್ಲಿಮ್ ಹಾಗೂ ಹಿಂದೂ ಸಮುದಾಯದ ಜನಾಂಗದ ಭಕ್ತಿ, ನಂಬಿಕೆಯ ಮೇಲೆ ನಿಂತಿದೆ.

ಕೊಪ್ಪಳ ಜಿಲ್ಲೆಯಲ್ಲಿ ಮೊಹರಂ ಹಬ್ಬವು ಹಿಂದು ಮುಸ್ಲಿಂರಿಬ್ಬರೂ ಭಾವೈಕ್ಯತೆಯಿಂದ ಆಚರಿಸುವ ಹಬ್ಬವಾಗಿದೆ. ಹಿಂದುಗಳು ಸ್ನಾನ ಮಾಡಿ ಭಕ್ತಿಯಿಂದ ಶರಬತ್ (ಬೆಲ್ಲದ ಪಾನೀಯ) ತುಂಬಿದ ಕುಂಭ ಹೊತ್ತು, ಸಕ್ಕರಿ ನೈವೇದ್ಯ ತೆಗೆದುಕೊಂಡು ಮಸೀದೆಗೆ ಹೋಗಿ ಸಕ್ಕರೆ ಬಡಿಸಿ ಲೋಬಾನದ ಊದು

ಹಾಕಿ ನಮಸ್ಕರಿಸಿ ಬರುತ್ತಾರೆ. ಕೆಲವರು ತೆಂಗಿನಕಾಯಿ ಒಡೆಸುತ್ತಾರೆ. ಇದು ಮುಸ್ಲಿಮ್ ದೇವರಿಗೆ ಅರ್ಪಿಸುವ ಹಿಂದೂಗಳ ಭಕ್ತಿಭಾವದ ಸಮರ್ಪಣೆ.

ಮೊಹರಂ ಜನಪದ ಸಾಹಿತ್ಯದ ಭಾಷೆಯಲ್ಲಿ ಅಹಂಕಾರಕ್ಕಾಗಲೀ, ಅನುಕರಣೆಗಾಗಲೀ ಅವಕಾಶವಿಲ್ಲ. ಮೊಹರಂ ಪದಗಳ ಭಾಷೆ ನೇರ ಮತ್ತು ಸರಳವಾಗಿದೆ. ನೇರವಾಗಿ ಮನ ಮುಟ್ಟುವಂತೆ ಮಾಡುವ ಜನಪದ ಭಾಷೆಯಲ್ಲಿ ವ್ಯಕ್ತವಾಗುವಂತಹ ಸೈಜತೆಯನ್ನು ಈ ಮೊಹರಂ ಪದಗಳಲ್ಲಿ ಕಾಣಬಹುದಾಗಿದೆ. ''ಮೊಹರಂ ಪದಗಳ ತವನಿಧಿಯಾದ ಉತ್ತರ ಕರ್ನಾಟಕದ ಮೇಲೆ ಉರ್ದು, ಮರಾಠಿ, ಅರಬ್ಬಿ, ಪರ್ಶಿಯನ್ ಮತ್ತು ಇಂಗ್ಲೀಷ್ ಭಾಷೆಗಳ ಪ್ರಭಾವ ಹೆಚ್ಚಾಗಿದ್ದುದನ್ನು ಕಾಣಬಹುದು. ಮೊಹರಂ ಪದಗಳು ಇದಕ್ಕೆ ಹೊರತಾಗಿಲ್ಲ''[೮]. ಈ ಬಗ್ಗೆ ನಾವು ಹೆಚ್ಚು ತಿಳಿದುಕೊಳ್ಳಬೇಕೆಂದರೆ ಮೊಹರಂ ಪದಗಳನ್ನು ನೋಡಿದಾಗ ಗೊತ್ತಾಗುತ್ತದೆ. ಏಕೆಂದರೆ ಈ ಮೊಹರಂ ಪದಗಳಲ್ಲಿ ಏಕಭಾಷೆಯ ಬಳಕೆಯಾಗದೇ, ಬಹುಭಾಷೆಯ ಪದಗಳೂ ಬಳಕೆಯಲ್ಲಿವೆ. ಇವುಗಳು ಕೋಮು ಸೌಹಾರ್ದತೆಯನ್ನು ಮೊಹರಂ ಆಚರಣೆಯಲ್ಲಿ ಸಾರುತ್ತವೆ.

ಹಾಗೆ ನೋಡಿದರೆ ಮೊಹರಂ ಹಬ್ಬ ಮತ್ತು ಮೊಹರಂ ಪದಗಳು ಕೇವಲ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿರುವ ಹಬ್ಬ ಮತ್ತು ಪದಗಳೆಂದು ಸಾಮಾನ್ಯ ಪರಿಕಲ್ಪನೆ ಜನರಲ್ಲಿದೆ. ಆದರೆ ಈ ಹಬ್ಬ ಮತ್ತು ಪದಗಳು ಏಕಜಾತಿಗೆ ಸೀಮಿತವಾಗಿಲ್ಲ. ''ಮೊಹರಂ ಹಬ್ಬಗಳಲ್ಲಿ ಹಾಡಲಾಗುವ ಮೊಹರಂ ಪದಗಳು ಇಸ್ಲಾಂ ಧರ್ಮಕ್ಕೆ ಸಂಬಂಧಿಸಿರುವುದರ ಜೊತೆಗೆ ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದವುಗಳಾಗಿವೆ. ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಮೊಹರಂ ಹಬ್ಬದ ಆಚರಣೆ ಮತ್ತು ಪದಗಳು ಸಹ ಹಿಂದೂ ಸಂಸ್ಕೃತಿಯ ಗಾಢ ಪ್ರಭಾವಕ್ಕೆ ಒಳಗಾಗಿವೆ''[೯]. ಒಟ್ಟಿನಲ್ಲಿ ಈ ಮೊಹರಂ ಹಬ್ಬ ಮತ್ತು ಪದಗಳು ಕೇವಲ ಇಸ್ಲಾಂ ಧರ್ಮಕ್ಕೆ ಸೀಮಿತವಾಗದೇ ಇಡೀ ಮಾನವ ಸಮಾಜಕ್ಕೆ ಅನ್ವಯಿಸಬಲ್ಲ ವಿಚಾರಧಾರೆಗಳನ್ನು, ಭಾವೈಕ್ಯತೆಯ ಭಾವನೆಗಳನ್ನು ಮೂಡಿಸುವಲ್ಲಿ ನೆರವಾಗುತ್ತವೆ. ಹಾಗಾಗಿ ಮೊಹರಂ ಹಬ್ಬದ ಆಚರಣೆಯನ್ನು ಹಿಂದೂ, ಮುಸ್ಲಿಮ್ ಭೇದವಿಲ್ಲದೇ ಆಚರಣೆ ಮಾಡುತ್ತಾರೆ. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಇದು ಹಿಂದೂಗಳ ಸಾರ್ವತ್ರಿಕ ಹಬ್ಬವಾಗಿದೆ.

ಹಾಗೆಯೇ ಮೊಹರಂ ಪದಗಳು ಕೇವಲ ಧಾರ್ಮಿಕ ಕಥೆ, ಪುರಾಣ, ಹಿನ್ನೆಲೆ, ಇತಿಹಾಸಗಳನ್ನಷ್ಟೇ ತಿಳಿಸುವುದಲ್ಲದೇ ಸಂಸಾರದ ಸುಖ, ದುಃಖ, ಹಬ್ಬ ಹರಿದಿನಗಳು, ರೂಢಿ, ಪದ್ಧತಿಗಳು, ಹಳ್ಳಿಯ ಸರಳ, ಸೈಜ, ವಾಸ್ತವಿಕ ಜೀವನದ ಹಲವು ಮುಖಗಳನ್ನು ನೇರವಾಗಿ ಸರಳ ಭಾಷೆಯಲ್ಲಿ ತಿಳಿಸುತ್ತದೆ. ಮೊಹರಂ ಪದಗಳನ್ನು ಬರೆದಂತಹ ಕನ್ನಡ ಭಾಷೆಯ ಜನರು ತಮ್ಮ ಸುತ್ತಲಿನ ಸಮಾಜದಲ್ಲಿನ ಅಂದು ಪ್ರಸ್ತುತವಿದ್ದ ಅನೇಕ ಸನ್ನಿವೇಶಗಳನ್ನು, ಘಟನೆಗಳನ್ನು ಕೇಳಿ, ತಾವು ಓದಿದ ಧರ್ಮ ಶಾಸ್ತ್ರಗ್ರಂಥಗಳನ್ನು ಅಭ್ಯಾಸ ಮಾಡಿ ತಮ್ಮದೇ ಆದ ಪ್ರಾದೇಶಿಕ ಭಾಷೆಯಲ್ಲಿ ಸಮಾಜದ ಬಗ್ಗೆ, ಸಂಸಾರದ ಬಗ್ಗೆ, ಕೆಲಸ, ಕಾರ್ಯಗಳ ಬಗ್ಗೆ, ಬಡವರು, ಸಿರಿವಂತರು, ಹೆಣ್ಣುಮಕ್ಕಳು, ಪುರುಷರು ಹೀಗೆ ಅನೇಕ ವಿಷಯಗಳ ಬಗೆಗೆ ವಿವರಣೆ

ನೀಡಿದ್ದಾರೆ. ಮೊಹರಂ ಪದಗಳನ್ನು ದಾಸರ, ಶರಣರ ಪದಗಳಿಗೂ ಹೋಲಿಸಲಾಗುತ್ತದೆ. ಒಟ್ಟಿನಲ್ಲಿ ಶೋಕಸ್ಥಾಯಿಯ ಹಿನ್ನೆಲೆಯಲ್ಲಿ ಹಾಡಲಾಗುವ ಗಂಭೀರ ಧಾಟಿಯ ಮೊಹರಂ ಪದಗಳು ಈ ಮೇಲೆ ಹೇಳಲಾಗಿರುವ ಜೀವನದ ವಿವಿಧ ಮುಖಗಳನ್ನು ಹೊಂದಿರುವ ವಿಶಿಷ್ಟ ಪದಗಳಾಗಿವೆ.

ಉತ್ತರ ಕರ್ನಾಟಕ ಪ್ರದೇಶದಲ್ಲಿ ಮೊಹರಂ ಹಬ್ಬದ ಆಚರಣೆ ಹುಲುಸಾಗಿ ಬೆಳೆದಿವೆ. ಅವುಗಳಲ್ಲಿ ಕೊಪ್ಪಳ ಜಿಲ್ಲೆ ಹೊರತಾದುದಲ್ಲ. ಕೊಪ್ಪಳ ಪ್ರಾಗೈತಿಹಾಸಿಕತೆಯಿಂದ ಹಿಡಿದು ಇಂದಿಗೂ ಕೂಡಾ ತನ್ನದೇ ಆದ ಹತ್ತು ಹಲವು ಸಂಸ್ಕೃತಿಗಳುಳ್ಳ ಹಬ್ಬಗಳನ್ನು ಆಚರಿಸುತ್ತಾ, ಅವುಗಳ ಬಳಕೆಯನ್ನು ಉಳಿಸಿಕೊಂಡು ಬಂದಿದೆ. ಅಂತಹ ಮುಖ್ಯವಾದವುಗಳಲ್ಲಿ ಮೊಹರಂ ಹಬ್ಬವು ಕೂಡ ಒಂದಾಗಿದೆ. ಈ ಹಬ್ಬದ ಆಚರಣೆಯ ಅಧ್ಯಯನ ಎಷ್ಟೋ ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಈಗ ಕುದರಿಮೋತಿ ಮೊಹರಂ ಹಬ್ಬದ ಆಚರಣೆಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹದಂತಹ ಕೆಲಸ ನಡೆಸಿದ್ದೇನೆ. ಈ ವಿಷಯ ಅಧ್ಯಯನಕ್ಕೊಳಪಡಿಸಿದ್ದು ಕಡಿಮೆ. ಆ ನಿಟ್ಟಿನಲ್ಲಿ ಈ ಅಧ್ಯಯನ ಕೈಗೊಂಡಿದ್ದೇನೆ.

ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಟಗಿ ತಾಲೂಕುಗಳ ಪ್ರತಿಯೊಂದು ಹಳ್ಳಿ ಹಳ್ಳಿಗಳಲ್ಲಿ ಕೂಡಾ ಮೊಹರಂ ಹಬ್ಬದ ಆಚರಣೆ ಬಹಳಷ್ಟಿದೆ. ಜನಪದರ ಉಸಿರಾಗಿ, ತಮ್ಮ ಪರಂಪರೆಯ ಅನುಭವದ ನೆಲೆಯಿಂದ ಯಾವುದೇ ಭೇದ-ಭಾವವಿಲ್ಲದೇ, ಕೋಮುಸೌಹಾರ್ದತೆಯನ್ನು ಸಾರುತ್ತ ಮೊಹರಂ ಹಬ್ಬದ ಆಚರಣೆಯನ್ನು ನಡೆಸಿಕೊಂಡು ಬಂದಿದ್ದಾರೆ. ಜಾತ್ಯಾತೀತ ಭಾವನೆಯ ಮೊಹರಂ ಹಬ್ಬದ ವೈಶಿಷ್ಟ್ಯ, ಪರಂಪರೆ, ಹಿನ್ನೆಲೆ, ಮಹತ್ವದ ಕುರಿತು ಅನೇಕ ಸಂಗತಿಗಳ ಮೂಲಕ ಸಂಶೋಧನೆಗೆ ಒಳಪಡಿಸಲಾಗಿದೆ.

ಒಟ್ಟಿನಲ್ಲಿ ಹಿಂದೂ - ಮುಸ್ಲಿಂ ಸಾಮರಸ್ಯದ ಸಂಕೇತಗಳಾಗಿ ಅಂದಿನಿಂದ ಇಂದಿನವರೆಗೂ ಉಳಿದು, ಬೆಳೆದು ಬಂದಿರುವ ಮೊಹರಂ ಹಬ್ಬದ ಆಚರಣೆ ಈ ಭಾಗದಲ್ಲಿ ಎಲ್ಲಾ ಕಡೆ ವಿಜೃಂಭಣೆಯಿಂದ ಆಚರಿಸುತ್ತಾರಾದರೂ, ನನ್ನ ಅಧ್ಯಯನವು ಕುದರಿಮೋತಿ ಗ್ರಾಮದ ಹಬ್ಬದ ಆಚರಣೆಗೆ ಸೀಮಿತವಾಗಿದೆ. ಆ ದಿಸೆಯಲ್ಲಿ ಕುದರಿಮೋತಿ ಮೊಹರಂ ಹಬ್ಬದ ಆಚರಣೆಯ ಕುರಿತು ವಿಶ್ಲೇಷಣೆ ಮತ್ತು ಅವುಗಳ ವಿವರಣೆ, ಮಹತ್ವವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಕೊಪ್ಪಳಜಿಲ್ಲೆಯ ಯಲಬುರ್ಗಿ ತಾಲೂಕಿನ ಕುದರಿಮೋತಿ ಗ್ರಾಮದಲ್ಲಿ ಆಚರಿಸಲ್ಪಡುವ ಮೊಹರಂ ಹಬ್ಬವು ಇತಿಹಾಸ ಪ್ರಸಿದ್ಧವಾದುದು. ಕುದರಿಮೋತಿ ಎಂದರೆ ಮೊಹರಂ ಹಬ್ಬದ ಆಚರಣೆಗೆ ಹೆಸರುವಾಸಿಯಾದ ಕೊಪ್ಪಳ ಜಿಲ್ಲೆಯ ಭಾವೈಕ್ಯತೆಯ ಸ್ಥಳ. ಶತಮಾನಗಳಿಂದಲೂ ತನ್ನ ವೈಶಿಷ್ಟ್ಯ ಮತ್ತು ಗುರುತರವಾದ ಪರಂಪರೆಯನ್ನು ಕನ್ನಡ ನಾಡಿನಲ್ಲಿ ಸಾರುತ್ತ ಅಸಂಖ್ಯಾತ ಭಕ್ತಾದಿಗಳ ಅಭಿಮಾನ, ಭಕ್ತಿಯ ದ್ಯೋತಕವಾಗಿದೆ. ಗ್ರಾಮದ ಎಲ್ಲ ಕೋಮಿನವರೂ ಐಕ್ಯತೆಯಿಂದ, ಅನನ್ಯ ಭಕ್ತಿಯಿಂದ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಾ ಬಂದಿದ್ದು, ಮೊಹರಂ ಆಚರಣೆಯ ಮೂಲಕ ಗತಿಸಿ ಹೋದ ದಂತಕಥೆಯ ಇತಿಹಾಸವನ್ನು ಸಾರುತ್ತಿದೆ.

ಕುದರಿಮೋತಿಯ ಮೊಹರಂ ಆಚರಣೆಯ ಇನ್ನೊಂದು ಪ್ರಮುಖ ಅಂಶವೆಂದರೆ ದೇಶದ

ನಾನಾ ಮೂಲೆಗಳಿಂದ ಅಲೆಮಾರಿ ಜನಾಂಗದ, ಸುಡುಗಾಡು ಸಿದ್ದರು, ವೇಷಗಾರರು, ಹಾವಾಡಿಗರು, ಜಾತಿಗಾರರು, ಗೊಂದಲಿಗರು, ಶಿಂಥೋಳ ಇನ್ನೂ ಮುಂತಾದ ಜನರು ಪರಸ್ಪರ ಮುಖಾ-ಮುಖಿಯಾಗಿ ಒಂದೆಡೆ ಕೂಡುತ್ತಾರೆ.

ಪ್ರತಿ ಎರಡು ವರ್ಷಗಳಿಗೊಮ್ಮೆ ದೇಶದ ಮೂಲೆ ಮೂಲೆಗಳಿಂದ ಬರುವ ಇವರು ಅಲೆಮಾರಿ ಜನಾಂಗದರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಈ ಜನಾಂಗದ ಅಲೆದಾಟ, ತಿರುಗಾಟ ಇರುತ್ತದೆ. ಸಾಮಾನ್ಯವಾಗಿ ಇವರೆಲ್ಲರೂ ಹಿಂದೂಗಳಾಗಿದ್ದು ಭಾವೈಕ್ಯತೆಯಿಂದ ಒಂದೆಡೆ ಸೇರಿ ಮೊಹರಂ ಆಚರಿಸಿ, ಹಬ್ಬದ ನಂತರ ಅದೇ ಅಲೆಮಾರಿ ಬದುಕು ಸಾಗಿಸುತ್ತಾರೆ.

ಇಲ್ಲಿ ಜಾತಿ, ಬೇಧಗಳಿಲ್ಲದೇ ಸುಮಾರು ಎರಡು ಶತಮಾನಗಳಿಂದಲೂ ಮೊಹರಂ ಹಬ್ಬದಾಚರಣೆ ಮಾಡಲಾಗುತ್ತಿದೆ. ಮೊಹರಂ ಹಬ್ಬವು ಊರಿನ ಜನರೆಲ್ಲರಿಗೂ ಒಂದು ರೀತಿಯ ಉತ್ಸವವಾಗಿದೆ. ಇಲ್ಲಿನ ಜನರು ಮೂರು ದಿನಗಳ ಕಾಲ ಊರಿಗೆ ಬಂದವರನ್ನು ಉಪಚರಿಸುತ್ತಾರೆ. ಜೊತೆಗೆ ಈ ಮೂರು ದಿನ ರಾತ್ರಿ ಹೊತ್ತು ಮನೆಯ ಬಾಗಿಲು ಹಾಕದಿರುವ ಸಂಪ್ರದಾಯವೂ ಇದೆ. ಸಕ್ಕರೆ ಮಾದಲಿ, ಬೆಲ್ಲದ ಮಾದಲಿ, ಚೊಂಗೆಯಂತಹ ಸಿಹಿ ತಿಂಡಿಗಳು ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ತಯಾರಾಗಿರುತ್ತದೆ.

ಹರಕೆ ಹೊತ್ತುಕೊಂಡಂತಹ ಭಕ್ತರು, ವಲಸೆ ಹೋದವರು ಮೊಹರಂ ಹಬ್ಬಕ್ಕಾಗಿ ಬರುತ್ತಾರೆ. ತಮ್ಮ ತಮ್ಮ ನಂಬಿಕೆಯಂತೆ ಹುಲಿಯ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಕರ್ನಾಟಕದ ವಿವಿಧ ಭಾಗಗಳಿಂದಲ್ಲದೇ ದೆಹಲಿ, ಬಿಹಾರ, ಗುಜರಾತ್‌ಗಳಿಂದಲೂ ಜನ ತಮ್ಮ ಹರಕೆ ತೀರಿಸಲು ಹುಲಿ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಈ ಹಗಲು ವೇಷಗಾರರು ತಮ್ಮ ಕೈಯಲ್ಲಿನ ಚಾಟಿಯಿಂದ ಜನರಿಗೆ ಮೃದುವಾಗಿ ಏಟು ಹೊಡೆದು ಗಮನ ಸೆಳೆಯುತ್ತಾರೆ.

ಎರಡು ವರ್ಷಗಳಿಗೊಮ್ಮೆ ಕುದರಿಮೋತಿಯಲ್ಲಿ ಮೊಹರಂ ಹಬ್ಬದ ಸಮಯದಲ್ಲಿ ಸಾವಿರಾರು ಡೇರೆಗಳು ಮೇಲೆದ್ದು ನಿಲ್ಲುತ್ತವೆ. ಕಡಿಮೆ ಎಂದರೂ ೧೦ ರಿಂದ ೧೫ ಸಾವಿರದಷ್ಟು ಜನರು ಬಂದು ಇಲ್ಲಿ ಕೆಲವು ದಿನ ಉಳಿಯುತ್ತಾರೆ. ಒಂದೊಂದು ಕುಟುಂಬಕ್ಕೆ ಒಂದು ಡೇರೆ. ಅಲ್ಲಿಯೇ ಅಡುಗೆ, ದಿನನಿತ್ಯದ ದಿನಚರಿ. ಇದಲ್ಲದೇ ಸುಮಾರು ೧ ಸಾವಿರ ಡೇರೆಗಳಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಿಂದ ಬಂದ ಜನರ ವಾಸವಾಗಿರುತ್ತದೆ. ಇದೇ ಸಮಯದಲ್ಲಿಯೇ ಈ ಅಲೆಮಾರಿ ಜನಾಂಗದ ಬಹುತೇಕ ಮದುವೆಗಳ ನಿಶ್ಚಿತಾರ್ಥ, ಲಗ್ನ, ನ್ಯಾಯ ತೀರ್ಮಾನ ಆಗುತ್ತವೆ. ತಮ್ಮದೇ ಪಂಚರ ನ್ಯಾಯ ತೀರ್ಮಾನಕ್ಕೆ ಈ ಜನಾಂಗದವರು ಬದ್ಧರಾಗಿರುತ್ತಾರಲ್ಲದೇ, ತಪ್ಪಿಗೆ ದಂಡ ವಿಧಿಸಲಾಗುತ್ತದೆ. ಆ ದಂಡದ ಹಣವನ್ನು ದರ್ಗಾಕ್ಕೆ ಕಾಣಿಕೆಯಾಗಿ ಸಲ್ಲಿಸಿ ಜನಾಂಗ ಮತ್ತೆ ತಮ್ಮ ಅಲೆಮಾರಿ ಜೀವನಕ್ಕೆ ಮುಂದೆ ಹೋಗುತ್ತಾರೆ.

ಒಂದು ಸಂಸ್ಕೃತಿಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಹಲವು ಜನಾಂಗದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಅನಿವಾರ್ಯತೆ ಇದೆ. ಸಾಂಸ್ಕೃತಿಕ ಮಾನವ ವಿಜ್ಞಾನದಲ್ಲಿ ಮಾನವ

ಕುಲ ವಿಜ್ಞಾನ ಮತ್ತು ಮಾನವ ಕುಲ ವಿವರಣ ವಿಜ್ಞಾನ ಎನ್ನುವ ಎರಡು ಅಧ್ಯಯನ ವಿಷಯಗಳು ಬುಡಕಟ್ಟುಗಳ ಸಂಸ್ಕೃತಿಯನ್ನು ಅಭ್ಯಾಸ ಮಾಡುತ್ತವೆ. ಸಂಸ್ಕೃತಿ ಕಾಲದಿಂದ ಕಾಲಕ್ಕೆ ಬದಲಾಗುವುದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಸಾಂಸ್ಕೃತಿಕ ವ್ಯತ್ಯಾಸವನ್ನು ಅಧ್ಯಯನ ಮಾಡುವುದು ಅಷ್ಟೇ ಮುಖ್ಯವಾಗಿದೆ. ಆದುದರಿಂದ ಸಂಸ್ಕೃತಿಯ ವಿಕಾಸದ ಮೂರು ಹಂತಗಳಾದ ಆದಿವಾಸಿ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ, ನಗರ ಸಂಸ್ಕೃತಿಗಳನ್ನು ಗಮನಿಸಬೇಕಾಗುತ್ತದೆ. ಒಂದು ಸಮಾಜದಲ್ಲಿನ ಜನ ವಾಸ ಮಾಡುವ ಪ್ರದೇಶ ವಾಸ ಮಾಡುವ ವಿಧಾನದ ಆಧಾರದ ಮೇಲೆ ನಗರ ಸಂಸ್ಕೃತಿ ಮತ್ತು ಗ್ರಾಮೀಣ ಸಂಸ್ಕೃತಿ ಎಂದು ವಿಭಜಿಸಿ ನಿರ್ಧರಿಸಬಹುದಾಗಿದೆ. ಆದರೆ ಇವೆರಡರಿಂದಲೂ ದೂರವಿರುವ ಮತ್ತೊಂದು ವರ್ಗದ ಸಂಸ್ಕೃತಿ ಇದೆ. ಅದೇ ಬುಡಕಟ್ಟು ಸಂಸ್ಕೃತಿ. ಇಂಥವರನ್ನು ಅಲೆಮಾರಿಗಳೆನ್ನುತ್ತಾರೆ. ಅನೇಕ ಶತಮಾನಗಳಿಂದಲೂ ಬೆಟ್ಟ ಗುಡ್ಡಗಳ ಪ್ರದೇಶಗಳಲ್ಲಿ, ದ್ವೀಪಗಳಲ್ಲಿ, ಮರಳು ಗಾಡಿನಲ್ಲಿ ವಾಸವಾಗಿರುವ ಸಾಮಾಜಿಕ ವರ್ಗಗಳು ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಪ್ರಭಾವಕ್ಕೆ ಸಿಕ್ಕರೆ ತಮ್ಮ ಸಂಸ್ಕೃತಿಯನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿರುವ ಜನಾಂಗವನ್ನು ಬುಡಕಟ್ಟು ಇಲ್ಲವೇ ಅಲೆಮಾರಿ ಜನಾಂಗಗಳೆಂದು ಕರೆಯುತ್ತಾರೆ. ಇಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಮಾಜದ ಪ್ರತಿಯೊಬ್ಬನನ್ನು ತಿಳಿದುಕೊಂಡಿರುತ್ತಾನೆ. ಇವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆ ರಕ್ತ ಸಂಬಂಧದ ಮೇಲೆ ಅವಲಂಬಿಸಿರುತ್ತದೆ. ಹೊರಗಿನ ಪ್ರತಿಯೊಬ್ಬನನ್ನು ಅನುಮಾನದಿಂದಲೇ ನೋಡುವ ಪದ್ಧತಿ ಈ ಜನರಲ್ಲಿ ಇರುತ್ತದೆ. ಇವರು ತಮ್ಮದೇ ಆದ ಆಚಾರ-ವಿಚಾರ, ಕಲೆ-ಸಾಹಿತ್ಯ ಹೊಂದಿರುತ್ತಾರೆ. ಇಂತಹ ಅಲೆಮಾರಿ ಜನಾಂಗದವರ ಪೈಕಿ ಹಗಲು ವೇಷಗಾರರು, ಸುಡುಗಾಡು ಸಿದ್ಧರು, ದೊಂಬರು, ಸಿಂಧೊಳ್ಳರು, ಗೊಂಧಳಿಗರು, ಹಾವಾಡಿಗರು, ಜಾತಿಗಾರರು ಹಾಗೂ ಇನ್ನೂ ಅನೇಕರಿದ್ದಾರೆ. ಇವರೆಲ್ಲ ಕುದರಿಮೋತಿ ಗ್ರಾಮಕ್ಕೆ ಮೊಹರಂ ಹಬ್ಬ ಸಂದರ್ಭದಲ್ಲಿ ಬರುವುದೇ ಒಂದು ಹಬ್ಬವಾಗಿರುತ್ತದೆ.

ವಿಶ್ವದ ಮೂಲಿಗರೇ ಅಲೆಮಾರಿ ಆದಿವಾಸಿಗಳು. ಇವರಲ್ಲಿ ಹಲವು ವಿಧ. ಪ್ರಕೃತಿ ಮಡಿಲಿನ ಪಾರಂಪರಿಕ ಪಶುಪಾಲಕ ಅಲೆಮಾರಿ ಆದಿವಾಸಿಗಳು, ಪಾರಂಪರಿಕ ಧಾರ್ಮಿಕ ಭಿಕ್ಷಾವೃತ್ತಿಯ ಅಲೆಮಾರಿ ಆದಿವಾಸಿಗಳು ಮತ್ತು ಆಧುನಿಕ ವ್ಯವಸ್ಥೆಗಳ ಹಿನ್ನೆಲೆಯಲ್ಲಿ ಉಗಮಗೊಂಡ ಅಲೆಮಾರಿ ಜನಸಮೂಹಗಳು. ಈ ಜನ ಸಮೂಹಗಳು ತಮ್ಮದೇ ಆದ ವಿಶಿಷ್ಟ ಹಾಗೂ ವಿಚಿತ್ರ ಜೀವನ ಶೈಲಿ, ಧಾರ್ಮಿಕ ಪದ್ಧತಿ, ಆಚರಣೆಗಳು, ನಂಬಿಕೆಗಳನ್ನು ಹೊಂದಿರುತ್ತವೆ. ಇವರು ಮೂಲತಃ ಅಲೆಮಾರಿಗಳಾಗಿರುವುದರಿಂದ, ಎಲ್ಲರೂ ವಿವಿಧ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿರುವುದರಿಂದ ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ವರ್ಷಕ್ಕೆ ಒಮ್ಮೆಯೋ, ಎರಡು ವರ್ಷಕ್ಕೆ ಒಮ್ಮೆಯೋ ಎಲ್ಲೋ ಒಂದು ಕಡೆ ಸೇರುವ ನಿರ್ಧಾರ ಕೈಗೊಂಡಿರಬೇಕು. ಆ ನಿರ್ಧಾರದಂತೆ ಅವರು ನಿಗದಿತ ಪ್ರದೇಶದಲ್ಲಿ ನಿಗದಿತ ಸಮಯದಲ್ಲಿ ಬೀಡು ಬಿಡುತ್ತಾರೆ. ಇದರಿಂದ ಅವರಿಗೆ ತಮ್ಮವರನ್ನು ಭೇಟಿಯಾಗಲು, ತಮ್ಮ ದೈವತ್ವದ ಆಚರಣೆಯ ಮೂಲಕ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು, ಆಚರಣೆ ಮತ್ತು ತಮ್ಮ ಪೂರ್ವ ನಿರ್ಧರಿತ ವೇಳಾಪಟ್ಟಿಯಂತೆ ಸಂಬಂಧಗಳನ್ನು ಬೆಳೆಸಿಕೊಳ್ಳುವ, ಕೊಡು-ಕೊಳ್ಳುವ ವ್ಯವಹಾರ

ಮಾಡುವ ಸಂಪ್ರದಾಯ ಹಾಕಿಕೊಂಡಿರಬೇಕು. ಅಂತೆಯೇ ಅವರು ಒಂದು ಸ್ಥಳದಲ್ಲಿ, ಒಂದು ನಿಗದಿತ ಸಮಯದಲ್ಲಿ ಬೀಡು ಬಿಟ್ಟು ತಮ್ಮ ಪರಂಪರೆ ಮೆರೆಯುತ್ತಾರೆ.

ಈ ಮೇಲಿನ ದೃಷ್ಟಿಯಲ್ಲಿ ವಿಚಾರಿಸಿದರೆ ಅಲೆಮಾರಿಗಳು ಕುದರಿಮೋತಿಯನ್ನು ತಮ್ಮ ಕೇಂದ್ರ ಸ್ಥಾನವನ್ನಾಗಿ, ಮೊಹರಂ ಆಚರಣೆಯ ಸಂದರ್ಭದಲ್ಲಿ ಆಗಮಿಸಲು ನಿರ್ಧರಿಸಿಕೊಂಡಿರಬೇಕು. ಅವರು ಮೊಹರಂ ಆಚರಣೆಯ ಸಂದರ್ಭದಲ್ಲಿ ಮೊಹರಂ ದೈವತ್ವದ ಮುಂದೆ ತಮ್ಮೆಲ್ಲ ಇಷ್ಟಾರ್ಥಗಳನ್ನು, ಹರಕೆಗಳನ್ನು, ಅಂದುಕೊಂಡದ್ದನ್ನು ಪೂರೈಸಿಕೊಳ್ಳಲು ವೇದಿಕೆಯನ್ನಾಗಿ ಮಾಡಿಕೊಂಡಿರಬೇಕು.

ಕೊಪ್ಪಳ ಜಿಲ್ಲೆಯ ಮೊಹರಂ ಹಬ್ಬದ ಅನೇಕ ತಾಣಗಳಿಗೆ ಹೋಲಿಸಿದರೆ ಕುದರಿಮೋತಿ ಅಗ್ರಗಣ್ಯ ಸ್ಥಾನದಲ್ಲಿ ನಿಲುತ್ತದೆ. ಇಲ್ಲಿನ ಮೊಹರಂ ಇತಿಹಾಸ, ಆಚರಣೆ ದೇಶದಲ್ಲಿ ಹೆಸರು ಪಡೆದಿದೆ.

ಕೊಪ್ಪಳಜಿಲ್ಲೆಯ ಯಲಬುರ್ಗಿ ತಾಲೂಕಿನ ಕುದರಿಮೋತಿ ಗ್ರಾಮದಲ್ಲಿ ಆಚರಿಸಲ್ಪಡುವ ಮೊಹರಂ ಹಬ್ಬವು ಇತಿಹಾಸ ಪ್ರಸಿದ್ಧವಾದುದು. ಪ್ರಸ್ತುತ ಕೋಮು ಗಲಭೆಗಳಿಗೆ ತತ್ತರಿಸಿದ ಭಾರತ ದೇಶದಲ್ಲಿ ಹಿಂದೂ-ಮುಸ್ಲಿಮ್‌ರಲ್ಲಿ ಭಾವೈಕ್ಯತೆಯನ್ನು, ಸೌಹಾರ್ದತೆಯನ್ನು ತರುವಲ್ಲಿ ಈ ಆಚರಣೆಯು ಮಹತ್ವವನ್ನು ಪಡೆದುಕೊಂಡಿದೆ.

ಕುದರಿಮೋತಿ ದರ್ಗಾದ ಮತ್ತೊಂದು ವೈಶಿಷ್ಟ್ಯತೆ ಎಂದರೆ ಇಲ್ಲಿನ ದರ್ಗಾ ಕೇವಲ ಮುಸ್ಲಿಂ ಹಬ್ಬದಾಚರಣೆಯ ಸ್ಥಳವಾಗಿರದೇ, ನಾಗರ ಪಂಚಮಿ, ಮಹಾನವಮಿಗಳ ಆಚರಣೆಯೂ ನಡೆಯುತ್ತದೆ. ದರ್ಗಾವು ಸರ್ವ ಜನಾಂಗದ ಹಬ್ಬ ಹರಿದಿನಗಳಿಗೆ, ಕಾರ್ಯಕ್ರಮಗಳಿಗೆ ಸ್ಥಳವಾಗಿರುವ ಭಾವೈಕ್ಯತೆಯ ವಿಶಿಷ್ಟ ತಾಣವಾಗಿದೆ.

ವ್ಯಾಪ್ತಿ :

ಮೊಹರಂ ಹಬ್ಬದ ವ್ಯಾಪ್ತಿ ಬಹಳಷ್ಟು ವಿಸ್ತಾರವಾದದ್ದಾಗಿದೆ. ನಾವು ಮೊಹರಂ ಹಬ್ಬದ ಬಗ್ಗೆ ಅಧ್ಯಯನ ಮಾಡಬೇಕಾದರೆ ನೂರಾರು ವರ್ಷಗಳ ಹಿಂದೆ ಹೋಗಬೇಕಾಗುತ್ತದೆ. ಭಾರತದ ಮೇಲೆ ಪರಕೀಯರ ದಾಳಿಗಳು ಹೆಚ್ಚಿದಾಗಿನಿಂದ, ಅದರಲ್ಲೂ ವಿಶೇಷವಾಗಿ ಮುಸ್ಲಿಮ್ ಅರಸರ ದಾಳಿ, ಆಕ್ರಮಣ, ಆಳ್ವಿಕೆ, ಸಾಮ್ರಾಜ್ಯ ಸ್ಥಾಪನೆಯ ನಂತರ ಇಲ್ಲಿ ಮುಸ್ಲಿಂ ಸಂಸ್ಕೃತಿ ಬೇರೂರಿತು. ಅನಿವಾರ್ಯವಾಗಿ ಹಿಂದೂಗಳು ಮುಸ್ಲಿಮರ ಆಳ್ವಿಕೆಯ ಪ್ರದೇಶಗಳಲ್ಲಿ ಅವರ ಸಂಸ್ಕೃತಿ ಮತ್ತು ಅವರ ಸಂಪ್ರದಾಯಗಳ ಪ್ರಭಾವಕ್ಕೆ ಒಳಗಾಗಬೇಕಾಯಿತು. ಕರ್ಬಾಲಾ ಯುದ್ಧದಲ್ಲಿ ಧರ್ಮದ ಉಳಿವಿಗಾಗಿ ನಡೆದ ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದ ಹುತಾತ್ಮರ ನೆನಪಿಗಾಗಿ ಆಚರಿಸಲಾಗುವ ಈ ಮೊಹರಂ ಇಸ್ಲಾಂ ಕ್ಯಾಲೆಂಡರ್‌ನಲ್ಲಿ ಮೊದಲನೆಯ ತಿಂಗಳು. ಕ್ರಿ.ಶ. ೧೩೪೭ ರಲ್ಲಿ ಕಲಬುರ್ಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಲಾರಂಭಿಸಿದ ಬಹಮನಿ ಸುಲ್ತಾನರ ಕಾಲದಿಂದ ಈ ಮೊಹರಂ ಹಬ್ಬವು ಉತ್ತರ - ಕರ್ನಾಟಕ ಮತ್ತು ಹೈದರಾಬಾದ - ಕರ್ನಾಟಕದಲ್ಲಿ ವ್ಯಾಪಕ

ಪ್ರಚಾರಗೊಳ್ಳಲು ಕಾರಣವಾಯಿತು. ಏಕೆಂದರೆ ಬಹಮನಿ ಸುಲ್ತಾನ ಕಾಲದಲ್ಲಿ ಇರಾನಿಯರ ಸಂಪರ್ಕ, ಒಡನಾಟ ಇವರಿಗೆ ಹೆಚ್ಚಿದ್ದರಿಂದ ಅವರ ಪ್ರಭಾವದಿಂದ ಮೊಹರಂ ಹಬ್ಬದ ವ್ಯಾಪಕತೆ ಹೆಚ್ಚಾಯಿತು.

ಹೈದರಾಬಾದ - ಕರ್ನಾಟಕ ಪ್ರದೇಶ ಮುಂದೆ ಹೈದರಾಬಾದ ನಿಜಾಮನ ಕೈಯಲ್ಲಿ ಬಂದಾಗ ಇಲ್ಲಿ ಮುಸ್ಲಿಂ ಸಂಸ್ಕೃತಿಯ ಪ್ರಭಾವ ಮತ್ತಷ್ಟು ದಟ್ಟವಾಯಿತು. ಆ ವೇಳೆಗೆ ಕರ್ನಾಟಕದ ತುಂಬೆಲ್ಲ ಮುಸ್ಲಿಮರ ಪ್ರಭಾವ ಬೀರಿದ್ದರಿಂದ ಹಿಂದೂ ಸಂಸ್ಕೃತಿಯಲ್ಲಿ ಮುಸ್ಲಿಮ್ ಸಂಸ್ಕೃತಿ, ಸಂಪ್ರದಾಯಗಳು ಮೇಳೈಸಿಕೊಂಡವು. ಕರ್ನಾಟಕದ ವಿವಿಧ ಭಾಗಗಳು ಮುಸ್ಲಿಮ್ ಸಂಪ್ರದಾಯದ ಮೊಹರಂ ಹಬ್ಬದ ಕೇಂದ್ರ ಬಿಂದುಗಳಾದವು. ಅವುಗಳಲ್ಲಿ ಬಿಜಾಪುರ, ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಗದಗ, ಧಾರವಾಡ ಮೊದಲಾದ ಉತ್ತರ - ಕರ್ನಾಟಕ ಮತ್ತು ಹೈದರಾಬಾದ - ಕರ್ನಾಟಕ ಪ್ರದೇಶಗಳಲ್ಲಿ ಮೊಹರಂ ಹಬ್ಬದ ಉತ್ಸವ, ಆಚರಣೆ ಪ್ರಚಾರ ಪಡೆಯಿತು.

ರಾಜಮನೆತನಗಳ ಆಳ್ವಿಕೆಯ ಇತಿಹಾಸ ಮುಗಿಯುತ್ತಿದ್ದಂತೆ ಭಾರತ ಬ್ರಿಟೀಷರ ಕೈಯಲ್ಲಿ ಸಿಕ್ಕಾಗಲೂ ಮೊಹರಂ ಹಬ್ಬದ ಆಚರಣೆ ವಿಜೃಂಭಣೆಯಿಂದಲೇ ಸಾಗಿತ್ತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಾಗೂ ಸ್ವಾತಂತ್ರ್ಯ ನಂತರದ, ಭಾರತದಲ್ಲಿಯೂ ಹಿಂದೂ - ಮುಸ್ಲಿಮರ ಭಾವೈಕ್ಯದ ಕೊಂಡಿಯಾಗಿ ಮೊಹರಂ ಹಬ್ಬದ ಆಚರಣೆ ಮುಂದುವರೆದಿದೆ. ಇಲ್ಲಿಯ ಮೊಹರಂ ಆಚರಣೆ ಕೇವಲ ಒಂದು ಸೀಮಿತ ಜಾತಿಗೆ ಮೀಸಲಾಗಿರದೆ ಭಾವೈಕ್ಯತೆ ಮೂಡಿಸುವ, ಕೋಮು ಸೌಹಾರ್ದತೆಯ ಭಾವನೆ ಮೂಡಿಸುವ ಒಂದು ಹಬ್ಬವಾಗಿದೆ.

ಒಟ್ಟಿನಲ್ಲಿ ಪ್ರಸ್ತುತವಾಗಿ ಮೊಹರಂ ಹಬ್ಬದ ವ್ಯಾಪ್ತಿ ಭಾರತ ದೇಶದ ತುಂಬೆಲ್ಲ ಹರಡಿದೆ. ಕರ್ನಾಟಕವೂ ಮೊಹರಂ ಆಚರಣೆಗೆ ಪ್ರಸಿದ್ಧವಾಗಿದೆ. ಅದರಲ್ಲೂ ಹೈದರಾಬಾದ್-ಕರ್ನಾಟಕ ಪ್ರದೇಶದ ಭಾಗವಾಗಿರುವ ಕೊಪ್ಪಳ ಮತ್ತು ಕೊಪ್ಪಳ ಜಿಲ್ಲೆಯ ನಾಲ್ಕು ತಾಲೂಕುಗಳು ಮೊಹರಂ ಹಬ್ಬದ ಆಚರಣೆಯಲ್ಲಿ ಮೇಲ್ಪಂಕ್ತಿಯಲ್ಲಿವೆ. ಅವುಗಳಲ್ಲಿ ಕುದರಿಮೋತಿ ಮೊಹರಂ ಹಬ್ಬದ ಆಚರಣೆ ಈ ಎಲ್ಲ ಪ್ರದೇಶಗಳಿಗೆ ಹೋಲಿಸಿದರೆ ವಿಶಿಷ್ಟ ಸ್ಥಾನದಲ್ಲಿ ನಿಲುತ್ತದೆ. ಕುದರಿಮೋತಿ ಹಬ್ಬದ ಆಚರಣೆ ಕರ್ನಾಟಕದಲ್ಲಿಯೇ ಗಮನ ಸೆಳೆಯುತ್ತಿದೆ. ಪ್ರತಿ ಎರಡು ವರ್ಷಗಳಿಗೊಮ್ಮೆ ಈ ಹಬ್ಬದ ಸಮಯದಲ್ಲಿ ಸುಡುಗಾಡು ಸಿದ್ದರು, ಸಿಂಧೊಳರು, ಹಾವಾಡಿಗರು, ಹಗಲು ವೇಷಗಾರರು ಹೀಗೆ ಅನೇಕ ಅಲೆಮಾರಿ ಜನಾಂಗದವರು ದೇಶದ ನಾನಾ ಮೂಲೆಗಳಿಂದ ತಂಡೋಪತಂಡವಾಗಿ ಹರಿದು ಬಂದು ಈ ಸ್ಥಳದಲ್ಲಿ ಸೇರುತ್ತಾರೆ. ಭಕ್ತಿಯ ಪರಾಕಾಷ್ಠೆಯೊಂದಿಗೆ ಹಬ್ಬ ಆಚರಿಸಿ, ನಂತರ ಕೊಡು-ತೆಗೆದುಕೊಳ್ಳುವ ವ್ಯವಹಾರ, ತಂಟೆ-ತಕರಾರು, ವ್ಯಾಜ್ಯಗಳ ಪರಿಹಾರಗಳನ್ನು ಮುಗಿಸಿ ಮತ್ತೆ ಅಲೆಮಾರಿ ಬದುಕಿಗೆ ಸಾಗುತ್ತಾರೆ. ಈ ಕಾರಣದಿಂದ ಈ ಗ್ರಾಮದ ಮೊಹರಂ ಹಬ್ಬದ ಆಚರಣೆ ಮತ್ತು ಆಚರಣೆಯಲ್ಲಿಯ ಅಲೆಮಾರಿಗಳು ಮಹತ್ವದ ಸಂಶೋಧನಾ ವಿಷಯವಾಗಿದೆ.

ಈ ಸಂಶೋಧನಾ ಅಧ್ಯಯನ ಕೈಗೊಂಡಾಗ ಅದರ ವಿಸ್ತೃತ ರೂಪ ಪಡೆದುಕೊಂಡು ನಿರ್ದಿಷ್ಟವಾದ ಫಲಿತಾಂಶಗಳನ್ನು ಕಂಡುಕೊಳ್ಳಲು ಒಂದು ಪರಿಧಿ ಬಹುಮುಖ್ಯವಾದುದು. ಅದನ್ನು

ಅಧ್ಯಯನದ ಮಿತಿ, ವ್ಯಾಪ್ತಿ ಎಲ್ಲೆ ಎನ್ನುವ ವಿವಿಧ ಪರಿಭಾಷೆಗಳಿಂದ ಗುರುತಿಸುತ್ತೇವೆ. ಪ್ರಸ್ತುತ ಅಧ್ಯಯನವು ತನ್ನದೇ ಆದ ಒಂದು ಪರಿಧಿಯೊಳಗೆ ಚರ್ಚಿಸುತ್ತ ತಾತ್ವಿಕ ನೆಲೆಗಟ್ಟನ್ನು ಗಟ್ಟಿಗೊಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಭಾವೈಕ್ಯತೆಯನ್ನು ಸಾರುವ ಈ ಸಂಶೋಧನಾ ವಸ್ತು ವಿಷಯವನ್ನು ಇಟ್ಟುಕೊಂಡು 'ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನ' ಇದನ್ನು ಕೈಗೊಳ್ಳಲಾಗಿದೆ. ಕುದರಿಮೋತಿ ಗ್ರಾಮದ ಮೊಹರಂ ಆಚರಣೆ, ಅಲೆಮಾರಿ ಜನಾಂಗದವರ ಆಗಮನ, ಸಂಪ್ರದಾಯ, ಪರಂಪರೆ ಈ ಎಲ್ಲ ವಿಷಯಗಳನ್ನು ಇಟ್ಟುಕೊಂಡು ಕ್ಷೇತ್ರಕಾರ್ಯ ವಿಧಾನದ ಮೂಲಕ ಒಂದು ಸೈದ್ಧಾಂತಿಕ ನಿಲುವಿನೊಳಗೆ ವಿಷಯವನ್ನು ಸಂಗ್ರಹಿಸಲಾಗಿದೆ. ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ವಿಭಿನ್ನ ದೃಷ್ಟಿಕೋನದಿಂದ ನನ್ನ ಅಧ್ಯಯನದ ವ್ಯಾಪ್ತಿಯೊಳಗೆ ಸಂಶೋಧನಾ ಪ್ರಬಂಧವನ್ನು ಬರೆಯಲಾಗಿದೆ.

ಅಲಕ್ಷಿತ ಕ್ಷೇತ್ರಗಳನ್ನು ಅರಿಯಲು ಲಿಖಿತ ರೂಪದ ಸಾಹಿತ್ಯದಷ್ಟೇ ಮೌಖಿಕ ಸಾಹಿತ್ಯದ ಆಕರಗಳು ಬೆನ್ನೆಲುಬಾಗಿ ನಿಲ್ಲಲು ಸಹಕರಿಸುತ್ತವೆ. ಜನಪದ ಸಾಹಿತ್ಯವು ಮೌಖಿಕ ಪರಂಪರೆಯ ತಾಯಿ ಬೇರಾಗಿ, ಹಳೆಬೇರು-ಹೊಸಚಿಗುರು ಎಂಬಂತೆ ಸಾಹಿತ್ಯದ ಆಕರಗಳಿಗೆ ಜೀವಸವನ್ನು ತುಂಬುವ ಜೀವಂತ ಪಳೆಯುಳಿಕೆಗಳಾಗಿವೆ. ಆದುದರಿಂದಲೇ ಲಿಖಿತ ಹಾಗೂ ಮೌಖಿಕ ಆಕರಗಳೆರಡನ್ನು ಸಮ್ಮಿಳಿಸಿ ಪ್ರಸ್ತುತ ಅಧ್ಯಯನವನ್ನು ಬಹುರೂಪಿ ನೆಲೆಯಲ್ಲಿ ಸಿದ್ಧಪಡಿಸಲಾಗಿದೆ.

ಬದುಕು ಬದಲಾದಂತೆ ಮನುಷ್ಯನ ಆಲೋಚನೆಗಳೂ ಬದಲಾಗುತ್ತಿವೆ. ಅದರ ಫಲವಾಗಿ ಇಂದು ಸಂಶೋಧನಾ ಕ್ಷೇತ್ರವು ಹೊಸ ದಿಗಂತದ ಕಡೆಗೆ ಸಾಗುತ್ತಿದೆ. ಯಾರ ಗಣನೆಗೂ ಬಾರದ ಹತ್ತು ಹಲವು ಕ್ಷೇತ್ರಗಳಾಗಲೀ, ಸಮುದಾಯಗಳಾಗಲೀ ಮತ್ತು ಸಂಸ್ಕೃತಿಗಳಾಗಲೀ, ಪರಂಪರೆಯ ಆಚರಣೆಗಳಾಗಲೀ ಗುರುತರವಾದ ತಾರ್ಕಿಕ ಚಿಂತನೆಗಳ ಮೂಲಕ ಅವು ಬೆಳಕಿನೆಡೆಗೆ ಬಂದು ನಿಲ್ಲುತ್ತಿವೆ. ಹಾಗೆಂದ ಮಾತ್ರಕ್ಕೆ ಎಲ್ಲವುಗಳೂ ಹೊಸ ಸಂವೇದನೆಯನ್ನು ಪಡೆದುಕೊಂಡು ನಿಂತಿವೆಯೇ ಎಂಬ ಅನುಮಾನಗಳು ಬರಬಹುದು. ಇತ್ತೀಚಿನ ಕೆಲವು ಅಧ್ಯಯನಗಳು ಇಂತಹ ಅಲಕ್ಷಿತ ನೆಲೆಗಳನ್ನು, ಅದರ ಸಾಧ್ಯತೆಗಳನ್ನು ಅಲ್ಪ ಮಟ್ಟಿಗಾದರೂ ಆಧುನಿಕತೆಯೆಡೆಗೆ ವಾಲುವಂತೆ ಮಾಡುತ್ತಿವೆ. ಈ ಮೊಹರಂ ಆಚರಣೆ ಮತ್ತು ಮೊಹರಂ ಪದಗಳು ಜನಪದ ಸಾಹಿತ್ಯದ ಒಂದು ಭಾಗವಾಗಿದೆ. ಜನಪದ ಸಂಸ್ಕೃತಿಯನ್ನು ಉಳಿಸುವ, ಬೆಳೆಸುವ ಜೀವಂತ ಪಳೆಯುಳಿಕೆಗಳಾಗಿವೆ. ಆದುದರಿಂದ ಮೊಹರಂ ಹಬ್ಬದ ಆಚರಣೆ ಮತ್ತು ಮೊಹರಂ ಪದಗಳನ್ನು ಅಲ್ಲದೇ ಅಲೆಮಾರಿಗಳ ಆಗಮನ ಇವುಗಳನ್ನು ಸಮ್ಮಿಳಿಸಿ ಪ್ರಸ್ತುತ ಅಧ್ಯಯನವನ್ನು ಬಹುರೂಪಿ ನೆಲೆಯಲ್ಲಿ ಸಿದ್ಧಪಡಿಸಲಾಗಿದೆ.

ಧಾರ್ಮಿಕ ಕಟ್ಟುಪಾಡುಗಳು, ಬಿಗಿಗೊಂಡಂತೆ ದೈವತ್ವ ಆಚರಣೆಗಳಲ್ಲಿ ಸರಳೀಕೃತ ವ್ಯವಸ್ಥೆಯೆಡೆಗೆ ಮನಸ್ಸನ್ನು ಕೇಂದ್ರೀಕರಿಸುವುದು ಸಾಮಾನ್ಯ. ವೈದಿಕ ಶಾಹಿ ನಿಲುವುಗಳಿಗೆ ಬೇಸತ್ತ ಗುಂಪೊಂದು ತಿಳಿದೋ, ತಿಳಿಯದೆಯೋ ಪ್ರತಿಭಟಿಸಿರುವುದು ಭಕ್ತಿಯನ್ನು ವಿವಿಧ ರೀತಿಯಲ್ಲಿ ಕಟ್ಟಲು ಸಹಕಾರಿಯಾಗಿದೆ.

ಸಮಾಜದ ಅಂಕು-ಡೊಂಕುಗಳನ್ನು, ಓರೆ-ಕೋರೆಗಳನ್ನು ತಿದ್ದಲು ಈ ಬಗೆಯ ಮೊಹರಂ ಹಬ್ಬದ ಆಚರಣೆಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಬಹುಸಂಸ್ಕೃತಿಯ ನೆಲೆಗಟ್ಟನ್ನು ಪ್ರಮುಖವಾಗಿ ಹೊಂದಿರುವ ಈ ಮೊಹರಂ ಹಬ್ಬದ ಆಚರಣೆ ಸಮಾಜದ ಜನತೆಯನ್ನು ಸೌಹಾರ್ದಯುತ ವಾತಾವರಣದಲ್ಲಿ ಬದುಕು ಸಾಗಿಸಲು ಕಾರಣೀಭೂತವಾಗುತ್ತದೆ. ಈ ಬಗೆಯ ಆಚರಣೆಯನ್ನು ಮುಂದಿಟ್ಟುಕೊಂಡು ಕ್ಷೇತ್ರಕಾರ್ಯವನ್ನು ಪ್ರಧಾನವಾಗಿಟ್ಟುಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅನೇಕ ಅಲೆಮಾರಿ ಜನಾಂಗಗಳು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಭಾರತದ ವಿಸ್ತಾರವಾದ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿವೆ. ಕೆಲವು ಜನಾಂಗಗಳು ಗುಡ್ಡಗಾಡು ಪ್ರದೇಶಗಳಲ್ಲಿ, ಕೆಲವು ಗ್ರಾಮೀಣ ಪ್ರದೇಶಗಳಲ್ಲಿ, ಕೆಲವು ಪಟ್ಟಣ ಪ್ರದೇಶಗಳಲ್ಲಿ ಅಲೆಮಾರಿಗಳಾಗಿ ತಮ್ಮ ನಡೆ, ನುಡಿ, ವೃತ್ತಿ, ಪ್ರವೃತ್ತಿಗಳಿಂದ ತಮ್ಮ ಸಾಂಸ್ಕೃತಿಕ ಅನೇಕ ಅಂಶಗಳನ್ನು ಇಂದಿಗೂ ಉಳಿಸಿಕೊಂಡು ಬಂದು, ಜೀವನ ಸಾಗಿಸುತ್ತಿದ್ದಾರೆ. ಇವರು ಯಾವ ಕಾಲದ ಪ್ರಭಾವಕ್ಕೂ, ಯಾರದೇ ಪ್ರಭಾವಕ್ಕೂ ಮಣಿಯದೇ ತಮ್ಮದೇ ಆದ ಸಂಪ್ರದಾಯದಿಂದ ತಮ್ಮತನವನ್ನು ಉಳಿಸಿಕೊಂಡು ಬಂದಿದ್ದಾರೆ. ಉಪಸಂಸ್ಕೃತಿಗೆ ಸೇರಿದ ಅಲೆಮಾರಿ ಜನಾಂಗದವರು ತಮ್ಮ ಸಂಸ್ಕೃತಿಗೆ ತಕ್ಕಂತೆ ವಾಸಿಸುವ ಸುತ್ತಮುತ್ತಲ ಪರಿಸರ, ವಾಸಪ್ರದೇಶ, ಪರಂಪರೆ, ಸಮಾಜ ರಚನೆ, ಸಾಮಾಜಿಕ ಸ್ಥಾನಮಾನ, ಸಂಪ್ರದಾಯ, ರೀತಿ-ರಿವಾಜು, ವೇಷ-ಭೂಷಣ, ಕುಲ-ಕಸುಬು, ಜನನ-ಮರಣ, ಮದುವೆ, ಆಹಾರ ಪದ್ಧತಿ, ಭಾಷೆ, ಕಲೆ-ಸಾಹಿತ್ಯ ಮುಂತಾದವುಗಳಲ್ಲಿ ಇವರು ತಮ್ಮ ವಿಶಿಷ್ಟತೆಯನ್ನು ಹೊಂದಿರುತ್ತಾರೆ.

ಇಂತಹ ವೈಶಿಷ್ಟ್ಯಪೂರ್ಣ ಬದುಕಿನ ದಿನಚರಿಯನ್ನು ಹೊಂದಿರುವ ಅಲೆಮಾರಿ ಜನಾಂಗದವರ ಬಗೆಗಿನ ಅಧ್ಯಯನವು ನನ್ನ ವ್ಯಾಪ್ತಿಗೆ ಬರುವಂತೆ ಕುದರಿಮೋತಿಯ ಮೊಹರಂ ಹಬ್ಬದ ಆಚರಣೆಯಲ್ಲಿ ಕಾರ್ಯಕ್ಷೇತ್ರ ಕೈಗೊಂಡಾಗ ಈ ಎಲ್ಲ ಮಹತ್ವದ ವಿಚಾರಗಳು ತಿಳಿದು ಬಂದವು. ಅವರು ನಡೆಸುವ ಜೀವನ ಪದ್ಧತಿ ಇಂದಿನ ಆಧುನಿಕ ಯುಗದ ಸಂದರ್ಭದಲ್ಲಿಯೂ ನಮಗೆ ಆಶ್ಚರ್ಯವುಂಟು ಮಾಡಿದರೂ, ಯಾವುದೇ ಬದಲಾವಣೆಗೆ ಜಗ್ಗದೇ ಅವರು ಆದಿಕಾಲದಿಂದ ತಮ್ಮ ಆಚರಣೆ, ನಂಬಿಕೆಗಳಿಗೇ ಬದ್ಧರಾಗಿ ನಿಂತಿರುವುದು ನಿಜಕ್ಕೂ ಅದ್ಭುತವಾಗಿದೆ.

ಕುದರಿಮೋತಿ ಮೊಹರಂ ಹಬ್ಬದ ಸಂದರ್ಭದಲ್ಲಿ ಅವರು ಮೊಹರಂ ಆಚರಣೆಯನ್ನು ಹೇಗೆ ಆಚರಿಸುತ್ತಾರೆಂದಷ್ಟೇ ಗಮನಿಸದೇ ಕಾರ್ಯಕ್ಷೇತ್ರದಲ್ಲಿ ಅವರ ವಿಶಿಷ್ಟ ಬದುಕಿನ ಹಲವು ಮಜಲುಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಲಾಯಿತು. ಆ ಅಧ್ಯಯನದ ಫಲವೇ ಈ ಸಂಶೋಧನಾ ಮಹಾ ಪ್ರಬಂಧ.

ಕೊಪ್ಪಳ ಜಿಲ್ಲೆಯ ಮೊಹರಂ ಆಚರಣೆಯ ಪ್ರಮುಖ ಸ್ಥಳಗಳು :

ಕೊಪ್ಪಳ ತಾಲೂಕು : ಸಿರಸಪ್ಪಯ್ಯನಮಠ, ಹಿರೇಮಸೂತಿ, ತೆಗ್ಗಿನಕೇರಿಯ ಮಡಿವಾಳಪ್ಪ ಮಸೀದೆಯ ಕೈಲಾಸಪತಿ. ಅತ್ತಾರಗಲ್ಲಿ ಮಸೀದಿ, ಪಲ್ಟನ್‌ಗಲ್ಲಿ ಮಸೀದಿ, ಸರದಾರಗಲ್ಲಿ ಮಸೀದಿ,

ಸಜ್ಜಿಹೊಲದ ಮುದಗಲ್ ಮಸೀದಿ ಮೊದಲಾದವುಗಳು.

ಯಲಬುರ್ಗಾ ತಾಲೂಕು : ಕುದರಿಮೋತಿ, ಯಲಬುರ್ಗಾ, ಕುಕನೂರು, ಮಂಗಳೂರು, ತಳಕಲ್ಲ ಮೊದಲಾದವುಗಳು.

ಕುಷ್ಟಗಿ ತಾಲೂಕು : ಕುಷ್ಟಗಿ, ಚಂದಾಲಿಂಗೇಶ್ವರ, ಹಿರೇಮನ್ನಾಪುರ ಮೊದಲಾದವುಗಳು.

ಗಂಗಾವತಿ ತಾಲೂಕು : ಗಂಗಾವತಿ, ಹಿರೇಜಂತಗಲ್ಲ, ಹುಲಿಹೈದರ, ಕನಕಗಿರಿ, ಚಿಕ್ಕ ಜಂತಕಲ್, ಬಸಾಪಟ್ಟಣ, ವಡ್ಡರಹಟ್ಟಿ ಮೊದಲಾದವುಗಳು.

ಕೊಪ್ಪಳ, ಯಲಬುರ್ಗಾ, ಗಂಗಾವತಿ, ಕುಷ್ಟಗಿ ತಾಲೂಕುಗಳಲ್ಲಿನ ಎಲ್ಲ ಗ್ರಾಮಗಳ, ಪಟ್ಟಣಗಳ, ನಗರಗಳ ಅಶೂರಖಾನಾ ಅಥವಾ ಮಸೀದಿಗಳಲ್ಲಿ ಆಚರಿಸುವ ಮೊಹರಂ ಹಬ್ಬದ ಆಚರಣೆ ಹಾಗೂ ಮೊಹರಂ ಪದಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಅಡಿಟಿಪ್ಪಣಿಗಳು :

೧. ಡಾ. ವೀರಣ್ಣ ದಂಡೆ - ತಿರುಳ್ಗನ್ನಡ (೬೨ ನೆಯ ಅ.ಭಾ.ಕ.ಸಾ. ಸಮ್ಮೇಳನದ ಸ್ಮರಣ ಸಂಚಿಕೆ)

ಅಧ್ಯಾಯ : ಹೈದರಾಬಾದ ಕರ್ನಾಟಕ, ಪುಟ ಸಂಖ್ಯೆ - ೧೫

೨. ಡಾ. ವೀರಣ್ಣ ದಂಡೆ - ತಿರುಳ್ಗನ್ನಡ (೬೨ ನೆಯ ಅ.ಭಾ.ಕ.ಸಾ. ಸಮ್ಮೇಳನದ ಸ್ಮರಣ ಸಂಚಿಕೆ)

ಅಧ್ಯಾಯ : ಹೈದರಾಬಾದ ಕರ್ನಾಟಕ, ಪುಟ ಸಂಖ್ಯೆ - ೧೫

೩. ಡಾ. ವೀರಣ್ಣ ದಂಡೆ - ತಿರುಳ್ಗನ್ನಡ (೬೨ ನೆಯ ಅ.ಭಾ.ಕ.ಸಾ. ಸಮ್ಮೇಳನದ ಸ್ಮರಣ ಸಂಚಿಕೆ)

ಅಧ್ಯಾಯ : ಹೈದರಾಬಾದ ಕರ್ನಾಟಕ, ಪುಟ ಸಂಖ್ಯೆ - ೧೮

೪. ಹಸನಬಿ ಬೀಳಗಿ - ಜಾನಪದ ಸೃಷ್ಟಿ - ದೃಷ್ಟಿ, ಪುಟ ಸಂಖ್ಯೆ - ೭೦

೫. ಪಹಸೀನಾ ಬೇಗಂ - ಕರ್ನಾಟಕ ಮುಸ್ಲಿಂ ಜಾನಪದ, ಪುಟ ಸಂಖ್ಯೆ - ೧೩೯

೬. ಡಾ. ದೇ. ಜವರೇಗೌಡ - ಜಾನಪದ ಅಧ್ಯಯನ,

ಅಧ್ಯಾಯ : ಹಬ್ಬಗಳು, ಪುಟ ಸಂಖ್ಯೆ - ೩೬೫, ೩೬೬

೭. ಡಾ. ದೇ. ಜವರೇಗೌಡ - ಜಾನಪದ ಅಧ್ಯಯನ,

ಅಧ್ಯಾಯ : ಹಬ್ಬಗಳು, ಪುಟ ಸಂಖ್ಯೆ - ೩೬೬

೮. ಡಾ. ದಸ್ತಗೀರ್ ಅಲ್ಲೀಭಾಯಿ - ಮೊಹರಂ ಪದಗಳು, ಪ್ರಸ್ತಾವನೆಯ ಪುಟ ಸಂಖ್ಯೆ - ೪೫

೯. ಡಾ. ದಸ್ತಗೀರ್ ಅಲ್ಲೀಭಾಯಿ - ಮೊಹರಂ ಪದಗಳು, ಪ್ರಸ್ತಾವನೆಯ ಪುಟ ಸಂಖ್ಯೆ - ೪೫

ಅಧ್ಯಾಯ - ೨

ಕೊಪ್ಪಳ ಜಿಲ್ಲೆಯ ಭೌಗೋಳಿಕ ಪರಿಸರ - ಸಾಂಸ್ಕೃತಿಕ ಹಿನ್ನೆಲೆ

ಅಧ್ಯಾಯ - ೨ : ಕೊಪ್ಪಳ ಜಿಲ್ಲೆಯ ಭೌಗೋಳಿಕ ಪರಿಸರ - ಸಾಂಸ್ಕೃತಿಕ ಹಿನ್ನೆಲೆ

"ಒಂದು ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಅಲ್ಲಿಯ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಹಿತ್ಯ ಮತ್ತು ವಾಸ್ತುಶಿಲ್ಪಗಳ ಹಿನ್ನೆಲೆಯಲ್ಲಿ ವಿವೇಚಿಸಲಾಗುತ್ತಿದೆ. ಕೊಪ್ಪಳ ಯಲಬುರ್ಗಾ, ಕುಷ್ಟಗಿ, ಗಂಗಾವತಿ ತಾಲೂಕುಗಳನ್ನೊಳಗೊಂಡ ಕೊಪ್ಪಳ ಜಿಲ್ಲೆ ಪ್ರಾಚೀನ ಕಾಲದಿಂದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದುದಾಗಿತ್ತು"[೧].

ಕೊಪ್ಪಳ ನಾಡಿನ ಚರಿತ್ರೆಯನ್ನು ಪುರಾಣಕಾಲದೊಂದಿಗೆ ತಳಕು ಹಾಕಲು ಈ ಜನರಲ್ಲಿ ಬೇರೂರಿ ಬಂದಿರುವ ಹಲವಾರು ನಂಬಿಕೆಗಳೆ ಉದಾಹರಣೆಗಳಾಗಿವೆ. ಅಲ್ಲದೆ ಈ ನಾಡು ನೂತನ ಶಿಲಾಯುಗ, ಬೃಹತ್ ಶಿಲಾಯುಗದ ಕಾಲದಲ್ಲೂ ಪ್ರಸಿದ್ಧಿ ಪಡೆದಿದ್ದ ಬಗ್ಗೆ ದೊರೆತಿರುವ ಹಲವಾರು ನೆಲೆಗಳ ಆಧಾರವನ್ನು ಒದಗಿಸುತ್ತದೆ. ಅಲ್ಲಿಂದ ಮುಂದೆ ಚರಿತ್ರೆಯ ಕಾಲಕ್ಕೆ ಬಂದರೆ ಅಶೋಕನ ಎರಡು ಶಾಸನಗಳು ಕೊಪ್ಪಳದಲ್ಲಿಯೇ ದೊರೆತಿರುವುದು ಈ ನಾಡು ಅಂದಿನ ಕಾಲದಲ್ಲಿ ಹೊಂದಿದ್ದ ಪ್ರಸಿದ್ಧಿಯನ್ನು ಸಾರುತ್ತಿದೆ ಎಂದು ಹೇಳಬಹುದು.

ಇಲ್ಲಿಯ ಸಾಂಸ್ಕೃತಿಕ ಪರಿಸರದ ಇತಿಹಾಸದ ಬಗ್ಗೆ ಹೇಳಬೇಕೆಂದರೆ ಕೊಪ್ಪಳದ ಪ್ರಾಗಿತಿಹಾಸ ಬೇರೆ ಐತಿಹಾಸಿಕ ಸ್ಥಳಗಳ ಇತಿಹಾಸದ ಮಹತ್ವಕ್ಕಿಂತಲೂ ಒಂದು ಹೆಜ್ಜೆ ಮುಂದಿದೆ. ಇಲ್ಲಿಯ ಸಾಂಸ್ಕೃತಿಕ ಪರಿಸರ ಬಹು ವೈಭವದ ದಿನಗಳನ್ನು ಹೊಂದಿತ್ತು. ವಿವಿಧ ರಾಜಮನೆತನಗಳ ಆಳ್ವಿಕೆಯ ಕಾಲದಲ್ಲೂ ಸಾಂಸ್ಕೃತಿಕ ಪರಿಸರ ವಿಜೃಂಭಣೆಯಿಂದಿತ್ತು. ನಗರದ ಪ್ರಾಚೀನತೆಗೆ ಸಾಕ್ಷಿ ಎಂಬಂತೆ ಇಲ್ಲಿನ ಕೋಟೆ, ಅಶೋಕನ ಶಿಲಾಶಾಸನಗಳು, ಮಳೆ ಮಲ್ಲೇಶ್ವರ ದೇವಸ್ಥಾನ, ಗವಿಮಠ ಗುಹಾಚಿತ್ರಗಳು ಇಲ್ಲಿವೆ. ಇಲ್ಲಿ ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ರಾಜ್ಯಭಾರ ನಡೆಸಿದ್ದರು ಎನ್ನುವ ಕುರಿತಾದ ಇತಿಹಾಸವಿದೆ. ಸಹಜವಾಗಿಯೇ ಈ ಎಲ್ಲ ಮನೆತನಗಳು ಮತ್ತು ರಾಜರು ಕಲೆಗೆ, ಸಾಹಿತ್ಯಕ್ಕೆ, ಸಂಸ್ಕೃತಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದರು. ಕೊಪ್ಪಳವು ಒಂಭತ್ತನೆಯ ಶತಮಾನದ ಹೊತ್ತಿಗೆ ಜೈನರ ಕಾಶಿ ಎಂದೇ ಖ್ಯಾತಿಯಾಗಿತ್ತು.

ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಸಂಸ್ಕೃತಿಗಳ ನೆಲೆವೀಡಾಗಿದ್ದ ಕೊಪ್ಪಳ ಒಂದು ಕಾಲದಲ್ಲಿ ಜೈನ ಮತ್ತು ಬೌದ್ಧ ಧರ್ಮಗಳ ದಕ್ಷಿಣ ಭಾರತದ ಬಹು ಮುಖ್ಯ ಕೇಂದ್ರಸ್ಥಾನವಾಗಿದ್ದಿತು. ಇಲ್ಲಿರುವ ಎರಡು ಅಶೋಕನ ಶಿಲಾಶಾಸನಗಳು, ಬೌದ್ಧ ವಿಹಾರಗಳು, ಬೌದ್ಧರ ಪ್ರಮುಖ ಕೇಂದ್ರಗಳು, ಬೌದ್ಧ ಧರ್ಮದ ಕೆಲವೊಂದು ಐತಿಹಾಸಿಕ ಸ್ಥಳಗಳು ಈ ನೆಲದಲ್ಲಿ ಕಾಣಸಿಗುತ್ತವೆ.

ಹೀಗೆ ಕೊಪ್ಪಳವು ಕೇವಲ ಒಂದೇ ರಾಜಮನೆತನದಡಿ ಆಳ್ವಿಕೆಗೆ ಬರದೇ ವಿವಿಧ ಕಾಲಘಟ್ಟಗಳಲ್ಲಿ

ವಿವಿಧ ರಾಜಮನೆತನಕ್ಕೆ ಸಂಬಂಧಿಸಿದಂತೆ ಆಯಾ ಸಂಸ್ಕೃತಿ, ಕಲೆ, ವಾಸ್ತುಶಿಲ್ಪ, ಶಿಲ್ಪಕಲೆ, ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ನೆಲೆಬೀಡಾಗಿತ್ತು ಎಂಬದರಲ್ಲಿ ಎರಡು ಮಾತಿಲ್ಲ. ಇಷ್ಟೊಂದು ಐತಿಹಾಸಿಕ ಸಾಂಸ್ಕೃತಿಕ ಪರಂಪರೆಯ ಹಿರಿಮೆಯನ್ನು ಪಡೆದ ಕೊಪ್ಪಳದ ಕುರಿತಾದ ನೈಜ ಪುರಾತನ ಇತಿಹಾಸದ ಬಗ್ಗೆ ದೃಷ್ಟಿ ಹಾಯಿಸೋಣ.

''ರಾಜಕೀಯವಾಗಿ 'ದಕ್ಷಿಣದ ಮಹಾದ್ವಾರ' ಎಂದು ಪ್ರಸಿದ್ಧಿ ಪಡೆದಿದ್ದ ಈ ಸ್ಥಳ ರಾಯಚೂರು ಜಿಲ್ಲೆಯ ಪ್ರಮುಖ ಪಟ್ಟಣ. ಪುರಾಣ ಕಾಲದಿಂದಲೂ ಹಲವಾರು ಸ್ಥಳ ಪುರಾಣಗಳನ್ನು ತನ್ನ ಚರಿತ್ರೆಯೊಂದಿಗೆ ಹೊತ್ತು ನಿಂತಿದೆ''[೨]. ಕೊಪ್ಪಳ ಐತಿಹಾಸಿಕವಾಗಿಯೂ, ಅಮೋಘ ಸಾಂಸ್ಕೃತಿಕ ಪರಿಸರದ ಹಿನ್ನೆಲೆ ಹೊಂದಿರುವ ನಾಡಾಗಿಯೂ, ಉತ್ಕೃಷ್ಟ ಸಾಹಿತ್ಯಿಕ ಇತಿಹಾಸ ಹೊಂದಿರುವ ತಾಣವಾಗಿಯೂ, ಇತಿಹಾಸದ ಪ್ರಮುಖ ಘಟನೆಗಳಿಗೆ ಸಾಕ್ಷಿಯಾಗಿಯೂ ಪುರಾತನ ಕಾಲದಿಂದಲೂ ಹೆಸರುವಾಸಿಯಾಗಿರುವ ಪ್ರಸಿದ್ಧ ಊರು. ಕೊಪ್ಪಳದ ಇತಿಹಾಸ ಅರಿಯಲು ಹೋದರೆ ರಾಮಾಯಣ, ಮಹಾಭಾರತ ಅಷ್ಟೇ ಅಲ್ಲದೇ ಆದಿ ಮಾನವರ ಕಾಲಕ್ಕಿಂತಲೂ ಹಿಂದೆ ಹೋಗಬೇಕಾಗುತ್ತದೆ.

''ಪುರಾಣೈತಿಹ್ಯಗಳ ಕಾಲಕ್ಕನುಗುಣವಾಗಿ ಸಾಗಿದರೆ ರಾಮಾಯಣ, ಮಹಾಭಾರತ ಕಾಲದ್ದೆಂದು ಹೇಳಲಾಗುವ ಕೆಲವು ಪ್ರದೇಶಗಳು ಇಲ್ಲಿ ಸಿಗುತ್ತವೆ. ಅರ್ಜುನನು ಪಾಶು ಪತಾಸ್ತ್ರ ಪಡೆಯಲು ತಪಸ್ಸು ಮಾಡಿದ ಇಂದ್ರಕೀಲ ಪರ್ವತ ಕೊಪ್ಪಳದ ಪರ್ವತ ಸಾಲುಗಳಲ್ಲಿ ಹೆಸರುವಾಸಿಯಾದದ್ದು. ವನವಾಸದ ಕಾಲಕ್ಕೆ ಪಾಂಡವರು ವಾಸ ಮಾಡಿದ್ದರೆಂದು ಹೇಳಲಾಗುವ ಸ್ಥಳವನ್ನು ಇಂದಿಗೂ 'ಪಾಂಡವರ ಪಠಾರ' ಎಂದೇ ಕರೆಯಲಾಗುತ್ತಿದೆ. ಅರ್ಜುನನು ಮಳಲ ಲಿಂಗವನ್ನು ಪೂಜಿಸಿದಾಗ ಈಶ್ವರನು ಪ್ರತ್ಯಕ್ಷವಾದ ಸ್ಥಳ ಇಂದು 'ಮಳೆಯ ಮಲ್ಲೇಶ್ವರ' ಎಂಬ ಹೆಸರಿನಲ್ಲಿ ಕರೆಯಲ್ಪಡುತ್ತಿದೆ. ಇವೇ ಕಾಲದ್ದೆಂದು ಹೇಳಲಾಗುವ 'ಹಂದಿಗೇರಿ', 'ಮಿಟ್ಟಕೇರಿ', 'ಕೋಟೆ ಪ್ರದೇಶದ ಕೆಲವೊಂದು ಪ್ರದೇಶ'ಗಳಲ್ಲಿಯೂ ಆ ಕಾಲದ ಕೆಲವು ಘಟನೆಗಳಿಗೆ ಸಂಬಂಧಿಸಿದ ಚಿತ್ರಗಳು ಸಿಗುತ್ತವೆ.

ರಾಮಾಯಣದ ಆಂಜನೇಯನ ಸ್ಥಳ 'ಕಿಷ್ಕಿಂದೆ' ಕೊಪ್ಪಳ ಪ್ರದೇಶಕ್ಕೆ ಹತ್ತಿಕೊಂಡೇ ಇದೆ. ರಾವಣ ಸೀತೆಯನ್ನು ಹೊತ್ತುಕೊಂಡು ಲಂಕೆಗೆ ಅಪಹರಿಸುವಾಗ ಈ ಸ್ಥಳವನ್ನು ಹಾದುಕೊಂಡೇ ಹೋದ ಬಗ್ಗೆ ಕೊಪ್ಪಳದ ಸುತ್ತಮುತ್ತ ಕೆಲವು ಪ್ರದೇಶಗಳಲ್ಲಿ ಪ್ರತೀತಿಗಳಿವೆ. ಹಂಪೆಯ ಸೀತೆ ಸೆರಗು ಇದಕ್ಕೊಂದು ಉತ್ತಮ ಉದಾಹರಣೆ ಎನ್ನಬಹುದು. ಈ ಎಲ್ಲ ಕಾಲ್ಪನಿಕ, ಪುರಾಣೈತಿಹಾಸದ ಕಾಲದಿಂದೀಚೆಗೆ ಬಂದರೆ ನೈಜ ಮಾನವನ ಅಂದರೆ ಆದಿ ಮಾನವನ ಕುರುಗಳೂ ಈ ಸ್ಥಳದಲ್ಲಿ ಗಟ್ಟಿಯಾಗಿ ಸ್ಥಾನ ಪಡೆದುಕೊಂಡಿವೆ.

ಅಂದಿನ ಮಾನವನು ತಾನು ವಾಸವಾಗಿದ್ದ ಪ್ರದೇಶದ ಪರಿಸರಕ್ಕನುಗುಣವಾಗಿ ತನಗೆ ಅನುಕೂಲವಾಗುವ ಹೆಸರುಗಳನ್ನಿಟ್ಟುಕೊಂಡು ಕರೆದಿದ್ದ. ಇದಕ್ಕೆ ಉದಾಹರಣೆ ಎಂಬಂತೆ ಈ ಹಿಂದೆ ಗದಗ ತಾಲೂಕಿನ ಲಕ್ಕುಂಡಿಯನ್ನು 'ಲೊಕ್ಕಿಗುಂಡಿ' ಎಂದು ಕರೆದಿರುವದನ್ನು ಕಾಣುತ್ತೇವೆ. 'ಲೊಕ್ಕಿ' ಎಂದರೆ

ಹಸಿರುಟ್ಟ ಗಿಡ. (ಲೆಕ್ಕಿ ಗಿಡ), 'ಗುಂಡಿ' ಎಂದರೆ ಆಳದ ತಗ್ಗು ತಾಣ. ಸಹಜವಾಗಿಯೇ ಈ ಪ್ರದೇಶ ತಗ್ಗುಗಾದ ಪ್ರದೇಶದಲ್ಲಿರುವದರಿಂದ ಇದಕ್ಕೆ 'ಲೊಕ್ಕಿಗುಂಡಿ' ಎಂದು ಕರೆದಿದ್ದರು. ಮುಂದೆ ಇದು ಲಕ್ಕುಂಡಿಯಾಗಿದ್ದಿತು. ಅದೇ ರೀತಿ ಅಶೋಕನ ಕಾಲದ ದಕ್ಷಿಣದ ಪ್ರಮುಖ ಕೇಂದ್ರ 'ಸುವರ್ಣ'ಗಿರಿ ಈಗ 'ಕನಕ'ಗಿರಿಯಾಗಿದೆ. ಸುವರ್ಣ ಮತ್ತು ಕನಕ ಎರಡೂ 'ಬಂಗಾರ' ಎಂಬ ಒಂದೇ ಅರ್ಥವನ್ನು ಕೊಡುತ್ತದೆ. ಹಂಪೆಯು ಈ ಹಿಂದೆ 'ಕಿಷ್ಕಿಂದೆ' ಎಂಬ ಹೆಸರಿನಿಂದಲೂ, ಮಾದಿನೂರು ಮೋದದಿಂದ ಕೂಡಿದ ತಾಣವಾಗಿತ್ತಾದ್ದರಿಂದ ಇದನ್ನು 'ಮೋದನೂರು', 'ಮೊದೆಯನೂರ್', 'ಮೋದಿತಗ್ರಾಮ' ಎಂತಲೂ ಕರೆಯಲಾಗುತ್ತಿತ್ತು, 'ಮಾನ್ಯಖೇಟ' ಮಳಖೇಡವಾಗಿಯೂ ಪರಿವರ್ತಿತಗೊಂಡಿದೆ. ಈ ರೀತಿ ಸ್ಥಳೀಯ, ರಾಜ್ಯದ, ಹೊರ ರಾಜ್ಯದ, ಹೊರದೇಶದ ಉದಾಹರಣೆಗಳೂ ನಮಗೆ ಕಾಣಸಿಗುತ್ತದೆ. ಗುಂಡುಗಳಿಂದ ಕೂಡಿದ ಸ್ಥಳವಾಗಿದ್ದರಿಂದ 'ಗುಂಡುಕಲ್ಲ' ಎಂದೂ ಕರೆದ 'ಗುಂತಕಲ್ಲ' ಉದಾಹರಣೆಯೂ, 'ಸಿಂಹ'ಗಳ ನಾಡನ್ನು 'ಸಿಂಹಳ' (ಶ್ರೀಲಂಕಾ) ಎಂದೂ, 'ಗಾಂಧಾರಿ'ಯ ತವರು 'ಗಾಂಧಾರ' (ಕಂದಹಾರ, ಅಫಘಾನಿಸ್ತಾನದ ರಾಜಧಾನಿ) ಎಂದೂ ಈ ಹಿಂದೆ ಆಯಾ ಸ್ಥಳಗಳನ್ನು ಸ್ಥಳದ ಪರಿಸರ, ನೈಸರ್ಗಿಕ ಹಿನ್ನಲೆ ಇಲ್ಲವೇ ವ್ಯಕ್ತಿಗಳ ಅಥವಾ ಪ್ರಾಣಿಗಳ ವಾಸಸ್ಥಳಗಳ ಮೂಲಕ ಗುರುತಿಸಿ ಮಾನವ ಹೆಸರಿಡುತ್ತಾ ಬಂದ.

''ಹೀಗೆ ಲೊಕ್ಕಿಗುಂಡಿ-ಲೆಕ್ಕಿಗುಂಡಿ-ಲಕ್ಕುಂಡಿ, ಮೋದನೂರ್-ಮಾದಿನೂರು, ಗುಂಡಕಲ್ಲ-ಗುಂತಕಲ್ಲ, ಕೂಡಲು ಸಂಗಮ-ಕೂಡಲ ಸಂಗಮ ಪರಿವರ್ತನೆಗೊಂಡಿರುವಂತೆ ತಪ್ಪಲ-ತಪ್ಪಲು-ಕೊಪ್ಪಲು ಎಂದು ಪರಿವರ್ತನೆಗೊಂಡಿರಬೇಕು''[೪].

ಹೀಗೆ ಹೆಸರಿಡುತ್ತಾ ಪ್ರದೇಶದ ಗುರುತಿಸುವಿಕೆಯ ಸಮಯದಲ್ಲಿ ಎತ್ತರದ ಗಿಡಗಂಟಿಗಳಿಂದ ಕೂಡಿದ ತಪ್ಪಲು ತಾಣದಲ್ಲಿ ನೆಲೆಯೂರಿ, ತನ್ನ ದೇಹಕ್ಕೆ ಮತ್ತು ಜೀವನಕ್ಕೆ ತಂಪಾದ, ಇಂಪಾದ ಮತ್ತು ಬದುಕಿಗೆ ಹಿತಕರವಾದ ಅನುಭವ ನೀಡಿದ ತಪ್ಪಲು ಪ್ರದೇಶದ ಈ ಸ್ಥಳವನ್ನು 'ತಪ್ಪಲ' ಎಂದು ಕರೆದಿರುವ ಸಾಧ್ಯತೆಯಿದೆ. ಇದೇ 'ತಪ್ಪಲ' ಕಾಲಾನುಕ್ರಮದಲ್ಲಿ ತಪ್ಪಲ - ತಪ್ಪಲು - ತೊಪ್ಪಲು - ಕೊಪ್ಪಲು - ಕೊಪ್ಪಲ - ಕೊಪ್ಪಲ ಮೊದಲಾದ ರೂಪ ತಾಳಿ 'ಕೊಪ್ಪಳ'ವಾಗಿರುವ ಸಾಧ್ಯತೆ ಇದೆ ಎಂದು ಇಲ್ಲಿನ ಬಹುತೇಕ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಲ್ಲದೇ ಕೊಪ್ಪಳವು ಕೊಂಕನ ಪುಲೋವು - ಕುಪಣ - ಕುಪಣ ಚಮ - ಕೊಪಣ ತೀರ್ಥ - ಕೊಪಣ ನಗರ - ಸುಲ್ತಾನಗಡ ಈ ಎಲ್ಲ ಹೆಸರುಗಳಿಂದಲೂ ಕರೆಯಲ್ಪಡುತ್ತಿತ್ತು.

ಕೊಪ್ಪಳವು ಆದಿಮಾನವರ ಕಾಲದ ವಾಸಸ್ಥಳವಾಗಿತ್ತೆಂಬುದರ ಬಗ್ಗೆಯೂ ಇಲ್ಲಿ ಅನೇಕ ದಾಖಲೆಗಳು, ವಸ್ತುಗಳು, ತಲೆ ಬುರುಡೆಗಳು, ಆ ಕಾಲದ ಆಯುಧಗಳು, ಮಡಿಕೆ - ಕುಡಿಕೆಗಳು, ಆದಿ ಮಾನವರಿಂದ ರಚಿತವಾದ ಕೆಲವೊಂದು ಬಂಡೆಗಲ್ಲಿನ ಚಿತ್ರಗಳೂ ಕಾಣಸಿಗುತ್ತವೆ. ಇದಕ್ಕೆ ಸಾಕ್ಷಿ ಎಂಬಂತೆ

ಮೋರೇರ ಅಗಡಿ, ಮಿಂಚರ ಬಂಡೆಬಯಲು ಪ್ರದೇಶ ಮತ್ತು ಮೋರೇರ ಅಗಸಿ ಮೊದಲಾದ ಪ್ರದೇಶಗಳು ಈ ಸ್ಥಳದ ಕೊಪ್ಪಳದ ಆರಾಧ್ಯ ದೈವ ಶ್ರೀ ಗವಿಸಿದ್ದೇಶ್ವರನ ಮಠದ ಗುಹೆಗಳಲ್ಲಿ ಶಿಲಾಯುಗದ ಈ ರೀತಿಯ ಚಿತ್ರಗಳು ಇವೆ. ಕೊಪ್ಪಳದ ಪರ್ವತ ಪ್ರದೇಶಗಳಲ್ಲಿರುವ ಬಂಡೆ ವರ್ಣ ಚಿತ್ರಗಳು ಮತ್ತು ಕಲ್ಗೋರಿಗಳು ಕೊಪ್ಪಳದ ಇತಿಹಾಸವನ್ನು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಒಯ್ಯುತ್ತವೆ. ಇಷ್ಟೇ ಅಲ್ಲದೇ ಇಲ್ಲಿ ಮಡಕೆ ಚೂರುಗಳು, ಕರಿಯಕಲ್ಲಿನ ಕೊಡಲಿಗಳು, ನಿವೇಶನಗಳ ಅವಶೇಷಗಳು ಮತ್ತು ಇಲ್ಲಿನ ಮತ್ತೊಂದು ಸುಪ್ರಸಿದ್ಧ ಸ್ಥಳವಾದ ಮಳೆ ಮಲ್ಲೇಶ್ವರ ದೇವಸ್ಥಾನದ ಪ್ರದೇಶದ ಗುಡ್ಡ - ಬೆಟ್ಟಗಳ ತಪ್ಪಲು ಪ್ರದೇಶಗಳಲ್ಲಿ ಸಿಕ್ಕಿರುವ ಮಡಿಕೆಯಲ್ಲಿ ಆದಿ ಮಾನವರ ಎಲುಬು, ಮೂಳೆಗಳು ದೊರೆತಿವೆ. ಶ್ರೀ ಗವಿಮಠ, ಮಳೆಯ ಮಲ್ಲೇಶ್ವರನ ತಪ್ಪಲು ಪ್ರದೇಶ, ಬೆಟ್ಟದ ಗುಹಾದೇವಾಲಯಗಳ ಪ್ರದೇಶಗಳ ಸುತ್ತ ಮುತ್ತ ಆದಿಮಾನವರ ವಾಸಸ್ಥಾನದ ಕುರುಹುಗಳಿದ್ದವೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗವಿಗಳಲ್ಲಿ, ಕಲ್ಲಾಸರೆಗಳಲ್ಲಿ ವರ್ಣ ಚಿತ್ರಗಳನ್ನು ಬಿಡಿಸುವ ಪದ್ಧತಿ ರೂಢಿಸಿಕೊಂಡಿದ್ದರು. ಆದ್ದರಿಂದಲೇ ಗವಿಮಠದ ಗುಡ್ಡದಲ್ಲಿರುವ ಕಿರಿಪಲ್ಲಕ್ಕಿ ಆಕಾರದ ಬಂಡೆಯ ಮೇಲೆ ಮತ್ತು ಕೊಪ್ಪಳದ ಪೂರ್ವ ಭಾಗದ ಬೆಟ್ಟಗಳ ಮೇಲೆ, ಗುಹೆಗಳ ಬಂಡೆಗಳ ಮೇಲೆ ಅಂದಿನ ಕಾಲದ ಜನರು ತಾವು ಬೇಟೆಯಾಡುವ ಚಿತ್ರವನ್ನು, ಬೇಟೆಯಾಡಿದ ಪ್ರಾಣಿಗಳ ಚಿತ್ರವನ್ನು, ತಮ್ಮ ಸಾಕು ಪ್ರಾಣಿಗಳ ಚಿತ್ರಗಳನ್ನು, ತಾವು ಉಪಯೋಗಿಸುವ ವಸ್ತುಗಳ ಚಿತ್ರಗಳನ್ನು ರಚಿಸಿದ್ದು, ಈಗಲೂ ಅವು ಸುಸ್ಥಿತಿಯಲ್ಲಿವೆ. ಆದಿಮಾನವರ ಈ ಎಲ್ಲ ಸುವ್ಯವಸ್ಥೆಯ ಜೀವನವನ್ನು ನೋಡಲಾಗಿ ಕೊಪ್ಪಳ ಆದಿಮಾನವರ ಕಾಲದ ಬಹುಸೆಚ್ಚಿನ ತಾಣವಾಗಿತ್ತೆಂಬುದು ತಿಳಿದುಬರುತ್ತದೆ. ಇಲ್ಲಿನ ನಿಸರ್ಗ, ಝರಿಗಳು, ಗವಿಗಳ ಕಲ್ಲಾಸರೆ ಒಂದು ರೀತಿಯಲ್ಲಿ ಅವರಿಗೆ, ಅವರ ಜೀವನಕ್ಕೆ, ಬದುಕಿಗೆ ಹೇಳಿ ಮಾಡಿಸಿದ ಜಾಗವೆಂಬಂತಾಗಿತ್ತು.

ಪ್ರಾಗಿತಿಹಾಸದ ಕಾಲದ ಬಗ್ಗೆ ಹೇಳಬೇಕಾದರೆ "ಈ ಹಂತದಲ್ಲಿ ಈ ಪ್ರದೇಶವು ಅಶೋಕ ಚಕ್ರವರ್ತಿಯ ದಕ್ಷಿಣ ಭಾರತದ 'ಇಸಿಲ' ಪ್ರಾಂತಕ್ಕೆ ಸೇರಿದುದನ್ನು ಬ್ರಹ್ಮಗಿರಿ, ಮಸ್ಕಿ ಮತ್ತು ಕೊಪ್ಪಳದಲ್ಲಿಯೂ ಅಶೋಕ ಚಕ್ರವರ್ತಿಯ ಕಿರುಬಂಡೆಯ ಶಾಸನಗಳು ತಿಳಿಸುತ್ತಿವೆ"[೪]. ಮಳೆಯ ಮಲ್ಲೇಶ್ವರದ ಗುಡ್ಡದ ಪಾಲ್ಕಿಗುಂಡಿನ ಮತ್ತು ಗವಿಮಠದ ಗುಡ್ಡದ ನೆಲೆಗಳಲ್ಲಿ ಮೌರ್ಯಚಕ್ರವರ್ತಿಗಳ ಕಾಲದ ಕಿರುಬಂಡೆ ಶಾಸನಗಳು ಶೋಧಿಸಲ್ಪಟ್ಟಿವೆ. ಈ ಆಧಾರದ ಮೇಲೆ ಅಂದಿನ ಕಾಲದ ದಕ್ಷಿಣ ಭಾರತದ 'ಇಸಿಲ' ಪ್ರದೇಶದ ಈ ಸ್ಥಳವನ್ನು ಅಂದೇ 'ಕುಪಣ' ಎಂದು ಕರೆದಿರಬಹುದು. ಜೊತೆಗೆ ಆ ಕಾಲದಲ್ಲಿ ಇದೊಂದು ಪ್ರಮುಖ ಸ್ಥಳವಾಗಿದ್ದಿರಬೇಕೆಂದು ತೋರುತ್ತದೆ. ಸಾಮ್ರಾಟ ಅಶೋಕನ ಕಾಲದ ಬಗ್ಗೆ ಹೇಳಬೇಕಾದಾಗ ಕೊಪ್ಪಳ ಒಂದು ಮಹತ್ವದ ಸಾಕ್ಷಿಯಾಗಿ ನಿಲ್ಲುತ್ತದೆ. ಅಶೋಕನ ಕಾಲದ ದಕ್ಷಿಣದ ಪ್ರಮುಖ ಕೇಂದ್ರ, 'ಸುವರ್ಣಗಿರಿ' (ಇಂದಿನ ಕನಕಗಿರಿ) ಕೊಪ್ಪಳ ಭಾಗದ ಪ್ರದೇಶ. ಅಶೋಕನ

ಶಿಲಾಶಾಸನಗಳಲ್ಲಿ ಎರಡು ಶಾಸನಗಳು ಕೊಪ್ಪಳದಲ್ಲಿವೆ. ಒಂದು ಗವಿಮಠದ ಹಿಂದೆ, ಮತ್ತೊಂದು ಮಳೆಯ ಮಲ್ಲೇಶ್ವರ ದೇವಸ್ಥಾನದ ಹತ್ತಿರ. 'ದೇವನಾಂಪ್ರಿಯ', 'ಪ್ರಿಯದರ್ಶಿನಿ' ಎಂದು ಅಶೋಕನನ್ನು ಹೊಗಳಿರುವ ಈ ಶಾಸನಗಳು ಭಾರತದ ಇತಿಹಾಸದಲ್ಲಿ ಪ್ರಮುಖವಾದವುಗಳಾಗಿವೆ. ಈ ಶಾಸನಗಳು ಕೊಪ್ಪಳ ಅಂದು ಹೊಂದಿದ್ದ ಪ್ರಸಿದ್ಧಿಯನ್ನು ಮಹತ್ವವನ್ನೂ ತಿಳಿಸಿಕೊಡುತ್ತದಲ್ಲದೇ ಕೊಪ್ಪಳವು ಸಾಂಸ್ಕೃತಿಕ, ಸಾಹಿತ್ಯಿಕ, ರಾಜಕೀಯವಾಗಿ ಬಹುಕಾಲದ ಹಿಂದಿನಿಂದಲೂ ಹೊಂದಿದ್ದ ಇತಿಹಾಸದ ಬಗ್ಗೆ ಹೇಳುತ್ತದೆ.

ಅಶೋಕ ಸಾಮ್ರಾಟನ ಸಾಮ್ರಾಜ್ಯ ಬಹಳ ವಿಸ್ತಾರವಾಗಿದ್ದರಿಂದ ಹಿರಿಯ ಅಧಿಕಾರಿಗಳಾದ 'ಮಹಾಮಾತ್ರರು' ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಆಯಾ ತಾಣಗಳ ಆಡಳಿತೆಯ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿದ್ದರು. ಅಂದು ವಿಚಾರ ವಿನಿಮಯಕ್ಕೆ ಬ್ರಾಹ್ಮಿ ಲಿಪಿ, ಪ್ರಾಕೃತ ಭಾಷೆಯನ್ನು ಬಳಸುತ್ತಿದ್ದರು. ಹೀಗೆ ಒಂದು ಕ್ರಮಬದ್ಧ ಮತ್ತು ನಿಯಮಗಳ ಅನುಸಾರ ಆಡಳಿತಕ್ಕೊಳಪಟ್ಟುದುದರಿಂದ ಈ ಸ್ಥಳ ಅಥವಾ ಪ್ರದೇಶದಲ್ಲಿ ನಗರ ಸಂಸ್ಕೃತಿಯ ಬೆಳವಣಿಗೆಗೆ ಸಹಕಾರಿಯಾಗಿರಬಹುದು. ಸುಮಾರು ಎರಡು ಸಾವಿರ ವರ್ಷಗಳ ಸತತ ಪ್ರಯತ್ನದಿಂದ ಒಂದು ಸಮೃದ್ಧ 'ಕುಪಣ' ಹುಟ್ಟಿರಬೇಕೆಂದೂ ಹೆಸರಾಂತ ವಿದ್ವಾಂಸರು ಹೇಳುತ್ತಾರೆ. ಕೊಪ್ಪಳ ಪ್ರದೇಶವು ಅಶೋಕನ ಕಾಲದ ಬಹುಮುಖ್ಯ ಸಾಂಸ್ಕೃತಿಕ ಪರಿಸರವೂ ಆಗಿದ್ದಿತೆಂಬ ಭಾವನೆ ಎಲ್ಲ ವಿದ್ವಾಂಸರಲ್ಲಿದೆ. ಏಕೆಂದರೆ ಅಶೋಕನ ಎರಡು ಮಹೋನ್ನತ ಶಿಲಾಶಾಸನಗಳು ಇದೇ ಸ್ಥಳದಲ್ಲಿಯೇ ದೊರೆತಿರುವದರಿಂದ ಅಶೋಕನಿಗೆ ಈ ಸ್ಥಳದ ಮಹತ್ವ ಅರಿವಾಗಿರಬಹುದು ಅಥವಾ ಈ ಸ್ಥಳ ಅಶೋಕನಿಗೆ ಅಚ್ಚು ಮೆಚ್ಚಿನದಾಗಿರಲೂಬಹುದಾಗಿದೆ.

ಪ್ರಾಚೀನ ಕಾಲದ, ಆದಿಮಾನವರ ಕಾಲದಷ್ಟು ಆಳವಾದ ಇತಿಹಾಸ ಹೊಂದಿರುವ ಕೊಪ್ಪಳ ಈ ಹಿಂದೆ ಅನೇಕ ಹೆಸರುಗಳಿಂದ ಕರೆಯಲ್ಪಟ್ಟಿತ್ತು. ಕೊಪಣ ನಗರ, ಕುಪಣಚಮು, ಕೊಪಣಾಚಳ, ಕುಪಣ, ಕೊಪಣ, ಕುಪಿಣ ತೀರ್ಥ ಮೊದಲಾದವುಗಳು ಕೊಪ್ಪಳದ ಹಳೆಯ ಹೆಸರುಗಳು. ಕೊಪ್ಪಳದ ಬೆಟ್ಟವನ್ನು ಕೊಪಣಾದ್ರಿ, ಎಂದು ಕರೆಯಲಾಗುತ್ತಿತ್ತು.

ನಂತರದ ಕಿಸ್ತಶಕದ ಕಾಲಕ್ಕೆ ಬಂದರೆ ಮೌರ್ಯರ ತರುವಾಯ ಶಾತವಾಹನರು ಸರಿ ಸುಮಾರು ಐದು ಶತಮಾನಗಳವರೆಗೂ ಈ ನಾಡನ್ನು ಆಳಿದರು. ಕೊಪ್ಪಳ ತಾಲೂಕಿನ ಚಿಕ್ಕ ಸಿಂದೋಗಿಯಲ್ಲಿ ಈ ವಂಶಕ್ಕೆ ಸಂಬಂಧಿಸಿದ ಐದು ಸಾವಿರದ ಐದುನೂರ ಮೂವತ್ತು ನಾಲ್ಕು ಬೆಳ್ಳಿಯ ಮುದ್ರಾಂಕಿತ ಬೆಳ್ಳಿಯ ನಾಣ್ಯಗಳ ರಾಶಿ ದೊರೆತಿರುವುದು ಈ ಪ್ರದೇಶದಲ್ಲಿ ಶಾತವಾಹನರ ಪ್ರಭಾವ ಎಷ್ಟಿತ್ತೆಂಬುದರ ಬಗ್ಗೆ ತಿಳಿಸುತ್ತದೆ.

ಶಾತವಾಹನರ ತರುವಾಯ ಬಹುಮಟ್ಟಿಗೆ ಈ ಪ್ರದೇಶ ಬನವಾಸಿ ಕದಂಬರ ರಾಜ್ಯಕ್ಕೆ ಸೇರಿರುವ ಪ್ರತೀತಿಗಳಿವೆ. ಕದಂಬ ವಂಶದ ಸ್ಥಾಪಕ ಮಯೂರವರ್ಮನ ಪುನರ್ ವಿಮರ್ಶಿಸಿದ ಚಂದ್ರವಳ್ಳಿ ಶಾಸನದಲ್ಲಿ ಕೊಪ್ಪಳವನ್ನು 'ಕುಪಣಚಮು' ಎಂಬ ಹೆಸರಿನಲ್ಲಿ ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಇದರಿಂದ

ಕೊಪ್ಪಳವು ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿದುಬರುತ್ತದೆ.

''ಕರ್ನಾಟಕದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸ್ವರೂಪ ಕೊಟ್ಟ ಅರಸರಲ್ಲಿ ಚಾಲುಕ್ಯರು ಪ್ರಮುಖವರು. ಅವರಲ್ಲಿ ಪ್ರಸಿದ್ಧ ದೊರೆ ಶಕಪುರುಷ ೨ ನೆಯ ಪುಲಿಕೇಶಿ. ಈತನ ಕಾಲದಲ್ಲಿ ಪ್ರವಾಸಕ್ಕೆ ಬಂದ ಚೀನಾ ದೇಶದ ಪ್ರವಾಸಿ ಹುವೆನ್‌ತ್ಸಾಂಗ್, ಕನ್ನಡ ನಾಡಿನ ಪ್ರಸಿದ್ಧ ಸ್ಥಳಗಳನ್ನು ಹೆಸರಿಸುವಾಗ ಈ ಸ್ಥಳವನ್ನು 'ಕೊಂಕಿನ ಪುಲೋವು' ಎಂದು ಉಲ್ಲೇಖಿಸಿದ್ದಾನೆ''[೫].

ಗಂಗರ ಕಾಲದಲ್ಲಿಯೂ ಈ ಸ್ಥಳದ ಮಹತ್ವವನ್ನು ಕೊಪ್ಪಳದಿಂದ ೨೬ ಕಿ.ಮೀ. ದೂರದಲ್ಲಿರುವ ಕುಕನೂರಿನ ತಾಮ್ರಶಾಸನದಿಂದ ತಿಳಿಯಬಹುದಾಗಿದೆ. ಕ್ರಿ.ಶ. ೯೬೮ ರ ಕುಕನೂರ ತಾಮ್ರಶಾಸನವು ಈ ವಂಶದ ರಾಜ ಮಾರಸಿಂಹನನ್ನು ಕುರಿತು ಹೇಳುತ್ತದೆ. ಈ ಶಾಸನದಲ್ಲಿ ಕೊಪ್ಪಳದ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿದ್ದರೂ, ಕುಕನೂರು ಕೊಪ್ಪಳದ ಹತ್ತಿರದ ಸ್ಥಳವಾದ್ದರಿಂದ ಕೊಪ್ಪಳವೂ ಗಂಗರ ಆಳ್ವಿಕೆಗೆ ಒಳಪಟ್ಟಿತ್ತೆಂಬ ಅಂಶ ಬೆಳಕಿಗೆ ಬರುತ್ತದೆ.

ಅನಂತರದ ರಾಷ್ಟ್ರಕೂಟರ ಕಾಲದಲ್ಲಿ ಈ ಸ್ಥಳದ ಮಹತ್ವ ಇನ್ನಷ್ಟು ಪಸರಿಸಿತು. ಒಂದರ್ಥದಲ್ಲಿ ಕೊಪ್ಪಳದ ಮಹತ್ವವನ್ನು, ಕೊಪ್ಪಳದ ಕೀರ್ತಿಯನ್ನು ಬಹುಮಟ್ಟಿಗೆ ಎತ್ತರಕ್ಕೆ ತಂದ ಕೀರ್ತಿ ರಾಷ್ಟ್ರಕೂಟರಿಗೆ ಸಲ್ಲಬೇಕು. ಈ ವಂಶದ ಇಮ್ಮಡಿ ಗೋವಿಂದ, ಮುಮ್ಮಡಿ ಗೋವಿಂದ, ಒಂದನೆಯ ಕೃಷ್ಣ ಮೊದಲಾದ ರಾಜರ ಆಳ್ವಿಕೆಯಡಿಯಲ್ಲಿ ಕೊಪ್ಪಳವು ಒಂದಿತ್ತು. ರಾಷ್ಟ್ರಕೂಟ ಅರಸರಲ್ಲಿ ಕೀರ್ತಿವಂತ ಅರಸು ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದ ಶ್ರೇಷ್ಠಕವಿ ಶ್ರೀ ವಿಜಯನಿಂದ ರಚಿತವಾದ ಕವಿರಾಜಮಾರ್ಗದಲ್ಲಿ ಕರ್ನಾಟಕದ ಇತಿಹಾಸವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಆಶ್ರಯದಲ್ಲಿದ್ದ ಕವಿ ಶ್ರೀ ವಿಜಯ ಕನ್ನಡ ನಾಡಿನ ಮಹಿಮೆಯನ್ನು ಹಾಡಿ ಹೊಗಳುವಾಗ 'ಕಾವೇರಿಯಿಂದ ಗೋದಾವರಿಯವರೆಗಿನ ನಾಡು ಕನ್ನಡ ನಾಡು' ಎಂದು ಸಾರಿದ್ದಾನೆ.

> ಕಾವೇರಿಯಿಂದ ಮಾ ಗೋ ।
> ದಾವರಿವರಮಿರ್ದ ನಾಡದಾ ಕನ್ನಡದೊಳ್ ।
> ಭಾವಿಸಿದ ಜನಪದಂ ವಸು ।
> ಧಾವಲಯವಿಲೀನ ವಿಶದ ವಿಷಯ ವಿಶೇಷಂ ।

ಕವಿರಾಜ ಮಾರ್ಗ, ಸಂಧಿ-೧, ಪದ್ಯ-೩೬, ಪುಟ-೧೦

ಈ ಮೇಲಿನ ಸಾಲುಗಳಲ್ಲಿ ತಿಳಿದು ಬರುವುದೇನೆಂದರೆ ಉತ್ತರದಲ್ಲಿ ಗೋದಾವರಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗಿನ ವಿಸ್ತಾರ ಕನ್ನಡ ನಾಡಿನದ್ದು ಎಂದು ಹೇಳಲಾಗಿದೆ. ಆದರೆ ಉತ್ತರದ ಗೋದಾವರಿ ಪ್ರದೇಶ ಪ್ರಸ್ತುತ ನಮ್ಮ ಭಾಗವಾಗುಳಿದಿಲ್ಲ. ವಾಸ್ತವವಾಗಿ ಈ ಪ್ರದೇಶವೂ ನಮ್ಮದೇ ಎಂದು ಈ ಮೇಲಿನ

ಸಾಲುಗಳಿಂದ ತಿಳಿದು ಬರುತ್ತದೆ. ದಕ್ಷಿಣದಾಚೆಗಿನ ಪ್ರದೇಶವೂ ಕನ್ನಡದ್ದೆಂದು ಸಾರುವ ಮೂಲಕ ಕನ್ನಡ ನಾಡು ಬಹಳ ಹಿಂದಿನಿಂದಲೇ ಹೊಂದಿರುವ ಪ್ರಸಿದ್ಧಿ ಮಹತ್ವ ತಿಳಿಸಿಕೊಡುತ್ತವೆ.

ಈ ನಾಲ್ಕು ಸಾಲುಗಳ ನಂತರ ಬರುವ ಮುಂದಿನ ನಾಲ್ಕು ಸಾಲುಗಳು ತಿರುಳ್ ಕನ್ನಡ ನಾಡೆಂದು ಶ್ರೀ ವಿಜಯನಿಂದ ಕರೆಯಲ್ಪಟ್ಟ ಪ್ರದೇಶಗಳಲ್ಲಿ ಕೊಪ್ಪಳವು ಪ್ರಮುಖವಾಗಿ ನಿಲ್ಲುತ್ತದೆ.

ಅದರೊಳಗಂ ಕಿಸುವೊಳಲಾ ।
ವಿದಿತ ಮಹಾಕೊಪಣನಗರದಾ ಪುಲಿಗೆರೆಯಾ ।
ಸದಭಿಸ್ತುತಮಪ್ಪೊಂಕುಂ ।
ದದ ನಡುವಣ ನಾಡೆ ಕನ್ನಡದ ತಿರುಳ್ ।

ಕವಿರಾಜ ಮಾರ್ಗ, ಸಂಧಿ-೧, ಪದ್ಯ-೩೭, ಪುಟ-೧೦

ಶ್ರೀ ವಿಜಯನ ಅಭಿಪ್ರಾಯದಲ್ಲಿ ಕಿಸುವೊಳಲು (ಬಾಗಲಕೋಟೆ ಜಿಲ್ಲೆಯ ಈಗಿನ ಪಟ್ಟದಕಲ್ಲು), ವಿದಿತ ಮಹಾಕೊಪಣನಗರ (ಕೊಪ್ಪಳ ಜಿಲ್ಲೆಯ ಈಗಿನ ಕೊಪ್ಪಳ), ಪುಲಿಗೆರೆ (ಗದಗ ಜಿಲ್ಲೆಯ ಈಗಿನ ಲಕ್ಷ್ಮೇಶ್ವರ), ಒಂಕುಂದ (ಬೆಳಗಾವಿ ಜಿಲ್ಲೆಯ ಈಗಿನ ಒಕ್ಕುಂದ) ಇವುಗಳ ನಡುವಿನ ನಾಡು ತಿರುಳ್‌ಗನ್ನಡದ ನಾಡೆಂದು ಕರೆದಿದ್ದಾನೆ. ಈ ಪ್ರದೇಶದ ಭಾಷೆ ನಿಜವಾದ ಸತ್ವವುಳ್ಳದ್ದು ಸಾರವುಳ್ಳದ್ದು ಪ್ರಮುಖವಾದದ್ದು ಸೊಗಸಾದದ್ದು ವಿಶೇಷತೆಯುಳ್ಳದ್ದು ಆಗಿದೆ ಎಂದು ಹೇಳಲಾಗಿದೆ. ಇದಕ್ಕೆ ಪುಷ್ಟಿ ಕೊಡುವಂತೆ ಪಂಪನು ಸಹ ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ರನ್ನನು ತನ್ನ 'ಸಾಹಸಭೀಮ ವಿಜಯ'ದಲ್ಲಿ ತಿರುಳ್ ಕನ್ನಡದ ಬಗ್ಗೆ ಹೆಮ್ಮೆಯಿಂದ ಬರೆದಿದ್ದಾರೆ. ಇದು ಕನ್ನಡ ಪ್ರದೇಶದ ಸಾಂಸ್ಕೃತಿಕ, ಭೌಗೋಳಿಕ, ಸಾಹಿತ್ಯಿಕ ಶ್ರೀಮಂತಿಕೆಯಲ್ಲಿ ತಿರುಳ್‌ಗನ್ನಡ ನಾಡಾದ ಕೊಪ್ಪಳದ ಪಾತ್ರ ಎಷ್ಟು ಮಹತ್ವದ್ದೆಂದು ಸಾರಿ ಹೇಳುತ್ತದೆ.

ಇದೇ ಕವಿರಾಜ ಮಾರ್ಗದದಲ್ಲಿ ಶ್ರೀವಿಜಯನು ಕೊಪ್ಪಳ ನಾಡು ಮತ್ತು ನಾಡವರ ಕುರಿತು ಅತೀವ ಅಭಿಮಾನ, ಹೆಮ್ಮೆಯಿಂದ ನುಡಿದಿದ್ದಾನೆ.

'ಸುಭಟರ್ಕಳ್ ಕವಿಗಳ್, ಸು -
ಪ್ರಭುಗಳ್, ಚೆಲ್ವರ್ಕಳಭಿಜನರ್ಕಳ್ ಗುಣಿಗಳ್,
ಅಭಿಮಾನಿಗಳತ್ಯುಗ್ರರ್,
ಗಂಭೀರ ಚಿತ್ತರ್, ವಿವೇಕಿಗಳ್, ನಾಡವರ್ಗಳ್'.

ಕವಿರಾಜ ಮಾರ್ಗ, ಸಂಧಿ-೨, ಪುಟ-೫೯

ಇದೇ ರಾಷ್ಟ್ರಕೂಟರ ಕಾಲದ ಮತ್ತೊಬ್ಬ ಅರಸ ೩ ನೇ ಕೃಷ್ಣನ ಕಾಲದ ಉಪ್ಪಿನ ಬೆಟಗೇರಿಯ ಶಾಸನವು, ಅವನ ಮಹಾ ಸಾಮಂತ ಅರಸನಾದ ಶಂಕರ ಗಂಡನು ಕೊಪ್ಪಳದಲ್ಲಿ ಜಿನಾಲಯ

ಕಟ್ಟಿಸಿದನೆಂದೂ, ಆ ದೇವಾಲಯವು ಅವನ ಬಿರುದಾದ 'ಜಯಧೀರ' ಎಂಬ ಹೆಸರಿನಿಂದ ಪ್ರಸಿದ್ಧಿಯಾಯಿತೆಂದೂ ಹೇಳಲಾಗಿದೆ. ಆ ಕಾಲದಲ್ಲಿ ಶಂಕರ ಗಂಡನು ಹೆಸರುವಾಸಿಯಾಗಿದ್ದ ವ್ಯಕ್ತಿಯಾಗಿದ್ದನು. ರನ್ನನು ಅವನನ್ನು 'ಜೈನಮತದ ಪೋಷಕ' ಎಂದು ಕರೆದಿರುವುದು ಅದಕ್ಕೆ ಸಾಕ್ಷಿಯಾಗಿದೆ.

ಹಾಗೆ ನೋಡಿದರೆ ಕೊಪ್ಪಳವು 'ಜೈನರ ಕಾಶಿ' ಎಂದು ಹೆಸರುವಾಸಿಯಾಗಿದೆ. "ತ್ರೈಲೋಕ್ಯ ರಕ್ಷಾಮಣಿ ಸ್ತೋತ್ರ, ಎಂಬ ಹಸ್ತಪ್ರತಿಯು ಈ ಸ್ಥಳವನ್ನು 'ವಿಪುಲ ಶ್ರೀಕೊಪಣಾದಿತೀರ್ಥ' ಎಂದಿದೆ. ಇಲ್ಲಿ ೭೭೨ ಜಿನಾಲಯಗಳಿದ್ದವೆಂದು ಒಂದು ಶಾಸನ ತಿಳಿಸುತ್ತದೆ"[೭]. ಜೈನರ ಕಾಲದಲ್ಲಿ ಕೊಪ್ಪಳದ ಇತಿಹಾಸ ಉತ್ತುಂಗದ ಶಿಖರಕ್ಕೇರಿತ್ತು. ಈಗಲೂ ಕೋಟೆ ಪ್ರದೇಶಗಳಲ್ಲಿ ಜೈನ ಬಸದಿಗಳು ಕಾಣಸಿಗುತ್ತದೆ. ನೇಮಿನಾಥ ಬಸದಿ, ಬೌದ್ಧನಾಥ ಬಸದಿ ಹೀಗೆ ಹಲವಾರು ಬಸದಿಗಳು ಇಲ್ಲಿವೆ. ಇಂದಿನ ಶ್ರೀ ಗವಿಮಠವು ೮ ನೇ ಶತಮಾನದಲ್ಲಿ ಜೈನರ ಕಾಲದ ಪವಿತ್ರ ಹಾಗೂ ಜನಪ್ರಿಯ ತಾಣವಾಗಿತ್ತೆಂದು ಇತಿಹಾಸದಿಂದ ತಿಳಿದು ಬರುತ್ತದೆ.

ಅಮೋಘವರ್ಷ ನೃಪತುಂಗನ ಕಾಲದಲ್ಲಿ ಅವನ ಸಾಮ್ರಾಜ್ಯವು ಉತ್ತರದಲ್ಲಿ ಗೋದಾವರಿ, ದಕ್ಷಿಣದಲ್ಲಿ ಕಾವೇರಿ, ಪಶ್ಚಿಮ ಮತ್ತು ಪೂರ್ವದಲ್ಲಿ ಸಾಗರಗಳವರೆಗೂ ಹಬ್ಬಿತ್ತು. ಅಮೋಘವರ್ಷ ನೃಪತುಂಗನ ವಿವರ ತಿಳಿಸುವ ಶಾಸನದಲ್ಲಿ ಕೊಪ್ಪಳವು ರಾಷ್ಟ್ರಕೂಟರ ರಾಜ್ಯದಲ್ಲಿ ಸೇರಿ ಘನತೆ, ಐತಿಹಾಸಿಕ ಮಹತ್ವ ಪಡೆದು ವಿಜೃಂಭಿಸಿತೆಂದು ತಿಳಿದುಬರುತ್ತದೆ. ಮುಂದೆ ರಾಷ್ಟ್ರಕೂಟರ ಕೊನೆಯ ಅರಸು ಕರ್ಕನ ದುರ್ಬಲ ಆಡಳಿತ ಕುರಿತು ತಿಳಿದ ರಾಷ್ಟ್ರಕೂಟರ ಸಾಮಂತರ ಅರಸನಾದ ಬಾದಾಮಿ ಚಾಲುಕ್ಯ ವಂಶದ ಎರಡನೇ ತೈಲನು ರಾಷ್ಟ್ರಕೂಟರನ್ನು ಸೋಲಿಸಿ ತಮ್ಮ ಪೂರ್ವಜರ ಆಸ್ಥಾನವನ್ನು ಮರಳಿ ಪಡೆಯುವಲ್ಲಿ ಸಫಲನಾದ. ಮುಂದೆ ಈ ವಂಶದ ಒಂದನೆಯ ಸೋಮೇಶ್ವರ ತನ್ನ ರಾಜಧಾನಿಯನ್ನು ಮಾನ್ಯಖೇಟದಿಂದ ಕಲ್ಯಾಣಕ್ಕೆ ಸ್ಥಳಾಂತರಿಸಿದ್ದರಿಂದ ಇವರಿಗೆ ಕಲ್ಯಾಣದ ಚಾಲುಕ್ಯರು ಎಂಬ ಹೆಸರು ಬಂತು. ಕೊಪ್ಪಳವು ರಾಷ್ಟ್ರಕೂಟರ ಕೈಯಿಂದ ಕಲ್ಯಾಣದ ಚಾಲುಕ್ಯರ ಆಡಳಿತದಿಯಲ್ಲಿ ಬಂದಿತು.

ಕೊಪ್ಪಳವು ಕಲ್ಯಾಣದ ಚಾಲುಕ್ಯರ ಕಾಲದಲ್ಲಿಯೂ ಒಂದು ಪ್ರಮುಖ ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿಯೇ ಮುಂದುವರಿಯಿತು. "ಕೊಪಣ ಪುರಾಧೀಶ ಪೆರ್ಮಾಡಿ ಕಲ್ಯಾಣ ಚಾಲುಕ್ಯರ ೬ ನೆಯ ವಿಕ್ರಮಾದಿತ್ಯನ ಸುಪುತ್ರ ಮಲ್ಲಿಕಾರ್ಜುನನ ಸೇವಕನೆಂದು ರಾಮತೀರ್ಥ ಶಾಸನದಿಂದ ತಿಳಿಯುತ್ತಿದೆ. ಈ ಅರಸನ ಕಾಲದಲ್ಲಿ, ಈ ಕೊಪ್ಪಳವು, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿಯೇ ಮುಂದುವರಿಯಿತು. ಇದೇ ವಂಶದ ಒಂದನೇ 'ಸೋಮೇಶ್ವರ'ನಿಗೂ ಚೋಳ ಅರಸು ರಾಜಾಧಿರಾಜನಿಗೂ ಕೊಪ್ಪಂದಲ್ಲಿ ಖಾಡಾ ಖಾಡಿ ಯುದ್ಧವೆಸಗಿ, ಈ ಯುದ್ಧದಲ್ಲಿ ಚೋಳ ಅರಸು ಸೋತು ಮಡಿದನು. ಆ ಕೊಪ್ಪಂ ಈ ಕೊಪ್ಪಳವೆಂದೇ ಅನೇಕ ತಜ್ಞರ ಅಭಿಪ್ರಾಯವಾಗಿದೆ. ಇದೊಂದು ಕೊಪ್ಪಳದ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು"[೭]. ಕೊಪ್ಪಳವು ಕಲ್ಯಾಣದ ಚಾಲುಕ್ಯರ ರಾಜಕೀಯ, ಧಾರ್ಮಿಕ,

ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಮುಖ ಕೇಂದ್ರವಾಗಿದ್ದುದು ಈ ಊಹೆಗೆ ಇನ್ನಷ್ಟು ಪುಷ್ಟಿ ಕೊಡುತ್ತದೆ.

ನಂತರದ ಕಾಲದಲ್ಲಿ ಕಲಚೂರಿಯ ಎರಡನೇ ಬಿಜ್ಜಳನು ಕಲ್ಯಾಣದ ಚಾಲುಕ್ಯರ ಅರಸ ಮೂರನೇ ತೈಲಪನು ಕಾಕತಿಯರ ಮೇಲೆ ದಂಡೆತ್ತಿ ಹೋದಾಗ ಕಲ್ಯಾಣದ ಸಿಂಹಾಸನವನ್ನು ಆಕ್ರಮಿಸಿಕೊಂಡು, ಕಲ್ಯಾಣದಲ್ಲಿ ಕಲಚೂರಿ ರಾಜ್ಯವನ್ನು ೧೧೬೨ ರಲ್ಲಿ ಸ್ಥಾಪಿಸಿದನು. ಸಹಜವಾಗಿಯೇ ಕೊಪ್ಪಳ ಬಿಜ್ಜಳನ ಅಧಿಕಾರದಡಿಯಲ್ಲಿ ಬಂದಾಗ, ಕುಮಾರರಾಯ ಮುರಾರಿ ಸೋವಿದೇವ ಎಂಬುವನನ್ನು ಕೊಪ್ಪಳ ಸಮೀಪದ ಮೋದಗನೂರು (ಮಾದಿನೂರು) ರಾಜ್ಯದ ರಾಜನೆಂದು ಸಾರಿದ ವಿಷಯವನ್ನು ಇಟ್ಗಿ ಮತ್ತು ಕುಕ್ಕನೂರ ಶಾಸನಗಳು ದೃಢ ಪಡಿಸುತ್ತವೆ. ಮುಂದೆ ಮತ್ತೆ ೧೧೮೩ ರಲ್ಲಿ ಕಲ್ಯಾಣದ ಚಾಲುಕ್ಯ ವಂಶದ ಅರಸು ೪ ನೇ ಸೋಮೇಶ್ವರನು, ತನ್ನ ದಂಡನಾಯಕನಾದ ಬಮ್ಮರಸನ ಸಹಾಯದಿಂದ ಮತ್ತೆ ಕಲ್ಯಾಣವನ್ನು ವಶಪಡಿಸಿಕೊಂಡಾಗ, ಕೊಪ್ಪಳ ಮತ್ತೆ ಕಲ್ಯಾಣದ ಚಾಲುಕ್ಯರ ಕೈಯಲ್ಲಿ ಬಂದಿತು.

ಮುಂದೆ ಚಾಲುಕ್ಯ ವಂಶದ ಸಾಮಂತ ಅರಸು ಐದನೆಯ ಭಿಲ್ಲಮನು ಕಲ್ಯಾಣವನ್ನು ಮುತ್ತಿಕ್ಕಿ ಸ್ವತಂತ್ರ ರಾಜ್ಯವೆಂದು ಸಾರಿದನು. ಆಗ ಎಡದೊರೆಯ ನಾಡಿನಲ್ಲಿದ್ದ ಕೊಪ್ಪಳ ಸೇವುಣರ ರಾಜ್ಯಕ್ಕೆ ಸೇರಿತು.

ಸೇವುಣರ ತರುವಾಯ ಶಿಲಾಹಾರರ ಅಧಿಪತ್ಯದಡಿಯಲ್ಲಿ ಬಂದ ಕೊಪ್ಪಳ ಇವರ ಕಾಲದಲ್ಲಿಯೂ ಉತ್ಕೃಷ್ಟ ಮಟ್ಟದ ಶ್ರೇಷ್ಠತೆಯನ್ನು ಹೊಂದಿತ್ತು. ''ಚಾಲುಕ್ಯ ಮತ್ತು ಸೇವಣ ಅರಸರ ಕಾಲದಲ್ಲಿ ಅನೇಕ ಸಾಮಂತರು ಈ ಕೊಪ್ಪಳದ ಮೇಲೆ ಪ್ರಭುತ್ವ ನಡೆಯಿಸಿರುವರು. ಇವರುಗಳಲ್ಲಿ ಶಿಲಾಹಾರರೇ ಪ್ರಮುಖರು. ಅನೇಕ ಶಾಸನಗಳು ಈ ಶಿಲಾಹಾರರು 'ಕೊಪಣ ಪುರವರಾಧೀಶ್ವರ'ರೆಂದು ಬಿರುದು ಧರಿಸಿ, ಬಿಜಾಪುರ ಮತ್ತು ಕಲಬುರ್ಗಿ ಈ ಪ್ರದೇಶಗಳಲ್ಲಿ ಪ್ರಭುತ್ವ ಪಡೆದಿದ್ದರೆಂದು ತಿಳಿಸುತ್ತಿವೆ. ಜೀಮೂತವಾಹನನ ವಂಶದವನಾದ 'ಕಂಬಗ'ನು ಕೊಪಣದವನೇ ಆಗಿದ್ದು ಶಿಲಾಹಾರರ ಕುಲಕ್ಕೆ ತಿಲಕವಂತಿದ್ದನು''[೮]. ಫ್ಲೀಟರ್ ಎಂಬ ವಿದೇಶಿ ಬರಹಗಾರ ತನ್ನ ಬರವಣಿಗೆಯಲ್ಲಿ ದೃಢಪಡಿಸಿದ್ದಾನೆ.

ಹೊಯ್ಸಳರೂ ಈ ಸ್ಥಳದೊಂದಿಗೆ ಉತ್ತಮವಾದ ಬಾಂಧವ್ಯ ಹೊಂದಿದ್ದರು. ಹೊಯ್ಸಳರು ಜೈನ ಧರ್ಮದ ಆರಾಧಕರಾಗಿದ್ದರಿಂದ ಅವರ ಕಾಲದಲ್ಲಿ ಕೊಪ್ಪಳವು ಜೈನರಿಗೆ ಆದರ್ಶ ಸ್ಥಳವಾಗಿತ್ತು. ಹೊಯ್ಸಳರ ರಾಜ ವಿಷ್ಣುವರ್ಧನನ ಕಾಲದಲ್ಲಿ ಶಾಂತಲೆ ಶ್ರವಣಬೆಳಗೊಳದ ಮಾದರಿಯಲ್ಲಿ ಇಲ್ಲಿಯೂ ಒಂದು ಜಿನಾಲಯ ನಿರ್ಮಿಸಿದಳೆಂಬ ಪ್ರತೀತಿ ಇದೆ. ಗಂಗರಾಜನು ಗಂಗವಾಡಿ ತೊಂಬತ್ತಾರು ಸಾಸಿರಕೆಲ್ಲ ಕೊಪಣವನ್ನು ಆದರ್ಶವಾಗಿಟ್ಟುಕೊಂಡಿದ್ದನಲ್ಲದೇ, ಅವನ ಅಣ್ಣನ ಮಗ ಏಚಿರಾಜ ಈ ಸ್ಥಳದಲ್ಲಿ ಜಿನೇಂದ್ರ ಭವನಂಗಳನ್ನು ನಿರ್ಮಿಸಿದ ಪ್ರತೀತಿಗಳಿವೆ. ಅಲ್ಲದೇ ಬೆಳಗವತ್ತಿ ನಾಡನ್ನು ನಿರ್ಮಿಸುವಾಗ ಏಚಿರಾಜನು ಕೊಪ್ಪಳವನ್ನೇ ಆದರ್ಶವಾಗಿಟ್ಟುಕೊಂಡಿದ್ದನು. ಅಲ್ಲದೇ ಹೊಯ್ಸಳ ನರಸಿಂಹನ ಮಂತ್ರಿಯಾದ ಹುಳ್ಳರಾಜ ಇಲ್ಲಿನ ಜಿನ ಮುನಿಸಂಘಕ್ಕೆ ಸುವರ್ಣ ದಾವನಿತ್ತು ಪುಣ್ಯಪುಂಜೈಕ್ಯ ಧಾಮನೆನಿಸಿದನು.

ಜಿನ ಚಾವುಂಡರಾಯನು ಪುರಾಣ ಕುಮಾರಸೇನ ಮುನಿಯನ್ನು ಸ್ತುತಿಸುವಾಗ

ಅಸಿಧಾರಾ ವ್ರತದಿಂದ ಪೆಂಪೆಸೆವಿನಂ ಮುಳ್ಗುಂದದೊಳ ಮುನ್ನೆ ಸಂ।
ನ್ಯಸನಕ್ಕೆಯ್ದೆ ನಿವೃತ್ತಿಗೆಯ್ದು ಕೊಪಣಾದ್ರೀಂದ್ರಕ್ಕೆ ವಂದಾಗಮೋ।
ಕ್ತಸಮಾಧಾನವಿಧಾನದಿಂ ಮುಡಿಪಿ ಮುಕ್ತಿಸ್ಥಾನಮಂ ಮುಂಟೆ ಸಾ।
ಧಿಸಿಕೊಂಡೊಳ್ಪುಕುಮಾರಸೇನ ಮುನಿಪಂಗಕ್ಕು ಪೆರ್ಗಕ್ಕುಮೆ ॥

ಎಂದು ಹೇಳಿದ್ದು ಇಲ್ಲಿ 'ಕೊಪಣಾದ್ರಿ' ಎಂದರೆ ಕೊಪ್ಪಳದ ಬೆಟ್ಟವೇ ಆಗಿದೆ. ಹೀಗೆ ಜೈನರ ಪವಿತ್ರ ತಾಣವಾಗಿಯೂ ಕೊಪ್ಪಳ ಇತಿಹಾಸದಲ್ಲಿ ಹೆಸರುವಾಸಿಯಾಗಿದೆ. ಚಂದ್ರಗುಪ್ತಮೌರ್ಯ, ಅಶೋಕ, ಬಿಂದುಸಾರ ಮೊದಲಾದ ರಾಜರುಗಳಿಂದ ಹಿಡಿದು ಈ ಸ್ಥಳ ಐತಿಹಾಸಿಕ ಸಾಂಸ್ಕೃತಿಕ ಪರಿಸರ ಹೊಂದಿರುವುದನ್ನು ನಾವು ಕಾಣಬಹುದಾಗಿದೆ.

ಹೊಯ್ಸಳರ ಅವನತಿಯ ನಂತರ ಕೊಪ್ಪಳದ ಇತಿಹಾಸದ ದಿಕ್ಕು ಮತ್ತೊಮ್ಮೆ ಬದಲಿಸಿತು. ಅಷ್ಟೊತ್ತಿಗಾಗಲೇ ಮುಸಲ್ಮಾನರ ದಾಳಿ, ಆಕ್ರಮಣ ಪ್ರಾರಂಭವಾಯಿತು. ಉತ್ತರದಿಂದ ದಿಲ್ಲಿಯ ರಾಜರುಗಳಾದ ಮಹಮ್ಮದೀಯ ಅರಸರು ದಕ್ಷಿಣದ ಮೇಲೆ ಮೇಲಿಂದ ಮೇಲೆ ದಾಳಿಗಳನ್ನು ನಡೆಸಿ, ಇಲ್ಲಿನ ಅಪಾರ ಸಂಪತ್ತು ದೋಚಿಕೊಂಡು ಉತ್ತರದ ಕಡೆಗೆ ಸಾಗುತ್ತಿದ್ದರು. ಅಲ್ಲಾವುದ್ದೀನ ಖಿಲ್ಜಿ ಮಲಿಕ್ ಕಾಫರ್, ಮಲಿಕ್ ನಾಯಿಬ ಮೊದಲಾದವರು ಈ ದಾಳಿಗಳ ನೇತೃತ್ವವನ್ನು ವಹಿಸಿಕೊಂಡಿದ್ದರು. ಇದರಲ್ಲಿ ಮಲಿಕ್ ನಾಯಿಬ್ ದೇವಗಿರಿಯ ಸೇವುಣರನ್ನು ಸೋಲಿಸಿದಾಗ ಇಲ್ಲಿನ ಸ್ಥಳಗಳು ದಿಲ್ಲಿಯ ಆಡಳಿತಕ್ಕೆ ಒಳಪಟ್ಟವು. ದೇವಗಿರಿ ದಿಲ್ಲಿಯ ಮುಸಲ್ಮಾನ ರಾಜರುಗಳ ಕೈಯಲ್ಲಿ ಸಿಕ್ಕ ನಂತರ ಸೇವುಣರ ಸಾಮಂತ ಅರಸನಾದ ಕಂಪಿಲರಾಯನು ೧೩೨೦ ರಲ್ಲಿ ಸ್ವತಂತ್ರರಾಜ ಎಂದು ಸಾರಿಕೊಂಡು ಮಲಿಕ್ ನಾಯಿಬನ ದಾಳಿಗಳಿಗೆ ಪ್ರತಿದಾಳಿಗಳ ಮೂಲಕ, ಸಮರ್ಥ ಉತ್ತರವನ್ನು ನೀಡತೊಡಗಿದನು.

ಕಂಪಿಲರಾಯನ ರಾಜಧಾನಿಗಳ ಬಗ್ಗೆ ಕೆಲವೊಂದು ಊಹಾಪೋಹಗಳಿದ್ದು ಆನೆಗುಂದಿ, ಕಂಪಿಲ ಇವನ ರಾಜಧಾನಿಗಳಾಗಿದ್ದವೆಂದು ತಿಳಿದು ಬರುತ್ತವೆ. ಕೆಲವೊಂದು ಶಿಲಾಶಾಸನಗಳು ಹನೇಯ, ಹೊಸಮಲೆದುರ್ಗ, ಕುಮ್ಮಟಗಳು ಇವನ ರಾಜಧಾನಿಗಳಾಗಿದ್ದವೆಂದು ತಿಳಿಸುತ್ತವೆ. ಕುಮ್ಮಟ ಅಥವಾ ಕಮ್ಮಟ ಕೊಪ್ಪಳ ಜಿಲ್ಲೆಯ ಏಳು ಬೆಟ್ಟಗಳ ಪ್ರದೇಶದಲ್ಲಿರುವ ಸ್ಥಳವಾಗಿದೆ. ಇದರಿಂದ ಕಂಪಿಲರಾಯನು ಕೊಪ್ಪಳದ ಅತೀ ನಿಕಟವರ್ತಿಯಾಗಿದ್ದನೆಂದು ತಿಳಿದುಬರುತ್ತದೆ.

ಕಂಪಿಲರಾಯನಿಗೆ ತನ್ನ ಮಗ ಕುಮಾರರಾಮ ಪ್ರಬಲ ಸಹಾಯಹಸ್ತ ನೀಡಿದ್ದನು. ಕಂಪಿಲರಾಯನಿಗೆ ಬಲಗೈಯಾಗಿ, ಬೆನ್ನೆಲುಬಾಗಿ, ತಿಲಕದಂತಿದ್ದನು. ಇದರಿಂದ ಕಂಪಿಲರಾಯನ ನೈತಿಕ ಹಾಗೂ ಭೌತಿಕ ಬಲ ಇನ್ನಷ್ಟು ಹೆಚ್ಚಾಗಿತ್ತು.

ಕಂಪಿಲರಾಯನ ಉತ್ತರದ ಗಡಿಯಾಚೆಯಿದ್ದ ಸಗರ ಪ್ರದೇಶ ದಿಲ್ಲಿಯ ದೊರೆ ಮಹಮ್ಮದ್ ಬಿನ್ ತುಘಲಕ್ ಸಾಮ್ರಾಜ್ಯಕ್ಕೆ ಸೇರಿದುದಾಗಿತ್ತು. ಇದರ ಪ್ರಾಂತಾಧಿಕಾರಿ ಬಹಾಉದ್ದೀನ ಆಗಿದ್ದನು.

ಇವನು ಮಹಮ್ಮದ್ ಬಿನ್ ತುಘಲಕ್‌ನ ಸೋದರತ್ತೆಯ ಮಗನಾಗಿದ್ದನು. ಇವನಿಗೂ ಗಡಿಯಾಚೆಯ ಕಂಪಿಲರಾಯನಿಗೂ ಉತ್ತಮ ಸಂಬಂಧವೇರ್ಪಟ್ಟಿತ್ತು. ಗಾಢ ಸ್ನೇಹ ಇವರಿಬ್ಬರಲ್ಲಿಯೂ ಬೆಳೆದಿತ್ತು.

ಬಹಾಉದ್ದೀನ್‌ನ ಏಳಿಗೆಯನ್ನು ಸಹಿಸದ ಅಲ್ಲಿಯ ಜನ ಮಹಮದ್ ಬಿನ್ ತುಘಲಕ್‌ನ ಮುಂದೆ ಇವನ ಬಗ್ಗೆ ಇಲ್ಲ ಸಲ್ಲದ ಅಪವಾದಗಳನ್ನು ಹೇಳಿದರು. ಬಹಾಉದ್ದೀನ್ ದಿಲ್ಲಿಯನ್ನು ಆಕ್ರಮಿಸಿಕೊಂಡು ಅಧಿಪತಿಯಾಗಲು ಹವಣಿಸುತ್ತಿದ್ದಾನೆಂದು ಕಿವಿಯೂದಿದರು. ಇದನ್ನು ಕೇಳಿ ಕುಪಿತನಾದ ತುಘಲಕ್‌ನು ಬಹಾಉದ್ದೀನ್‌ನನ್ನು ಬಂಧಿಸಿ ತರುವಂತೆ ಆಜ್ಞೆ ಹೊರಡಿಸಿದನು. ಇದನ್ನರಿತ ಬಹಾಉದ್ದೀನ್ ಸಗರ ಪ್ರದೇಶದಿಂದ ದಕ್ಷಿಣಕ್ಕಿರುವ ಗೆಳೆಯ ಕಂಪಿಲರಾಯನ ಆಸ್ಥಾನಕ್ಕೆ ಬಂದು ಆಶ್ರಯ ಪಡೆದುಕೊಂಡನು.

“ಕಂಪಿಲರಾಯನ ಆಶ್ರಯದಲ್ಲಿದ್ದ ಬಹಾದ್ದೂರ್ ಖಾನ್‌ನನ್ನು ಸೆರೆ ಹಿಡಿದು ತರಲು ಸೇನಾಪತಿ ನೇಮಿಖಾನ್‌ನನ್ನು ತುಘಲಕ್‌ನು ಕಳುಹಿಸಿದನು. ನೇಮಿಖಾನ್‌ನನು ಕಮ್ಮಟದುರ್ಗದ ಯುದ್ಧದಲ್ಲಿ ಸೋತು ಹಿಂದಿರುಗಿದನು’’. ಕಂಪಿಲರಾಯನ ಕಾಲದಲ್ಲಿ ಕೊಪ್ಪಳವು ಬಲಾಢ್ಯ ದುರ್ಗವೆಂದು ಹೆಸರುವಾಸಿಯಾಗಿತ್ತಲ್ಲದೇ ಕೊಪ್ಪಳದಲ್ಲಿ ತಿಮ್ಮರಾಜನೆಂಬ ಕಂಪಿಲನ ಮಾಂಡಲಿಕನಿದ್ದನೆಂದು ಹೇಳಲಾಗಿದೆ. ಕಮ್ಮಟದುರ್ಗದ ಕೋಲದ ಹಬ್ಬದಲ್ಲಿ ಕೊಪಣದ ತಿಮ್ಮರಾಜನ ಕುವರನೂ ಭಾಗವಹಿಸಿದ್ದನಂತೆ. ಈ ಎಲ್ಲ ಘಟನೆಗಳನ್ನಾಧರಿಸಿ ಗಂಡುಗಲಿ ಕುಮಾರರಾಮನ ಕಾರ್ಯ ಚಟುವಟಿಕೆಗಳ ಸ್ಥಾನ ಕೊಪ್ಪಳವೇ ಆಗಿತ್ತೆಂಬುದು ತಿಳಿದು ಬರುತ್ತದೆ.

ಯುದ್ಧದ ಸೋಲಿನಿಂದ ಕುಪಿತನಾದ ತುಘಲಕ್‌ನು ಒಂದು ದೊಡ್ಡ ಸೈನ್ಯವನ್ನು ಕಮ್ಮಟದುರ್ಗಕ್ಕೆ ಕಳಿಸಿದನು. ಅಪಾರ ಸೈನ್ಯದ ದಾಳಿಗೆ ಸಿಲುಕಿದ ಕಮ್ಮಟದುರ್ಗ ದಿಲ್ಲಿಯ ತುಘಲಕ್ ಸಾಮ್ರಾಜ್ಯಕ್ಕೆ ಸೇರಿತು. ಕಮ್ಮಟ ದುರ್ಗದ ಭಾಗವಾಗಿದ್ದ ಕೊಪ್ಪಳವೂ ಕ್ರಿ.ಶ. ೧೩೨೭ ರಲ್ಲಿ ದಿಲ್ಲಿ ಸಾಮ್ರಾಜ್ಯಕ್ಕೆ ಸೇರಿತಾದರೂ, ಮುಂದೆ ನಾಲ್ಕು ವರ್ಷಗಳಲ್ಲಿ ಕೆಚ್ಚೆದೆಯ ವೀರರಾದ ಕೊಪ್ಪಳದ ಜನತೆ ಚಾಲುಕ್ಯ ವಂಶದ ಸೋಮದೇವನ ನೇತೃತ್ವದಲ್ಲಿ ಬಂಡಾಯವೆದ್ದು, ಕೊಪ್ಪಳವನ್ನು ತುಘಲಕ್ ಆಳಿಕೆಯಿಂದ ಮುಕ್ತಗೊಳಿಸಿದರು.

ತುಂಗಭದ್ರಾ ನದಿಯ ದಂಡೆಯ ಮೇಲೆ ಕ್ರಿ.ಶ. ೧೩೩೬ ರಲ್ಲಿ ಉದಯಿಸಿದ ವಿಜಯ ನಗರ ಸಾಮ್ರಾಜ್ಯದಲ್ಲಿ ಸೇರಿದ ಕೊಪ್ಪಳ ನಂತರದ ಕಾಲದಲ್ಲಿ ಹೆಚ್ಚಾದ ಮುಸಲ್ಮಾನರ ಆಳ್ವಿಕೆ, ಆಕ್ರಮಣ, ದಾಳಿಗಳಿಂದ ಕೆಲವೊಂದು ಸಾರಿ ಸಮೀಪದ ವಿಜಯನಗರದ ಅರಸರ ಕೈಗೂ ಮತ್ತೆ ಕೆಲವೊಂದು ಸಾರಿ ಮುಸಲ್ಮಾನರ ಕೈಗೂ ಹಸ್ತಾಂತರವಾಗುತ್ತ ಬಂದಿತು. ವಿಜಯನಗರದ ಅರಸರ ಕಾಲದಲ್ಲಿ ಈ ಸ್ಥಳ ‘ಕೊಪ್ಪಳ ಪ್ರದೇಶ’ವೆಂದು ಹೆಸರಾಗಿತ್ತು ಎಂದು ತಿಳಿದು ಬರುತ್ತದೆ. ಕೃಷ್ಣದೇವರಾಯನು ಈ ಗಡಿ ಭಾಗಕ್ಕೆ ತಿಮ್ಮಪ್ಪಯ್ಯ ಎಂಬುವನನ್ನು ನಾಯಕನನ್ನಾಗಿ ನೇಮಿಸಿದ್ದ ಬಗ್ಗೆ ಇಲ್ಲಿಯ ಶಾಸನವೊಂದು ತಿಳಿಸುತ್ತದೆ. ರಾಮರಾಯನ ಮಗ ಶ್ರೀರಾಮರಾಜನ ಕಾಲದಲ್ಲಿಯೂ ಈ ಸ್ಥಳ ವಿಜಯನಗರದ ಸಾಮ್ರಾಜ್ಯದ ಆಡಳಿತಕ್ಕೊಳಪಟ್ಟಿತ್ತು.

ಕ್ರಿ.ಶ. ೧೩೪೭ ರಲ್ಲಿ ಕಲಬುರ್ಗಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಬಹಮನಿ ಸುಲ್ತಾನರು ಆಳ್ವಿಕೆ ಮಾಡಹತ್ತಿದರು. ತರುವಾಯ ಬಹಮನಿ ಸುಲ್ತಾನರ ಆಡಳಿತ ನೇಪಥ್ಯಕ್ಕೆ ಸರಿದಾಗ, ಅದರ ಸುಬೇದಾರರು ಪ್ರಬಲರಾಗುತ್ತ ಆಡಳಿತ ಯಂತ್ರವನ್ನು ತಮ್ಮ ಕೈಗೆತ್ತಿಕೊಂಡರು. ಬಿಜಾಪುರದ ಎರಡನೇ ಇಬ್ರಾಹಿಮ್ ಆದಿಲ್‌ಶಹಾ ಇವರಲ್ಲಿ ಪ್ರಬಲ ಅರಸನಾಗಿದ್ದನು. ಇವನು ವಿಜಯನಗರದ ಅರಸರೊಂದಿಗೆ ಯುದ್ಧಗಳನ್ನು ಮಾಡಿದನು. ರಾಯಚೂರು ಇವರೀರ್ವರ ನಡುವಿನ ಯುದ್ಧ ಸ್ಥಳವಾಗಿತ್ತು. ರಾಯಚೂರು ಕೊಪ್ಪಳದ ಸಮೀಪವೇ ಇರುವದರಿಂದ ಯುದ್ಧದ ಪ್ರಭಾವ, ಪರಿಣಾಮ ಕೊಪ್ಪಳಕ್ಕೂ ಅನ್ವಯವಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಕೊಪ್ಪಳ ಸಂಪೂರ್ಣವಾಗಿ ಬಿಜಾಪುರ ರಾಜ್ಯದ ಸೀಮೆಗೆ ಸೇರಿತು.

ಸ್ವಾತಂತ್ರ್ಯ ಸಿಗುವವರೆಗೂ ಕೊಪ್ಪಳ ಮುಸಲ್ಮಾನರ ಆಳ್ವಿಕೆಯಲ್ಲಿಯೇ ಒಳಗೊಂಡಿತ್ತು. ವಿಜಾಪುರದ ಆದಿಲ್‌ಷಾನ ಕಾಲದಲ್ಲಿ ಈ ಸ್ಥಳ 'ಮುಜಫರ್‌ನಗರ' ಎಂದು ಹೆಸರಾಗಿತ್ತು. ಕಾಲಾನಂತರ ಇಲ್ಲಿ ಮುಸಲ್ಮಾನರ ಮಸೀದಿಗಳು ನಿರ್ಮಾಣಗೊಂಡವು. ಮುಸ್ಲಿಂ ಶೈಲಿಯ ಕಮಾನುಗಳನ್ನು ಈಗಲೂ ನಗರದ ಮುಖ್ಯರಸ್ತೆಯಲ್ಲಿ ಕಾಣಬಹುದು. ಜೊತೆಗೆ ಇಲ್ಲಿಯ ರಸ್ತೆಗಳ ಹೆಸರುಗಳೂ ಕೂಡ ಜವಾಹರ್, ಸಾಲಾರ್ ಜಂಗ್, ಹಸನ್ ಎಂದು ಇವೆ. ಆದಿಲ್‌ಷಹಾನ ನಾಯಕ ಖಾಜಿಖಾನನು ಕೊಪ್ಪಳದಲ್ಲಿ ಮಸೀದಿಯನ್ನು ಕಟ್ಟಿಸಿದನೆಂಬ ಪ್ರತೀತಿ ಇದೆ. ಮೋಸ್ಲೆಮಿಕ್ ಶಾಸನ ಈ ಮಾತನ್ನು ದೃಢಪಡಿಸುತ್ತದೆ.

ನಂತರದ ಕಾಲದಲ್ಲಿ ದೇಶದ ರಾಜಕೀಯ ಚಿತ್ರಣ ಸಂಪೂರ್ಣ ಬದಲಾಗತೊಡಗಿತು. ಮಹಮ್ಮದೀಯ ಅರಸರ ಕೈಯಲ್ಲಿದ್ದ ದಿಲ್ಲಿಯನ್ನು ಆಕ್ರಮಿಸಿಕೊಂಡ ಮೊಗಲರು ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದಾಗ ಮೊಗಲರ ಚಕ್ರವರ್ತಿ ಔರಂಗಜೇಬನ ದಾಳಿ, ಆಕ್ರಮಣಗಳಿಗೆ ಇಲ್ಲಿನ ಮುಸಲ್ಮಾನ ಅರಸರು, ಹಿಂದೂ ರಾಜರು ತತ್ತರಿಸಿದರು. ಇದೇ ವೇಳೆಗೆ ಮಹಾರಾಷ್ಟ್ರ ರಾಜ್ಯವನ್ನು ಕಟ್ಟಿದ ಶಿವಾಜಿ 'ಛತ್ರಪತಿ' ಬಿರುದಿನೊಂದಿಗೆ ಶಿವನೇರಿಯಲ್ಲಿ ಸಿಂಹಾಸನ ಏರಿ, ಹಿಂದೂ ಸಾಮ್ರಾಜ್ಯದ ಬೇರುಗಳನ್ನು ಗಟ್ಟಿಗೊಳಿಸತೊಡಗಿದನು. ಏಕಕಾಲದಲ್ಲಿ ಮೊಗಲರ ಔರಂಗಜೇಬ್ ಮತ್ತು ಹಿಂದೂ ಸಾಮ್ರಾಜ್ಯದ ಅಧಿಪತಿ ಶಿವಾಜಿ ದಕ್ಷಿಣ ಭಾರತದ ಮೇಲೆ ದಿಗ್ವಿಜಯ ಕೈಗೊಂಡರು.

ಮೊದಲಿಗೆ ಶಿವಾಜಿ ಕೊಪ್ಪಳವನ್ನು ವಶಪಡಿಸಿಕೊಂಡು ತಮ್ಮನಾದ ವೆಂಕೋಜಿಗೆ ಇಲ್ಲಿಯ ಆಡಳಿತದ ಮೇಲ್ವಿಚಾರಣೆಯನ್ನು ವಹಿಸಿದನು. ಬಿಜಾಪುರದ ಅರಸರು ಮತ್ತೆ ಕೊಪ್ಪಳವನ್ನು ತಮ್ಮ ಕೈಗೆ ತೆಗೆದುಕೊಂಡರು. ನಂತರ ಮೊಗಲರು ಕೊಪ್ಪಳವನ್ನು ಬಿಜಾಪುರದ ಅರಸರಿಂದ ಕಿತ್ತುಕೊಂಡರು. ಈ ಸಮಯದಲ್ಲಿ ಮೊಗಲರು 3 ನೆಯ ಬಹುಲೋಲ ಎಂದು ಹೆಸರಾಗಿದ್ದ ಅಬ್ದುಲ್ ರಹೀಮನಿಗೆ ಈ ಸ್ಥಳವನ್ನು ಜಹಗೀರಾಗಿ ಕೊಡಲ್ಪಟ್ಟಿತ್ತು. ಬಹುಲೋಲಿಯು ತನ್ನ ಸಂಬಂಧಿಕನಾದ ಹುಸೇನಮಿಯಾನಿಗೆ ಇದರ ಆಡಳಿತ ವಹಿಸಿದನು. ಈ ಸಮಯದಲ್ಲಿ ಶಿವಾಜಿಯ ಆದೇಶದಂತೆ ದಳಪತಿ ಹಂಬೀರರಾವ್ ಕೊಪ್ಪಳಕ್ಕೆ

ಮುತ್ತಿಗೆ ಹಾಕಿದನು. ೧೬೭೭ ರ ಜನೇವರಿ ತಿಂಗಳಿನಲ್ಲಿ ಯರಂಬರಿಗೆ ಹತ್ತಿರ (ಈಗಿನ ಯಲಬುರ್ಗಾ) ಯುದ್ಧ ನಡೆಯಿತು. ಆಗ ಹುಸೇನ್ ಮಿಯಾನನ್ನು ಮರಾಠಾ ರಾಜ ಶಿವಾಜಿ ಸೆರೆ ಹಿಡಿದು, ಕೊಪ್ಪಳದ ಕೋಟೆಯನ್ನು ಕೊಟ್ಟರೆ ಅವನನ್ನು ಬಿಡುವುದಾಗಿ ತಿಳಿಸಿದನು. ಅದರಂತೆ ಮುಂದೆ ಈ ಸ್ಥಳ ಮರಾಠರ ಆಡಳಿತಕ್ಕೂ ಒಳಪಟ್ಟಿತ್ತು. ಗಿರಿದುರ್ಗದಲ್ಲಿರುವ ಶಿವಾಜಿಯ ಆರಾಧ್ಯ ದೇವತೆ 'ಭವಾನಿ' ಗುಡಿ, ಮೋಡಿಯಲ್ಲಿದ್ದ ಕಡತಗಳು ಕೊಪ್ಪಳವು ಶಿವಾಜಿಯ ಆಡಳಿತಕ್ಕೊಳಪಟ್ಟಿತ್ತೆಂಬುದನ್ನು ದೃಢಪಡಿಸುತ್ತವೆ.

''ಔರಂಗಜೇಬನು ಎರಡನೆಯ ಸಲ ಅಪಾರ ಸೈನ್ಯದೊಂದಿಗೆ ಮಹಾದಂಡನಾಯಕ ದಿಲೇರಖಾನನನ್ನು ದಕ್ಷಿಣದ ದಿಗ್ವಿಜಯಕ್ಕೆ ಕಳುಹಿಸಿದನು. ಇದನ್ನರಿತ ಬಿಜಾಪುರದ ಅರಸು, ತನ್ನ ಸಚಿವ ಸಿದ್ದಿ ಮಸೂದನನ್ನು ಶಿವಾಜಿಯ ಸಹಾಯ ಕೋರಲು ಕಳುಹಿಸಿದನು. ಇದಕ್ಕೊಪ್ಪಿದ ಶಿವಾಜಿಗೆ, ಬಳ್ಳಾರಿ ಮತ್ತು ಕೊಪ್ಪಳವನ್ನು ಬಿಟ್ಟುಕೊಟ್ಟನು. ಮೊಗಲರ ಅಪಾರ ಸೈನ್ಯಕ್ಕೆ ಬಿಜಾಪುರದರಸು ಸಿಕಂದರ ಆದಿಲ್‌ಶಹಾನ ಸೈನ್ಯ ತತ್ತರಿಸಿತು. ಮತ್ತು ಕ್ರಿ.ವ. 1686 ರಲ್ಲಿ ಅದಕ್ಕೆ ತುತ್ತಾಯಿತು. ಹೈದರಾಬಾದ ಸುಬಾಕ್ಕೆ ಬಿಜಾಪುರವನ್ನು ಸೇರಿಸಿದರು. ಇದರ ಜೊತೆಗೆ ಈ ಕೊಪ್ಪಳವು ಹೈದರಾಬಾದ ಸುಬಾಕ್ಕೆ ಸೇರಿತು ಮೊಗಲರ ಅರಸರುಗಳಲ್ಲಿ ಅರಾಜಕತೆ ಉಂಟಾಗಲು ಈ ಸಮಯ ಸಾಧಿಸಿ ಈ ಮೊದಲೇ ಈ ಹೈದರಾಬಾದ ಸುಬೇದಾರ ಮೀರ ಕಮರುದ್ದೀನನು 'ನಿಜಾಮು ಉಲ್-ಮುಲ್ಕ' ಅಂತಾ ಹೆಸರಿನಿಂದ ಕ್ರಿ.ಶ. 1724 ರಲ್ಲಿ ಹೈದರಾಬಾದ ಸುಬೆಯ ಸ್ವತಂತ್ರ ರಾಜನೆಂದು ಸಾರಿದನು. ಈ ವಂಶಕ್ಕೆ ಅಂದಿನಿಂದ 'ಆಸಫಿಯಾ' ಎಂದು ಹೆಸರು''[೧೦].

ಈ ಅವಧಿಯಲ್ಲಿ ಭಾರತದ ಇತಿಹಾಸ ಮತ್ತೊಮ್ಮೆ ಬದಲಾದ ರಾಜಕೀಯ ತಿರುವು ಪಡೆದುಕೊಂಡಿತು. ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದ ಬ್ರಿಟೀಷರು ಕ್ರಿ.ಶ. ೧೬೦೦ ರಲ್ಲಿ ಈಸ್ಟ್ ಇಂಡಿಯಾ ಕಂಪನಿಯನ್ನು ಆರಂಭಿಸಿದರು. ತಮ್ಮ ವ್ಯಾಪಾರದ, ವ್ಯಾಪಾರಿಗಳ ರಕ್ಷಣೆಗಾಗಿ ಸೇನಾ ನೆರವು ಇಟ್ಟುಕೊಳ್ಳಲು ಪರವಾನಿಗೆ ಪಡೆದು ನಂತರ ಸೇನೆಯ ಸಹಾಯದಿಂದ ಭಾರತದ ರಾಜಕೀಯದಲ್ಲಿ ಹಸ್ತಕ್ಷೇಪ ನಡೆಸತೊಡಗಿತು. ಭಾರತದ ರಾಜಕೀಯದಲ್ಲಿ ಪರಕೀಯರ ಹಸ್ತಕ್ಷೇಪ ಸಹಿಸದ ಹೈದರಾಬಾದ ನಿಜಾಮ, ಹೈದರಾಲಿ, ಫಡನೀಸ, ಭೋಸಲೆ ಮೊದಲಾದವರು ಒಗ್ಗಟ್ಟಿನಿಂದ ಬ್ರಿಟೀಷರ ಕಂಪನಿಯ ವಿರೋಧಿಗಳಾಗತೊಡಗಿದರು. ಈ ಸಮಯದಲ್ಲಿ ಅನೇಕ ರಾಜಕೀಯ ಒತ್ತಡದಲ್ಲಿ ಹೈದರಾಲಿಯನ್ನು ಮೈಸೂರು ರಾಜ್ಯದ ಸರ್ವಾಧಿಕಾರಿ ಎಂದು ಘೋಷಿಸಿದಾಗ, ಹೈದರಾಲಿಯ ಪ್ರಭಾವ, ದಿನದಿಂದದಿನಕ್ಕೆ ಈತನು ಪಡೆಯುತ್ತಿರುವ ಗೌರವ, ಘನತೆ, ಕೀರ್ತಿಯನ್ನು ಸಹಿಸದ ಹೈದರಾಬಾದ ನಿಜಾಮನು ಬ್ರಿಟೀಷರ ಕಂಪನಿಯ ಸ್ನೇಹ ಬೆಳೆಸತೊಡಗಿದ. ಇದನ್ನು ತಿಳಿದುಕೊಂಡ ಹೈದರಾಲಿ ಉತ್ತರ ಕರ್ನಾಟಕದತ್ತ ಸಾಗಿ ಯಾವುದೇ ವಿರೋಧವಿಲ್ಲದೇ ಕ್ರಿ.ಶ. ೧೭೭೮ ರಲ್ಲಿ ಧಾರವಾಡವನ್ನು ವಶಪಡಿಸಿಕೊಂಡು ಮುಂದೆ ಹೈದರಾಬಾದ ನಿಜಾಮನ ವಶದಲ್ಲಿದ್ದ ಕೊಪ್ಪಳ ಮತ್ತು ಬಹಾದ್ದೂರ ಬಂಡಿ, ಗಿರಿಕೋಟೆಯನ್ನು ಏಪ್ರಿಲ್

ತಿಂಗಳ ೧೭೭೮ ರಲ್ಲಿ ಆಕ್ರಮಿಸಿಕೊಂಡಾಗ, ನಿಜಾಮನ ಸಹಾಯಕ್ಕೆ ಆತ ನಂಬಿದ್ದ ಬ್ರಿಟೀಷ ಕಂಪನಿ ಸಹಾಯಕ್ಕೆ ಬರದಾಯಿತು. ಈ ರೀತಿಯಾಗಿ ಈ ಸ್ಥಳ ಮುಸಲ್ಮಾನ ದೊರೆ ಹೈದರಾಲಿಯ ಕೈ ಸೇರಿತು. ಕೊಪ್ಪಳದ ಉಸ್ತುವಾರಿಕೆಯನ್ನು ಕೋಲಾರದ ಉಸ್ಮಾನನಿಗೆ ವಹಿಸಿದ ಹೈದರಾಲಿ ಈತನನ್ನು ಕೊಪ್ಪಳ ವಿಭಾಗದ ನಾಯಕನನ್ನಾಗಿ ನೇಮಿಸಿ ಹರಿಗೋಲಿನಲ್ಲಿ ಆನೆಗುಂದಿಯಲ್ಲಿ, ತುಂಗಭದ್ರಾ ನದಿಯನ್ನು ದಾಟಿ ಮೈಸೂರಿಗೆ ಮರಳಿದನು. ಉಸ್ಮಾನನು ಸುಮಾರು ಎಂಟು ವರ್ಷಗಳ ಈ ಸ್ಥಳದಲ್ಲಿ ಆಳ್ವಿಕೆ ನಡೆಸಿದನು. ತನ್ನ ಆಳ್ವಿಕೆಯ ಸಮಯದಲ್ಲಿ ಈತ ಇಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಕರೆಗಳನ್ನು, ಕಾಲುವೆಗಳನ್ನು ನಿರ್ಮಿಸಿದ್ದಲ್ಲದೇ, ಇಲ್ಲಿನ ಬಲವಾದ ಕೋಟೆಯನ್ನು ಇನ್ನಷ್ಟು ಬಲಾಢ್ಯಗೊಳಿಸಿದನು. ಕೊಪ್ಪಳ ಕೋಟೆಯ ೨ ನೆಯ ಬಾಗಿಲನ್ನೂ, ಬಹದ್ದೂರ ಬಂಡೆಯ ಕೋಟೆಯನ್ನೂ ಕಟ್ಟಿಸಿದನೆಂದು ಕೋಟೆಯ ಮೇಲಿನ ಶಾಸನವು ತಿಳಿಸುತ್ತದೆ.

ಮುಂದೆ ಹೈದರಾಲಿಯ ನಿಧನದ ನಂತರ ಇವನ ಮಗ ಟಿಪ್ಪುಸುಲ್ತಾನ ಮೈಸೂರು ರಾಜ್ಯದ ರಾಜನಾಗಿ ೨೯ ನೇ ಡಿಸೆಂಬರ್ ೧೭೮೨ ರಲ್ಲಿ ಅಧಿಕಾರ ವಹಿಸಿಕೊಂಡನು. ಅತ್ಯಂತ ಶೂರನಾಗಿದ್ದ ಟಿಪ್ಪುಸುಲ್ತಾನ ಆಡಳಿತದ ಮೇಲೆ, ಸೈನಿಕರ ಮೇಲೆ ಹಿಡಿತವಿಟ್ಟುಕೊಂಡಿದ್ದನು. ಕೊಪ್ಪಳ ವಿಭಾಗದ ಪಾಳೆಗಾರರು ಸೇರಿಕೊಂಡು ಕೊಪ್ಪಳವನ್ನು ಟಿಪ್ಪುಸುಲ್ತಾನನ ವಶದಿಂದ ತಮ್ಮ ಕೈಗೆ ಸೆಳೆದುಕೊಂಡಾಗ ಕುಪಿತನಾದ ಟಿಪ್ಪುಸುಲ್ತಾನ ಅಪಾರ ಸೈನ್ಯದೊಂದಿಗೆ ಹರಿಗೋಲಿನಿಂದ ಆನೆಗುಂದಿಯಲ್ಲಿ ತುಂಗಭದ್ರಾ ನದಿಯನ್ನು ದಾಟಿ ಕೊಪ್ಪಳದ ಕಡೆಗೆ ಬಂದಾಗ ಟಿಪ್ಪುಸುಲ್ತಾನನ ಬಲಾಢ್ಯ ಸೈನ್ಯಕ್ಕೆ ತತ್ತರಿಸಿದ ಪಾಳೆಗಾರರು ಹೇಳ ಹೆಸರಿಲ್ಲದೇ ಪಲಾಯನ ಮಾಡಿದಾಗ ಎಂದಿನಂತೆ ಕೊಪ್ಪಳದ ಕೋಟೆ ಕ್ರಿ.ಶ. ೧೭೮೬ ರಲ್ಲಿ ಮತ್ತೆ ಟಿಪ್ಪುಸುಲ್ತಾನನ ವಶಕ್ಕೆ ಬಂದಿತು. ಆಗ ಟಿಪ್ಪುಸುಲ್ತಾನ ಮಹಮ್ಮದಖಾನ್ ಬಹಲ್ಲಮಿಗೆ ಕೊಪ್ಪಳದ ಕೋಟೆಯ ಉಸ್ತುವಾರಿ ವಹಿಸಿಕೊಟ್ಟು ಮರಳಿ ಶ್ರೀರಂಗಪಟ್ಟಣಕ್ಕೆ ಮರಳಿದನು. ಈ ಬಗ್ಗೆ ಗಿರಿ ಕೋಟೆಯ ಮಹಾದ್ವಾರದ ಮುಂಭಾಗದಲ್ಲಿರುವ ಶಾಸನ ಹೆಚ್ಚಿನ ಮಾಹಿತಿ ನೀಡುತ್ತದೆ.

ಟಿಪ್ಪುಸುಲ್ತಾನ ಮರಾಠರೊಂದಿಗೆ ಯುದ್ಧದಲ್ಲಿ ವಿಜಯ ಸಾಧಿಸಿದ ನೆನಪಿಗಾಗಿ ಈ ಸ್ಥಳವನ್ನು 'ಸುಲ್ತಾನಗಡ'ವೆಂದು ಕರೆದನು. ಕಿತ್ತೂರಿನ ದೊರೆ ಮಲ್ಲಸರ್ಜನನ್ನು ಕೊಪ್ಪಳದ ಕೋಟೆಯಲ್ಲಿಯೇ ಬಂಧಿಸಿ ಇಡಲಾಗಿತ್ತು.

ಭಾರತದ ರಾಜಕೀಯದಲ್ಲಿ ಬಲಗೊಳ್ಳುತ್ತ ಬಂದ ಬ್ರಿಟೀಷರು ಹೈದರಾಬಾದ ನಿಜಾಮನನ್ನು ತಮ್ಮ ಕೈಗೊಂಬೆಯಂತೆ ಕಂಡು, ತಮಗಿಚ್ಛೆ ಬಂದಂತೆ ಅವನನ್ನು ನಡೆಸಿಕೊಳ್ಳಹತ್ತಿದರು. ಕೊಪ್ಪಳವನ್ನು ಮರಳಿ ಹೈದರಾಬಾದ ನಿಜಾಮನಿಗೆ ಕೊಡಿಸಲು ಕಂಪನಿ ಸರ್ ಜಾನ್ ಮಾಲ್ಕಂನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿತು. ಹೈದರಾಬಾದ ನಿಜಾಮನ ಸೈನ್ಯವೂ ಬ್ರಿಟೀಷರೊಂದಿಗೆ ಕೂಡಿಕೊಂಡು ಕೊಪ್ಪಳ ಕೋಟೆಗೆ ಮುತ್ತಿಗೆ ಹಾಕಲಾಯಿತು. ಮುತ್ತಿಗೆ ಆರು ತಿಂಗಳವರೆಗೆ ಸಾಗಿದರೂ ಕೋಟೆ ಜಗ್ಗಲಿಲ್ಲ. ಮಾಲ್ಕಮ್

ಮುತ್ತಿಗೆಯನ್ನು ಹೆಚ್ಚಿಸಿದಷ್ಟೂ ಒಳಗಿನಿಂದ ದಾಳಿಗೆ ಪ್ರತಿದಾಳಿ ಬರತೊಡಗಿತು. ಮೊಟ್ಟಮೊದಲ ಬಾರಿಗೆ ಕೊಪ್ಪಳದ ಇತಿಹಾಸದಲ್ಲಿ ಬ್ರಿಟೀಷರ ವಿರುದ್ಧ ತೋಪುಗಳನ್ನು ಬಳಸಲಾಯಿತು. ''ಈ ಕೋಟೆಯ ಯುದ್ಧದಲ್ಲಿ ತೋಪುಗಳನ್ನು ಬಳಸಿದವರಲ್ಲಿ ವೀರ ಟೀಪುಸುಲ್ತಾನನೇ ಮೊದಲಿಗನು''[೧೧]. ಎಷ್ಟೇ ಪ್ರಯತ್ನ ಪಟ್ಟರೂ ಜಗ್ಗದ ಕೋಟೆಯನ್ನು ಮುತ್ತಿಗೆ ಹಾಕಲು ಮಾಲ್ಕಮ್‌ನಿಂದ ಸಾಧ್ಯವಾಗದಾಗ ಉಪಾಯದ ಕುತಂತ್ರದಿಂದ, ವಿಶ್ವಾಸ ದ್ರೋಹದಿಂದ ವೈರಿಗಳು ಒಳನುಗ್ಗಿದರು. ಬ್ರಿಟೀಷ-ನಿಜಾಮನ ಸೈನ್ಯದ ಅಬ್ಬರಕ್ಕೆ ಬಹಲ್ಲಮಿಯ ಸೈನ್ಯ ತತ್ತರಿಸಿತು. ಕೊಪ್ಪಳದ ಇತಿಹಾಸದಲ್ಲಿಯೇ ಇಷ್ಟೊಂದು ರಕ್ತಸಿಕ್ತವಾದ, ಘನಘೋರ ಯುದ್ಧಕ್ಕೆ ಕಂಪೇರಿಂದ ಕೊಪ್ಪಳದ ಕೋಟೆ ಸಾಕ್ಷಿಯಾಗಿ ನಿಂತಿತು. ಟಿಪ್ಪುಸುಲ್ತಾನನ ಸಹಾಯ ಸಿಗದೇ ಕ್ರಿ.ಶ. ೧೭೯೦ ರಲ್ಲಿ ಕೊಪ್ಪಳ ಕೋಟೆ ಬ್ರಿಟೀಷರ ಸಹಾಯದಿಂದ ಹೈದರಾಬಾದ ನಿಜಾಮನ ಕೈಗೆ ದೊರೆಯಿತು.

ಮುಂದೆ ಕರ್ನಲ್ ಕಿಡ್ ಎಂಬ ಬ್ರಿಟೀಷ್ ಅಧಿಕಾರಿ ಕೊಪ್ಪಳ, ಸವಣೂರು, ಬೆಂಗಳೂರು ಮೊದಲಾದ ಪಟ್ಟಣಗಳನ್ನು ಗೆದ್ದುಕೊಂಡನು. ಕ್ರಿ.ಶ. ೧೮೧೯ ರ ಅವಧಿಯಲ್ಲಿ ಕೊಪ್ಪಳದ ಜಮೀನ್ದಾರ್ ವೀರಪ್ಪ ಎಂಬುವವರು ಸ್ಥಳೀಯರ ಸಹಕಾರ, ಸಹಾಯ, ಧೈರ್ಯ, ಪ್ರೋತ್ಸಾಹಗಳಿಂದ ಈಸ್ಟ್ ಇಂಡಿಯ ಕಂಪೆನಿಯ ವಿರುದ್ಧ ಬಂಡೆದ್ದನು. ಆಗ ಕಂಪನಿಯ ದಂಡನಾಯಕ 'ಫ್ರಿಥುಲಿಯರ್' ಪುಣೆಯಿಂದ ಬಲಾಢ್ಯ ಸೈನ್ಯದೊಂದಿಗೆ ಬಂದಿತು. ಹೈದರಾಬಾದ ನಿಜಾಮನ ಸೈನ್ಯವೂ ಇವರನ್ನು ಕೂಡಿಕೊಂಡು ಕೊಪ್ಪಳ ಕೋಟೆಯನ್ನು ಮುತ್ತಿದರು. ಮುತ್ತಿಗೆ ಆರು ದಿನಗಳಾದರೂ ಕೋಟೆ ಮಣಿಯಲಿಲ್ಲ. ಹೊರಗಿನಿಂದ ಬರಬೇಕಾದ ಆಹಾರ ಸರಬರಾಜು ಮತ್ತಿತರ ಸಹಾಯ ಸಿಗದೇ ಆರು ದಿನಗಳ ನಂತರ ಅನಿವಾರ್ಯವಾಗಿ ಜಮೀನ್ದಾರ ವೀರಪ್ಪ ಕೋಟೆಯ ಬಾಗಿಲು ತೆರೆದಾಗ ಜಮೀನ್ದಾರ ವೀರಪ್ಪ, ಸೋಮದೇವ, ಅವನ ಬೆಂಬಲಿಗರು, ಸ್ನೇಹಿತರು, ಸಹೋದರರು ಕಲಿತನದಿಂದ ಕಾದಾಡಿ ವೀರಮರಣವನ್ನಪ್ಪಿದ್ದರು. ವೀರಪ್ಪನು ಅನುಸರಿಸಿದ ಬಂಡಾಯದ ನೀತಿಯನ್ನು ಮುಂಡರಗಿ ಭೀಮರಾಯ ಮತ್ತು ಹಮ್ಮಿಗಿ ಕೆಂಚನಗೌಡ ಮುಂದುವರಿಸಿದರು. ಆಂಗ್ಲ ಅಧಿಕಾರಿಗಳ ದ್ವಿಮುಖ ಧೋರಣೆಯನ್ನು ಖಂಡಿಸಿ, ವೀರ ಯೋಧರೊಡಗೂಡಿ ಮುಂಡರಗಿ ಭೀಮರಾಯನು, ಸ್ವಾತಂತ್ರ್ಯದ ಕಿಡಿಯೊತ್ತಿದ್ದ ಹಮ್ಮಿಗೆಯ ಧೀರ ಹಮ್ಮಿಗಿ ಕೆಂಚನಗೌಡ ದೇಸಾಯಿಯನ್ನು ಕೂಡಿಕೊಂಡು ಆಂಗ್ಲರ ವಿರುದ್ಧ ಹೋರಾಡಿದರು. ಈ ಸಮಯದಲ್ಲಿ ಕುಕನೂರಿನಲ್ಲಿದ್ದ ಮುಂಡರಗಿ ಭೀಮರಾಯ ಮಕ್ಕಳನ್ನು ಸೆರೆಹಿಡಿದ ಕೊಪ್ಪಳದ ಅಮಲ್ದಾರನು ಅವರನ್ನು ಕೊಪ್ಪಳದ ಕೋಟೆಯಲ್ಲಿ ಬಂಧಿಸಿಟ್ಟನು. ಇದನ್ನು ತಿಳಿದ ಮುಂಡರಗಿ ಭೀಮರಾಯ ಮತ್ತು ಹಮ್ಮಿಗಿ ಕೆಂಚನಗೌಡ ಯೋಧರೊಡಗೂಡಿ ಕೋಟೆಗೆ ನುಗ್ಗಿ, ಕಾವಲುಗಾರರನ್ನು ಥಳಿಸಿ, ಬೀಗ ಮುರಿದು ಮುಂಡರಗಿ ಭೀಮರಾಯನು ತನ್ನ ಮಕ್ಕಳನ್ನು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ಕಳುಹಿಸಿ, ಕೋಟೆಯ ಬಾಗಿಲನ್ನು ಭದ್ರವಾಗಿ ಮುಚ್ಚಿಸಿದನು.

ಸುದ್ದಿ ತಿಳಿದ ಬಳ್ಳಾರಿಯ ಜಿಲ್ಲಾ ಕಲೆಕ್ಟರ್ ಪೇಜಾ ಕಂಪನಿಯ ಮಹಾ ದಂಡನಾಯಕ ಹೂಜೆಸ್‌ನನ್ನು ಕಳುಹಿಸಿದನು. ಅವನು ಹೊಸಪೇಟೆ ಮಾರ್ಗವಾಗಿ ಕೊಪ್ಪಳಕ್ಕೆ ಬಂದು,

ಕೋಟೆಗಭಿಮುಖವಾಗಿ ತನ್ನ ಸೈನ್ಯದೊಂದಿಗೆ ಬಿಡಾರ ಹೂಡಿದನು. ಪಿಂಡಾರ ನಾಯಕನ ನೇತೃತ್ವದಲ್ಲಿ ಹೈದರಾಬಾದಿನಿಂದ ಬಂದ ನಿಜಾಮನ ಸೈನ್ಯವೂ ಕಂಪನಿಯ ಸೈನ್ಯದೊಂದಿಗೊಡಗೂಡಿತು. ಜೊತೆಗೆ ರಾಯಚೂರಿನ ಜಿಲ್ಲಾ ಕಲೆಕ್ಟರ್ ಆರ್.ಎನ್. ಟೇಲರ್‌ನ ಮುಂದಾಳತ್ವದಲ್ಲಿಯೂ ಒಂದು ಸೈನ್ಯವು ಬಂದು ಕಂಪನಿಯ ಸೈನ್ಯ ಕೂಡಿದಾಗ, ತ್ರಿಕೂಟ ಸೈನ್ಯ ಬಲಗೊಂಡಿತು. ಎಷ್ಟೇ ಪ್ರಯತ್ನಪಟ್ಟರೂ, ಯಾವುದೇ ತೋಪು, ಗುಂಡು, ತುಪಾಕಿಗೆ ಕೋಟೆ ಜಗ್ಗಲಿಲ್ಲ. ಸ್ಥಳೀಯರ ಹೇಳಿಕೆಯ ಸಹಾಯ ಪಡೆದ ಕಂಪನಿಯ ತ್ರಿಕೂಟ ಸೈನ್ಯವು ಮಣ್ಣಿನಿಂದ ಕಟ್ಟಿದಂತಹ ಕೋಟೆಯ ಒಂದು ಭಾಗಕ್ಕೆ ಗುರಿಯಾಗಿಟ್ಟು ದಾಳಿ ಮಾಡಿದಾಗ ಕೋಟೆ ಅದುರಿ, ವೈರಿಗಳು ಒಳನುಗಿದ್ದರು. ಒಳಗಿನ ಯೋಧರೂ ಧೃತಿಗೆಡದೇ ಕೋಟೆಯ ಬಾಗಿಲನ್ನು ತೆರೆದು ಹುಲಿಗಳಂತೆ ಕಾದಾಡಿ ಶತ್ರುಗಳ ರುಂಡ ಚೆಂಡಾಡಿದರು. ತ್ರಿಕೂಟ ಬಲಾಢ್ಯ ಸೈನ್ಯದ ಸಂಖ್ಯೆ ಒಂದು ಭಾಗದಷ್ಟೂ ಇರದ ಮುಂಡರಗಿ ಭೀಮರಾಯ ಮತ್ತು ಹಮ್ಮಿಗೆ ಕೆಂಚನಗೌಡನ ಸೈನ್ಯ ವೀರತನದಿಂದ ಕಾದಾಡಿತು. ಆದರೆ ೩೦-೦೫-೧೮೫೮ ರಲ್ಲಿ ಬ್ರಿಟೀಷರು ಮುಂಡರಗಿ ಭೀಮರಾಯ ಮತ್ತು ಹಮ್ಮಿಗೆ ಕೆಂಚನಗೌಡರನ್ನು ಸಾಯಿಸುವದರ ಮೂಲಕ ಬ್ರಿಟೀಷರು ಈ ಬಂಡಾಯವನ್ನು ಹತ್ತಿಕ್ಕಿ ಸ್ಥಳೀಯ ಹೋರಾಟಗಾರರನ್ನು ಬಗ್ಗುಬಡಿದರು. ಕೊಪ್ಪಳ ಕೋಟೆ ಮತ್ತೆ ಬ್ರಿಟೀಷರ ಸಹಾಯದಿಂದ ಹೈದರಾಬಾದ ನಿಜಾಮನ ಕೈಗೆ ಸಿಕ್ಕಿತು.

''ಅಂದಿನ ನ್ಯಾಯಾಲಯದ ನ್ಯಾಯಾಧೀಶರು ಆಂಗ್ಲರೇ ಇದ್ದುದರಿಂದ ಕಂಪನಿಗನುಕೂಲವಾಗುವಂತೆ ತೀರ್ಪು ನೀಡಿದರು. ಕಠಿಣ ಶಿಕ್ಷೆಗೊಳಗಾದವರನ್ನು ಕಂಪನಿ ಸರಕಾರ ರಾಯಚೂರು ಕಾರಾಗೃಹಕ್ಕೆ ಕಳುಹಿಸಿತು. ಕೆಲವರನ್ನು ತಮ್ಮ ಪ್ಲಟೂನಿನ ಮುಂಭಾಗದ ಬಯಲಿನಲ್ಲಿ ಗುಂಡಿಟ್ಟು ಕೊಂದಿತು. ಓರ್ವನನ್ನು ನೇಣು ಹಾಕಿತು. ಯೋಧರ ಆಸ್ತಿಯನ್ನು ಕಂಪನಿ ತನ್ನ ಸ್ವಾಧೀನ ಪಡಿಸಿಕೊಂಡಿತು. ಊರಿಗೆ ಊರೇ ಕಣ್ಣೀರಿಟ್ಟಿತು''[೧೨].

ಹೈದರಾಬಾದ ಸರಕಾರದ ಪ್ರಧಾನಿ ಮೀರ ತುರಾಬ ಅಲಿಖಾನನ ಸಹಾಯದಿಂದ ಬ್ರಿಟೀಷರು ದಕ್ಷಿಣ ಭಾರತದಲ್ಲಿ ನೆಲೆಯೂರಲು ಸಾಧ್ಯವಾಯಿತಾದ್ದರಿಂದ, ಇಂಗ್ಲೆಂಡ್ ರಾಣಿ ಕಂಪನಿ ದಂಡನಾಯಕ ಹಿಲ್‌ನ ಮುಖಾಂತರ ಧನ್ಯವಾದಗಳನ್ನು ಕಳುಹಿಸಿ, ನಿಜಾಮನು ಕಂಪನಿಗೆ ಕೊಡಬೇಕಾಗಿದ್ದ ಐವತ್ತು ಲಕ್ಷ ರೂ.ಗಳನ್ನು ಮನ್ನಾ ಮಾಡಿದಳು. ಕ್ರಿ.ಶ. ೧೮೫೯ ರಲ್ಲಿ ಆದ ಒಪ್ಪಂದದ ಪ್ರಕಾರ ನಿಜಾಮನಿಗೆ ದೊಅಬ್ ಪ್ರದೇಶವನ್ನು ಬಿಟ್ಟುಕೊಡಲಾಯಿತು. ದೊಅಬ್ ಎಂದರೆ ಎರಡು ನದಿಗಳ ನಡುವಿನ ಪ್ರದೇಶ ಎಂದರ್ಥ. ಅಂದರೆ ಕೃಷ್ಣಾ ಮತ್ತು ತುಂಗಭದ್ರ ನಡುವಿನ ಪ್ರದೇಶವನ್ನು ದೊರೆ ನಿಜಾಮನಿಗೆ ಬಿಟ್ಟುಕೊಡಲಾಯಿತು. ಇದರಿಂದ ಸಂಪ್ರೀತನಾದ ನಿಜಾಮನು ತನ್ನ ಪ್ರಧಾನಿ ಅಲಿಖಾನನಿಗೆ 'ನವಾಬ' ಎಂಬ ಬಿರುದು ಕೊಟ್ಟು, ಈತನಿಗೆ ಕ್ರಿ.ಶ. ೧೮೬೧ ರಲ್ಲಿ ರಾಯಚೂರು ಜಿಲ್ಲೆಯ ಕೊಪ್ಪಳ ಮತ್ತು ಯಲಬುರ್ಗಾ ತಾಲೂಕುಗಳನ್ನು ಜಹಗೀರ ಹಾಕಿಕೊಟ್ಟನು. ಸರ್ ಸಾಲಾರಜಂಗನು ಕೊಪ್ಪಳ ಮತ್ತು

ಯಲಬುರ್ಗಾ ತಾಲೂಕುಗಳನ್ನು ಸೇರಿಸಿ, ಕೊಪ್ಪಳ ಜಿಲ್ಲೆ ರಚಿಸಿ, ಕೊಪ್ಪಳವನ್ನೇ ಈ ಜಿಲ್ಲೆಯ ಮುಖ್ಯ ಸ್ಥಳವಾಗಿಸಿದನು. ಮುಂದೆ ಕೊಪ್ಪಳ ೧೮೬೧ ರಿಂದ ೧೯೪೭ ರ ವರೆಗೆ ಸರ್ ಸಾಲಾರಜಂಗನ ಕೊಪ್ಪಳ ಜಹಗೀರ ಆಡಳಿತದ ಮುಖ್ಯ ಸ್ಥಳವಾಗಿ, ಪ್ರಮುಖ ಕೇಂದ್ರವಾಗಿ ನಡೆದು ಬಂದಿತು. ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೂ ಸಾಲಾರಜಂಗನ ಅಧಿಪತ್ಯದಲ್ಲಿಯೇ ಕೊಪ್ಪಳ ಮುಂದುವರಿಯಿತು.

ಸಾಮಾನ್ಯವಾಗಿ ಭಾರತಕ್ಕೆ ಸ್ವಾತಂತ್ರ್ಯ ೧೯೪೭ ರ ಅಗಷ್ಟ೧೫ ಕ್ಕೆ ದೊರೆತಿದ್ದರೂ, ವಾಸ್ತವವಾಗಿ ಈ ಪ್ರದೇಶದ ಜನ ಸ್ವಾತಂತ್ರ್ಯ ಪಡೆದುಕೊಂಡದ್ದು ೧೯೪೮ ರ ಸೆಪ್ಟೆಂಬರ್ ೧೭ ರಂದು. ಭಾರತದ ಒಕ್ಕೂಟಕ್ಕೆ ಸೇರಲೊಪ್ಪದ ನಿಜಾಮನನ್ನು ಸರದಾರ ವಲ್ಲಭಬಾಯಿ ಪಟೇಲ್ ಮಣಿಸಿ, ಈ ಪ್ರದೇಶವನ್ನು ಭಾರತಕ್ಕೆ ಸೇರಿಸುವವರೆಗೆ ಈ ಪ್ರದೇಶದ ಜನ ಮತ್ತೊಂದು ವರ್ಷ ಕಾಯಬೇಕಾಯಿತು. ಈ ಸಂದರ್ಭದಲ್ಲಿ ಉಂಟಾದ ರಜಾಕಾರರ ಹಾವಳಿ ಈ ಪ್ರದೇಶವನ್ನು ಅಲ್ಲೋಲ - ಕಲ್ಲೋಲ ಉಂಟು ಮಾಡಿತು. ಆ ಸಂದರ್ಭದಲ್ಲಿಯೂ ಮೂಡಿ ಬಂದ 'ರಜಾಕಾರರ ಹಾವಳಿಯ ಬಗೆಗಿನ ಲಾವಣಿ ಪದಗಳು' ಜನಮನ ಸೆಳೆಯುತ್ತವೆ.

ಅಹಿಂಸಾ ತತ್ವನಿಧಿ ಗಾಂಧೀಜಿ ನೇತೃತ್ವದಲ್ಲಿ ಸ್ವಾತಂತ್ರ್ಯ ಪಡೆದ ಭಾರತ ಉತ್ಸಾಹ, ಆನಂದ, ಸುಖ, ಸಂತೋಷ, ಸಡಗರದಲ್ಲಿದ್ದರೂ ನಾವು ಅಂದರೆ ಕೊಪ್ಪಳದ ಜನತೆ ಸ್ವಾತಂತ್ರ್ಯ ಹೊಂದಿರಲಿಲ್ಲ. ಏಕೆಂದರೆ 'ಒಕ್ಕೂಟ ಸೇರಿರಿ' ಎಂಬ ಧೋರಣೆಗೆ ಹೈದರಾಬಾದ ನಿಜಾಮ ಒಪ್ಪಲಿಲ್ಲ. ಆಗ ಭಾರತ ಸರಕಾರದ ನಿಯೋಜಿತ ಸೈನ್ಯ ಕೊಪ್ಪಳದ ರೈಲ್ವೆ ಪೋಲಿಸ್ ಸಿಬ್ಬಂದಿಯೊಂದಿಗೆ ಅಂದಿನ ತಾಲೂಕಾದಾರ (ಕಲೆಕ್ಟರ್) ಜನಾಬ ತಖಿ ಹುಸೇನ ಸಾಹೇಬರನ್ನು ಅವನ ನಿವಾಸದಲ್ಲಿ ಬಂಧಿಸಿದಾಗ, ದೂರಾಲೋಚನೆ, ಮುಂದಾಲೋಚನೆಯ ವ್ಯಕ್ತಿತ್ವವುಳ್ಳ ಇವು ಕೊಪ್ಪಳವನ್ನು ಭಾರತ ಸೈನ್ಯಕ್ಕೆ ಒಪ್ಪಿಸಿದಾಗ, ರಕ್ತಪಾತವಿಲ್ಲದೇ ಕೊಪ್ಪಳ ಭಾರತದ ಒಕ್ಕೂಟಕ್ಕೆ ಸೇರಿದಾಗ ಇಲ್ಲಿನ ಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರಿ ಸ್ವಾತಂತ್ರ್ಯದ ಕಹಳೆಯ ನಾದ ಮುಗಿಲು ಮುಟ್ಟಿತು.

ಕೊನೆಗೂ ಕೊಪ್ಪಳ, ಗುಲಬರ್ಗಾ, ರಾಯಚೂರು, ಬೀದರ್ ಪ್ರದೇಶಗಳನ್ನೊಳಗೊಂಡ ಹೈದರಾಬಾದ ಕರ್ನಾಟಕದ ವಿಮೋಚನೆಗಾಗಿ ಸರ್ದಾರ ವಲ್ಲಭಬಾಯಿ ಪಟೇಲ್ ಅವಿರತ ಹೋರಾಟ ಆರಂಭಿಸಿದರು. 'ಒಕ್ಕೂಟ ಸೇರಿರಿ' ಎಂದು ಎದ್ದ ಕೂಗಿಗೆ ಕೊಪ್ಪಳದವರು ಧ್ವನಿಗೂಡಿಸಿ ಹೈದರಾಬಾದ ಸರಕಾರದ ಭಾಗವಾಗಿದ್ದ ಹೈದರಾಬಾದ-ಕರ್ನಾಟಕದ ಸ್ಥಿತಿ ದಿನೇ ದಿನೇ ಹದಗೆಡುತ್ತಿರುವುದನ್ನು ಅರಿತ ಭಾರತ ಸರಕಾರ ೧೩-೦೯-೧೯೪೮ ಬೆಳಗಿನ ಜಾವ ಹೈದರಾಬಾದಿನ ಮೇಲೆ ಪೋಲೀಸ್ ಕಾರ್ಯಚರಣೆ ನಡೆಸಿತು.

ಭಾರತ ಸರಕಾರದಿಂದ ನಿಯೋಜಿತವಾದ ಭಾರತ ಸೈನ್ಯ, ಇದೇ ಸಮಯಕ್ಕೆ ಕೊಪ್ಪಳವನ್ನು ಸುತ್ತುವರಿದು, ಕೊಪ್ಪಳದ ರೇಲ್ವೆ ಪೋಲೀಸ್ ಸಿಬ್ಬಂದಿಯೊಂದಿಗೆ ಅಂದಿನ ತಾಲೂಕಾದಾರ (ಕಲೆಕ್ಟರ್)

ಜನಾಬ ತಖಿ ಹುಸೇನ ಸಾಹೇಬರನ್ನು ಅವನ ನಿವಾಸದಲ್ಲಿ ಬಂಧಿಸಿತು. ಮುಂದಾಲೋಚನೆಯುಳ್ಳ ಈ ತಾಲೂಕಾದಾರನು, ಕೊಪ್ಪಳವನ್ನು ಭಾರತ ಸೈನ್ಯಕ್ಕೆ ಒಪ್ಪಿಸಿ, ರಕ್ತಪಾತ ತಪ್ಪಿಸಿದನು. ಇದರ ಪರಿಣಾಮವಾಗಿ ಕೊಪ್ಪಳದಲ್ಲಿ ಅಂದು ಭಾರತದ ತ್ರಿವರ್ಣ ಧ್ವಜ ಹಾರಿತು.

ಸರದಾರ ವಲ್ಲಭಬಾಯಿ ಪಟೇಲ್‌ರ ಪ್ರಯತ್ನದ ಫಲದಿಂದಾಗಿ ೧೭-೦೯-೧೯೪೮ ರ ಬೆಳಗಿನ ಜಾವ ಹೈದರಾಬಾದಿನ ಮೇಲೆ ಪೋಲೀಸ್ ಕಾರ್ಯಾಚರಣೆ ನಡೆದು, ನಿಜಾಮನು ಸರ್ದಾರ ವಲ್ಲಭಬಾಯಿ ಪಟೇಲರಿಗೆ ಶರಣಾಗುವದರ ಮೂಲಕ ಭಾರತದ ಒಕ್ಕೂಟಕ್ಕೆ ಸೇರುವಂತಾಯಿತು.

"ಹೈದರಾಬಾದಿನಲ್ಲಿ ಕ್ರಿ.ಶ. ೧೯೫೦ ರಲ್ಲಿ ಹೊಣೆಗಾರ ಸರಕಾರ ಅಸ್ತಿತ್ವದಲ್ಲಿ ಬಂದಿತು. ಈ ಕೊಪ್ಪಳ, ಹೊಣೆಗಾರ ಸರಕಾರದಲ್ಲಿ ೧೯೫೬ ರ ವರೆಗೆ ಉಳಿಯಿತು. ಭಾಷಾವಾರು ಪ್ರಾಂತ ರಚನೆಯಾದ ನಂತರ ಹೈದ್ರಾಬಾದ ಕರ್ನಾಟಕ ಮೈಸೂರು ಸರಕಾರಕ್ಕೆ ಸೇರಿತು. ಇದು ೧೯೭೭ ಅಕ್ಟೋಬರವರೆಗೆ ಮೈಸೂರು ಸರಕಾರದಲ್ಲಿದ್ದು, ೧ ನವ್ಹಂಬರ್ ೧೯೭೩ ರಿಂದ ಅಖಂಡ ಕರ್ನಾಟಕದಲ್ಲಿ ಸೇರಿತು. ೧೯೫೬ ನವ್ಹೆಂಬರ್ ೧ ರಂದು ಹರಿದು ಹೋದ ಕನ್ನಡ ನಾಡು ಮತ್ತೆ ಒಂದುಗೂಡಿತು. ಇದರ ನವಿನೆನಪಿಗಾಗಿ ಕನ್ನಡ ನಾಡಿನ ಉದ್ದಗಲಕ್ಕೂ, ರಾಜ್ಯೋತ್ಸವ ಆಚರಿಸಲ್ಪಡುತ್ತಿದೆ"[೧೩].

ಭಾರತ ಸರಕಾರದ ಆದೇಶದಂತೆ ಇಲ್ಲಿನವರು ಭಾರತದ ಸ್ವಾತಂತ್ರ್ಯದ ಶತಮಾನೋತ್ಸವದ ಆಚರಣೆಯ ಸಂದರ್ಭದಲ್ಲಿ ಕ್ರಿ.ವ. 1949 ರಲ್ಲಿ ಕೊಪ್ಪಳದ ಮುಖ್ಯ ಬೀದಿ ಮತ್ತು ರಾಜ್ಯದ ಹೆದ್ದಾರಿ ಸಂಧಿಸುವ ಚೌಕದಲ್ಲಿ ಅಶೋಕ ಸ್ತಂಭ ನಿಲ್ಲಿಸಿ ಈ ವೃತ್ತಕ್ಕೆ ಅಶೋಕ ವೃತ್ತವೆಂದೂ ಹೆಸರಿಸಿ, ಸ್ವಾತಂತ್ರ್ಯ ಯೋಧ ಮುಂಡರಗಿ ಭೀಮರಾಯನ ಮತ್ತು ಹಮ್ಮಿಗಿ ದೇಸಾಯಿ ಕೆಂಚನಗೌಡ ಇವರ ವಂಶಸ್ಥರನ್ನು ಸನ್ಮಾನಿಸಿ ಗೌರವಿಸಿದರು.

ಅಂದಿನಿಂದ ಇಂದಿನವರೆಗಿನ ಕೊಪ್ಪಳದಲ್ಲಿ ಅನೇಕಾನೇಕ ಬದಲಾವಣೆಗಳು ಆಗಿವೆ. ರಾಮಾಯಣ, ಮಹಾಭಾರತದ ಕಾಲದ ಕೊಪ್ಪಳದಿಂದ ಹಿಡಿದು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಕೊಪ್ಪಳವು ಸಾಕಷ್ಟು ಬದಲಾವಣೆಯೊಂದಿಗೆ ಭೌಗೋಳಿಕವಾಗಿ, ಸಾಹಿತ್ಯಿಕವಾಗಿ, ಔದ್ಯೋಗಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ.

ಹೀಗೆ ವಿವಿಧ ರಾಜಮನೆತನಗಳ ಕೈಯಲ್ಲಿ ವಿವಿಧ ರೀತಿಯ ಐತಿಹಾಸಿಕತೆಯನ್ನು ಹೊಂದಿ ಕನ್ನಡ ನಾಡಿನ ಇತಿಹಾಸದಲ್ಲಿ ತನ್ನದೇ ವಿಶಿಷ್ಟ ರೀತಿಯ ಸಾಂಸ್ಕೃತಿಕ ಹಿನ್ನೆಲೆ, ಪರಿಸರ ಹೊಂದಿರುವ ಕೊಪ್ಪಳದಲ್ಲಿ ಮುಸ್ಲಿಂ ರಾಜಮನೆತನಗಳ ಪ್ರಭಾವದಿಂದಾಗಿಯೇ ಮೊಹರಂ ಪದಗಳು ಉದಯಿಸಲು ಕಾರಣವಾಯಿತು ಎನ್ನಬಹುದು.

ಹೈದರಾಬಾದ್ - ಕರ್ನಾಟಕದ ಭಾಗವಾಗಿರುವ ಕೊಪ್ಪಳ ಎಲ್ಲ ರಂಗಗಳಲ್ಲೂ ಹಿಂದುಳಿದ ಜಿಲ್ಲೆಯಾಗಿದ್ದು ಇದಕ್ಕೆ ಕಾರಣಗಳು ಹಲವು. ಕೊಪ್ಪಳಕ್ಕೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದಿನ

ಇತಿಹಾಸವಿದ್ದರೂ, ಕೆಲವು ಐತಿಹಾಸಿಕ ಘಟನೆಗಳಿಗೆ ಕಾರಣವಾಗಿರುವ, ಸಾಕ್ಷಿಯಾಗಿರುವ ಸ್ಥಳವಾಗಿದ್ದರೂ ಮಧ್ಯಯುಗದ ನಂತರ ಕೊಪ್ಪಳದ ಚಿತ್ರಣವೇ ಸಂಪೂರ್ಣ ಬದಲಾಯಿತು. ಇತಿಹಾಸದಲ್ಲಿ ಕಂಡು ಬರುವಂತೆ ಕೊಪ್ಪಳವು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ರಾಜರುಗಳ ಕೈಯಲ್ಲಿ ಆಡಳಿತ ಹೊಂದಿ, ಕಾಲಾನುಕ್ರಮದಲ್ಲಿ ಅನೇಕ ಹೆಸರುಗಳಿಂದ ಕರೆಸಿಕೊಂಡು, ಆಯಾ ಕಾಲಕ್ಕನುಗುಣವಾಗಿ ಮಾರ್ಪಾಡುಗಳನ್ನು ಹೊಂದುತ್ತಾ ಬಂದಿತು.

೧೯೫೬ ರಲ್ಲಿ ಭಾರತ ಒಕ್ಕೂಟಕ್ಕೆ ಸೇರಿದಾಗ ಕೊಪ್ಪಳವನ್ನು ತಾಲೂಕು ಎಂದು ಪರಿಗಣಿಸಿ ರಾಯಚೂರು ಜಿಲ್ಲೆಗೆ ಸೇರಿಸಲಾಗಿತ್ತು. ಮತ್ತೆ ಸರಿ ಸುಮಾರು ೪೦ ವರ್ಷಗಳ ತರುವಾಯ ಅಂದರೆ ೨೪-೦೮-೧೯೯೭ ರಲ್ಲಿ ಜೆ.ಎಚ್. ಪಟೇಲರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾಗ ಐತಿಹಾಸಿಕ ಪರಂಪರೆವುಳ್ಳ ಕೊಪ್ಪಳವನ್ನು ಜಿಲ್ಲಾ ಕೇಂದ್ರವಾಗಿ ಆದೇಶ ಹೊರಡಿಸಿದರು. ಕೊಪ್ಪಳ, ಯಲಬುರ್ಗಾ, ಕುಷ್ಟಗಿ ಮತ್ತು ಗಂಗಾವತಿ ತಾಲೂಕುಗಳನ್ನು ಒಳಗೊಂಡ ಕೊಪ್ಪಳ ಜಿಲ್ಲೆ ೧೯೯೭ ರಲ್ಲಿ ಹೊಸದಾಗಿ ರಚಿತವಾದ ಜಿಲ್ಲೆಗಳಲ್ಲಿ ಒಂದಾಗಿ ಕರ್ನಾಟಕದ ನಕಾಶೆಯಲ್ಲಿ ಜಿಲ್ಲಾ ಕೇಂದ್ರದ ಸ್ಥಾನ ಪಡೆಯಿತು. ಕೊಪ್ಪಳ ಜಿಲ್ಲೆಗಾಗಿ ಇಲ್ಲಿನ ಹೋರಾಟಗಾರರು, ಕವಿಗಳು, ಸಾಹಿತಿಗಳು, ವರ್ತಕರು, ವಕೀಲರು, ನೌಕರರು, ಹಮಾಲರು, ಮಹಿಳೆಯರು, ಚಿಕ್ಕಮಕ್ಕಳೆನ್ನದೇ ಕೊಪ್ಪಳದ ಎಲ್ಲ ನಾಗರಿಕರೂ ಹೋರಾಟ ನಡೆಸಿದರು. ಏಕೆಂದರೆ ರಾಯಚೂರು ಕೊಪ್ಪಳಕ್ಕೆ ಸುಮಾರು ೩೦೦ ಕಿ.ಮೀ. ಅಂತರದಲ್ಲಿದ್ದು ಪ್ರತಿಯೊಂದು ಕೆಲಸಕ್ಕೂ ರಾಯಚೂರಿನ ಕಛೇರಿಗಳಿಗೆ ಹೋಗುವ ಅವಶ್ಯಕತೆ ಎದುರಾಗಿತ್ತು. ಇದು ತುಂಬಾ ವೆಚ್ಚದಾಯಕ ಮತ್ತು ಸಮಯದ ಪೋಲಿಗೆ ಕಾರಣವಾಗಿತ್ತು. ಅದೂ ಅಲ್ಲದೇ ಈ ಹಿಂದೆ ಹೈದರಾಬಾದ ನಿಜಾಮನ ಆಳ್ವಿಕೆಯ ಕಾಲದಲ್ಲಿ ಕೊಪ್ಪಳವೂ ಒಂದು ಜಿಲ್ಲೆಯಾಗಿದ್ದು, ಕೊಪ್ಪಳ ಜಿಲ್ಲೆಯಾಗುವ ಎಲ್ಲ ಅರ್ಹತೆಗಳನ್ನೂ ಹೊಂದಿದ ಸಮರ್ಥ ಊರಾಗಿತ್ತು. ಈ ಎಲ್ಲ ಸಮಸ್ಯೆ ಮತ್ತು ಸಮರ್ಥತೆಯ ಕಾರಣದಿಂದ ಕೊಪ್ಪಳ ಕೊನೆಗೂ ಹೋರಾಟದ ಫಲದಿಂದ ೧೯೯೭ ರಲ್ಲಿ ಮತ್ತೆ ಜಿಲ್ಲೆಯಾಗಿ ರಚನೆಯಾಯಿತು. ಹೈದರಾಬಾದ ಕರ್ನಾಟಕದ ಪ್ರದೇಶವಾಗಿರುವ ಕೊಪ್ಪಳ ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಹಿಂದುಳಿದಿದ್ದರೂ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಕರ್ನಾಟಕ ರಾಜ್ಯಕ್ಕೆ, ಭಾರತ ದೇಶಕ್ಕೆ ತನ್ನದೇ ಆದ ಅತ್ಯುನ್ನತ ಕೊಡುಗೆಯನ್ನು ನೀಡಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಕೊಪ್ಪಳ ಜಿಲ್ಲೆಯಾದ ನಂತರ ಕೈಗಾರಿಕಾ ರಂಗದಲ್ಲಿ ಭಾರೀ ಖ್ಯಾತಿಯನ್ನು ಪಡೆಯುತ್ತಿದೆ. ಕೊಪ್ಪಳ ಜಿಲ್ಲೆಯಲ್ಲಿ ಈಗ ಬೃಹತ್ ಪ್ರಮಾಣದ ಕೈಗಾರಿಕೆಗಳು ತಲೆ ಎತ್ತಿ ನಿಂತಿದ್ದು ವಿಖ್ಯಾತ ಕೈಗಾರಿಕಾ ಸ್ಥಳಗಳಲ್ಲಿ ತನ್ನ ಸ್ಥಾನ ಕಂಡು ಕೊಂಡಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಇತ್ತೀಚಿಗೆ ಅಲ್ಪ-ಸ್ವಲ್ಪ ಪ್ರಮಾಣದಲ್ಲಿ ಬದಲಾವಣೆ ಕಂಡುಕೊಳ್ಳುತ್ತಿದ್ದರೂ, ಇತರ ಪ್ರದೇಶಗಳಿಗೆ ಹೋಲಿಸಿದರೆ ಕೊಪ್ಪಳವು ಈಗಲೂ ಹಿಂದೆಯೇ ಉಳಿದಿದೆ ಎಂದು ಹೇಳಬಹುದು.

ರಾಮಾಯಣ, ಮಹಾಭಾರತ ಕಾಲದಿಂದ ಹಿಡಿದು ಇಂದಿನ ಕಂಪ್ಯೂಟರ್ ಯುಗದವರೆಗಿನ ಕೊಪ್ಪಳದ ಭೌಗೋಳಿಕ ಪರಿಸರ, ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಲಾಗಿ ಬದಲಾವಣೆ ಜಗದ ನಿಯಮ ಎಂಬಂತೆ ಸಾಕಷ್ಟು ರೀತಿಯಲ್ಲಿ ಬದಲಾವಣೆಯನ್ನು ಕಂಡಿದೆ.

ಸುತ್ತಲೂ ಕಲ್ಲು-ಗುಡ್ಡಗಳನ್ನು ಹೊಂದಿರುವ ಕೊಪ್ಪಳ ಒಂದು ತಗ್ಗು ಪ್ರದೇಶದಂತೆ ಭೌಗೋಳಿಕ ರೂಪದಲ್ಲಿದೆ. ಆರ್ಥಿಕವಾಗಿ ಹೈದರಾಬಾದ-ಕರ್ನಾಟಕವೇ ಹಿಂದುಳಿದಿದ್ದು ಕೊಪ್ಪಳ ಅದರ ಭಾಗತ್ವವನ್ನು ಪಡೆದಿದೆ. ಸಾಮಾಜಿಕವಾಗಿಯೂ ಕೊಪ್ಪಳ ಹೇಳಿಕೊಳ್ಳುವಷ್ಟು ಅಭಿವೃದ್ಧಿಯಾಗಿಲ್ಲ. ಸಾಹಿತ್ಯಕವಾಗಿ ಕೊಪ್ಪಳದ ಖ್ಯಾತಿ ಬಹಳಷ್ಟು ಹಿಂದಿನ ಕಾಲದಿಂದಲೂ ಉನ್ನತ ಮಟ್ಟದಲ್ಲಿದೆ. ಇನ್ನು ಸಾಂಸ್ಕೃತಿಕ ಪರಂಪರೆಯಲ್ಲಿ ಕೊಪ್ಪಳದ ಹೆಸರು ಹಿಂದುಳಿದಿಲ್ಲ.

ಒಟ್ಟಾರೆಯಾಗಿ ನನ್ನ ಸಂಶೋಧನಾ ವ್ಯಾಪ್ತಿಗೆ ಅನುಗುಣವಾಗಿ ಕೊಪ್ಪಳದ ಭೌಗೋಳಿಕ ಪರಿಸರದ ಅಧ್ಯಯನದೊಂದಿಗೆ, ಸಾಹಿತ್ಯಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಸಂಶೋಧನಾತ್ಮಕ ವಿಶ್ಲೇಷಣೆ ಮಾಡಿದ್ದೇನೆ.

ಅಡಿಟಿಪ್ಪಣಿಗಳು :

೧. ಡಾ. ಬಿ.ವಿ. ಶಿರೂರ - ಕೊಪ್ಪಳ ಜಿಲ್ಲಾದರ್ಶನ, ಪುಟ ಸಂಖ್ಯೆ - ೯

೨. ಡಾ. ಬಿ.ವಿ. ಶಿರೂರ - ತಿರುಳ್ಗನ್ನಡ -

ಅಧ್ಯಾಯ : ೨, ಕೊಪಣ ನಗರ : ಒಂದು ಐತಿಹಾಸಿಕ ಕೇಂದ್ರ, ಪುಟ ಸಂಖ್ಯೆ - ೪

೩. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೨

೪. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೧೯

೫. ಡಾ. ಬಿ.ವಿ. ಶಿರೂರ - ತಿರುಳ್ಗನ್ನಡ -

ಅಧ್ಯಾಯ : ೨, ಕೊಪಣ ನಗರ : ಒಂದು ಐತಿಹಾಸಿಕ ಕೇಂದ್ರ, ಪುಟ ಸಂಖ್ಯೆ - ೪

೬. ಡಾ. ಬಿ.ವಿ. ಶಿರೂರ - ತಿರುಳ್ಗನ್ನಡ -

ಅಧ್ಯಾಯ : ೨, ಕೊಪಣ ನಗರ : ಒಂದು ಐತಿಹಾಸಿಕ ಕೇಂದ್ರ, ಪುಟ ಸಂಖ್ಯೆ - ೬

೭. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೨೨

೮. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೨೩

೯. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೨೪

೧೦. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೨೬

೧೧. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೨೮

೧೨. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೩೦

೧೩. ಬಿ.ಸಿ. ಪಾಟೀಲ - ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ ಸಂಖ್ಯೆ - ೩೧

ಅಧ್ಯಾಯ - ೩

ಮೊಹರಂ ಹಬ್ಬದ ಹಿನ್ನೆಲೆ, ರಿವಾಯತ್ ಪದಗಳು ಮತ್ತು ಕುದರಿಮೋತಿ ಮೊಹರಂ ಆಚರಣೆ

ಅಧ್ಯಾಯ - ೩ : ಮೊಹರಂ ಹಬ್ಬದ ಹಿನ್ನೆಲೆ, ರಿವಾಯತ್ ಪದಗಳು ಮತ್ತು ಕುದರಿಮೋತಿ ಮೊಹರಂ ಆಚರಣೆ

''ಸಂಸ್ಕೃತದ ಪರ್ವ ಶಬ್ದದ ತದ್ಭವ ಹಬ್ಬ, ಸಂಸ್ಕೃತದಲ್ಲಿ ಪರ್ವನ್ ಅಂದರೆ ಉತ್ಸವ ಎಂಬ ಅರ್ಥ. ನಿತ್ಯ ಜೀವನದ ಏಕತಾನತೆಗಿಂತ ಭಿನ್ನ ರೀತಿಯಲ್ಲಿ ಸಂಭ್ರಮ, ಸಂತೋಷವನ್ನು ತರುವ ಹಬ್ಬಗಳು ಮನಸ್ಸಿನ ಶುದ್ಧಿಗೆ ಪೂರಕವೂ ಆಗಿವೆ. ಇಹದ ಸೌಖ್ಯ, ಪರ ಸಾಧನೆಯ ಜೊತೆಗೆ ಸೋದರತ್ವದ ಉದಾತ್ತ ಧ್ಯೇಯ, ಮುಸ್ಲಿಂ ಹಬ್ಬಗಳ ಆಚರಣೆಯ ಉದ್ದೇಶ''[೧]. ಮೊಹರಂ ಅಲ್ಲದೆ ರಂಜಾನ್ ಹಬ್ಬದಲ್ಲಿ ಹಿಂದೂಗಳು ಮುಸ್ಲಿಮ್‌ರಿಗೆ ಇಫ್ತಿಯಾರ್ ಊಟ ಕೊಡುತ್ತಾರೆ.

''ಮಹಮ್ಮದ್ ಪೈಗಂಬರ್‌ರು ಮೆಕ್ಕಾದಿಂದ ಮದಿನಾಕ್ಕೆ ಹೊರಟಿದ್ದು ಕ್ರಿ.ಶ. ೬೨೨ ರಲ್ಲಿ. ಅಂದಿನಿಂದ ಆರಂಭವಾದ ಹಿಜರಿಶಕೆಯ ಒಂದು ವರ್ಷದಲ್ಲಿ ಮೊಹರಂ, ಸಫರ್, ರಬೀವುಲ್ ಅವ್ವಲ್, ರಬಿಉಸ್ಸಾನಿ, ಜಮಾದಿ ಉಲ್ ಅವ್ವಲ್, ಜಮಾದಿ ಉಸ್ಸಾನಿ, ರಜ್ಜಬ್, ಶಬಾನ್, ರಮಜಾನ್, ಶವ್ವಾಲ್ ಜಿಲ್ಕಾದ್, ಜಿಲ್‌ಹಜ್ ಎಂಬ ಹನ್ನೆರಡು ತಿಂಗಳುಗಳಿದ್ದು, ಇವು ಚಾಂದ್ರಮಾನ ಮಾಸಗಳು''[೨]. ರಮ್‌ಜಾನ್, ಬಕ್ರೀದ್ ಇವು ಪ್ರಪಂಚದ ಎಲ್ಲ ಭಾಗಗಳಲ್ಲಿ ಆಚರಿಸಲ್ಪಡುವ ಮಹತ್ವದ ಹಬ್ಬಗಳಾಗಿವೆ. ಉಳಿದ ಹಬ್ಬಗಳು ಭಾರತದಲ್ಲಿ, ಭಾರತದ ವಿವಿಧ ರಾಜ್ಯಗಳಲ್ಲಿ, ವಿವಿಧ ಸ್ಥಳೀಯ ಸ್ಥಳಗಳಲ್ಲಿ ಆಚರಿಸುವ ಕೆಲವು ಹಬ್ಬಗಳಾಗಿವೆ. ಕರ್ನಾಟಕದಲ್ಲಿ ಆಚರಿಸಲಾಗುವ ಮಹತ್ವದ ಹಬ್ಬಗಳಲ್ಲಿ ರಂಜಾನ್ ಮತ್ತು ಬಕ್ರೀದ್ ಹಬ್ಬಗಳೂ ಸೇರಿವೆ.

ಉತ್ತರ ಕರ್ನಾಟಕದಲ್ಲಿ ಮೊಹರಂ ಹಬ್ಬದ ಆಚರಣೆಯು ಬಹು ಸಂಸ್ಕೃತಿಯ ಜನ ಆರಾಧಿಸುವ ವಿಶಿಷ್ಟ ಹಬ್ಬವಾಗಿದೆ. ಮುಸ್ಲಿಮರ ಹಿಜರಿ (ಶಕ) ವರ್ಷದಲ್ಲಿ ಹನ್ನೆರಡು ತಿಂಗಳುಗಳಿವೆ. ಅವುಗಳಲ್ಲಿ ಮೊಹರಂ ತಿಂಗಳು ಒಂದು. ಹಿಜರಿ ಸನ್ ೬೧ ನೇಯ ಮೊಹರಂ ತಿಂಗಳು ೧೦ ನೇ ದಿನಾಂಕ ಹಜರತ್ ಇಮಾಮ್ ಹುಸೇನ್ ಮತ್ತು ಅನುಯಾಯಿಗಳು ಕರ್ಬಲಾ ಮೈದಾನದ ಮರುಭೂಮಿಯಲ್ಲಿ ಹುತಾತ್ಮರಾದರು. ಈ ಮೊಹರಂ ಹಬ್ಬವು ಮಹಮ್ಮದ್ ಪೈಗಂಬರ್‌ರವರ ವಂಶಸ್ಥರ ಬದುಕಿನಲ್ಲಿ ಸಂಭವಿಸಿರಬಹುದಾದ ಘಟನೆಗಳಲ್ಲಿ ಒಂದಾಗಿದೆ. ಈ ಕಾರಣಕ್ಕಾಗಿಯೇ ಮಹತ್ವವನ್ನು ಪಡೆದುಕೊಂಡಿದೆ.

''ಇಸ್ಲಾಮಿ ವರ್ಷದ ಮೊದಲ ತಿಂಗಳು ಮೊಹರಂ. ಇದೇ ತಿಂಗಳು ಹತ್ತರಂದು ಹಜರತ ಮಹಮ್ಮದ್ ಹುಸೇನರು ಹುತಾತ್ಮರಾದರು. ಅವರ ಸ್ಮರಣಾರ್ಥ ಬಳಕೆಗೆ ಬಂದ ಶೋಕ ಮೂಲವಾದ ಈ ಹಬ್ಬಕ್ಕೆ ಮೊಹರಂ ಎಂದು ಹೆಸರು. ಹಜರತ್ ಮಹಮ್ಮದ ಪೈಗಂಬರರ ನಂತರ ಅವರ ಅಳಿಯ ಹಜರತ್ ಅಲಿ (ಬೀಬಿ ಫಾತಿಮಾರ ಪತಿ) ನಾಲ್ಕನೆಯ ಖಲೀಫರಾದರು. ಅವರ ನಂತರ ಅವರ ಮಕ್ಕಳು ಖಲೀಫರಾಗಬೇಕಿತ್ತು, ಆದರೆ ದಮಾಸ್ಕಸ್‌ನಲ್ಲಿ ಮುಆವಿಯಾ ತಾನೇ ಸಾಮ್ರಾಜ್ಯದ ಖಲೀಫನೆಂದು ಸಾರಿಕೊಂಡು ಬಲವಂತವಾಗಿ ತನ್ನ ಧರ್ಮ ಪಾಲಿಸುವಂತೆ ಒತ್ತಾಯಿಸಿದನು. ಇಷ್ಟೇ ಅಲ್ಲ, ತನ್ನ ನಂತರ ಮಗ 'ಏಜಿದ'ನಿಗೆ ಖಲೀಫ ಪಟ್ಟ ಒಪ್ಪಿಸಿದನು. ಇದನ್ನು ಹಜರತ್ ಅಲಿಯವರ ಪುತ್ರ ಹಜರತ್ ಹುಸೇನರು ಪ್ರತಿಭಟಿಸಿದರು. ಅವರ ಕ್ರಾಂತಿಗೆ ಕೆಲವು ಅರಬರ ರಹಸ್ಯ ಬೆಂಬಲವೂ ವ್ಯಕ್ತವಾಯಿತು.

ಹಜರತ್ ಹುಸೇನರು ತಮ್ಮ ಸೈನ್ಯದೊಂದಿಗೆ ನೆರವು ಪಡೆಯಲು ಹೋಗುತ್ತಿರುವಂತೆಯೇ ಏಜಿದನ ಸೈನ್ಯ ತಡೆಗಟ್ಟಿ ಕದನ ಆರಂಭವಾಯಿತು. ಕರ್ಬಲಾ ರಣಭೂಮಿಯಲ್ಲಿ ನಡೆದ ಈ ಧರ್ಮಯುದ್ಧದಲ್ಲಿ ಹಜರತ್ ಹುಸೇನರ ಬಂಧುಮಿತ್ರರು, ಅನುಯಾಯಿಗಳು, ಮಕ್ಕಳು ಹತರಾದರು. ಕೊನೆಗೆ ನೀರು ಸಹ ಸಿಗದಂತೆ ಮಾಡಿ, ಮೋಸತನದಿಂದ ಹಜರತ್ ಹುಸೇನರನ್ನು ಮೊಹರಂ ಹತ್ತನೆಯ ದಿನದಂದು ಕೊಲ್ಲಲಾಯಿತು. ನಂತರ ಮಕ್ಕಾ ಮದೀನಾದ ಜನ ಏಜಿದನ ವಿರುದ್ಧ ದಂಗೆಯೆದ್ದು ಸೇಡು ತೀರಿಸಿಕೊಂಡರು. ಏಜಿದನ ಮರಣದ ನಂತರ ಬನಿಉಯ್ಯಮರು ಖಲೀಫರಾದರು. ಇದು ಕರ್ಬಲಾ ಕಾಳಗದ ವೃತ್ತಾಂತ'[೩].

ಹಜರತ್ ಇಮಾಮ್ ಹುಸೇನರ ವೀರಮರಣದ ಅನೇಕ ವರ್ಷಗಳ ನಂತರ ಹಜರತ್ ಅಲಿಯವರ ಅನುಯಾಯಿಗಳಾದ 'ಷಿಯಾ' ಮುಸ್ಲಿಮರು ಕರ್ಬಲಾ ಕದನದ ನೆನಪಿಗಾಗಿ ಕೊಟ ಕೊಡುವುದಕ್ಕೆ ಆರಂಭಿಸಿದರು. ಸತ್ಯ, ಧರ್ಮ, ನ್ಯಾಯಕ್ಕಾಗಿ ಹುತಾತ್ಮರಾದ ಹಜರತ್ ಹುಸೇನರ ಆತ್ಮಕ್ಕೆ ಶಾಂತಿಕೋರಿ ಉಪವಾಸ, ಕುರ್‌ಆನ್ ಪಠಣ, ದಾನ ಮಾಡುವ ಕ್ರಿಯೆಗಳೊಂದಿಗೆ ಆರಂಭವಾದ ಶೋಕಸ್ಥಾಯಿಯಾದ ಈ ಆಚರಣೆ, ತೈಮೂರಲಂಗನ ಕಾಲಕ್ಕೆ (೧೩೩೬-೧೪೦೫) ಭಾರತಕ್ಕೆ ಪ್ರವೇಶ ಮಾಡಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ದಕ್ಷಿಣ ಭಾರತದಲ್ಲಿ ಬಹಮನಿ ಸುಲ್ತಾನರು, ಆದಿಲ್ ಶಾಹಿಗಳು, ಮೊಹರಂ ಆಚರಿಸುತ್ತಿದ್ದರು. ಕುತುಬ್‌ಶಾಹಿಗಳು (೧೫೫೦-೧೬೭೨) ಹೈದರಾಬಾದಿನಲ್ಲಿ ಆಲಂ (ಪಂಜಾ) ಇಡುವ ಪದ್ಧತಿಯನ್ನು ಆರಂಭಿಸಿದರು. ನಂತರ ಸಾಮ್ರಾಟ್ ಅಕಬರನ ಕಾಲಕ್ಕೆ ಮೊಹರಂ, ಸಂಭ್ರಮ, ಸಡಗರದಿಂದ ಆಚರಿಸುವ ರಾಷ್ಟ್ರೀಯ ಹಬ್ಬವಾಗಿ ಪ್ರಚಲಿತವಾಯಿತು. ಟಿಪ್ಪುಸುಲ್ತಾನ ಇದು ಸೂತಕದ ಆಚರಣೆ ಎಂದು ಹೇಳಿದರೂ, ಆತನ ಬಗ್ಗೆ ಭಿನ್ನಾಭಿಪ್ರಾಯ ಮೂಡಿಸುವ ಉದ್ದೇಶದಿಂದ ಬ್ರಿಟೀಷರು ಈ ಹಬ್ಬದ ಅದ್ದೂರಿಯ ಆಚರಣೆಗೆ ವ್ಯವಸ್ಥೆ ಮಾಡಿಕೊಟ್ಟರು. ಹೀಗಾಗಿ ದುಃಖ ಮೂಲ ಮರೆಯಾಗಿ ಸಂಭ್ರಮದ, ಹಿಂದೂ - ಮುಸ್ಲಿಮರ ಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸುವ ಹಬ್ಬವಾಗಿ ರೂಢಿಯಲ್ಲಿ ಉಳಿಯಿತು. ಸುನ್ನಿ ಪಂಥ, ಮೊಹರಂ ಆಚರಣೆ ಗೈರ್ ಇಸ್ಲಾಮಿ ಎಂದು ನಿಷೇಧಿಸುತ್ತಿದೆಯಾದರೂ, ಕರ್ನಾಟಕದಲ್ಲಿ ಷಿಯಾ-ಸುನ್ನಿ ಪಂಥ ಹಾಗೂ ಮತಭೇದವಿಲ್ಲದೇ ಒಟ್ಟು ಜನಸಮುದಾಯದ ಆಚರಣೆಯಾಗಿ ನಡೆಯುತ್ತಲಿದೆ. ಗ್ರಾಮಾಂತರ, ಪಟ್ಟಣ ಹಾಗೂ ನಗರ ಪ್ರದೇಶಗಳೆಲ್ಲೆಡೆ ಹಿಂದೂ-ಮುಸ್ಲಿಂ ಭಾವೈಕ್ಯದ ಪ್ರತೀಕವಾಗಿ ಜಾನಪದ ಹಬ್ಬವಾಗಿ ಮೊಹರಂ ತನ್ನ ಮಹತ್ವವನ್ನು ಇಂದಿಗೂ ಉಳಿಸಿಕೊಂಡಿರುವುದು ವಿಶೇಷವಾದ ಸಂಗತಿಯಾಗಿದೆ.

ಇಂತಹ ಐತಿಹಾಸಿಕ ಮಹತ್ವವುಳ್ಳ ಮೊಹರಂ ಹಬ್ಬದ ಹಿನ್ನೆಲೆಯೂ ವಿಸ್ತಾರವಾಗಿದ್ದು ಆ ಬಗ್ಗೆ ಮುಂದೆ ವಿವರಣೆ ಕೊಡಲಾಗಿದೆ. ಒಟ್ಟಿನಲ್ಲಿ ಈ ಮೊಹರಂ ಹಬ್ಬದ ಆಚರಣೆ ಭಾವೈಕ್ಯದ ಬೆಸುಗೆಗೆ ಕಾರಣವಾಗಿದೆ ಜೊತೆಗೆ ಭಿನ್ನ ಸಂಸ್ಕೃತಿಗಳ ಬೆಸುಗೆ, ಮಿಶ್ರಣದಿಂದ ಕೋಮು ಸೌಹಾರ್ದತೆ ಹೆಚ್ಚಿ, ಮತೀಯ ಗಲಭೆಗಳು ತಿಳಿಯಾಗಿ, ಭಿನ್ನ ಭಿನ್ನ ಕೋಮುಗಳು, ಮತೀಯ ಜನಾಂಗಗಳು ಏಕತೆಯಿಂದ ಬದುಕು ಸಾಗಿಸಲು ಕಾರಣವಾಗಿದೆ. ಇಂತಹ ಐತಿಹಾಸಿಕ ಹಿನ್ನೆಲೆಯುಳ್ಳ ಜಾನಪದ ಹಬ್ಬ ಮೊಹರಂನ ಆಚರಣೆ ವಿಶಿಷ್ಟವಾದುದಾಗಿದೆ.

ಮೊಹರಂ ಹಬ್ಬದ ಹಿನ್ನೆಲೆ :

"ಹಜರತ್ ಮಹಮ್ಮದ್ ಪೈಗಂಬರ್‌ರವರು ಇಸ್ಲಾಂ ಪ್ರಜಾಪ್ರಭುತ್ವವನ್ನು ಸ್ಥಾಪನೆ ಮಾಡಿದರು. ಅವರ ಮರಣದ ನಂತರ ಖಲೀಫರಾಗಿ ಹಜರತ್ ಅಬೂಬಕರ್ ಸಿದ್ದಿಖ್ ಕ್ರಿ.ಶ. (೬೩೨-೬೩೪), ಹಜರತ್ ಉಮರ್ ಫಾರುಕ್ (೬೩೪-೬೪೪), ಹಜರತ್ ಉಸ್ಮಾನ್ ಘನಿ (೬೪೪-೬೫೬) ಇವರು ಪ್ರಜಾಪ್ರಭುತ್ವವನ್ನು ನಡೆಸಿದರು. ನಾಲ್ಕನೆಯ ಖಲೀಫರಾಗಿ ಬನಿ ಹಾಸೀಮ್ ಪಂಗಡದವರು ಹಜರತ್ ಅಲಿ ಅವರನ್ನು ಚುನಾಯಿಸಲು ಸಿರಿಯಾದ ಪ್ರಾಂತೀಯ ಅಧಿಕಾರಿಯಾದ ಹಜರತ್ ಮು.ಆವಿಯಾ ವಿರೋಧಿಸಿದನು. ಎರಡು ಪಂಗಡಗಳ ನಡುವೆ ಘರ್ಷಣೆ ನಡೆದು ಒಪ್ಪಂದವಾಯಿತು. ಹಿಜರಿ ಶಕ ೬೬೧ ರಲ್ಲಿ ಹಜರತ್ ಮು.ಆವಿಯಾನ ಕುತಂತ್ರಕ್ಕೆ ಹಜರತ್ ಅಲಿ ಅವರು ಬಲಿಯಾಗಲು, ಅವರ ಜೇಷ್ಠ ಪುತ್ರ ಹಜರತ್ ಇಮಾಮ್ ಹಸನ್ ಜನಾಭಿಪ್ರಾಯ ಮನ್ನಿಸಿ ಖಲೀಫರಾದರು. ಮು.ಆವಿಯಾ ಸಾಯುವ ಮುನ್ನ ತನ್ನ ಮಗನಾದ ಯಾಜೀದ್‌ನನ್ನು ಖಲೀಫನೆಂದು ಘೋಷಿಸಿ ಕೊನೆಯುಸಿರೆಳೆದನು. ತಂದೆಯ ಮರಣಾನಂತರ ಯಾಜೀದ್ ಇಮಾಮ್ ಹಸನ್‌ರನ್ನು ಮೋಸದಿಂದ ವಿಷಪ್ರಾಶನ ಮಾಡಿಸಿ ಕೊಲ್ಲಿಸಿದನು. ಮತ್ತು ನಿಜವಾದ ಖಲೀಫನಾದ ತನಗೆ ಮುಸ್ಲಿಂ ಮುಖಂಡರು ಬಯ್ಯತ್ ಕೈಗೊಳ್ಳಬೇಕೆಂದು ಆಜ್ಞೆ ಹೊರಡಿಸಿದನು. ಖಲೀಫನಾಗಲು ಅನರ್ಹನಾದ ಯಾಜೀದ್‌ನನ್ನು ಧಿಕ್ಕರಿಸಿ ಅರೇಬಿಯಾ, ಇರಾಣ, ಇರಾಕ್, ಕೂಫಾ ಜನರು ಹಜರತ್ ಇಮಾಮ್ ಹುಸೇನರಿಗೆ ಬೆಂಬಲ ನೀಡಿದರು. ಕೂಫೆದ ಜನ ಯಾಜೀದ್‌ನ ದೌರ್ಜನ್ಯದಿಂದ ತಮ್ಮನ್ನು ಕಾಪಾಡಬೇಕೆಂದು ವಿನಂತಿಸಿ ಪತ್ರ ಬರೆದರು. ಧರ್ಮ ರಕ್ಷಣೆಗಾಗಿ, ಮಾನವ ಕಲ್ಯಾಣಕ್ಕಾಗಿ ಹಜರತ್ ಇಮಾಮ್ ಹುಸೇನ್‌ರು ಯಾಜೀದ್‌ನ ಕ್ರೌರ್ಯವನ್ನು ದುರಾಡಳಿತವನ್ನು ಪ್ರತಿಭಟಿಸಿದರು. ಹೆಂಡತಿ, ಮಕ್ಕಳು, ಹತ್ತಿರದ ಬಂಧು-ಬಳಗ ಮೊದಲಾದವರು ೭೨ ಜನರೊಂದಿಗೆ ಕೂಫೆಗೆ ಪ್ರಯಾಣ ಬೆಳೆಸಿದರು.

ಹಿಜರಿ ಸನ್ ೬೧ ರ ಮೊಹರಂ ತಿಂಗಳು (ಕ್ರಿ.ಶ. ೬೮೦) ಒಂದನೆಯ ದಿನಾಂಕದಂದು ಇರಾಕ್ ಪ್ರಾಂತ್ಯವನ್ನು ಪ್ರವೇಶಿಸಿದರು. ಐದನೆಯ ದಿನ ಕರ್ಬಲಾ ಭೂಮಿಗೆ ಬಂದಿಳಿದರು. ವೈರಿ ಸೈನಿಕರು ಜಲಾಶಯಗಳಿಗೆ ವಿಷ ಬೆರೆಸಿ ಅನ್ನ ನೀರಿಗೆ ತೊಂದರೆಯಾಗುವಂತೆ ವ್ಯವಸ್ಥೆ ಮಾಡಿದರು. ಹತ್ತು ದಿನಗಳವರೆಗೆ ಅನ್ನ ನೀರಿಲ್ಲದೇ ಹುಸೇನರ ಪರಿವಾರ ತತ್ತರಿಸಿತು. ಮೊಹರಂ ತಿಂಗಳ ಒಂಬತ್ತನೆಯ ದಿನ ಯಜೀದನ ಅಸಂಖ್ಯಾತ ಸೈನಿಕರಿಗೂ ಹುಸೇನರ ಅನುಯಾಯಿಗಳಿಗೂ ಘನಘೋರ ಯುದ್ಧ ನಡೆಯಿತು. ಕಾಸೀಮಧೂಲಾ, ಅಬ್ದುಲ್ಲಾ, ಅಬ್ಬಾಸ ಅಲಿ, ಹುಸೇನ ಅವರ ವೀರಾವೇಶದ ಹೋರಾಟಕ್ಕೆ ವೈರಿ ಸೈನಿಕರು ತತ್ತರಿಸಿದರು. ಯುದ್ಧ ನೀತಿಯನ್ನು ಗಾಳಿಗೆ ತೂರಿದರು. ಮೋಸದಿಂದ ಹುಸೇನರ ಅನುಯಾಯಿಗಳ ರುಂಡ ಚಂಡಾಡುತ್ತ ನಡೆದರು. ಕೊನೆಗುಳಿದ ಹಜರತ್ ಇಮಾಮ್ ಹುಸೇನರನ್ನು ಎದುರಿಸಿ ಯುದ್ಧ ಮಾಡಲು ಯಾರೊಬ್ಬರಿಗೂ ಧೈರ್ಯವಾಗಲಿಲ್ಲ. ಆಗ ವೈರಿ ಪಡೆಯ ನಾಯಕನಾದ 'ಶುಮರ' ಘಾತುಕ ರೀತಿಯಲ್ಲಿ ಆಕ್ರಮಣ ಮಾಡಲು ಆಜ್ಞೆ ಮಾಡಿದನು. 'ಜರಿವೀನ್ ಶರೀಕ್' ಎಂಬ ಕ್ರೂರಿಯೊಬ್ಬ ಹುಸೇನರ ಎಡಗೈಯನ್ನು ಖಡ್ಗದಿಂದ ಕತ್ತರಿಸಿ ಹಾಕಿದನು. 'ಸಿನಾನ್ ಬಿನ್ ಅನಾಸ್ ಬಿನ್ ಅಮ್ರ ಅಲ್

ನಾಖಿಯಾ' ಎಂಬುವನು ಹುಸೇನರನ್ನು ನೆಲಕ್ಕೆ ಕೆಡವಿದನು. ಆಗ 'ಖವಾಲಿ ಬಿನ್ ಯಜೀದ್ ಅಲ್ ಅಸ್ಬಾಹಿ' ಅವರ ತಲೆಯನ್ನು ಕತ್ತರಿಸಿ ಹಾಕಿದನು. ಮೋಸಕ್ಕೆ ಜಯವಾಯಿತು. ಧರ್ಮಕ್ಕೆ ಸೋಲಾಯಿತು. ಹಜರತ ಇಮಾಮ್ ಹುಸೇನರು ವೀರಮರಣ ಹೊಂದಿದರು.

ಈ ಘೋರ ದುರಂತ ಕೇಳಿದ ಮಕ್ಕಾ ಮದೀನಾ ಜನ, ಯಜೀದನ ಗುಂಪಿನ ಮೇಲೆ ದಂಗೆಯೆದ್ದು ಸೇಡು ತೀರಿಸಿಕೊಂಡರು. ಯಜೀದನ ಮರಣದ ಅನಂತರ ಬನೀ ಉಮೈಯರು, ಬನಿ ಹಾಷೀಮರು ಖಲೀಫರಾಗಿ ಆಳಿದರು. ಇದು ಕರ್ಬಲಾ ದುರಂತದ ಭೀಕರ ಕಥೆ.

ಹಜರತ್ ಅಲಿ ಅವರ ಅನುಯಾಯಿಗಳಾದ ಷಿಯಾ ಮುಸ್ಲಿಮರು, ಹಜರತ್ ಇಮಾಮ ಹುಸೇನರ ವೀರ ಮರಣದ ಕೆಲ ವರ್ಷಗಳ ಅನಂತರ ಅವರ ಗೌರವಾರ್ಥ ಸಭೆ ಸೇರಿ ಶೋಕ ವ್ಯಕ್ತಪಡಿಸಿದರು. ಕ್ರಿ.ಶ. ೯೬೨ ರಲ್ಲಿ 'ಬುವಯಹಿ' ಸಂತತಿಯ ಷಿಯಾ ಮುಸ್ಲಿಮರು ಹಜರತ್ ಅಲಿ ಅವರ ಸಂತತಿಗೆ ಭಕ್ತಿ, ಗೌರವ, ಆದರಗಳಿಂದ ನಡೆದುಕೊಂಡು ಕರ್ಬಲಾ ಕಾಳಗದ ನೆನಪಿಗಾಗಿ ಕೂಟ ಕೂಡುವುದಕ್ಕೆ ಪ್ರೋತ್ಸಾಹ ಕೊಟ್ಟರು. ಹುಸೇನರ ಆತ್ಮಕ್ಕೆ ಶಾಂತಿ ಸಿಗಲೆಂದು ಮೊಹರಂ ತಿಂಗಳಿನಲ್ಲಿ ಮುಸ್ಲಿಮರು ಉಪವಾಸ ವ್ರತ, ಕುರಾನ್ ಪಠಣ, ದಾನ-ಧರ್ಮ ಇತ್ಯಾದಿಗಳನ್ನು ಮಾಡುತ್ತಿದ್ದರು. ದುಃಖ ಮೂಲವಾದ ಇಂತಹ ಮೊಹರಂ ಆಚರಣೆ ಸುಪ್ರಸಿದ್ಧ ಬಾದಶಹಾ ಅಮೀರ ತೈಮೂರ ಲಂಗ (ಕ್ರಿ.ಶ. ೧೩೩೬-೧೪೦೫) ನ ಕಾಲದಲ್ಲಿ ಭಾರತವನ್ನು ಪ್ರವೇಶಿಸಿತು. 'ತಾಜಿಯಾ' ತಯಾರಿಸುವ ಪದ್ಧತಿಯನ್ನು ಭಾರತದಲ್ಲಿ ಆರಂಭಿಸಿದವನು ಇವನೇ. ಮೊಗಲರ ಆಳ್ವಿಕೆಯಲ್ಲಿ ಇದೇ ಪದ್ಧತಿ ಮುಂದುವರಿದು ಕಾಲ ಕಳೆದಂತೆ ಮೊಹರಂ ಆಚರಣೆಯಲ್ಲಿ ಭಾಗವಹಿಸುವ ಹಿಂದುಗಳು ಕೂಡ ತಾಜಿಯಾ ತಯಾರಿಸಿ ಮೆರವಣಿಗೆ ಮಾಡಲಾರಂಭಿಸಿದರು. ಶೀರಖಿ ರಾಜ ಸಂತತಿಯ ಸುಲ್ತಾನರು ಕ್ರಿ.ಶ. ೧೩೯೪-೧೪೭೬) ಮೊಹರಂ ಆಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಮತ್ತು ಸಕಲ ಮತ ಪಂಥಗಳಿಗೆ, ಮೊಹರಂ ಆಚರಣೆಗೆ ಧನ ಸಹಾಯ ನೀಡುತ್ತಿದ್ದರು'[೪].

ಈ ರೀತಿಯ ಧರ್ಮದ ಉಳಿವಿಗಾಗಿ ಹೋರಾಟ ನಡೆಸಿದ ಇಸ್ಲಾಂ ಧರ್ಮದ ಐತಿಹಾಸಿಕ ವ್ಯಕ್ತಿಗಳ, ಐತಿಹಾಸಿಕ ಕದನದ ನೆನಪಿಗಾಗಿ ಆಚರಿಸಲಾಗುವ ಈ ಮೊಹರಂ ಹಬ್ಬವು ಕೇವಲ ಮುಸ್ಲಿಮರ ಹಬ್ಬವಾಗಿ ಸೀಮಿತವಾಗದೇ, ಹಿಂದೂ ಮತ್ತಿತರ ಎಲ್ಲ ಜನಾಂಗದವರೂ ಸೇರಿ ಭಾವೈಕ್ಯತೆಯಿಂದ, ಕೋಮುಸೌಹಾರ್ದತೆಯಿಂದ ಕೂಡಿ ಆಚರಿಸಲಾಗುವ ಹಬ್ಬವಾಗಿದೆ. ಇಲ್ಲಿ ಜಾತಿ, ಭೇದ ಮರೆತು ಎಲ್ಲರೂ ತಮ್ಮ ತಮ್ಮ ಇಷ್ಟಾರ್ಥಗಳಿಗಾಗಿ, ಬೇಡಿಕೆಗಳಿಗಾಗಿ ಹರಕೆ ಹೊತ್ತುಕೊಳ್ಳುತ್ತಾರೆ. ಮೊಹರಂ ಹಬ್ಬದಲ್ಲಿ ಭಕ್ತಿ ಭಾವದಿಂದ ತನ್ಮಯತೆ ಮೆರೆಯುತ್ತಾರೆ. ಗ್ರಾಮೀಣ ಪ್ರದೇಶದಲ್ಲಂತೂ ಮೊಹರಂ ಹಬ್ಬದ ಆಚರಣೆ ಉತ್ಸಾಹ ಹೇಳತೀರದು. ಪಟ್ಟಣ, ನಗರ ಪ್ರದೇಶಗಳಲ್ಲಿ ಜನರು ಈ ಮೊಹರಂ ಹಬ್ಬದ ಆಚರಣೆಯ ಕಡೆಗೆ ಒಂದಿಷ್ಟು ಗಮನ ಕಡಿಮೆ ಮಾಡಿದ್ದಾರಾದರೂ, ಹಬ್ಬದ ಆಚರಣೆಗೆ ಯಾವುದೇ ಕುಂದು - ಕೊರತೆ, ಅಡಚಣೆ ಉಂಟಾಗಿಲ್ಲ.

ಈ ಐತಿಹಾಸಿಕ ಹಿನ್ನೆಲೆಯ ಮೊಹರಂ ಹಬ್ಬ ಇಂದು ಹೆಚ್ಚುತ್ತಿರುವ ಕೋಮು ಗಲಭೆ, ಮತೀಯ ಸಂಘರ್ಷಗಳು, ಗಲಾಟೆ, ಅಬ್ಬರಗಳ ಕಾಲದಲ್ಲಿಯೂ, ತನ್ನ ಮಹತ್ವ ಕಳೆದುಕೊಂಡಿಲ್ಲ. ಬದಲಾಗಿ ಮತೀಯ ಸಾಮರಸ್ಯ, ಕೋಮು ಸೌಹಾರ್ದತೆಯನ್ನು ಬೆಳೆಸುವ ನಿಟ್ಟಿನಲ್ಲಿ ಹಿಂದೂ - ಮುಸ್ಲಿಂರ ಭಾವೈಕ್ಯತೆಯ ಕೊಂಡಿಯಾಗಿದೆ. ಹೈ.ಕ. ಭಾಗದಲ್ಲಿ ಮುಸ್ಲಿಮರಿಲ್ಲದ ಹಳ್ಳಿಗಳಲ್ಲಿಯೂ ಮೊಹರಂ ಹಬ್ಬವನ್ನು ಹಿಂದೂಗಳೇ ಆಚರಿಸಿಕೊಂಡು ಬರುತ್ತಾರೆ. ಪೀರಲು ದೇವರುಗಳನ್ನು ಹಿಡಿಯುವವರು ಹಿಂದೂಗಳೇ. ಇಂತಹ ಅದ್ಭುತವಾದ ಭಾವೈಕ್ಯದ ಸಂಗಮ ಹೈ.ಕ. ಭಾಗ. ಇಲ್ಲಿ ಅಲ್ಲಾ-ಅಲ್ಲಮರನ್ನು ಬೇರೆ ಬೇರೆಯಾಗಿ ಕಂಡಿಲ್ಲ. ದೇವನೊಬ್ಬ ನಾಮ ಹಲವು ಎಂಬ ನಿಟ್ಟಿನಲ್ಲಿ ಜನರು ಇಂದಿಗೂ ನಡೆದುಕೊಂಡು ಬರುತ್ತಿದ್ದಾರೆ.

ಮೊಹರಂ ಹಬ್ಬದ ಆಚರಣೆ ನಡೆದು ಬಂದ ಹಾದಿ :

''ಡಾ. ಎಂ. ಅಕಬರ ಅಲಿಯವರು ಹೇಳುವಂತೆ ಭಾರತದಲ್ಲಿ ಆಡಳಿತ ನಡೆಸಿದ ಮುಸ್ಲಿಂ ಅರಸರಲ್ಲಿ ಹೆಚ್ಚಾಗಿ ಷಿಯಾ ಪಂಗಡಕ್ಕೆ ಸೇರಿದವರಾಗಿದ್ದರು. ಹಿಂದೂ ನೆಲದ ಕೆಳವರ್ಗದ ಜನರು ಹೋಳಿ - ಹುಣ್ಣಿಮೆಯಂತಹ ಆಚರಣೆ ಬಿಟ್ಟುಕೊಡಬೇಕಾಗಿ ಬಂದದ್ದು ಒಂದು ಐತಿಹಾಸಿಕ ಸಂಗತಿ. ಆಗ ಮುಸ್ಲಿಂ ದೊರೆಗಳು 'ಮೊಹರಂ' ಹಬ್ಬದ ಆಚರಣೆಯ ಮೂಲಕ ಪ್ರಜೆಗಳನ್ನು ಸಮಾಧಾನಪಡಿಸಿದರು. ತಮ್ಮ ಷಿಯಾ ಮತದ ನಿಲುವು ಪ್ರಚಾರಗೊಂಡುದಕ್ಕೆ ಸಂತೋಷಪಟ್ಟರು. ಹೀಗೆ ಜನತೆಯಲ್ಲಿ 'ಮೊಹರಂ' ಆಚರಣೆಯೊಂದಿಗೆ ಹೋಳಿ - ಹುಣ್ಣಿಮೆಯಂತಹ ಪ್ರಭಾವಕ್ಕೂ ಒಳಗಾಗಿ, ತಮಗೆ ಅರಿವಿಲ್ಲದಂತೆ ಒಂದು ಬಗೆಯ ಮುಗ್ಧತೆಯಿಂದ ಒಟ್ಟಾಗಿ ಕಲಿತು ಪಾಲ್ಗೊಂಡಿದ್ದ ಪರಿಣಾಮವಾಗಿ ಹಿಂದೂ - ಮುಸ್ಲಿಂ ಬಾಂಧವ್ಯಕ್ಕೂ ಮನ್ನಣೆ ದೊರೆಯಿತು''[೫] ಎಂದು ಹೇಳುತ್ತಾರೆ.

''ಡಾ. ಮಸೂದ್ ಸಿರಾಜ್ ಅವರೂ ಸಹ ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿಯೂ ಭಾರತದ ಮೇಲೆ ಇಸ್ಲಾಂ ಧರ್ಮದ ಪ್ರವೇಶ ಅಂದರೆ ಮುಸ್ಲಿಂ ದೊರೆಗಳ ಆಳ್ವಿಕೆ, ಆಕ್ರಮಣ ನಂತರ ಸಾಮ್ರಾಜ್ಯ ಸ್ಥಾಪನೆಯ ನಂತರ ದಕ್ಷಿಣ ಭಾರತದಲ್ಲಿ 'ಮೊಹರಂ' ಹಬ್ಬದ ಆಚರಣೆ ಷಿಯಾ ಜನರಿಂದಲೇ ಆರಂಭವಾಯಿತೆಂದು ಹೇಳಲಾಗಿದೆ''[೬]. ಇದಕ್ಕೆ ಕಾರಣ ೧೪ ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದಂತಹ ಬಹಮನಿ ಸುಲ್ತಾನರ ಕಾಲದಲ್ಲಿ ಇರಾನಿಯರ ಒಡನಾಟ ಹೆಚ್ಚಿಗೆ ಇದ್ದ ಕಾರಣ, ಅವರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪ್ರಭಾವಕ್ಕೆ ಇಲ್ಲಿಯ ಸ್ಥಳೀಯರು ಒಳಗೊಂಡಿದ್ದರಿಂದೂ ಹೇಳಲಾಗಿದೆ. ಅದೇ ಪ್ರಭಾವ ಇಂದಿಗೂ ಮುಂದುವರಿದುಕೊಂಡು ಬರುತ್ತಿದೆ.

ಇತಿಹಾಸದ ಕಾಲಚಕ್ರದಲ್ಲಿ ಬದಲಾವಣೆ ಹೊಂದುತ್ತಲೇ ಬಂದಿರುವ ಭಾರತ ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ಅವರ ಧರ್ಮದ ಹಬ್ಬ, ಹರಿದಿನ, ಸಂಸ್ಕೃತಿ, ಸಂಪ್ರದಾಯ, ಪದ್ಧತಿಗಳಲ್ಲಿಯ ಭಾಗವಾಗಿ ಅವರ ಸಂಸ್ಕೃತಿಯ ಆಚರಣೆಗಳನ್ನೂ ಅನುಸರಿಸಿಕೊಂಡು ಬಂದಿದ್ದು, ಅದರಂತೆ ಮುಸಲ್ಮಾನರ ಪ್ರವೇಶದ ನಂತರ ಅವರ ಸಂಸ್ಕೃತಿಯನ್ನೂ ಮೇಳೈಸಿಕೊಂಡು ಬಂದಿದೆ.

ಅದರಲ್ಲಿಯೂ ನಾಲ್ಕೈದು ಶತಮಾನಗಳಿಂದಲೇ ಅವರ ಆಡಳಿತದ ಅಡಿಯಲ್ಲಿ ಬಂದ ಕೊಪ್ಪಳ ಜಿಲ್ಲೆಯೂ ಸಹ ಅವರ ಸಂಪ್ರದಾಯದ ಮೊಹರಂ ಹಬ್ಬದ ಆಚರಣೆಯನ್ನು ತನ್ನ ಸಂಸ್ಕೃತಿಯಲ್ಲಿ ಮೇಳೈಸಿಕೊಂಡಿದೆ. ಮೊಹರಂ ಹಬ್ಬ ಎಂದರೆ ಇಲ್ಲಿಯವರಿಗೆ ಒಂದು ರೀತಿಯ ಭಾವೈಕ್ಯತೆಯ ಹಬ್ಬ, ಇದು ಒಂದು ಜಾತಿಗೆ ಸೀಮಿತವಾದ ಹಬ್ಬ ಎನ್ನುವ ಭಾವನೆಯಿಲ್ಲ. ಕೋಮು ಸೌಹಾರ್ದತೆಯಿಂದ, ಭಾವೈಕ್ಯತೆಯಿಂದ ಆಚರಿಸಲಾಗುವ ಈ ಹಬ್ಬ ಉತ್ತರ - ಕರ್ನಾಟಕ ಮತ್ತು ಹೈದರಾಬಾದ - ಕರ್ನಾಟಕ ಪ್ರದೇಶಗಳಲ್ಲಿ ತನ್ನದೇ ಆದ ವಿಶಿಷ್ಟ ರೀತಿ, ಪದ್ಧತಿಯಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ.

ಹಿಂದೂ - ಮುಸ್ಲಿಂ ಮೈತ್ರಿಯ ಸಂಕೇತವಾಗಿ ಮೊಹರಂ ಹಬ್ಬ:

“ಭಾರತೀಯರು ವಿವಿಧ ಹಬ್ಬಗಳನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಆಚರಿಸುವಂತೆ ಮೊಹರಂ ಹಬ್ಬವನ್ನೂ ಆಚರಿಸುತ್ತಾರೆ. ಮೊಹರಂ ಹಬ್ಬದ ಮೇಲೆ ಹಿಂದೂ ಸಂಸ್ಕೃತಿಯ ಗಾಢ ಪ್ರಭಾವವಾಗಿದೆ. ಪ್ರಾದೇಶಿಕವಾಗಿ ರೂಢಿಯಲ್ಲಿರುವ ಮೊಹರಂ ಆಚರಣೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಹಿಂದೂ - ಮುಸ್ಲಿಂ ಮೈತ್ರಿಯ ಕುರುಹುಗಳು ಸ್ಪಷ್ಟವಾಗಿ ಗೋಚರಿಸುತ್ತವೆ”[೭].

ಹಿಂದೂ ಸಂಸ್ಕೃತಿಯ ಪ್ರಭಾವವೆಂಬಂತೆ ಬರಿಗಾಲಿನಿಂದ ಬೆಂಕಿಯ ಮೇಲೆ ನಡೆದುಹೋಗುವ ಪದ್ಧತಿ ಹಿಂದೂಗಳ ಅಗ್ನಿಕುಂಡದ ಪ್ರಭಾವದಿಂದಾಗಿರಬಹುದೆಂದೆನ್ನಿಸುವ ಅಂಶಗಳು. ಮೊಹರಂ ಮೆರವಣಿಗೆ ಹೊರಟಾಗ ಜನರು ರೋಗಪೀಡಿತ ಮಕ್ಕಳನ್ನು ನೆಲದ ಮೇಲೆ ಮಲಗಿಸುವದು, ಪೀರಲು ದೇವರು ಅವರ ಮೇಲಿಂದ ನಡೆದುಕೊಂಡು ಹೋದರೆ ಒಳ್ಳೆಯದಾಗುತ್ತದೆ ಎಂಬ ಭಾವನೆ ಜನರಲ್ಲಿದೆ. ಕೆಲವರು ಹಾಗೆ ಮಾಡುತ್ತೇನೆಂದು ಹರಕೆ ಹೊತ್ತುಕೊಂಡಿರುತ್ತಾರೆ. ಇನ್ನು ನೆರೆಯ ಆಂಧ್ರಪ್ರದೇಶದಲ್ಲಿ ಮೊಹರಂ ಆಚರಣೆಯಲ್ಲಿ ಹಿಂದೂಗಳು ಎಡೆ ನೀಡುವ ಪದ್ಧತಿ ಇದೆ. ದೇವರು ಹೊಳೆಗೆ ಹೋಗುವ ದಿನವೂ ಹಿಂದೂಗಳು ಕಣ್ಣೀರು ಸುರಿಸುತ್ತಾರೆ. ಪಶ್ಚಿಮ ಬಂಗಾಲದ ವಿಷ್ಣುಪುರ ನಗರದ ಮೊಹರಂ ಜುಲೂಸದಲ್ಲಿ ಪಾಲ್ಗೊಳ್ಳುವ 'ಧುಲ್ ಧುಲ್' ಎಂಬ ಮಣ್ಣಿನ ಕುದುರೆಯನ್ನು ಪೋತದಾರರು ತಯಾರಿಸುತ್ತಾರೆ. ಇದರಲ್ಲಿ ಹಿಂದು ದೇವ ದೇವತೆಗಳ ಮಣ್ಣಿನ ಮಾದರಿಯ ಛಾಯೆ ಕಂಡು ಬರುತ್ತದೆ.

ಮಹಾರಾಷ್ಟ್ರದ ಅಕ್ಕಲಕೋಟೆಯಲ್ಲಿ ಹಿಂದೂ - ಮುಸ್ಲಿಮರಿಬ್ಬರೂ ಸೇರಿ ತಾಜಿಯಾ ತಯಾರಿಸುತ್ತಾರೆ. ಕರ್ನಾಟಕದ ರಾಯಚೂರು ಜಿಲ್ಲೆಯ ಮುದಗಲ್ ಗ್ರಾಮದ ಮೊಹರಂ ಆಚರಣೆಯಲ್ಲಿ ಮುಸ್ಲಿಮೇತರರೇ ಹೆಚ್ಚಾಗಿ ಭಾಗವಹಿಸುತ್ತಾರೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಮೌಲಾಲಿ ಅಲಮ್‌ಗಳಿಗೆ ಹಿಂದೂ - ಮುಸ್ಲಿಮರು ರಾಮುಲಸ್ವಾಮಿ ಎಂದು ಕರೆಯುತ್ತಾರೆ. ಧಾರವಾಡ ಜಿಲ್ಲೆಯ ಯರಗುಪ್ಪಿ ಗ್ರಾಮದ ಸುತ್ತ ಮುತ್ತಲ ಹಳ್ಳಿಗಳಲ್ಲಿ ಮೊಹರಂ ಹಬ್ಬವು ಒಂದು ಜಾತ್ರೆಯ ಸ್ವರೂಪವನ್ನು ಪಡೆದುಕೊಂಡಿದೆ. ಹಿಂದೂ - ಮುಸ್ಲಿಮರು, ವಿಶೇಷವಾಗಿ ಬ್ರಾಹ್ಮಣರು ತಮ್ಮ ಶಕ್ತ್ಯಾನುಸಾರ ದೇವರ ಚೌಕರಿ ಮಾಡುತ್ತಾರೆ. ಹರಕೆ ತೀರಿಸುತ್ತಾರೆ. ಗದಗ - ಬೆಟಗೇರಿಯಲ್ಲಿ ಮೊಹರಂ

ಮೆರವಣಿಗೆಯಲ್ಲಿ ಹಿಂದೂ - ಮುಸ್ಲಿಮರು ಪಾಲ್ಗೊಂಡು ಮಳೆ, ಬೆಳೆಯ ಬಗ್ಗೆ ಹೇಳಿಕೆ ಕೇಳುತ್ತಾರೆ. ಸೊಟಕನಹಾಳದ ಡೋಲಿ ಮತ್ತು ಕೈ ದೇವರು ದ್ಯಾಮವ್ವನ ಗುಡಿಗೆ ಭೆಟ್ಟಿಯಿತ್ತಾಗ ಊರ ಜನ ಇಮಾಮ ಹುಸೇನರು ತಂಗಿ ದ್ಯಾಮವ್ವನ ದರ್ಶನಕ್ಕೆ ಬಂದಿದ್ದಾರೆಂದೇ ತಿಳಿಯುತ್ತಾರೆ. ಕೊಪ್ಪಳ ಜಿಲ್ಲೆಯ ಕುದರಿಮೋತಿಯಲ್ಲಿ ಊರಿಗೆ ಊರೇ ಮೊಹರಂ ಹಬ್ಬವನ್ನು ಒಂದು ಉತ್ಸವವನ್ನಾಗಿ ಆಚರಿಸುತ್ತಾರೆ. ಊರಿಗೆ ಬಂದ ಅತಿಥಿಗಳನ್ನು ಮನೆಗೆ ಬಂದ ಅತಿಥಿಗಳಂತೆ ಸತ್ಕರಿಸುತ್ತಾರೆ. ಕೊಪ್ಪಳದಲ್ಲಿಯೂ ಹಿಂದೂ - ಮುಸ್ಲಿಮರು ಭಾವೈಕ್ಯತೆಯಿಂದ ಭಾಗಹಿಸುತ್ತಾರೆ. ಇದೇ ಸಮಯದಲ್ಲಿ ಇಲ್ಲಿನ ಸಿರಸಪ್ಪಯ್ಯನ ಮಠದ ಹೇಳಿಕೆ, ಭವಿಷ್ಯ ಕೇಳಲು ಸಾವಿರಾರು ಜನ ನೆರೆದಿರುತ್ತಾರೆ.

ಒಟ್ಟಿನಲ್ಲಿ ಶೋಕಮೂಲವಾದರೂ, ಮುಸ್ಲಿಮರಿಗೆ ಸಂಬಂಧಪಟ್ಟ ಹಬ್ಬವಾದರೂ ಹಿಂದೂ ಸಂಸ್ಕೃತಿಯನ್ನು ಮೇಳೈಸಿಕೊಂಡ ಮೊಹರಂ ಹಬ್ಬವು ಭಾವೈಕ್ಯತೆಯ, ಕೋಮು ಸೌಹಾರ್ದತೆಯ ಪ್ರತೀಕವಾದ ಹಬ್ಬವಾಗಿ ಬಳಕೆಯಲ್ಲಿದೆ. ಜೊತೆಗೆ ಈ ಮೊಹರಂ ಹಬ್ಬವು ಮತೀಯ ಸಾಮರಸ್ಯ ಬೆಳೆಸುವ, ಧಾರ್ಮಿಕ ಸೌಹಾರ್ದ ಹುಟ್ಟುಹಾಕುವ ಕಾಣಿಕೆಯುಂತಿರುವ ಭಾವೈಕ್ಯತೆಯ ಕೊಂಡಿಯಾಗಿದೆ.

ಮೊಹರಂ ಹಬ್ಬದ ಆಚರಣೆ :

ಉತ್ತರ - ಕರ್ನಾಟಕ ಮತ್ತು ಹೈದರಾಬಾದ - ಕರ್ನಾಟಕಗಳಲ್ಲಿ ಈ ಮೊಹರಂ ಹಬ್ಬದ ಆಚರಣೆ ಬಹಳ ವಿಶಿಷ್ಟವಾಗಿದೆ. ಮೊಹರಂ ಹಬ್ಬದ ಎಂಟು ದಿನಗಳ ಮೊದಲೇ ಮನೆಯ ಹೆಣ್ಣುಮಕ್ಕಳು ಹಿರಿಯರ ಮಾರ್ಗದರ್ಶನದಲ್ಲಿ ತಮ್ಮ ಮನೆಗಳಿಗೆ ಸುಣ್ಣ - ಬಣ್ಣ ಬಳಿದು ಶುಚಿಗೊಳಿಸುವರು. ಅಮವಾಸ್ಯೆ ಕಳೆದು ಚಂದ್ರ ಕಾಣಿಸಿಕೊಂಡ ಮೊದಲ ದಿನದಿಂದ ಹತ್ತು ದಿನಗಳವರೆಗೂ ಕೆಲವರು ಉಪವಾಸವಿದ್ದು ಶರಬತ್ ಮಾಡಿ ಭಕ್ತಾದಿಗಳಿಗೆ ಹಂಚುವರು. ಹಾಗೆಯೇ ಒಂಭತ್ತು ಮತ್ತು ಹತ್ತನೆಯ ದಿನ ಬೆಳಿಗ್ಗೆ ಒಂಭತ್ತು ಗಂಟೆಗೆಲ್ಲ ಸ್ನಾನ ಮಾಡಿ ಹತ್ತು ಗಂಟೆಗೆ ಹಸನ್ - ಹುಸೇನ್‌ರವರ ಹೆಸರಿನಲ್ಲಿ "ಆಶೂರೇಕಿ ಚಾರ್ ರಕಾತ್" ನಮಾಜ್ ಮಾಡುವರು. ಮೂರನೆಯ ಅಥವಾ ಐದನೆಯ ದಿನ ಮೇವ, ಕಿಚಡಿ, ಅನ್ನ ಪಲ್ಯ, ಶರಬತ್ ಇತ್ಯಾದಿ ಮಾಡಿ ಹಸನ್ - ಹುಸೇನ್‌ರವರ ಹೆಸರಿನಲ್ಲಿ ಫಾತೇಹ ಓದಿಸುವರು. ಇವು ಸಾಮಾನ್ಯವಾಗಿ ಮನೆಯಲ್ಲಿ ನಡೆಯುವ ಸಂಪ್ರದಾಯ ಅಥವಾ ಪದ್ಧತಿಗಳು.

ಇನ್ನು ಮಸೀದೆಗಳಲ್ಲಿ ಮೊಹರಂ ತಿಂಗಳ ಚಂದ್ರ ದರ್ಶನದ ರಾತ್ರಿ ಗುದ್ದಲಿ (ಅಲಾವಿ) ಹಾಕುತ್ತಾರೆ. ಮಸೀದೆ ಅಥವಾ ಅಶೂರಖಾನಾಗಳಲ್ಲಿ ಹಜರತ್ ಇಮಾಮ್ ಹಸನ್ ಮತ್ತು ಹುಸೇನ್ ಮೊದಲಾದ ಹುತಾತ್ಮರ ಸ್ಮಾರಕಗಳೆನಿಸಿದ ಪಂಜಾ ಹಾಗೂ ತಾಜಿಯಾ (ಡೋಲಿ) ಗಳನ್ನು ಇಡುತ್ತಾರೆ. ಮೊಹರಂ ಒಂದನೇ ತಾರೀಖಿನಂದು ಕೆಲವು, ನಂತರ ಐದನೇ ತಾರೀಖಿನಂದು ಆಲಂ (ಪಂಜಾ) ಗಳನ್ನು ಇಡುತ್ತಾರೆ. ಹರಕೆ ಹೊತ್ತವರು ಒಂದು ಅಥವಾ ಐದನೇ ತಾರೀಖಿನಂದು ಮಕ್ಕಳನ್ನು ಕರೆದುಕೊಂಡು ಹೋಗಿ ತಮ್ಮ ಇಷ್ಟದೇವರ ಮುಂದೆ ಕೈ ಕೊರಳಲ್ಲಿ ಕೆಂಪು ಲಾಡಿ ಹಾಕಿ ಫಕೀರರನ್ನಾಗಿ ಮಾಡುತ್ತಾರೆ.

ಮುಸ್ಲಿಂರಲ್ಲದೇ ಹಿಂದೂಗಳು ಕೂಡಾ ಫಕೀರರಾಗುತ್ತಾರೆ. ಫಕೀರರಾದವರು ಕೈಯಲ್ಲಿ ಜೋಳಿಗೆ ಹಿಡಿದು ಕನಿಷ್ಟ ಐದು ಮನೆಯಾದರೂ ಬೆಳಗಿನ ಜಾವ ಭಿಕ್ಷೆಗೆ ಹೋಗುವ ಪದ್ಧತಿ ಇದೆ. ಮೊಹರಂ ಏಳು, ಎಂಟು ಮತ್ತು ಒಂಭತ್ತನೇ ದಿನಗಳಂದು ಕೆಲವು ಆಲಂಗಳ ಸವಾರಿ ಹೊರಡಿಸಿ ಭಾಜಾ, ಭಜಂತ್ರಿಯೊಂದಿಗೆ ಊರೊಳಗೆ ಎಲ್ಲ ದೇವರುಗಳಿಗೆ ಭೇಟಿಯಾಗಿ ಬರುವದು. ಹತ್ತನೆಯ ದಿನ (ಶಹಾ ದತ್ = ದಫನ್) ಗೊತ್ತಾದ ಸ್ಥಳದಲ್ಲಿ ಎಲ್ಲ ಆಲಂಗಳು ಸೇರಿ ಭೇಟ ನೀಡುವ ಕಾರ್ಯಕ್ರಮ ನಡೆಯುತ್ತದೆ. ಅಂದು ಸಂಜೆ ದೇವರು ಹೊಳೆಗೆ ಹೋಗುವ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಾರೆ. ಊರ ಮುಂದಿನ ಕೆರೆ ಅಥವಾ ಹೊಳಗೆ ಎಲ್ಲ ಆಲಂಗಳು ತಾಜಿಯಾಗಳೊಂದಿಗೆ ಬರುತ್ತವೆ. ಅಲ್ಲಿ ಪಂಜಾಗಳನ್ನು ಮುಖ ತೊಳೆದು ಫಾತೆಹಾ ಮಾಡಿ ಅಲ್ವಿದಾಯ ಹೇಳುತ್ತಾ, ಭಕ್ತಿ ಭಾವದಿಂದ ತಮ್ಮ ಸ್ಥಾನಕ್ಕೆ ಮರಳುತ್ತಾರೆ.

ಹಜರತ್ ಇಮಾಮ ಹಸನ್ ಮತ್ತು ಹಜರತ್ ಇಮಾಮ್ ಹುಸೇನ ಮೊದಲಾದ ಹುತಾತ್ಮರ ಸ್ಮಾರಕಗಳೆನಿಸಿದ 'ಪಂಜಾ' ಹಾಗೂ 'ತಾಜಿಯಾ' (ಡೋಲಿ)ಗಳನ್ನು ಇಡುವ ಅಶೂರಖಾನಾ ಅಥವಾ ಮಸೂತಿ ಸ್ಥಳಗಳ ಆವರಣಗಳಲ್ಲಿ ಹಬ್ಬದ ಕೊನೆಯ ಮೂರು, ನಾಲ್ಕು ದಿನ ಮೊಹರಂ ಪದಗಳ ಹಾಡುಗಳ ಪ್ರದರ್ಶನ ನಡೆಯುತ್ತದೆ. ಈ ರೀತಿಯ ಮೊಹರಂ ಪದಗಳ ಹಾಡುಗಳ ಪ್ರದರ್ಶನಗಳು ನಡೆದಾಗ ಬಹಳಷ್ಟು ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಪುರುಷರು ಸೇರಿರುತ್ತಾರೆ. ಸುತ್ತಲೂ ಕುಳಿತುಕೊಂಡು ಹಾಡುಗಳ ತಾಳಕ್ಕೆ, ರಾಗಕ್ಕೆ ತಕ್ಕಂತೆ ಸ್ಪಂದಿಸುತ್ತಾರೆ. ಕೆಲವು ದುಃಖದ ಸನ್ನಿವೇಶಗಳು ಅಭಿವ್ಯಕ್ತಿಗೊಂಡಾಗ, ಕಣ್ಣೀರು ಸುರಿಸುತ್ತಾರೆ. ಸಹಜವಾಗಿ ರಾತ್ರಿ ನಡೆಯುವ ಇಂತಹ ಕಾರ್ಯಕ್ರಮಗಳಲ್ಲಿ ಹಿಲಾಲು (ಪಂಜು) ಗಳು ಬೆಳಕು ನೀಡುವ ಸಾಧನಗಳಾಗಿದ್ದವು. ಆದರೆ ನೂತನ ತಂತ್ರ ವಿದ್ಯುದ್ದೀಪಗಳನ್ನು ರಾತ್ರಿ ವೇಳೆಯ ಪ್ರದರ್ಶನದಲ್ಲಿ ಬೆಳಕು ನೀಡಲು ಉಪಯೋಗಿಸಲಾಗುತ್ತಿದೆ.

''ಒಂದೊಂದು ಮೇಳದಲ್ಲಿ ಸಾಮಾನ್ಯವಾಗಿ ಏಳೆಂಟು ಜನರು ಇರುತ್ತಾರೆ. ಒಬ್ಬರು ಅಥವಾ ಇಬ್ಬರು ನುಡಿ ಅಥವಾ 'ಏರುಗಳನ್ನು ಹೇಳುತ್ತಿದ್ದರೆ, ಎಲ್ಲರೂ ಒಟ್ಟಾಗಿ ಪಲ್ಲವಿ ಅಥವಾ 'ಚಾಲ' ಹಾಡುತ್ತಾರೆ. ಒಮ್ಮೊಮ್ಮೆ ಇಂಥ ಮೇಳದವರು ಸಮವಸ್ತ್ರದಲ್ಲೊ, ಇಲ್ಲವೆ ತಮ್ಮ ನಿತ್ಯದ ಉಡುಪಿನಲ್ಲಿ ಇದ್ದು, ಕೈಯಲ್ಲಿ ವಸ್ತ್ರ, ಶಲ್ಲೆಯನ್ನೊ ಅಥವಾ ತುದಿಯಲ್ಲಿ ಕಾಗದದ ಹೂವಿರುವ ಒಂದು ಉದ್ದವಾದ ಬಿದಿರಿನ ಕಡ್ಡಿಯನ್ನು ಹಿಡಿದು, ಆಗಾಗ ಬೀಸುತ್ತ, ಕೈ ಚಾಚುತ್ತ, ಕೇಕೆ ಹಾಕುತ್ತ ಭಾವಾವೇಶದಿಂದ ಹಾಡುವ ದೃಶ್ಯ ನೋಡುವವರ ಕಣ್ಣಿಗೆ ಹಬ್ಬವನ್ನುಂಟು ಮಾಡುವಂತಿರುತ್ತದೆ. ಅಶೂರಖಾನಾದ ಹೊರಗಡೆ ಇಲ್ಲವೆ ಆವರಣದಲ್ಲಿ ತೋಡಲಾದ ಅಲಾವಿ ಕುಣಿಯಲ್ಲಿ – ಆ ಅವಧಿಯಲ್ಲಿ ಕಟ್ಟಿಗೆಗಳನ್ನು ಹಾಕಿ ಹೊತ್ತಿಸಿರುತ್ತಾರೆ. ಅಲಾವಿಯನ್ನು ನಿಧಾನವಾಗಿ ಸುತ್ತುವರಿಯುತ್ತ, ನುಡಿ ಅಥವಾ ಏರುಗಳನ್ನು ಹಾಡುವಾಗ ಒಂದೆಡೆ ನಿಂತು ಮತ್ತೆ ಚಾಲ ಪಲ್ಲವಿ ಹೇಳುವಾಗ ಮುಂದುವರಿಯುತ್ತಿರುತ್ತಾರೆ''[೮]. ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯ ಪ್ರದರ್ಶನವಿರುತ್ತದೆ.

ಸಾಮಾನ್ಯವಾಗಿ ಇಂತಹ ಪ್ರದರ್ಶನ ನಡೆಯುವಾಗ ಅಶೂರಖಾನಾದ ಹೊರಗೆ ಇಲ್ಲವೇ

ಆವರಣದಲ್ಲಿ ತೋಡಲಾದ ಅಲಾವಿ ಕುಣಿಯಲ್ಲಿ ಕಟ್ಟಿಗೆಗಳನ್ನು ಹಾಕಿ ಹೊತ್ತಿಸಿರುತ್ತಾರೆ. ಅಲಾವಿಯನ್ನು ಮೆಲ್ಲನೇ ಸುತ್ತುವರಿಯುತ್ತ ನುಡಿ, ಏರುಗಳನ್ನು ಹಾಡುವಾಗ ಒಂದೆಡೆ ನಿಂತು ಮತ್ತೆ ಪಲ್ಲವಿ (ಚಾಲ) ಹೇಳುವಾಗ ಮುಂದೆ ಮುಂದೆ ನಡೆಯುತ್ತಾ ಹೋಗುತ್ತಾರೆ.

ಇಂತಹ ರಾತ್ರಿಯ ಹೊತ್ತಿನಲ್ಲಿ ನಡೆಯುವ ಮೊಹರಂ ಪದಗಳ ಹಾಡುಗಳ ಪ್ರದರ್ಶನ ಒಂದು ರೀತಿಯಲ್ಲಿ ಕುತೂಹಲ, ಆಸಕ್ತಿ, ಜನರ ಶಹಾಬ್ಬಾಶ್‌ಗಿರಿ, ಮಾತುಗಳ ಕೌಶಲ್ಯತೆ, ಕುಣಿತಗಳಿಂದ ಕೂಡಿರುತ್ತದೆ. ಪ್ರತಿ ಮೇಳದವರೂ ತಮ್ಮದೇ ಆದ ವೈಶಿಷ್ಟ್ಯತೆ, ಹಾಡುಗಳ ಹಾಡುವಿಕೆ, ಕುಣಿಯುವಿಕೆಯ ಪ್ರದರ್ಶನದಿಂದ ಪ್ರದರ್ಶನಕ್ಕೆ ಹೆಚ್ಚಿನ ಕಳೆ ತಂದಿರುತ್ತಾರೆ.

ಮೊಹರಂ ಹಬ್ಬವು ಏಕತೆಯನ್ನು ಮೆರೆಸುವ ಹಬ್ಬವಾಗಿದೆ. ಕೆಲವೊಂದು ಪ್ರದೇಶದಲ್ಲಿ ಆಚರಿಸಲಾಗುವ ಮೊಹರಂ ಹಬ್ಬದ ಆಚರಣೆಯಲ್ಲಿ ಮುಸ್ಲಿಮೇತರರೇ ಹೆಚ್ಚಾಗಿ ಭಾಗವಹಿಸುತ್ತಾರೆ. ''ಹರಕೆ ಹೊತ್ತ ಹಿಂದೂ-ಮುಸ್ಲಿಮ್‌ರು ಹುಲಿವೇಷ, ಅಳ್ಳಳ್ಳಿ ಭವ್ವ ವೇಷ ಹಾಕಿ ಕುಣಿದು ಕುಪ್ಪಳಿಸುತ್ತಾರೆ. ಕಂದೂರಿ ಮಾಡಿ, ಎಡೆ ನೀಡಿ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಾರೆ. ದೀರ್ಘದಂಡ ನಮಸ್ಕಾರ ಹಾಕಿ ಧನ್ಯರಾಗುತ್ತಾರೆ. ಹತ್ತನೆಯ ದಿನ ಹೊರಡುವ ಕಾಸಿಂ ಆಲಮ್ ಮತ್ತು ಹುಸನ್ ಆಲಮ್ ಒಂದಕ್ಕೊಂದು ಭೇಟಿಯಾದಾಗ ನೆರೆದ ಜನಸಮೂಹ ತೇರಿನ ಮೇಲೆ ಹಣ್ಣು ಕಾಯಿ ಎಸೆಯುವಂತೆ ಮಾಡಿ ಭಯ ಭಕ್ತಿಯಿಂದ ಕೈ ಮುಗಿದು ತೃಪ್ತರಾಗುತ್ತಾರೆ''[೨].

ಮೊಹರಂ ಆಚರಣೆಯಲ್ಲಿ ಹಾಡಲಾಗುವ ಅಯ್ದು ರಿವಾಯತ್ ಪದಗಳ ವಿಶ್ಲೇಷಣೆ :

ಚರಿತ್ರೆಯ ಪದಗಳು :

ಜಾನಪದ ಸಾಹಿತ್ಯ ಮತ್ತು ಇತಿಹಾಸ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇದರಲ್ಲಿ ಚರಿತ್ರೆ ವ್ಯಾಪಕವಾಗಿ ಒಳಗೊಂಡಿದೆ. ಚರಿತ್ರೆ ಎಂದರೆ ಇತಿಹಾಸ. ಅಂದರೆ ಗತಕಾಲದ ಚರಿತ್ರೆಯನ್ನು ತಿಳಿಸುವದು. ಈ ಮೊಹರಂ ಪದಗಳಲ್ಲಿ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಸಾಕಷ್ಟು ವಿಚಾರಗಳು ತಿಳಿದು ಬರುತ್ತವೆ. ಪ್ರಾಚೀನ ಸಾಹಿತ್ಯವು ಗ್ರಂಥಸ್ಥ ರೂಪದಲ್ಲಿ ಇರದೇ ಇರುವ ಸಂದರ್ಭದಲ್ಲಿ ಯಾವುದೇ ಚರಿತ್ರೆಯ ವಿಷಯ ದಾಖಲು ರೂಪದಲ್ಲಿ ಇರುತ್ತಿರಲಿಲ್ಲ. ಕೇವಲ ಜನಪದರ ಮೌಖಿಕ ವಾಹಿನಿಯಲ್ಲಿ ಮಾತ್ರ ಹಾಡಿನ ರೂಪದಲ್ಲಿ, ಕಥೆಯ ರೂಪದಲ್ಲಿ, ಲಾವಣಿ, ಗೀಗಿಯ ಪದಗಳ ರೂಪದಲ್ಲಿ ಅಭಿವ್ಯಕ್ತಿಗೊಳ್ಳುತ್ತಿತ್ತು. ಅದರಂತೆ ಮೊಹರಂ ಪದಗಳಲ್ಲಿಯೂ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಮೊಹರಂ ಪದಗಳು ಕೂಡ ಸಿಗುತ್ತವೆ.

ಹಾಗೆಯೇ ದೇಶವನ್ನು ಕಟ್ಟಿದವರ, ಧರ್ಮವನ್ನು ಕಟ್ಟಿದವರ, ತ್ಯಾಗ, ಬಲಿದಾನಗೈದವರ, ಶರಣರ, ಪವಾಡ ಪುರುಷರ, ಐತಿಹಾಸಿಕ ವ್ಯಕ್ತಿಗಳ ಕುರಿತು ಮೊಹರಂ ಪದಗಳು ಪ್ರಚಲಿತದಲ್ಲಿವೆ. ಇಂತಹ ವ್ಯಕ್ತಿ ಚರಿತ್ರೆಯ ಪದಗಳು ಜಾನಪದದಲ್ಲಿ ಸಾಕಷ್ಟು ಸಿಗುತ್ತವೆ. ಇಲ್ಲಿ ಅಧ್ಯಯನದ ಸೀಮಿತ

ಉದ್ದೇಶಕ್ಕಾಗಿ ಕೆಲವು ಚರಿತ್ರೆಯ ಪದಗಳನ್ನು ಹಾಗೂ ವ್ಯಕ್ತಿ ಚರಿತ್ರೆಯ ಪದಗಳನ್ನು ಸಂಗ್ರಹಿಸಿ ಸಂಶೋಧನೆಗೆ ಒಳಪಡಿಸಲಾಗಿದೆ.

"ಅರೇಬಿಯಾದ ಮಕ್ಕಾ ಪಟ್ಟಣವನ್ನು ಸಂದರ್ಶಿಸಿ ಅಲ್ಲಿರುವ ಕಾಬಾ ಭವನಕ್ಕೆ ಏಳು ಬಾರಿ ಪ್ರದಕ್ಷಿಣೆ ಬರುವುದು, ಕಾಬಾ ಭವನದ ಬಳಿಯಲ್ಲೇ ಇರುವ ಸಫಾ ಮತ್ತು ಮರ್ವಾ ಎಂಬ ಬೆಟ್ಟಗಳ ಮಧ್ಯೆ ಏಳು ಬಾರಿ ನಡೆದಾಡುವುದು, ಮಕ್ಕಾದ ಪರಿಸರದಲ್ಲಿರುವ ಮಿನಾ, ಅರಫಾತ್ ಮತ್ತು ಮುಝ್ದಲಿಫಾಗಳಲ್ಲಿ ನಿರ್ದಿಷ್ಟ ದಿನಗಳಲ್ಲಿ ತಂಗಿ ಅಲ್ಲಾಹನ ಸ್ತುತಿ, ಸ್ತೋತ್ರ ಮತ್ತು ಪ್ರಾರ್ಥನೆಗಳಲ್ಲಿ ನಿರತರಾಗಿರುವುದು, ಇವಿಷ್ಟು ಹಜ್ ಕರ್ಮದ ಪ್ರಾಮುಖ್ಯ ಪ್ರತ್ಯಕ್ಷ ವಿಧಿಗಳು"[೧೦]. ಇಂತಹ ಪವಿತ್ರ ಸ್ಥಾನದ ಮಕ್ಕಾ ಚರಿತ್ರೆಯ ಬಗ್ಗೆ ಈ ಮೊಹರಂ ಪದ ಕೆಲವು ವಿಚಾರಗಳ ಬಗ್ಗೆ ಹೇಳುತ್ತದೆ.

ಅರೇಬಿಯಾದ ಮಕ್ಕಾ ಪಟ್ಟಣದ ಚರಿತ್ರೆ ಅದ್ಭುತವಾದುದಾಗಿದೆ. ಇಬ್ರಾಹಿಂ ಖಲಿಲುಲ್ಲಾ ಎಂಬ ಶರಣನು ಮಕ್ಕಾ ಪಟ್ಟಣವನ್ನು ಎಷ್ಟು ಸಾರಿ ಕಟ್ಟಿಸಿದರೂ ನೆಲೆಗೊಳ್ಳದೇ ಇದ್ದಾಗ ವ್ಯಸನದಿಂದ ಮಲಗಿದ್ದಾಗ, ಕನಸೊಂದು ಬಿದ್ದು ಕುರುಬಾನ್ (ಬಲಿ) ಕೊಟ್ಟ ನಂತರ ಶಾಶ್ವತವಾಗಿ ನೆಲೆಗೊಳ್ಳಬಹುದೆಂಬ ವಾಣಿ ಕೇಳಿಸಿತು. ಕೂಡಲೇ ಶಾಲೆಗೆ ಹೋಗಿ ಬಂದ ತನ್ನ ಮಗನಾದ ಇಸ್ಮಾಹಿಲ್ ಹಿಯಾನನ್ನು ಕರೆಯಿಸಿ ವಾಸ್ತವಿಕ ಸ್ಥಿತಿಯನ್ನು ಹೇಳುತ್ತಾನೆ. ತಕ್ಷಣವೇ ಮಗನಾದ ಇಸ್ಮಾಹಿಲ್ ಹಿಯಾನ ಬಲಿದಾನಗೈಯಲು ಸಿದ್ಧನಾಗುತ್ತಾನೆ. ತಂದೆಯು ಮಗನಿಗೆ ಕಣ್ಣಿಗೆ ಬಟ್ಟೆ ಕಟ್ಟಿ ಕೈಯಲ್ಲಿ ಚೂರಿಯನ್ನು ಹಿಡಿದುಕೊಂಡು ಅಲ್ಲಾಹು ಎನ್ನುತ್ತ ಮಗನ ಗೋಣನ್ನು ಕೊಯ್ಯಲೆತ್ನಿಸಿದಾಗ ಗೋಣು ಕತ್ತರಿಸಲಾಗದೇ ರಭಸದಿಂದ ಚೂರಿ ಸಮುದ್ರಕ್ಕೆ ಬಿದ್ದು ಸಮುದ್ರದಲ್ಲಿನ ಮೀನುಗಳು ಸಾವನ್ನಪ್ಪುತ್ತವೆ. ಈ ಮೂಲಕವಾಗಿ ಮಕ್ಕಾ ಸ್ಥಾನ ನೆಲೆ ನಿಂತು ಇಂದಿಗೂ ಇಸ್ಲಾಂ ಧರ್ಮದ ಪವಿತ್ರ ಕ್ಷೇತ್ರವಾಗಿದೆ ಎಂಬುದು ಈ ಕೆಳಗಿನ 'ಮಕ್ಕಾ ಚರಿತ್ರೆ' ಎಂಬ ಮೊಹರಂ ಪದ ತಿಳಿಸುತ್ತದೆ.

ಕುಂದ್ರೊ ಕುಂದ್ರೊ ಸಾಹೇಬಾ ನೀನು ।
ಕೊಡುತ್ತೀನಿ ಹಾಡಿಗೆ ಚೋಡಿಯಾನ ।
ಇಬ್ರಾಹಿಂ ಖಲಿಲುಲ್ಲಾ ಶರಣರ ।
ಮಕ್ಕಾ ಕಟ್ಟಸಲಿಕ್ಕೆ ಪ್ರಾರಂಭ ।
ಎಷ್ಟು ಕಟ್ಟಿಸಿದರೆ ಮಕ್ಕ ಸ್ಥಾನ ನಿಲ್ಲವಲ್ದು ।
ಕೇಳಿರಿ ಹಿರಿಯರಾ ॥

ಎಂದು ಆರಂಭಗೊಳ್ಳುವ ಈ ಪದ ಇಬ್ರಾಹಿಂ ಖಲಿಲುಲ್ಲಾ ಶರಣರು ಮಕ್ಕಾ ಕಟ್ಟಸಲಿಕ್ಕೆ ಪ್ರಾರಂಭ ಮಾಡಿದರೂ, ಎಷ್ಟು ಕಟ್ಟಿಸಿದರೂ ಅದರ ಸ್ಥಾನ ನೆಲೆಗೊಳ್ಳದೇ ಚಿಂತೆಯಿಂದ ಮಲಗಿರುವಾಗ ಕನಸಿನಲ್ಲಿ ಬಂದ ದೇವರು ಮಕ್ಕಾದ ಕಟ್ಟಡ ನಿಲ್ಲಬೇಕಾದರೆ ಒಂದು ಕರಾರು ಇದೆ. ಅದು ಪೂರ್ಣಗೊಳಿಸಿದ ಮೇಲೆ ನಿಲ್ಲುತ್ತದೆ ಎಂದು ಹೇಳಿ ಅದೃಶ್ಯವಾಗಿ ಹೋದಾಗ, ಇಬ್ರಾಹಿಂ ಖಲಿಲುಲ್ಲಾರವರು ಶಾಲೆಗೆ ಹೋಗುತ್ತಿದ್ದ

ತಮ್ಮ ಮಗ ಇಸ್ಮಾಯಿಲ್ ಹಿಯಾನನ್ನು ಕರೆಸಿ ಕಣ್ಣೀರು ಸುರಿಸುತ್ತಾ ನಿಲ್ಲುತ್ತಾರೆ. ಮಗನನ್ನು ಕರೆದು ಕಣ್ಣೀರು ಸುರಿಸುತ್ತಾ ನಿಂತನು. ಅಳುತ್ತಿರುವ ತಂದೆಯನ್ನು ಮಗನು ಏನೆಂದು ಕೇಳುತ್ತಾನೆ.

ಸ್ವಪ್ನದಲಿ ಮಹಾದೇವ ।
ಕುರುಬಾನ್ ಮಾಡೆಂದು ಹೇಳ್ಯಾರ ನಿನ್ನ ।
ಇಸ್ಮಾಯಿಲ್ ಶರಣರ ಭಕ್ತಿವಾನ ।
ಕೊಟ್ರು ತಂದಿ ಕೈಯಲ್ಲಿ ಚೂರಿಯಾನ ॥

ಮಗನ ಮುಂದೆ ಆಗ ತಂದೆಯು ತಾನು ಕಂಡ ಕನಸನ್ನು ಹೇಳುತ್ತಾ ಮಕ್ಕಾ ಪ್ರದೇಶದ ಸ್ಥಾಪನೆಗೆ ನಿನ್ನನ್ನು ಕುರುಬಾನ್ (ಬಲಿ) ಮಾಡಬೇಕೆಂದು ಹೇಳಿದ್ದಾರೆಂದು ಹೇಳಿದಾಗ, ಮಗನು ಚೂರಿ (ಚಾಕು) ಯನ್ನು ತಂದೆಯ ಕೈಯಲ್ಲಿ ಕೊಟ್ಟು ಬಲಿಯಾಗಲು ದೇವರನ್ನು ನೆನೆಸುತ್ತಾ ನಿಲ್ಲುತ್ತಾನೆ. ತಂದೆಯು ಕೈಯಲ್ಲಿ ಚಾಕುವನ್ನು ಹಿಡಿದು ಮಗನ ಕಣ್ಣಿಗೆ ಬಟ್ಟೆಯನ್ನು ಕಟ್ಟಿ ಕೆಡವಿ ಹಾಕಿ ದೇವರ ಧ್ಯಾನ ಮಾಡುತ್ತ ಮಗನ ಕತ್ತನ್ನು ಹಿಡಿದು ಕೊಯ್ಯಲು ಶುರು ಮಾಡುತ್ತಾರೆ.

ಎಷ್ಟು ಕೊಯ್ದಾರೋ ಮಗನ ಗೋಣ ।
ಹರಿವಲ್ಲು ಕೇಳ್ರಿ ಚೂರಿಯಾನ ।
ಸಿಟ್ಟಿಲೇ ಒಗೆದಾರೋ ಚೂರಿಯಾನ ।
ಹೋಗಿ ಬಿತ್ತು ದೊಡ್ಡದೊಂದು ಸಮುದ್ರಾನ ।
ಮೀನು ಹಲಾಲು ಆ ದಿನ ।
ಆಗ್ಯಾವು ಕೇಳ್ರಿ ಸರ್ವ ಜನ ।
ಅಲ್ಲಿಗೆ ನಿಂತಿತು ಮಕ್ಕಾ ಸ್ಥಾನ ।
ಕಟ್ಟಿ ಹೊಂದ್ಯಾರೋ ಮುಕ್ತಿಯಾನ ॥

ಇಬ್ರಾಹಿಂ ಖಲಿಲುಲ್ಲಾ ಮಗನ ಕತ್ತನ್ನು ಎಷ್ಟು ಕೊಯ್ದರೂ ಕತ್ತು ಕೊಯ್ಯಲಾಗುತ್ತಿಲ್ಲ. ಕೊಯ್ದಷ್ಟು ಕತ್ತು ಕೊಯ್ಯಲಾಗದೇ ಸಿಟ್ಟಿಗೆದ್ದು ಚಾಕುವನ್ನು ಬೀಸಿದಾಗ ಅದು ಹೋಗಿ ದೊಡ್ಡ ಸಮುದ್ರದಲ್ಲಿ ಬಿತ್ತು. ಆಗ ಆಗ ಸಮುದ್ರದೊಳಗಿನ ಮೀನುಗಳು ಆ ದಿನ ಸತ್ತು ಹೋಗುತ್ತವೆ. ಅಲ್ಲಿಗೆ ಮಕ್ಕಾ ಸ್ಥಾನವು ನೆಲೆಗೊಂಡಿತು. ಮಕ್ಕಾ ಸ್ಥಾಪಿಸಿದ ನಂತರ ಇಬ್ರಾಹಿಂ ಖಲಿಲುಲ್ಲಾ ಅವರು ಮುಕ್ತಿ ಪಡೆದರು ಎಂದು ತಿಳಿಸುವದರೊಂದಿಗೆ ಈ ರಿವಾಯತ್ ಪದ ಮುಕ್ತಾಯವಾಗುತ್ತದೆ. ಜೊತೆಗೆ ನಿತ್ಯ ಪ್ರಾರ್ಥನೆ ಮಾಡುವದರಿಂದ ಸ್ವರ್ಗ ಸಿಗುವುದು ಎಂದು ಸಹ ತಿಳಿಸುತ್ತದೆ.

ಈ ಮೊಹರಂ ಪದದಲ್ಲಿ ಚರಿತ್ರೆಯ ವಿಷಯಗಳು ತಿಳಿಯುವದರ ಜೊತೆಗೆ ಚರಿತ್ರೆಯಲ್ಲಿನ ವ್ಯಕ್ತಿಗಳು ತಿಳಿದು ಬರುತ್ತಾರೆ. ಮಕ್ಕಾ ಸ್ಥಾಪನೆಯಾಗಬೇಕಾದರೆ ಎಷ್ಟೊಂದು ಆಪತ್ತುಗಳು ಒದಗಿ ಬಂದವು, ಬಂದಂತಹ ಆಪತ್ತುಗಳನ್ನು ಇಬ್ರಾಹಿಂ ಖಲಿಲುಲ್ಲಾ ಎದುರಿಸಿ ಮಕ್ಕಾ ಸ್ಥಾಪನೆ ಮಾಡಿರುವುದು ಆತನ

ಘನ ವ್ಯಕ್ತಿತ್ವವನ್ನು ತಿಳಿಸಿಕೊಡುತ್ತದೆ. ಸ್ವತಃ ಮಗನಾದ ಇಸ್ಮಾಯಿಲ್ ಹಿಯಾನನ್ನು ಬಲಿ ಕೊಡಲಿಕ್ಕೆ ತಯಾರಾಗುವುದರ ಮೂಲಕ ಧಾರ್ಮಿಕ ಕ್ರಿಯಾಚರಣೆಯ ಕೇಂದ್ರವನ್ನು ಸಾರ್ವಜನಿಕರ ಸಲುವಾಗಿ ಮಾಡುವ ತ್ಯಾಗ ಮನೋಭಾವನೆಯನ್ನು ತೋರಿಸುತ್ತದೆ. ಆಧುನಿಕ ಸಮಾಜದ ಇಂದಿನ ಸ್ಥಿತಿಯಲ್ಲಿ ಸ್ವಾರ್ಥ ಸಾಧನೆಗೋಸ್ಕರ ಇತರರನ್ನು ಬಲಿ ಕೊಡುವ ವಾಸ್ತವಿಕತೆಯಲ್ಲಿ ಆ ಹಳೆಯ ಕಾಲದ ಘಟ್ಟದಲ್ಲಿ ಸ್ವಂತ ಮಕ್ಕಳನ್ನು ಬಲಿ ಕೊಡಲಿಕ್ಕೆ ಸಿದ್ದರಾಗಿದ್ದು, ಅವರ ಮಾನಸಿಕ ಸಾಮರ್ಥ್ಯವನ್ನು ತಿಳಿಸುತ್ತದೆ. ಹಾಗೆಯೇ ಮಗನಾದ ಇಸ್ಮಾಹಿಲ್ ಹಿಯಾ ತಂದೆಯ ಮನೋಸ್ಥಿತಿಯನ್ನು ಅರಿತು ತಾನೂ ಬಲಿಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದ್ದು ಆ ಬಾಲಕನಲ್ಲಿರುವ ಧೈರ್ಯ, ಸ್ಥೈರ್ಯ ಮೆಚ್ಚುವಂತಹದು. ಕೊನೆಗೂ ಇಸ್ಮಾಯಿಲ್ ಹಿಯಾನನ್ನು ಕೊಲ್ಲುವ ಆ ಚೂರಿ ಸಮುದ್ರದಲ್ಲಿನ ಮೀನುಗಳನ್ನು ಬಲಿ ತೆಗೆದುಕೊಂಡು ಮಕ್ಕಾ ಸ್ಥಾನ ಶಾಶ್ವತವಾಗಿ ನೆಲೆಗೊಳ್ಳುವದು.

ಐತಿಹಾಸಿಕವಾಗಿ ಹೆಸರು ಪಡೆದಿರುವ ಕರ್ಬಲ ಯುದ್ಧದ ಕುರಿತು ಹಲವಾರು ಮೊಹರಂ ಪದಗಳು ದೊರಕುತ್ತವೆ. ಅದರಂತೆ ಇಲ್ಲಿಯೂ ದೊರೆತ ಒಂದು ರಿವಾಯತ್ ಪದವು ಕರ್ಬಲದ ದಾರುಣ ಸ್ಥಿತಿಗತಿಯನ್ನು ತಿಳಿಸುತ್ತದೆ. ಅದೆಂದರೆ ಕರ್ಬಲದ ಅಡವಿಯಲ್ಲಿ ಹಸನ್ ಹುಸೇನ ಪರಿವಾರದವರು ನೀರು ಇಲ್ಲದೇ ಮೂರು ದಿನವಿಡೀ ಬಳಲುತ್ತಾರೆ. ದುರುಳ ಯಾಜೀದರು ಅವರೊಂದಿಗೆ ಕರ್ಬಲದಲ್ಲಿ ಕದನ ಹೂಡಿದರು. ಆ ಕದನದಲ್ಲಿ ಕುರಿಕೋಳಿಯಂತೆ ಹಸನ್ ಹುಸೇನ ಶರಣರ ಗೋಣ ಕೊಯ್ದರು. ಮಕ್ಕಳಾದ ಅಸಗರಅಲಿ, ಅಲಿ ಅಬ್ಬಾಸನನ್ನು ಕೊಂದರು. ಘೋರ ಕದನ ನಡೆದು ಆಕಾಶ ಭೂಮಿ ನಡುಗಿತು. ಕರ್ಬಲದ ಮಣ್ಣು ರಕ್ತದಿಂದ ಕೆಂಪಾಗಿತ್ತು. ಪ್ರಳಯ ಕಾಲವನ್ನು ನೆನಪಿಸುವಂತೆ ಮಾಡಿತು. ಈ ಯುದ್ಧದ ಕಾಲ್ಪನಿಕ ಚಿತ್ರವು ಕರ್ಣ ಮತ್ತು ಅರ್ಜುನರ ನಡುವಿನ ಯುದ್ಧದ ಸಮಯದಲ್ಲಿ ಭೂಮಿ - ಆಕಾಶ ನಡುಗಿ, ಭೂಮಿ ಕೆಂಪಾಗಿ, ಪ್ರಳಯ ನೆನಪಾಯಿತು ಎನ್ನುವ ಕಾಲ್ಪನಿಕ ಚಿತ್ರಕ್ಕೆ ಹೊಂದಿಕೆಯಾಗುತ್ತದೆ ಎಂಬ ಕಲ್ಪನೆ ಈ ಕೆಳಗಿನ ಮೊಹರಂ ಪದವಾದ 'ಕರ್ಬಲಾ ಯುದ್ಧದ ಚರಿತ್ರೆ'ಯಿಂದ ತಿಳಿದು ಬರುತ್ತದೆ.

ಕರ್ಬಲದ ಅಡವಿಯಲ್ಲಿ । ಕಷ್ಟದಲ್ಲಿ ಸಿಲುಕಿ ಹುಸೇನಾ ।
ನೀರು ಇಲ್ಲದಿನ್ನಾ । ಆಗಿ ಮೂರು ದಿನಾ ।
ಸಣ್ಣ ಸಣ್ಣ ಮಕ್ಕಳು ಇನ್ನಾ । ಬಾಯಿ ಆರಿ ಬಳಲಿ ತಾನಾ ।
ಭೂಮಿಯನ್ನು ಬಗಿತಾರೊ ಬಾನು ಸಹಿನಾ ।
ಕುಂತು ಅಳುವರಿನ್ನಾ । ಕುಲು ಸುಮು ಜೈನಾ ॥

ಎಂದು ಆರಂಭವಾಗುವ ಈ ಮೊಹರಂ ಪದ ಹಸನ್-ಹುಸೇನ್ ಪರಿವಾರದವರು ಮೂರು ದಿನ ನೀರು ಇಲ್ಲದೇ ಬಾಯಾರಿ ಬಳಲಿ, ಭೂಮಿಯನ್ನು ಬಗಿಯುತ್ತಿರುವುದು, ಅಳುತ್ತಿರುವುದು ಶೋಚನೀಯವಾಗಿದೆ. ಓದುಗರಲ್ಲಿ ಇದು ಕರುಣಾರಸವನ್ನು ಹುಟ್ಟಿಸುತ್ತದೆ. ಮುಂದುವರಿದ ಈ ಯುದ್ಧದ ಸಮಯದಲ್ಲಿ

ಇಮಾಮೆಹುಸೇನೈನಾ । ಇಳಿಸಿದಾರೋ ಖಡ್ಗವನ್ನಾ ।
ನಮಾಜಿ ಮಾಡಲು ನಿಂತಾರೋ ಕಟ್ಟರಕತನ್ನಾ ॥
ಶುಕ್ರವಾರ ದಿನಾ । ಜೊಹರ್ ನಮಾಜಿನಾ ॥
ಸಿಜದ ದೊಳಗೆ ಶಿವನ ಧ್ಯಾನ । ಮಾಡುವಾಗ ಹುಸೆನೈನಾ ।
ನೋಡಿ ಹಿಂದೆ ಓಡಿ ಬಂತೊ ಯೇಜಿದನ ಸೈನ್ಯಾ ।
ಹಿಡಿದು ಖಡ್ಗವನ್ನಾ । ಶಿರಾ ಹರಿದಾರಣ್ಣ ॥

ಒಂದು ದಿನ ಶುಕ್ರವಾರ ನಮಾಜು ಮಾಡಲೆಂದು ಇಮಾಮೆ ಹುಸೇನಾ ಖಡ್ಗವನ್ನು ಇಳಿಸುತ್ತಾರೆ. ಆಗ ಶಿವನ (ಅಲ್ಲಾ) ಧ್ಯಾನದಲ್ಲಿ, ಪ್ರಾರ್ಥನೆಯಲ್ಲಿ ನಿರತರಾದಾಗ ಯೆಜೀದನ ಸೈನ್ಯ ಬಂದು ರುಂಡವನ್ನು ಕತ್ತರಿಸಿದರು.

ಶಿರದ ಮೇಲೆ ಖಡ್ಗವನ್ನಾ । ಸಡಿತ್ತಿತ್ತು ಒಂದೇ ಸವನಾ ।
ಹಿಡಿದ ನಮಾಜಿ ಬಿಡಲಿಲ್ಲಾ ಪ್ರಾಣ ಪಕ್ಷಿ ಹಾರುವ ತನಾ ।
ಇಮಾಮೆ ಹುಸೈನಾ ಶೆಹಿದಾದರಿನ್ನಾ ।
ಎಷ್ಟಂತ ಹೇಳಲಿ ಇದನ್ನಾ ಸತ್ಯವಂತ ಶರಣರ ಕವನಾ ।
ಶೆಹಿದಾದ ಶರಣರ ಮೇಲೆ ದರೂದ್ ಸಲಾಮನನ್ನಾ ॥

ಈ ಸ್ಥಿತಿಯಲ್ಲಿಯೂ ಹುಸೇನ ಪ್ರಾಣ ಹೋಗುವತನಕ ಹಿಡಿದ ನಮಾಜು ಬಿಡಲಿಲ್ಲ, ಪ್ರಾರ್ಥನೆ ಮಾಡಲೂ ಬಿಡದಂತೆ, ಅಷ್ಟೊಂದು ಘೋರ ಪರಿಸ್ಥಿತಿಗೆ ಕರ್ಬಲದಲ್ಲಿ ಹಸನ್ -ಹುಸೇನ್ ಪರಿವಾರ ಸಿಲುಕಿ, ತತ್ತರಿಸಿ ಕೊನೆಗೆ ವೈರಿ ಯೆಜೀದನ ಸೈನ್ಯಕ್ಕೆ ಹತರಾದರು.ಅವರ ಈ ಚರಿತ್ರಾತ್ಮಕ ಕಥೆಯ ನೆನಪೇ ಮೊಹರಂ ಆಚರಣೆಯ ಸಂಕೇತ.

ಇಂದು ಆಚರಿಸುತ್ತಿರುವ ಈ ಮೊಹರಂ ಆಚರಣೆಯ ಚರಿತ್ರೆ, ಕರ್ಬಲಾದ ಯುದ್ಧದಿಂದ ಆರಂಭಗೊಳ್ಳುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಕರ್ಬಲಾ ಯುದ್ಧದ ಬಗ್ಗೆ ಹಲವಾರು ರೀತಿಯಲ್ಲಿ ಮೊಹರಂ ಪದಗಳು ರಚನೆಯಾಗಿದ್ದು, ಅವುಗಳಲ್ಲಿ ಈ ಪದವು ಕೂಡ ಶ್ರೇಷ್ಠವಾದದ್ದು. ಯಾಜೀದನಿಗೆ ಮಾನವೀಯತೆ ಇರಲಿಲ್ಲವೆಂಬುದು ಅದಕ್ಕಾಗಿ ಮೂರು ದಿನ ಅನ್ನ, ನೀರು ಕೊಡದೇ ಅವರನ್ನು ಸತಾಯಿಸಿದ್ದು ಅವನ ದುರುಳತನವನ್ನು ಹೇಳುತ್ತದೆ. ಹಸನ್ - ಹುಸೇನ್ ಪರಿವಾರದವರು ಅದನ್ನು ಸಹಿಸಿಕೊಂಡಿರುವುದು ಅವರ ತಾಳ್ಮೆ, ಮುಗ್ಧತನವನ್ನು ಹೇಳುತ್ತದೆ. ಈ ಯುದ್ಧದಲ್ಲಿ ಹಸನ್ - ಹುಸೇನ್‌ರ ಗೋಣನ್ನು ಕುರಿ, ಕೋಳಿಯಂತೆ ಕೊಯ್ದದ್ದು ಮತ್ತು ಅವರ ಮಕ್ಕಳಾದ ಅಸಗರ್ ಅಲಿ, ಅಲಿ ಅಬ್ಬಾಸ್ ಇವರನ್ನು ಸಹ ಕೊಂದಿದ್ದು ಭೂಮಿ ಆಕಾಶ ನಡುಗುವಂತಿತ್ತು. ಈ ಕಾರಣದಿಂದ ಕರ್ಬಲಾದ ಮಣ್ಣು ಕೆಂಪಗಾಯಿತು ಎಂದು ಈ ಪದ ಹೇಳುತ್ತದೆ. ಯುದ್ಧ ಸಮಯದಲ್ಲಿ ಇಮಾಮ್

ಹುಸೇನ್‌ರು ಖಡ್ಗವನ್ನು ಇಳಿಸಿ ಪವಿತ್ರ ಶುಕ್ರವಾರ ದಿನ ನಮಾಜ ಮಾಡಲಿಕ್ಕೆ ಆರಂಭಿಸಿದ್ದು ಆತನ ಧಾರ್ಮಿಕತೆ ತಿಳಿಸುತ್ತದೆ. ಇದರಲ್ಲಿ ತಾನು ಅಸಹಾಯಕನಾಗಿ ದೇವರಲ್ಲಿ ಮೊರೆ ಹೋಗಿರಬಹುದೆಂಬುದು ಅನಿಸಿಕೆಯಾಗಿದೆ. ಈ ಚರಿತ್ರಾತ್ಮಕತೆಯ ನೆನಪೇ ಮೊಹರಂ ಆಚರಣೆಯ ಸಂಕೇತ.

ಇಂತಹ ಐತಿಹಾಸಿಕ ವಿಷಯಗಳನ್ನೊಳಗೊಂಡ ಚರಿತ್ರೆಯ ಪದಗಳು ಮೊಹರಂ ಹಬ್ಬದ ಸಮಯದಲ್ಲಿ ಕಣ್ಣಿಗೆ ಕಟ್ಟುವಂತೆ ಹಾಡುತ್ತ ಸುತ್ತ ನೆರೆದಿರುವ ಜನತೆಯ ಗಮನ ಸೆಳೆಯಲಾಗುತ್ತದೆ. ಹಾಡಿನ ಧಾಟಿ, ಭಾವುಕತೆ ಅತ್ಯಂತ ಮನೋಹರವಾಗಿರುತ್ತದೆ.

ಆಧ್ಯಾತ್ಮಿಕ ಪದಗಳು :

ಕನ್ನಡದಲ್ಲಿ ವಿಶೇಷವಾಗಿ ಉತ್ತರ ಭಾರತದಿಂದ ಬಂದ ಸಾಧು-ಸಂತರ, ಭಕ್ತಿಪಂಥದ ಪ್ರಭಾವ ಹೆಚ್ಚಾಗಿ ಕಂಡು ಬರುತ್ತದೆ. ಇವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಈ ಚಾತುರ್ವರ್ಣಗಳನ್ನು ಮೀರಿ ನಿಂತವರು. ಈ ಸಾಧು-ಸಂತರ ಪ್ರಭಾವದಿಂದ ಒಂದು ಭಕ್ತಿಪಂಥ ಹುಟ್ಟಿತು. ಇವರು ಬೆಳಗಿನಿಂದ ಸಂಜೆಯವರೆಗೆ, ಸಂಜೆಯಿಂದ ಬೆಳಗಿನವರೆಗೆ ಭಕ್ತಿಯ ಓಲಾಟದಲ್ಲಿ ತಲ್ಲೀನರಾಗುತ್ತಿದ್ದರು. ಇಂಥವರನ್ನು ಆಧ್ಯಾತ್ಮವಾದಿಗಳೆಂತಲೂ ಕರೆಯಲಾಗುತ್ತದೆ. ಅಧ್ಯಾತ್ಮ ಎಂದರೆ ಆತ್ಮವನ್ನು ಅರಿತುಕೊಳ್ಳುವುದು. ಈ ನಾಡಿನ ಆಧ್ಯಾತ್ಮಿಕವಾದಿಗಳಾದ ಸರ್ಪಭೂಷಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಚಿದಾನಂದ ಅವಧೂತ, ಶಿಶುನಾಳ ಷರೀಫ ಮೊದಲಾದವರು ಪ್ರಮುಖರು. ಇವರುಗಳು ಬೋಧಿಸಿದ ಆಧ್ಯಾತ್ಮಿಕ ಚಿಂತನೆಗಳಲ್ಲಿ ಮನುಷ್ಯನ ಬದುಕು ಹಸನುಗೊಳ್ಳುವ ಬಗೆ ಇರುತ್ತದೆ. ಇಂತಹ ಬಗೆ ಮೊಹರಂ ಪದಗಳಲ್ಲಿಯೂ ಕೂಡ ಕಾಣಬಹುದು.

ಈ ಕೆಳಗಿನ ಮೊಹರಂ ಪದವು ನಮಾಜಿನ ಫಲ ಏನೆಂಬುದನ್ನು ತಿಳಿಸುತ್ತದೆ. ಇಸ್ಲಾಂ ಧರ್ಮದಲ್ಲಿ ದಿನಕ್ಕೆ ಐದು ಬಾರಿ ನಮಾಜು ಮಾಡಿದರೆ ಮೋಕ್ಷ ಸಿಗುತ್ತದೆಂದು ನಂಬಿಕೆ ಇದೆ. ಇದೇ ನಂಬಿಕೆಯಡಿಯಲ್ಲಿ ಒಬ್ಬ ಬಡವ ದುಡಿಮೆಯಿಲ್ಲದೇ ಕೊರಗಿ ಸಂಸಾರವನ್ನು ಹೇಗೆ ನಿಭಾಯಿಸಲಿ ಎಂದು ಗೋಳಿಡುತ್ತಾ ಕೊನೆಗೆ ನಮಾಜಿಗೆ ಮೊರೆ ಹೋಗುತ್ತಾನೆ. ಆತನ ಕಾಯಾ, ವಾಚಾ, ಮನಸಾ ಪರಿಶುದ್ಧಿಯ ಮೂಲಕ ನಮಾಜು ಮಾಡುವ ಪರಿಯನ್ನು ನೋಡಿ ಸ್ವತಃ ಸಾಹುಕಾರನ ವೇಷದಲ್ಲಿ ದೇವರು ಪ್ರತ್ಯಕ್ಷಗೊಂಡು ಹೆಂಡತಿಗೆ ಗಂಡನ ಕೂಲಿಯನ್ನು ತಂದು ಕೊಡುವ ಪರಿ ಈ ಕೆಳಗಿನ 'ಭಕ್ತಿಭಾವದ ಕಥೆ ತಿಳಸ್ತೀವ್ರಿ ನಿಮಗೊಂದ ಮಾಹಿತಿ' ಎನ್ನುವ ಮೊಹರಂ ಪದ ನಮಾಜಿನ ಫಲದ ಬಗ್ಗೆ ಹೇಳುತ್ತದೆ.

ಭಕ್ತಿ ಭಾವದ ಕಥೆ ತಿಳಿಸುತ್ತೀವ್ರಿ ನಿಮಗೊಂದು ಮಾಹಿತಿ ।
ಭಕ್ತಿಲೇ ನಡೆದವರಿಗೆ ಭಯವೇನಿಲ್ಲ ।
ಮದಿನದಲ್ಲಿ ಕೇಳಿರಿ ಖಿಲ್ಲಾ ಒಬ್ಬ ಬಡವ ಇದ್ದಾನಲ್ಲ ।
ನಮಾಜ, ಮಾತ್ರ ಮಾಡುತ್ತಿದ್ದನು ರಾತ್ರಿ ಹಗಲ ।

ಆ ಬಡವನು ಹೆಂಡತಿ ಬಹಳ ಬೆರಕಿ ಇದ್ದಾಳಲ್ಲ।

ಗಂಡನ ಮೇಲೆ ಕರಕರ ಹಲ್ಲು ಕಡಿತಿದ್ದಾಳಲ್ಲ॥

ಎಂದು ಆರಂಭವಾಗುವ ಈ ಮೊಹರಂ ಪದವು ಆಧ್ಯಾತ್ಮಿಕ ಪದವಾಗಿದ್ದು ದೇವರು, ಧರ್ಮ, ಮುಕ್ತಿ ಅವುಗಳತ್ತ ಮನುಷ್ಯನನ್ನು ವಾಲಿಸುವಲ್ಲಿ ಸಾರ್ಥಕ ಪ್ರಯತ್ನ ಮಾಡುತ್ತಿದೆ. ಈ ಮೊಹರಂ ಪದದಲ್ಲಿ ಒಬ್ಬ ಬಡವನು ಹಗಲು ರಾತ್ರಿ ಎನ್ನದೆ ನಮಾಜು ಮಾಡುವ ಕಾಯಕದಲ್ಲಿ ನಿರತನಾಗಿದ್ದನು. ಅದೇ ಅವನಿಗೆ ಕಾಯಕವಾಗಿತ್ತು. ಮನೆಯ ಸಂಸಾರದ ಜವಾಬ್ದಾರಿ, ದುಡಿಯುವುದು ಇದ್ಯಾವುದೂ ಅವನಿಗಿರಲಿಲ್ಲ. ಆ ಬಡವನ ಹೆಂಡತಿ ಗಂಡನ ಮೇಲೆ ದುಡಿಯುವದಿಲ್ಲವೆಂದು ಹಲ್ಲು ಕಡಿಯುತ್ತಿದ್ದಳೆಂದು ತಿಳಿಸುವ ಈ ಆಧ್ಯಾತ್ಮಿಕ ಪದವು ಮುಂದುವರಿದು ಹೆಂಡತಿಯು ಇವಗ್ಯಾಕ ಬರವಲ್ಲು ಸಾವು ಇಡಿದೈತ್ರಿ ನಮಾಜಿನ ದೆವ್ವ ಎಂದು ಶಪಿಸುತ್ತಿದ್ದಳು. ಒಂದು ದಿನ ಕರಾರುವಕ್ಕಾಗಿ ಆಕೆ ಕೂಲಿಯನ್ನು ತರದಿದ್ದರೆ ಊಟಕ್ಕೆ ಹಾಕುವದಿಲ್ಲವೆಂದು ಗಂಡನಿಗೆ ಹೇಳುತ್ತಾಳೆ. ಮರುದಿನ ಆ ಬಡವನು ಹೆಂಡತಿಯ ಮಾತನ್ನು ಕೇಳಿ ಸಾಹುಕಾರನ ಹತ್ತಿರ ದುಡಿಯಲಿಕ್ಕೆ ಹೋಗುತ್ತಾನೆ. ಹೋದ ದಾರಿಗೆ ಸುಂಕವಿಲ್ಲ ಎನ್ನುವಂತೆ ಕೆಲಸವಿಲ್ಲದೇ ವಾಪಸ್ ಬರುತ್ತಾನೆ. ಆ ಬಡವನಿಗೆ ಒಂದು ಕಡೆ ಕೂಲಿ ಕೆಲಸವಿಲ್ಲದ ಚಿಂತೆ, ಮತ್ತೊಂದು ಕಡೆ ಹೆಂಡತಿಯ ಚಾಟಿ ಮಾತು. ಇವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸರಸರನೆ ಅಡವಿಗೆ ಬರುತ್ತಾನೆ.

ಸಾಹುಕಾರನ ಮಾತು ಕೇಳ್ಯಾನಲ್ಲ ಸರಸರ ಅಡವಿಗೆ।

ಹೋಂಟಾನಲ್ಲ ನಮಾಜ ಮಾಡುತ್ತಾ ಹೊತ್ತುಗಳೆದನು ಭಕ್ತಿಯ ಮೇಲಾ॥

ಅಡವಿಗೆ ಬಂದು ನಮಾಜು ಮಾಡುತ್ತಾ ಕಾಲವನ್ನು ಕಳೆಯುತ್ತಾನೆ. ಒಂದು ದಿನ ರಾತ್ರಿ ಗಂಡ ಮನೆಗೆ ಬಂದಾಗ ಹೆಂಡತಿಯು ಕೂಲಿ ಕೇಳುತ್ತಾಳೆ. ಸಾಹುಕಾರನು ಒಂದು ವಾರದ ನಂತರ ಕೊಡುತ್ತಾನೆಂದು ಅವನು ಸುಳ್ಳು ಹೇಳುತ್ತಾನೆ. ಅದರ ಪ್ರಕಾರ ಹೆಂಡತಿ ವಾರದ ನಂತರ ಗಂಡನ ಕೈಯಲ್ಲಿ ಸಾಮಾನುಗಳನ್ನು ತರಲು ನಾಲ್ಕಾರು ಚೀಲಗಳನ್ನು ಕೊಟ್ಟು ಕಳುಹಿಸಿದನು. ಹೆಂಡತಿಗೆ ಸುಳ್ಳು ಹೇಳಿದ ತಪ್ಪಿಗಾಗಿ ಆ ಬಡವನು ಭಾರಿ ಫಜೀತಿಗೆ ಬೀಳುತ್ತಾನೆ. ಅಡವಿಯಲ್ಲಿಯೇ ರಾತ್ರಿ ಹೊತ್ತು ಕಾಲವನ್ನು ಕಳೆಯುತ್ತಾನೆ.

ಇಂದು ರಾತ್ರಿ ಮನೆಗೆ ನಾನು ಹೋಗುವುದಿಲ್ಲ।

ಅಡುವ್ಯಾಗ ಕುಂತಾನಲ್ಲ ಭಕ್ತಿಲೇ ನಮಾಜ ಮಾಡುತ್ತಾನಲ್ಲ॥

ಇಡೀ ರಾತ್ರಿ ಅಡವಿಯಲ್ಲಿಯೇ ನಮಾಜು ಮಾಡುವುದನ್ನು ಕಂಡು ಶಿವನಿಗೆ ಆ ಬಡವನ ಮೇಲೆ ಕರುಣೆ ಬಂದಿತು. ಮುದುಕನ ವೇಷವನ್ನು ತಾಳಿ ಶಿವನು ಆ ಹೆಂಡತಿಯ ಮನೆಗೆ ಬಂದು ನಿನ್ನ ಗಂಡನ ಸಂಬಳ ತೆಗೆದುಕೋ ಎಂದು ಕೊಟ್ಟನು. ಆತ್ತ ಕಡೆ ದಾರಿ ಕಾಣದೇ ಹತಾಶೆಗೊಂಡು ಗಂಡನು ಕೈಚೀಲದಲ್ಲಿ ಕಲ್ಲು ಮಣ್ಣನ್ನು ತುಂಬಿಕೊಂಡು ಬಂದನು. ಬರುತ್ತಿದ್ದಂತೆಯೇ ಹೆಂಡತಿಯು ಗಂಡನನ್ನು ಸ್ವಾಗತಿಸಿ ನೀರು ಕೊಟ್ಟು ಊಟಕ್ಕೆ ಕರೆದಳು. ನಿಮ್ಮ ಸಾಹುಕಾರ ಬಂದು ಪಗಾರ ಕೊಟ್ಟು ಹೋದರು ಮತ್ತೇನು ತಂದಿ ಎಂದು

ಕೈಚೀಲವನ್ನು ಸುರುವಿದಾಗ ಮುತ್ತು ರತ್ನವು ಬಿದ್ದವು. ಕೂಡಲೇ ಗಂಡ ಹೆಂಡತಿಯರು ಆಶ್ಚರ್ಯ ಚಕಿತರಾಗುತ್ತಾರೆ. ಒಂದು ಕಡೆ ಹತಾಶೆಗೊಂಡಿರುವ ಗಂಡ, ಮತ್ತೊಂದು ಕಡೆ ಮುದುಕ ಸಾಹುಕಾರನ ವೇಷವನ್ನು ತಾಳಿ ಹೆಂಡತಿಗೆ ಸಂಬಳವನ್ನು ಕೊಟ್ಟ ಶಿವ, ಮತ್ತೊಂದು ಕಡೆ ಆ ಗಂಡನ ಕೈಯಲ್ಲಿನ ಕೈಚೀಲದಲ್ಲಿ ಮುತ್ತು ರತ್ನಗಳು ಬಿದ್ದಿರುವ ಸನ್ನಿವೇಶ. ಇವೆಲ್ಲವೂ ನಮಾಜು ಮಾಡಿದ ಫಲ ಎಂದು ಅವನ ಹೆಂಡತಿ ಗಂಡನಿಗೆ ಈ ರೀತಿ ಪ್ರಶ್ನೆ ಕೇಳುತ್ತಾಳೆ.

ನಿಮ್ಮ ಸಾಹುಕಾರ ಅದಾನ ಭಾರಿ ನಾನು ನೋಡತಿನಿ ಒಂದು ಸಾರಿ ।
ತೋರಿಸಬೇಕು ಎಂದು ಹಟ ಹಿಡಿದಾಳಲ್ಲ ॥

ಹೆಂಡತಿಯ ಮಾತನ್ನು ಕೇಳಿ ಗಂಡ

ಅವಾ ಹಾಂಗಾ ಕಾಣೊದಿಲ್ಲ ।
ನಮಾಜ ಮಾಡಿದ ಫಲ ನಮಗೆ ಸಿಕ್ಕಿತಲ್ಲಾ ॥

ಎಂದು ಇದು ನಮಾಜು ಮಾಡಿದ ಫಲವೆಂದು ಹೇಳುತ್ತಾನೆ.

ಈ ಮೊಹರಂ ಪದವು ಒಂದು ಆಧ್ಯಾತ್ಮಿಕ ಪದವಾಗಿದ್ದು, ಮನುಷ್ಯನಲ್ಲಿ ಏನೆಲ್ಲ ಕಷ್ಟ ಕಾರ್ಪಣ್ಯಗಳಿದ್ದರೂ ದೇವರು, ಧರ್ಮ, ಪೂಜೆ, ಪುರಸ್ಕಾರ, ಪ್ರಾರ್ಥನೆ, ನಮಾಜು, ಭಕ್ತಿ ಇವುಗಳನ್ನು ಬಿಡಬಾರದೆಂದು ತಿಳಿಸುತ್ತದೆ. ಇವುಗಳು ಎಂದೆಂದಿಗೂ ನಿರುಪಯುಕ್ತವಾಗುವದಿಲ್ಲ. ನಮ್ಮ ಸಂಕಷ್ಟದ ದಿನಗಳಲ್ಲಿ ಇವುಗಳ ಫಲ ನಮಗೆ ಲಭಿಸುತ್ತದೆ. ಇಂದಿಗೂ ಕಂಪ್ಯೂಟರ್ ಈ ಯುಗದಲ್ಲಿ ಇವುಗಳೆಲ್ಲ ಆಚರಣೆಗೆ ತರುವ ಜನರು ನಮ್ಮ ಮಧ್ಯೆ ಇದ್ದಾರೆ. ಬಸವಣ್ಣನ ಒಂದು ನುಡಿ ಪರೋಕ್ಷವಾಗಿ ಕಂಡು ಬರುತ್ತಿದೆ. ಅದೆಂದರೆ ಕಾಯಕವೇ ಕೈಲಾಸ. ಈ ಮೊಹರಂ ಪದದಲ್ಲಿ ಆ ಬಡವನು ದಿನನಿತ್ಯ ನಮಾಜು ಮಾಡುವದು ಅವನ ಪಾಲಿಗೆ ಕಾಯಕವಾಗಿತ್ತೇ ಹೊರತು ದುಡಿಮೆ ನಿಜವಾದ ಕಾಯಕವಾಗಿರಲಿಲ್ಲ. ಯಾವುದೇ ಕಾಯಕವನ್ನು ಕಾಯಾ, ವಾಚಾ, ಮನಸಾ ಮಾಡಿದ್ದೇ ಆದರೆ ಫಲ ಪ್ರಾಪ್ತಿಯಾಗುತ್ತದೆ ಎನ್ನುವದಕ್ಕೆ ಈ ಆಧ್ಯಾತ್ಮಿಕ ಪದವು ಸಾಕ್ಷಿ.

'ಗೋವಿನ ಹಾಡು' ಎನ್ನುವ ಕನ್ನಡ ಜನಪದ ಸಾಹಿತ್ಯದಲ್ಲಿ ಹುಲಿಗೆ ಮಾತು ಕೊಟ್ಟು ತಪ್ಪದೇ ಬಂದು ಆತ್ಮಾಹುತಿಯಾಗಲು ಸಿದ್ಧವಾದ ಪುಣ್ಯಕೋಟಿಯ ಮಾನಸಿಕ ಸಾಮರ್ಥ್ಯ ಓದುಗರನ್ನು ಬೆಚ್ಚಿ ಬೀಳಿಸುತ್ತದೆ. ಇದೇ ರೀತಿ ಬೇಟೆಗಾರನ ಬಲೆಯಲ್ಲಿ ಬಿದ್ದ ಚಿಗರೆ ಮಹಮ್ಮದ ಶರಣರ ಮಧ್ಯಸ್ತಿಕೆಯ ಜಾಮೀನಿನಲ್ಲಿ ಬಿಡುಗಡೆಗೊಂಡು ಮಕ್ಕಳನ್ನು ಭೇಟಿಯಾಗಿ ಹಾಲುಣಿಸಿ ಮತ್ತೆ ಹಿಂತಿರುಗಿ ಬೇಟೆಗಾರನ ಬಳಿಗೆ ಬಂದು ಆತ್ಮಾಹುತಿಯಾಗಲು ಸಜ್ಜಾದ ಚಿಗರೆಯ ಪ್ರಾಮಾಣಿಕ ಪ್ರಸಂಗವನ್ನು ಈ ಕೆಳಗಿನ 'ಚಿಗರೆಯ ಕಥೆ' ಎನ್ನುವ ಮೊಹರಂ ಪದವು ತಿಳಿಸುತ್ತದೆ.

ಮದೀನಾದಲ್ಲಿ ಇದ್ದನೋ ನೋಡಿರಿ ಬೇಟೆಗಾರ ।

ಬೇಟೆ ಆಡಲಿಕ್ಕೆ ಹೋದ ಅಡವಿಗೆ ತೀವ್ರ ।

ಒಂದು ಚಿಗರಿ ಸಿಕ್ಕಿತು ಬಲಿಯೊಳಗ ಪೂರಾ ।

ಆ ಚಿಗರಿಗೆ ಹಿಡಿದುಕೊಂಡು ಮನೆಗೆ ಬಂದ ಬೇಟೆಗಾರ ॥

ಎಂದು ಆರಂಭವಾಗುವ ಈ ಆಧ್ಯಾತ್ಮಿಕ ಹಾಡು ಸಿಂದೋಗಿಯ ಸಂಗಣ್ಣನು ಹಾಡುವಾಗ ಎಂಥವರಾದರೂ ಕಣ್ಣೀರು ಸುರಿಸಬೇಕು. ಈ ಪದದ ಕಥೆ ಏನೆಂದರೆ ಒಬ್ಬ ಬೇಟೆಗಾರನು ಒಂದು ಚಿಗರೆಯನ್ನು ಬೇಟೆಯಾಡಿ ತಂದಂತಹ ಕಥೆ ತಿಳಿಸುತ್ತದೆ. ಆ ಬೇಟೆಗಾರನು ಚಿಗರೆಯನ್ನು ಕೊಲ್ಲುವಾಗ ಅದು ನನ್ನನ್ನು ಕೊಲ್ಲಬೇಡವೆಂದು, ಮಕ್ಕಳಿಗೆ ಹಾಲುಣಿಸಿ ಬರುತ್ತೇನೆಂದು ಹೇಳುತ್ತದೆ. ಹಾಗೆಯೇ ನನಗೆ ಮೂರು ದಿನದಿಂದ ಆಹಾರವಿಲ್ಲವೆಂದು ತನ್ನ ದುಃಖವನ್ನು ತೋಡಿಕೊಳ್ಳುತ್ತದೆ. ಬೇಟೆಗಾರ ಇದಾವ ಮಾತನ್ನು ಕೇಳದೇ ಚೂರಿ ಹಾಕಲು ತಯ್ಯಾರಿ ನಡೆಸುತ್ತಾನೆ. ಹೆಂಡತಿಗೆ ಖಾರ, ಮಸಾಲಿ ಕುಟ್ಟು ಎಂದು ಹೇಳುತ್ತಾನೆ. ಸಾವು ಬದುಕಿನ ಮಧ್ಯದಲ್ಲಿದ್ದ ಚಿಗರೆ ಇರುವ ಸಂದರ್ಭದಲ್ಲಿ ಚಿಗರೆಯ ಪರವಾಗಿ ಅಲ್ಲಿಗೆ ಬಂದ ಮಹಮ್ಮದರು ಜಾಮೀನು ಆಗಿ ಆ ಚಿಗರೆಯನ್ನು ಮಕ್ಕಳಿಗೆ ಹಾಲನ್ನು ಕೊಟ್ಟು ಬರಲಿಕ್ಕೆ ಕಳುಹಿಸಿಕೊಡುತ್ತಾನೆ. ಹಾಗೆಯೇ ಚಿಗರೆಗೆ ನೀನು ಬರದಿದ್ದರೆ ಶರಣರನ್ನು ಕೊಲ್ಲುತ್ತೇನೆ ಎಂದು ಕರಾರು ಹಾಕುತ್ತಾನೆ. ಚಿಗರೆಯು ಬೇಗನೇ ಮಕ್ಕಳಿಗೆ ಹಾಲುಣಿಸಿ ವಾಪಾಸ್ ಬೇಟೆಗಾರನ ಹತ್ತಿರ ಬಂದಿತು. ಹಾಗೆ ಬರವಾಗ ಚಿಗರೆಯ ಮಕ್ಕಳೂ ಸಹ ಬಂದು ಬೇಟೆಗಾರನನ್ನು ಕುರಿತು

ಮಕ್ಕಳು ಮೂರಾ, ಮೊದಲು ನಮಗ ಕೊಲ್ಲು ।

ನೀನು ಮಾಡದೇ ಬಡಿವಾರ ॥

ಎಂದು ಅಂಗಲಾಚುತ್ತವೆ. ಚಿಗರೆಯ ಮಕ್ಕಳ ಮಾತನ್ನು ಕೇಳಿ ಬೇಟೆಗಾರನು ಮನಸ್ಸು ಪರಿವರ್ತಿಸಿಕೊಂಡು ಮುಗ್ಧ ಮಕ್ಕಳನ್ನು ಕೊಲ್ಲಲಾರದೇ ನನ್ನನ್ನು ಕ್ಷಮಿಸಬೇಕೆಂದು ಮಹಮ್ಮದರನ್ನು ಕೇಳಿಕೊಳ್ಳುತ್ತಾನೆ. ಈ ಮೊಹರಂ ಪದವು ಜನಪದದ ಹೆಸರಾಂತ ಗೋವಿನ ಹಾಡನ್ನು ಹೋಲುವಂತಿದೆ. ಗೋವಿನ ಹಾಡಿನಲ್ಲಿ ಹುಲಿಯ ಬಾಯಿಗೆ ಸಿಕ್ಕಂತಹ ಪುಣ್ಯಕೋಟಿ ಎಂಬ ಗೋವು ಹುಲಿಯ ಅಪ್ಪಣೆಯನ್ನು ಪಡೆದುಕೊಂಡು ಪುನಃ ಆತ್ಮಾಹುತಿಯಾಗಲು ಬಂದಂತೆ ಇಲ್ಲಿ ಚಿಗರೆಯು ಬೇಟೆಗಾರನ ಹತ್ತಿರ ಮಕ್ಕಳ ಸಮೇತ ಬಂದಿರುವದು ತಿಳಿದು ಬರುತ್ತದೆ. ಗೋವಿನ ಹಾಡಿನಲ್ಲಿ ಪುಣ್ಯಕೋಟಿಯು ಕೊಟ್ಟ ಮಾತಿಗೆ ತಪ್ಪದೇ ಬಂದು ಖಂಡವಿದೆ ಕೋ ಮಾಂಸವಿದೆ ಕೋ ಎಂದು ಹುಲಿಯನ್ನು ಕುರಿತು ಹೇಳುತ್ತಾ ತನ್ನನ್ನು ಕೊಂದು ತಿನ್ನಲು ಆಹ್ವಾನ ನೀಡಿದಾಗ ಹುಲಿಯ ಮನ ಪರಿವರ್ತನೆಗೊಂಡು ಎನ್ನ ಒಡಹುಟ್ಟಕ್ಕ ನೀನು, ನಿನ್ನ ಕೊಂದು ನಾನೇನ ಪಡೆವೆನು ಎನ್ನುತ್ತಾ ಮೇಲಿನಿಂದ ಹಾರಿ ಕೆಳಗೆ ಬಿದ್ದು ಸತ್ತು ಹೋಗುತ್ತದೆ. ಇದೇ ರೀತಿ ಈ ಮೊಹರಂ ಪದದಲ್ಲಿ ಕೊಟ್ಟ ಮಾತಿಗೆ ತಪ್ಪದೇ ಬಂದಂತಹ ಚಿಗರೆ ಮತ್ತು ಚಿಗರೆಯ ಮಕ್ಕಳನ್ನು ನೋಡಿ ಮನ ಪರಿವರ್ತನೆಗೊಂಡಿತು. ಆ ಬೇಟೆಗಾರನಿಗೆ ಮಕ್ಕಳು ದೇವರ ಸಮಾನವೆಂದು, ಅವುಗಳನ್ನು ಕೊಲ್ಲುವದು ಧರ್ಮವಲ್ಲವೆಂಬ ಭಾವನೆ ಬಂದು ಚಿಗರೆಯನ್ನು ಕೊಲ್ಲಲಿಲ್ಲ. ಮಹಮ್ಮದ್‌ರು ಮಾಡಿದ

ಈ ಉಪಕಾರವನ್ನು ಕಂಡು ಚಿಗರೆ

ಚಿಗರಿ ಹೇಳತೈತ್ರಿ ಮಹಮ್ಮದ ಶರಣರ ।
ಎಂದೆಂದಿಗೂ ಮರೆಯುವದಿಲ್ಲ ಮಾಡಿದ ಉಪಕಾರ ।
ಹೀಗೆಂದು ಬಾಯಿಲೇ ಹೇಳಿ ಮಾಡಿತೋ ನಮಸ್ಕಾರ ।
ಮಹಮ್ಮದ ಶರಣರು ಮಾಡಿದ ಉಪಕಾರ ।
ವರ್ಷಕ್ಕೊಮ್ಮೆ ನಡಿಸುವದು ಕೇಳಿರಿ ಜನರಾ ।
ಬಕರೀದ ಹಬ್ಬದ ದಿನ ಕೇಳಿರಿ ಜನರಾ ।
ಒಂಟಿಗಾಲಿಲೇ ನಿಲ್ಲುವದು ಪೂರಾ ।
ಒಂದೇ ಮನದಿಂದ ಅದು ನೆನೆಸುವದು ದೇವರಾ ॥

ಪ್ರತಿ ವರ್ಷ ಬಕರೀದ ಹಬ್ಬದ ಸಂದರ್ಭದಲ್ಲಿ ಮಹಮ್ಮದ್‌ರು ಮಾಡಿದ ಉಪಕಾರ ಸ್ಮರಣೆಗಾಗಿ ಒಂಟಿಗಾಲಿನಲ್ಲಿ ನಿಂತುಕೊಳ್ಳುತ್ತದೆ. ಈ ಮೊಹರಂ ಪದವು ದೇವರು, ಧರ್ಮ, ನಿಷ್ಠೆ, ಕೊಟ್ಟ ಮಾತಿಗೆ ತಪ್ಪದೇ ನಡೆಯುವಂತಹ ವಚನ ಪಾಲನೆ ಮೊದಲಾದ ಮೌಲ್ಯಗಳನ್ನು ತಿಳಿಸುತ್ತದೆ.

ಕಥಾನಕ ಪದಗಳು :

ಜನಪದ ಸಾಹಿತ್ಯ ನಿಂತ ನೀರಲ್ಲ. ಅದು ಹರಿಯುವ ಪ್ರವಾಹ. ಅಂತೆಯೇ ಜನಪದ ಸಾಹಿತ್ಯವು ವಿಶಾಲವಾಗಿ ಹರಡುತ್ತಿದೆ. ಗ್ರಂಥಸ್ಥ ಸಾಹಿತ್ಯಕ್ಕಿಂತ ಕಂಠಸ್ಥ ರೂಪದಲಿ ಹೆಚ್ಚು ಜನಪ್ರಿಯವಾಗುತ್ತಲಿದೆ. ಮೊಹರಂ ಪದಗಳು ಕೂಡ ಜನಪದ ಸಾಹಿತ್ಯದ ಒಂದು ಭಾಗ. ಇಲ್ಲಿ ಕಂಡು ಬರುವ ಪದಗಳ ಪ್ರಕಾರಗಳಲ್ಲಿ ಕಥಾನಕ ಮೊಹರಂ ಪದಗಳ ಪ್ರಕಾರವೂ ಒಂದು. ಹೆಸರೇ ಹೇಳುವಂತೆ ಕಥೆಯ ರೂಪದಲ್ಲಿ ಹೆಣೆದಿರುವ ಪದಗಳು. ಅಂದರೆ ಒಂದು ನಿರ್ದಿಷ್ಟ ಕಥೆಯನ್ನು ಹಾಡಿನ ರೂಪದಲ್ಲಿ ರೂಪಿಸಿರುವುದು. ಕಥಾನಕ ಪದಗಳಲ್ಲಿಯೂ ಆರಂಭದಲ್ಲಿ ಶ್ರೋತೃ ವರ್ಗಕ್ಕೆ ಗೌರವ ಸೂಚಿಸುವದರ ಮೂಲಕ ಕಥೆ ಆರಂಭಗೊಳ್ಳುತ್ತವೆ. ಈ ಕಥಾನಕ ಗೀತೆಗಳಲ್ಲಿ ಆಧ್ಯಾತ್ಮಿಕ ಹಾಡುಗಳು, ಚರಿತ್ರೆಯ ಹಾಡುಗಳು, ವ್ಯಕ್ತಿ ಚರಿತ್ರೆಯ ಹಾಡುಗಳು ಸಹ ಸೇರಿವೆ. ಕೊಪ್ಪಳ ಜಿಲ್ಲೆಯಾದ್ಯಂತ ಸಾಕಷ್ಟು ಕಥಾನಕ ಗೀತೆಗಳು ಕಂಠಸ್ಥ ಇಲ್ಲವೇ ಗ್ರಂಥಸ್ಥ ರೂಪದಲ್ಲಿರುವದನ್ನು ನೋಡಬಹುದು. ಅವುಗಳಲ್ಲಿ ಅಧ್ಯಯನದ ದೃಷ್ಟಿಯಿಂದ ಕೆಲವು ಸಂಗ್ರಹದ ಕಥಾನಕ ಗೀತೆಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿ ವಿವರಿಸಲಾಗಿದೆ.

ಗ್ಯಾರವಿ ಹಬ್ಬದ ದಿನದಂದು ಒಬ್ಬ ಸೋದೆಗಾರನು ಫಕೀರನೋರ್ವನಿಗೆ ಊಟಕ್ಕೆ ಆಹ್ವಾನಿಸಿ ಆತಿಥ್ಯವನ್ನು ತೋರಿಸುತ್ತಾನೆ. ಆ ಸಮಯದಲ್ಲಿ ಅವನು ಹೈರಾಣಗೊಂಡು ಸಾವನ್ನಪ್ಪುತ್ತಾನೆ. ಹೆಂಡತಿಗೆ ಈ ವಿಷಯವನ್ನು ಫಕೀರನಿಗೆ ತಿಳಿಸದೇ ಊಟಕ್ಕೆ ಬಡಿಸೆಂದು ಆದೇಶವನ್ನು ನೀಡಿದ್ದ ಕಾರಣ ಹಾಗೆಯೇ ನಡೆಯಲೆತ್ನಿಸಿದಾಗ, ಫಕೀರನು ಮನೆಯ ಮಾಲಿಕ ಹೇಳಿದರೆ ಮಾತ್ರ ಊಟ ಮಾಡುತ್ತೇನೆಂದು ಹೇಳಿದಾಗ ಸತ್ತಿರುವ ವಿಷಯವನ್ನು ಹೆಂಡತಿಯ ಮೂಲಕ ಫಕೀರನು ಅರಿತುಕೊಂಡು ಅವವನ್ನು ಮತ್ತೆ

ಬದುಕಿಸುವುದರ ಮೂಲಕ ಪವಾಡ ಸಾಧ್ಯಕ್ಯತೆಯನ್ನು ತೋರಿಸುವ ವಿಷಯ ಕೆಳಗಿನ 'ಮಹಿಬೂಬ ಸುಬಾನಿ ಗ್ಯಾರವಿ ಹಬ್ಬ'ದ ಪದದಲ್ಲಿ ತಿಳಿಸಲಾಗಿದೆ.

ಕುಂತೀರಿ ಜನ ಕೇಳಿರಿ ಹಸನಾ ।
ಅಂತೀರಿ ಒಂದು ಬಯ್ಯಾನಾ ।
ಮಹಾ ನಗರ ಎಂಬುವುದು ಇತ್ತೊಂದು ಪಟ್ಣಾ ।
ಒಬ್ಬ ಸೋದೆಗಾರ ಇದ್ದ ಭಕ್ತಿವಾನಾ ।
ಸತಿ ಪತಿ ಕೂಡಿ ಇದ್ರೋ ಬಹುರತನ ।
ವರ್ಷಕ ಒಂದು ದಿನ ಮಹೆಬೂಬ ಸುಬಾನ ।
ಗ್ಯಾರವಿ ಹಬ್ಬ ಮಾಡಿ ಬಡ ಬಗ್ಗರಿಗೆ ಅನ್ನ ।
ಊಟ ಮಾಡಸ್ತಿದ್ದಾನು ಮಾಡಿ ದೇವರ ಧ್ಯಾನ ।

ಎಂದು ಆರಂಭಗೊಂಡ ಈ ಕಥಾನಕ ಮೊಹರಂ ಪದ ಒಂದು ಕಥೆಯನ್ನು ಕುರಿತು ಹೇಳುತ್ತದೆ. ಮಹಾನಗಾರವೊಂದರಲ್ಲಿ ಒಬ್ಬ ಸೋದೆಗಾರನು ಇದ್ದನು. ಅವನು ಭಕ್ತಿವಾನನೆಂದು, ಪತಿ ಪತ್ನಿ ಸೇರಿ ವರ್ಷಕ್ಕೊಮ್ಮೆ ಮಹೆಬೂಬ ಸುಬಾನಿ ಗ್ಯಾರವಿ ಹಬ್ಬವನ್ನು ಆಚರಿಸಿ ಬಡಬಗ್ಗರಿಗೆ ಅನ್ನದಾನವನ್ನು ಮಾಡಿ ಭಕ್ತಿಯನ್ನು ಮೆರೆಯುತ್ತಿದ್ದರು. ಇದರಂತೆ ಬಹುದಿವಸಗಳ ಕಾಲ ಕಾಲಕಳೆದನು. ಒಂದುದಿನ ಗ್ಯಾರವಿ ಹಬ್ಬ ಬಂದಾಗ ಎಲ್ಲ ತಯ್ಯಾರಿಯನ್ನು ನಡೆಸಿ ಬಡವರಿಗೆ ಅನ್ನದಾನ ಮಾಡಲು ಸಜ್ಜಾಗುತ್ತಾನೆ. ಈ ಸಮಯದಲ್ಲಿ ಆ ಸೋದೆಗಾರನು ವಾಂತಿ ಮತ್ತು ಭ್ರಾಂತಿಯಿಂದಾಗಿ ಹೈರಾಣಗೊಂಡು ತನ್ನ ಪತ್ನಿಯನ್ನು ಕರೆದು ನಾನು ಸಾಯುತ್ತಿರುವೆನು ನನ್ನ ಅನ್ನದ ಋಣ ಮುಗಿಯಿತೆಂದು ಹೇಳುತ್ತಾನೆ. ಆ ಭಕ್ತಿವಾನನು ಹೆಂಡತಿಯನ್ನು ಕರೆದು ನಾನು ಸತ್ತ ಸುದ್ದಿ ಬಚ್ಚಿಟ್ಟು ಫಕೀರರಿಗೆ ತಿಳಿಸದೇ ಊಟವನ್ನು ಮಾಡಿಸೆಂದು, ನನ್ನ ಮಾತನ್ನು ನಡೆಸೆಂದು ಹೇಳಿ ಪ್ರಾಣವನ್ನು ಬಿಟ್ಟನು.

ಪತಿಯ ಆಜ್ಞೆಯಂತೆ ಮಾಡ್ಯಾಳ ಅಡಿಗಿಯಾನಾ ।
ಸರ್ವ ಫಕೀರರಿಗೆ ಕೊಟ್ಟಳು ಎಡೆಯನ್ನು ।
ಊಟ ಮಾಡಿರಂತ ಮಾಡ್ಯಾಳು ಅಪ್ಪಣಿಯನ ।
ಅಷ್ಟರಲ್ಲಿ ಒಬ್ಬ ಫಕೀರ ಹೇಳುತಾನ ।
ಮನಿ ಮಾಲಿಕ ಹೇಳಿದರೆ ಮಾಡುವೆವು ಊಟವನಾ ॥

ಪತಿಯ ಆದೇಶದಂತೆ ಪತ್ನಿ ಅಡುಗೆ ಮಾಡಿಸಿ ಎಲ್ಲ ಫಕೀರರಿಗೂ ಉಣಬಡಿಸುತ್ತಾಳೆ. ಅಷ್ಟರಲ್ಲಿ ಒಬ್ಬ ಫಕೀರನು ಮನೆ ಮಾಲೀಕ ಹೇಳಿದರೆ ಮಾತ್ರ ಊಟ ಮಾಡುವೆವೆಂದು ಹೇಳುತ್ತಾನೆ.
ಆಗ ಒಬ್ಬ ಫಕೀರನು ವಿಷಯ ತಿಳಿದು ಸತ್ತವನನ್ನು ತೆಗೆದುಕೊಂಡು ಬಾ ಎಂದು ಹೇಳುತ್ತಾನೆ.

ಫಕೀರನ ಆಜ್ಞೆಯಂತೆ ತಂದಳು ಶವವನ್ನ ।
ಆಗ ಫಕೀರರು ಶವಕ್ಕೆ ಹೇಳುತಾನಾ।

ಊಟ ಮಾಡೋಣ ಏಳೋ ಭಕ್ತಿವಾನ ।

ಸತ್ತವನು ಎದ್ದು ಕುಂತ ।

ಮಾಡಿದನು ತಿರುಗಿ ನೋಡುವುದರೊಳಗೆ ಫಕೀರ ಮಾಯವಾದನು ॥

ಫಕೀರನ ಆದೇಶದಂತೆ ಆಕೆ ಪತಿಯ ಶವವನ್ನು ತಂದಳು ಆಗ ಫಕೀರನು ಶವಕ್ಕೆ ಊಟ ಮಾಡೋಣ ಎದ್ದೇಳು ಭಕ್ತಿವಾನ ಎಂದ ಕೂಡಲೇ, ಸತ್ತವನು ಎದ್ದು ಜೀವಂತವಾಗುತ್ತಾನೆ. ತಿರುಗಿ ನೋಡುವದರೊಳಗಾಗಿ ಫಕೀರನು ಮಾಯವಾದನು.

ಈ ಮೇಲಿನ ಕಥಾನಕ ಮೊಹರಂ ಪದವು ಸಂಪ್ರದಾಯದ ಮಹಿಬೂಬ ಸುಬಾನಿ ಗ್ಯಾರವಿ ಹಬ್ಬವನ್ನು ಬಡಬಗ್ಗರು ಸಹಿತ ಆಚರಿಸಿ ದಾನ, ಧರ್ಮ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ಅದರಂತೆ ಆ ಊರಿನ ಸೋದೆಗಾರನು ಗ್ಯಾರವಿ ಹಬ್ಬದ ಸಮಯದಲ್ಲಿ ಫಕೀರರಿಗೆ ಉಣ ಬಡಿಸುತ್ತಿದ್ದುದು ಅವನ ದಾನ ಮತ್ತು ಧರ್ಮ ಬುದ್ಧಿಯನ್ನು ತೋರಿಸುತ್ತದೆ. ಸೋದೆಗಾರನು ತಾನು ಸಾಯುವ ಹಾಗೆಯೇ ಈ ವಿಷಯವನ್ನು ಫಕೀರನಿಗೆ ತಿಳಿಸಬೇಡದು ಎನ್ನುವವರ ಮೂಲಕ ಕ್ರಿಯಾಪ್ರಜ್ಞೆಯನ್ನು ತೋರಿಸುತ್ತಾನೆ. ಊಟ ಮಾಡಲು ಬಂದಂತಹ ಫಕೀರನು ಸ್ವಾಮಿನಿಷ್ಠೆಯನ್ನು ಅರಿತು ಮನೆಯ ಮಾಲಿಕ ಹೇಳಿದರೆ ಮಾತ್ರ ಊಟ ಮಾಡುತ್ತೇನೆ ಎಂದು ಹೇಳುತ್ತಾನೆ. ಕೊನೆಗೂ ಸತ್ಯವನ್ನು ಅರಿತು ಅವನನ್ನು ಬದುಕಿಸುವದರ ಮೂಲಕ ತನ್ನ ಪವಾಡ ಸಾದೃಶ್ಯವನ್ನು ತೋರಿಸುತ್ತಾನೆ. ಇದು ಈ ಮೊಹರಂ ಪದದಲ್ಲಿ ಬರುವ ಕಥೆ.

ಈ ಪದದಿಂದ ತಿಳಿದು ಬರುವುದೇನೆಂದರೆ ದಾನ, ಧರ್ಮ ಮಾಡುವುದರಿಂದ ಒಳ್ಳೆಯದಾಗುತ್ತದೆ ಜೊತೆಗೆ ಪಾಪ ಕರ್ಮಗಳು ದೂರವಾಗುತ್ತವೆ. ದಾರಿದ್ರ್ಯತನ ದೂರವಾಗುತ್ತದೆ. ಇನ್ನಿತರ ನಂಬಿಕೆಗಳಿಂದ ಪ್ರತಿ ವರ್ಷ ಗ್ಯಾರವಿ ಹಬ್ಬದ ಸಮಯದಲ್ಲಿ ಎಂಥ ಬಡವನಾದರೂ ದಾನ, ಧರ್ಮಗಳನ್ನು ಮಾಡುತ್ತಾನೆಂಬ ಪ್ರತೀತಿ ತಿಳಿಯುತ್ತದೆ.

ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎನ್ನುವ ಗಾದೆಯ ಮಾತಿನಂತೆ ಇಲ್ಲಿಯೂ ಒಬ್ಬ ತಂದೆ ತನ್ನ ಮೂರನೇ ಮಗಳಿಗೆ ಮದುವೆ ಮಾಡುತ್ತಾನೆ. ವರದಕ್ಷಿಣೆಯನ್ನು ಕೊಡುವುದಾಗಿ ಹೇಳಿ ಮದುವೆ ಮಾಡಿ, ಮದುವೆ ನಂತರ ಕೊಡಲಾಗದೇ ಅಸಹಾಯಕನಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಗಂಡನ ಮನೆಯವರು ಆಕೆಗೆ ವರದಕ್ಷಿಣೆಯ ಹಣ ತರಲು ಆಗದಕ್ಕೆ ಅವಳನ್ನು ಕೊಲ್ಲುತ್ತಾರೆ. ನಂತರ ಸರಕಾರದವರ ಶಿಕ್ಷೆಯ ಮೂಲಕ ಅವರೂ ಬಲಿಯಾಗುತ್ತಾರೆ. ವರದಕ್ಷಿಣೆಯ ದಾಹ ಈ ಕೆಳಗಿನ 'ವರದಕ್ಷಿಣೆ ಹುಚ್ಚು ಹೆಚ್ಚಾತು ಕೇಳಿರಣ್ಣಾ' ಎನ್ನುವ ಪದದಲ್ಲಿ ವ್ಯಕ್ತವಾಗಿದೆ.

ಕೇಳಾರಿ ದೈವ ಇದು ಒಂದು ಕವನಾ ।

ಹೌದು ಅಲ್ಲಾ ಮಾಡ್ರಿ, ನೀವು ಕಲ್ಪನಾ ॥

ಕೊಡುವುದೈತಿ ಒಂದು ಹೆಣ್ಣ ।

ಅಂದರೆ ಕೇಳಾರಿ ಜನಾ ।

ಎಷ್ಟು ಕೊಡುತೀರಿ ಹಣ ।
ಎಂದು ಬೀಗರು ಬರುತಾರಣ್ಣ ।
ವರದಕ್ಷಿಣೆಯ ಹುಚ್ಚು ಹೆಚ್ಚಾತು ಕೇಳಿರಣ್ಣ ॥

ಎಂದು ಆರಂಭವಾಗುವುದರೊಂದಿಗೆ ಜನರು ಒಂದು ಕವನ ಅಂದರೆ ಹಾಡಿನ ಕಲ್ಪನೆ ಮಾಡಿಕೊಳ್ಳಿರೆನ್ನುತ್ತಾ ಸಮಾಜದ ಪಿಡುಗಾದ ವರದಕ್ಷಿಣೆಯ ಬಗ್ಗೆ ಹೇಳುತ್ತದೆ. ಸಾಮಾಜಿಕ ಪಿಡುಗಾದ ವರದಕ್ಷಿಣೆಯನ್ನು ಮೊಹರಂ ಪದದಲ್ಲಿ ಎಷ್ಟೊಂದು ನೈಜತೆಯಿಂದ ಹೇಳಲಾಗಿದೆ ಎಂದರೆ ಸಾಮಾನ್ಯ ಜನರು ಎಚ್ಚೆತ್ತುಕೊಂಡು ಜಾಗೃತರಾಗಲು ಪ್ರೇರೇಪಿಸುತ್ತದೆ. ಒಂದು ಕನ್ಯೆ ಕೊಡುವುದಿದ್ದು, ಬಂದು ನೋಡಿಕೊಂಡು ಹೋದ ಎಲ್ಲ ಜನರೂ ಎಷ್ಟು ವರದಕ್ಷಿಣೆ ಕೊಡುತ್ತೀರೆಂದು ಕೇಳುತ್ತಾ ಹಣಕ್ಕಾಗಿ ಪೀಡಿಸುತ್ತಾರೆನ್ನುವ ತಿರುಳಿನೊಂದಿಗೆ ಈ ಮೊಹರಂ ಪದ ಆರಂಭವಾಗುತ್ತದೆ. ಮುಂದುವರಿದು

ಒಂದು ಊರಾಗ ಇದ್ರೋ ಸತಿಪತಿನಾ ।
ಮೂರು ಹೆಣ್ಣ ಮಕ್ಕಳು ಹುಟ್ಯಾವಣ್ಣ ।
ಮುತ್ತಿನಂತ ಮೂರು ಹೆಣ್ಣು ಪ್ರಾಯಕ್ಕೆ ಬಂದಾವಣ್ಣಾ ।
ಎರಡು ಮಕ್ಕಳ ಲಗ್ನ ಹ್ಯಾಂಗೊ ಮಾಡ್ಯಾರಣ್ಣಾ ।
ಮುತ್ತಿನಂಥಾ ಇನ್ನೊಂದು ಮಗಳು । ಮನಿಯಾಗೈತಿ ಕೇಳ್ರಿ ಜನಾ ।
ಅಷ್ಟರೊಳಗೇ ತಾಯಿ ಬಿಟ್ಯಾಳೋ ಪ್ರಾಣ ॥

ದಂಪತಿಗಳಿಗೆ ಮೂರು ಹೆಣ್ಣು ಮಕ್ಕಳು ಹುಟ್ಟುತ್ತವೆ. ಆ ಹೆಣ್ಣುಮಕ್ಕಳು ವಯಸ್ಸಿಗೆ ಬಂದಾಗ ತಂದೆಯು ಹೇಗೋ ಮಾಡಿ ಎರಡು ಮಕ್ಕಳ ಮದುವೆಯನ್ನು ಮಾಡಿ ಮುಗಿಸುತ್ತಾನೆ. ಇದ್ದ ಇನ್ನೊಬ್ಬ ಮುತ್ತಿನಂಥಾ ಮಗಳ ಮದುವೆ ಆಗುವ ಮೊದಲೇ ತಾಯಿಯು ತೀರಿಕೊಳ್ಳುತ್ತಾಳೆ. ಈ ಸಮಯದಲ್ಲಿ ತಂದೆಗೆ ಇನ್ನಷ್ಟು ಚಿಂತೆ ಹೆಚ್ಚಾಗಿ ಮಗಳ ಮದುವೆಗಾಗಿ ಹಲಬುತ್ತಾನೆ. ನೋಡಲು ಬರುವವರು ಹೆಚ್ಚಿನ ಹಣವನ್ನು ಕೇಳುತ್ತಾರೆ. ಹಣ ಕೊಡಲಾಗದೇ ತಂದೆ ದುಃಖದಿಂದ ಅತ್ತು ತನ್ನ ಹೊಟ್ಟೆಯಲ್ಲಿ ಯಾಕಾದರೂ ಹುಟ್ಟಿದ್ದಿ ಎಂದು ಮಗಳನ್ನು ಅಪ್ಪಿಕೊಂಡು ರೋಧಿಸುತ್ತಾನೆ. ಒಂದು ವರ ಬಂದು, ಗುರು ಹಿರಿಯರು ಕುಳಿತುಕೊಂಡು ಮಾತುಕತೆ ಮುಗಿಸಿ ಮನೆಯ ಮುಂದೆ ಮದುವೆ ಮಾಡಿಕೊಡಬೇಕು ಜೊತೆಗೆ ಸಾವಿರ ರೂಪಾಯಿ ವರದಕ್ಷಿಣೆ ಕೊಡಬೇಕು ಎಂದು ಹೇಳುತ್ತಾರೆ. ತಂದೆಯು ಒಪ್ಪಿ ಮದುವೆಗಾಗಿ ಸಾಲ ಮಾಡಿ ಮನೆಯ ಮುಂದೆ ಮದುವೆಯೇನೋ ಮಾಡುತ್ತಾನೆ. ಆದರೆ ವರದಕ್ಷಿಣೆ ಹಣವನ್ನು ಸ್ವಲ್ಪ ದಿನಗಳ ನಂತರ ಕೊಡುತ್ತೇನೆಂದು ಹೇಳುತ್ತಾನೆ. ಇತ್ತ ಕಡೆ ವರದಕ್ಷಿಣೆಗಾಗಿ ಗಂಡ, ಮಾವ, ಅತ್ತೆ ಎಲ್ಲರೂ ಆ ಹೆಣ್ಣುಮಗಳಿಗೆ ಪೀಡಿಸತೊಡಗುತ್ತಾರೆ. ಹಣ ತರಲು ತವರು ಮನೆಗೆ ಕಳಿಸಿದಾಗ, ತಂದೆಯು ಹಣ ಕೊಡಲಾಗದೇ ಅಸಹಾಯಕತೆಯಿಂದ ಅರಣ್ಯಕ್ಕೆ ಹೋಗಿ ನೇಣು ಹಾಕಿಕೊಂಡು ಸಾಯುತ್ತಾನೆ. ಹಣ ತರಲು ತವರು ಮನೆಗೆ ಬಂದ ಮಗಳು ತಂದೆಯನ್ನು ಕಾಣದೆ ಗಾಬರಿಯಾಗಿ ಎಲ್ಲರನ್ನೂ ತಂದೆ ಎಲ್ಲಿ ಎಂದು ಕೇಳುತ್ತಾಳೆ.

ಒಂದು ತಿಂಗಳಿನಿಂದ ಕಂಡಿಲ್ಲವೆಂದು ಮಗಳಿಗೆ ಊರ ಜನ ಹೇಳಿದಾಗ, ದುಃಖದಿಂದ ಬೇರೆ ದಾರಿ ಕಾಣದೇ ಮರಳಿ ಗಂಡನ ಮನೆಗೆ ಹೋಗುತ್ತಾಳೆ.

ಹಣ ಯಾಕೆ ತರಲಿಲ್ಲವೆಂದು ಗಂಡ ಹಲ್ಲು ಕಡಿದಾನ ।
ಎದಿಗೆ ಹಾರಿ ಒದ್ದಾನ ।
ಕೈ ಕಾಲು ಕಟ್ಯಾನ । ಎಣ್ಣಿ ಹಾಕಿ ಹಚ್ಚಿ ಬೆಂಕಿ ಬಾಗಿಲು ಮುಚ್ಯಾನಾ ।
ಬಡವರ ಹೆಣ್ಣಿನ ಬಾಳು ಹಿಂಗ ಐತಿ ನೋಡಿರಣ್ಣಾ ॥
ಮುತ್ತಿನಂಥಾ ಮುತ್ತೈದೆ ಮಗಳಿನ್ನಾ । ತಡಪಿ ತಡಪಿ ಬಿಟ್ಟಾಳೋ ಪ್ರಾಣಾ ॥

ವರದಕ್ಷಿಣೆಯ ಹಣ ತರಲಿಲ್ಲ ಎಂಬ ಕಾರಣಕ್ಕೆ ಗಂಡನು ಸಿಟ್ಟಿಗೆದ್ದು ಆಕೆಗೆ ಒದೆಯುತ್ತಾನೆ. ಕೈ, ಕಾಲು ಕಟ್ಟಿ ಬಾಗಿಲು ಹಾಕಿ ಎಣ್ಣೆ ಸುರುವಿ ಬೆಂಕಿ ಹಚ್ಚಿ ಕೊಲ್ಲುತ್ತಾನೆ. ಈ ರೀತಿಯಾಗಿ ತನ್ನದಲ್ಲದ ತಪ್ಪಿಗೆ ಬಲಿಯಾದ ಬಡವರ ಮಗಳ ಕಥೆಯನ್ನು ಈ ಮೊಹರಂ ಪದದಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ. ನಂತರ ಸರಕಾರದವರು, ಪೋಲೀಸಿನವರು ಬಂದು ಆಕೆಯ ಗಂಡನನ್ನು ಹಿಡಿದು, ಗಲ್ಲುಶಿಕ್ಷೆಗೆ ಹಾಕುತ್ತಾರೆ. ಹಣದ ಕಾರಣದಿಂದ ತಾನು ಹೆಂಡತಿಯನ್ನು ಕೊಂದು, ತಾನೂ ಗಲ್ಲುಶಿಕ್ಷೆಗೆ ಗುರಿಯಾಗುತ್ತಾನೆ. ಮದುವೆಯನ್ನು ಹಣಕ್ಕಾಗಿ, ವರದಕ್ಷಿಣೆಗಾಗಿ ಹಾಗೂ ಇನ್ನಿತರ ಬೇಡಿಕೆಗಳಿಗಾಗಿ ಆಗದೇ ಹೆಣ್ಣಿಗಾಗಿ ಮದುವೆಯಾಗಬೇಕೆಂಬ ನೀತಿಯಿಂದ ಈ ಮೊಹರಂ ಪದ ಮುಕ್ತಾಯವಾಗುತ್ತದೆ.

ಈ ಮೊಹರಂ ಪದವು ಪ್ರಸ್ತುತ ಸಮಾಜದಲ್ಲಿ ಜನತೆ ಎದುರಿಸುತ್ತಿರುವ ಸಾಮಾಜಿಕ ಪಿಡುಗು ವರದಕ್ಷಿಣೆಯಿಂದಾಗಬಹುದಾದ ಅನಾಹುತಗಳನ್ನು ತಿಳಿಸಿಕೊಡುತ್ತದೆ. ಜೊತೆಗೆ ಹೆಣ್ಣು ಹೆತ್ತವರ ಕಷ್ಟ ನಷ್ಟ ಹಾಗೂ ಅವರ ಜೀವನ ಸ್ಥಿತಿ ಗತಿಗಳ ಬಗ್ಗೆ ವಿವರವಾಗಿ ತಿಳಿಸುತ್ತದೆ. ಮದುವೆ ಎನ್ನುವುದು ಕೇವಲ ವ್ಯಾಪಾರದ ವಸ್ತುವಾಗಬಾರದೆಂದು ತಿಳಿದು ಬರುತ್ತದೆ. ಇದರಿಂದ ಹೆಣ್ಣಿನ ಜೀವನ ಯಾವ ರೀತಿ ನರಕ ಸದೃಶವಾಗುತ್ತದೆನ್ನುವದು ತಿಳಿದು ಬರುವದಲ್ಲದೇ, ವರದಕ್ಷಿಣೆಯಿಂದ ಸಮಾಜದ ಮೇಲಿನ ದುಷ್ಪರಿಣಾಮವನ್ನು ತಿಳಿಸುತ್ತದೆ. ಇಲ್ಲಿ ಪಾಲಕನಾದವನು ಹೇಗಾದರೂ ಮಾಡಿ ಮದುವೆ ಮಾಡಿಕೊಡಬೇಕೆಂದು ಬೀಗರಿಗೆ ಸುಳ್ಳು ಹೇಳಿ ವರದಕ್ಷಿಣೆ ಕೊಡಲಾಗದೇ ಮದುವೆಯನ್ನು ಮಾಡಿಸುತ್ತಿರುವುದು ಆತನ ಕರ್ತವ್ಯವನ್ನು ತಿಳಿಸುತ್ತದೆ. ಆದರೆ ಈ ಮಾರ್ಗವು ಶುದ್ಧ ತಪ್ಪು ದಾರಿಯೆಂದು ಸಹೃದಯರಿಗೆ ಅರಿವಾಗುತ್ತದೆ. ಕೊನೆಗೆ ವರದಕ್ಷಿಣೆ ಕೊಡಲಾಗದೇ ತಂದೆ ಸತ್ತಾಗ ಗಂಡ ಮತ್ತು ಮನೆಯವರು ಕರುಣೆಯನ್ನು ತೋರಿಸಲಾಗದೇ ಹಣ ತರಲು ಹೇಳಿದ್ದು ಅವರ ದುಷ್ಟತನವನ್ನು ತಿಳಿಸುತ್ತದೆ. ಇದರಲ್ಲಿ ಹೀನಾಯವಾಗಿ ಆ ಮುಗ್ಧ ಹೆಣ್ಣು ಬಲಿಯಾಗುವ ದಾರುಣ ಕಥೆ ಬಂದಿದೆ.

ದಾನದಲ್ಲಿ ನೇತ್ರದಾನ, ರಕ್ತದಾನ, ವಿದ್ಯಾದಾನ, ಅನ್ನದಾನ ಇವುಗಳು ಹೆಸರುವಾಸಿಯಾದವುಗಳು. ಈ ದಾನಗಳು ಸಾಮಾನ್ಯವಾಗಿ ಎಲ್ಲರೂ ಮಾಡಬಹುದಾದ ದಾನವಾಗಿದೆ.

ಆದರೆ ಮಕ್ಕಳನ್ನೇ ದಾನ ಮಾಡಿದ ಅಪರೂಪದ ಕಥೆ ಈ ಕೆಳಗಿನ ಮೊಹರಂ ಪದದಲ್ಲಿ ಕಾಣಬಹುದು. ಹಜರತ್ ಅಲಿ ಮತ್ತು ಫಾತಿಮಾರು ತಮ್ಮ ಮಕ್ಕಳನ್ನು ಫಕೀರನಿಗೆ ದಾನ ಮಾಡುವುದರ ಮೂಲಕ ಮಹಾತ್ಯಾಗಿಗಳಾಗುತ್ತಾರೆ. ಮಕ್ಕಳನ್ನು ತೆಗೆದುಕೊಂಡ ಫಕೀರನು ಬೇರೆ ದೇಶದಲ್ಲಿ ಮಾರಾಟ ಮಾಡುತ್ತಾನೆ. ಕರುಳ ಕುಡಿಗಳನ್ನು ಕಳೆದುಕೊಂಡು ದುಃಖಿಸುತ್ತಾರೆ. ಇಂತಹ ದುಃಖಕರ ವಿಷಯವು ಈ 'ಅಲಿ ಮೌಲಾಲಿ ಮತ್ತು ಫಾತಿಮಾರು ಮಕ್ಕಳನ್ನು ದಾನ ಮಾಡಿದ ಹಾಡು' ಎನ್ನುವ ಮೊಹರಂ ಪದದಲ್ಲಿ ವ್ಯಕ್ತವಾಗಿದೆ.

ಹಣ ಇದ್ದ ಶ್ರೀಮಂತರೆಲ್ಲಾ। ಹಣದ ದಾನ ಮಾಡುವರಲ್ಲಾ!
ಭೂಮಿ ಬಂಗಾರವೆಲ್ಲಾ। ದಾನ ಕೊಡುವದು ಕಂಡೀನಲ್ಲಾ!
ಇದು ಶ್ರೀಮಂತ ಹೆಚ್ಚಿನ। ದಾನ ಮಾಡ್ಯಾರೋ ಕೇಳಿರಿ ಖುಲ್ಲಾ!
ಮದಿನದಲ್ಲಿ ಸತಿಪತಿ ಇದ್ದಾರಲ್ಲಾ!
ಸತಿಯ ಹೆಸರು ಫಾತಿಮಾ ಜೆಸ್ನತೆ ಝೂಲಾ।
ಪತಿಯ ಹೆಸರು ಅಲಿ ಮೌಲಾ।
ಶಿವನ ಹುಲಿ ಅನಿಸ್ಯಾರಲ್ಲಾ!
ಅವರಿಗೆ ಲೋಕಪಾಲಾ।
ಮಕ್ಕಳ ಫಲಾ ಕೊಟ್ಟನಸ್ಸಲ್ಲಾ!
ಹಸೇನ್ ಹುಸೇನ್ ಐದು ವರ್ಷದ ಸಣ್ಣ ಕಮಲಾ ॥

ಎಂದು ಆರಂಭಗೊಂಡ ಈ ಕಥಾನಕ ಮೊಹರಂ ಪದವು ದಾನದ ಮಹತ್ವ ಸಾರುತ್ತ ಶ್ರೀಮಂತರು ಹಣ, ಭೂಮಿ, ಬಂಗಾರ ದಾನ ಕೊಡುವುದು ನೋಡಿದ್ದೇವೆ. ಆದರೆ ಮದಿನಾದಲ್ಲಿನ ಅಲಿ ಮೌಲಾ ಮತ್ತು ಫಾತಿಮಾ ಜೆಸ್ನತೆಝೂಲಾ ದಂಪತಿಗಳು ಮಾಡಿದ ದಾನ ಶ್ರೇಷ್ಠವಾದದ್ದೂ, ಅಸಾಮಾನ್ಯವಾದದ್ದೂ ಎಂದು ತಿಳಿಸಿಕೊಡುವ ಈ ಮೊಹರಂ ಪದ ಅವರಿಗೆ ಹಸನ ಹುಸೇನರಂಥಾ ಕಮಲದ ಹೂವಿನಂಥ ಮಕ್ಕಳಿದ್ದರೆನ್ನುವದನ್ನು ತಿಳಿಸುತ್ತದೆ. ಅಲಿ ಮೌಲಾ ಮತ್ತು ಫಾತಿಮಾ ಜೆಸ್ನತೆ ಝೂಲಾ ದಂಪತಿಗಳಿಗೆ ಕಡು ಬಡತನವಿದ್ದು ದಿನಾಲೂ ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದರು. ನಲವತ್ತೊಂದು ತ್ಯಾಪಿ ಹಚ್ಚಿದ ಅಂಗಿ ತೊಟ್ಟ ಮೌಲಾ ಮತ್ತು ಎಪ್ಪತ್ತೇಳು ತ್ಯಾಪಿ ಸೀರಿ ಉಟ್ಟ ಫಾತಿಮಾರು ಮೂರು ದಿವಸದಿಂದ ಉಪವಾಸವಿದ್ದು, ಅವರ ಮಕ್ಕಳಿಗೆ ಸಹ ಉಣ್ಣಲು ಏನೂ ಇಲ್ಲದಂತಾಗಿ ಅಳುತ್ತಾ, ರೋಧಿಸುತ್ತಾ ಕುಳಿತಿದ್ದರು. ಹೊಟ್ಟೆಯ ಹಸಿವು ಬೇವಿನಂತೆ ಕಹಿಯಾಗಿದ್ದು ಹೊಟ್ಟೆ ತುಂಬಿದಾಗ ಸಿಹಿ ಸಕ್ಕರೆ ಬೆಲ್ಲದಂತೆ. ಇಂಥ ಸಮಯದಲ್ಲಿ ಒಬ್ಬ ಫಕೀರ ಬರುತ್ತಾನೆ. ಬಂದ ಫಕೀರ ಅಲಿ ಮೌಲಾಲಿಗೆ ನಾನು ನಿನ್ನ ಬಗ್ಗೆ ಕೇಳಿದ್ದು ಮಹಾದಾನಿ ಎಂದು ಕೇಳಿದ್ದೇನೆ. ಈಗ ನಾನು ಕೇಳಿದ್ದು ಇಲ್ಲವೆನ್ನದೇ ಕೊಡಬೇಕೆಂದು ಆತನ ಮಕ್ಕಳ ದಾನ ಕೇಳುತ್ತಾನೆ.

ಫಕೀರನ ಮಾತು ಕೇಳಿ ಅಲಿ ಮೌಲಾ ।

ತಮ್ಮ ಸತಿಗೆ ಹೇಳುತಾರೋ ಕೇಳಿ ಕಮಲಾ ।

ಹಸನ್ ಹುಸೇನ್ ಬಾಲಕರೆಲ್ಲಾ । ನಮ್ಮನು ಬಿಟ್ಟು ಹೋಗುತಾರಲ್ಲಾ ।

ಜಳಕವ ಮಾಡಿಸು ಎಣ್ಣೆ ಹಚ್ಚಿ ತಗಿ ಬೇತಾಲಾ ।

ಜಳಕವ ಮಾಡಿಸಿ ತಾಯಿ ಮುದ್ದು ಕೊಟ್ಟು ಅಳುತಾಳಲ್ಲಾ ।

ಮಹಾದಾನಿ ಎಂದು ಹೆಸರಾದ ಅಲಿ ಮೌಲಾ ಇಲ್ಲವೆನ್ನದೇ ತನ್ನ ಹೆಂಡತಿಯ ಹತ್ತಿರ ಬಂದು ಮಕ್ಕಳನ್ನು ಫಕೀರನಿಗೆ ದಾನ ಕೊಡಬೇಕಾಗಿದೆ. ಅವರಿನ್ನು ನಮ್ಮನ್ನು ಬಿಟ್ಟು ಹೋಗುತ್ತಾರೆ. ಅವರಿಗೆ ಸ್ನಾನ ಮಾಡಿಸಿ, ಬಾಚಿ ಬೈತಾಲ ತೆಗೆ ಎಂದು ಹೇಳುತ್ತಾನೆ. ಸ್ನಾನ ಮಾಡಿಸಿ ತಾಯಿ ಅಳುತ್ತ ಮುದ್ದು ಕೊಟ್ಟು ಮಕ್ಕಳನ್ನು ಫಕೀರನಿಗೆ ದಾನ ಕೊಡುತ್ತಾರೆ. ತಮ್ಮ ಕರುಳಿನ ಕುಡಿಗಳನ್ನು ದಾನ ಮಾಡಿದಾಗ ಮಕ್ಕಳು ಕಣ್ಣೀರು ಸುರಿಸುತ್ತಾರೆ. ಅಲಿ ಮೌಲಾ ಮತ್ತು ಫಾತಿಮಾ ಜೆನ್ನತೆ ಝೂಲಾ ಮಾಡಿದ ದಾನಕ್ಕೆ ಯಾವ ದಾನವೂ ಸರಿಸಮನಲ್ಲ. ದಾನ ಪಡೆದ ಮಕ್ಕಳನ್ನು ಕರೆದುಕೊಂಡು ಹೋದ ಫಕೀರ ಬೇರೆ ದೇಶದಲ್ಲಿ ಅವರನ್ನು ಮಾರಾಟ ಮಾಡಿದನೆಂದು ತಿಳಿಸುತ್ತ ಈ ಮೊಹರಂ ಪದ ಮುಕ್ತಾಯಗೊಳ್ಳುತ್ತದೆ.

ಈ ಮೊಹರಂ ಪದವು ಪಡೆದ ಮಕ್ಕಳನ್ನೇ ದಾನ ಮಾಡುವ ದಂಪತಿಗಳ ಕಥೆಯನ್ನು ಹೇಳುತ್ತದೆ. ಆಧುನಿಕ ಯುಗದಲ್ಲಿ ದಾನ, ಧರ್ಮ ಇವುಗಳೆಲ್ಲಾ ದೂರ ಸರಿಯುತ್ತಿರುವಾಗ ಹಿಂದಿನ ಕಾಲದಲ್ಲಿನ ಈ ಮೌಲ್ಯಗಳು ಇವತ್ತಿನ ಜನರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡುತ್ತದೆ. ಹಜರತ್ ಅಲಿ ಮತ್ತು ಫಾತಿಮಾ ಫಕೀರನಿಗೆ ಎಲ್ಲ ವಸ್ತುಗಳನ್ನು ಬಿಟ್ಟು ಮಕ್ಕಳನ್ನು ದಾನ ಕೊಟ್ಟದ್ದು ಮತ್ತು ಫಕೀರನು ಎಲ್ಲ ವಸ್ತುಗಳನ್ನು ಬೇಡದೇ ಮಕ್ಕಳನ್ನೇ ದಾನ ರೂಪದಲ್ಲಿ ಬೇಡಿದ್ದು ವಿಪರ್ಯಾಸವನ್ನು ತಿಳಿಸುತ್ತದೆ. ಮತ್ತು ಆ ಫಕೀರನು ಆ ಮಕ್ಕಳನ್ನು ಪಡೆದುಕೊಂಡು ಬೇರೆ ದೇಶದಲ್ಲಿ ಮಾರಾಟ ಮಾಡಿದ್ದು ಕೇಳುಗರಲ್ಲಿ ಕರುಣೆಯನ್ನು ಹುಟ್ಟಿಸುತ್ತದೆ.

ಸಲಾಮ್ ಪದಗಳು :

ಭಾರತ ದೇಶವು ಹಲವು ಮೌಲ್ಯಗಳ ತವರೂರು. ಜನರು ಹುಟ್ಟಿನಿಂದ ಹಿಡಿದು ಸಾವಿನವರೆಗೂ ತನ್ನದೇ ಆದ ಹಲವು ಹತ್ತು ವಿಭಿನ್ನ ಬಗೆಯ ಸಂಪ್ರದಾಯ, ಪದ್ಧತಿಗಳನ್ನು ಆಚರಿಸುತ್ತಾರೆ. ವಿವಿಧ ಧರ್ಮಿಯರು ನಾನಾ ರೀತಿಯ ಆಚರಣೆಯಲ್ಲಿ ತೊಡಗುತ್ತಾರೆ.ಅಂತೆಯೇ ಹಿಂದುಗಳು ಯಾವುದೇ ಧಾರ್ಮಿಕ ಆಚರಣೆಯಲ್ಲಿ ಪ್ರಾರಂಭದಲ್ಲಿ ವಿಘ್ನಗಳ ನಿವಾರಕ ಗಣಪತಿಯನ್ನು ಸ್ಮರಿಸುವದುಂಟು. ಶಿವಶರಣರು, ದಾಸರು ಹಾಡಿದ ವಚನ ಅಥವಾ ಕೀರ್ತನಗಳಲ್ಲಿ ಅವರವರ ಆರಾಧ್ಯದೈವಗಳ ಅಂಕಿತವನ್ನು ಬಳಸಿರುವುದುಂಟು. ಇದೇ ರೀತಿ ಮೊಹರಂ ಪದಗಳಲ್ಲಿಯೂ ಕೂಡಾ ಪ್ರಾರಂಭದಲ್ಲಿ ದೇವರನ್ನು ಕುರಿತು, ಗುರುಹಿರಿಯರನ್ನು ಕುರಿತು, ಚಿಕ್ಕವರನ್ನು ಕುರಿತು, ಗೌರವ

ಸೂಚನೆಗಾಗಿ 'ಸಲಾಂ ಪದ'ಗಳನ್ನು ಹಾಡುತ್ತಾರೆ. ಇವುಗಳಿಗೆ ಸಲಾಂಪದಗಳು, ಶರಣು ಸೂಚಕ ಪದಗಳೆಂದು, ಗೌರವ ಸೂಚಕ ಪದಗಳೆಂದು ಕರೆಯುತ್ತಾರೆ. ಗೌರವ ಸೂಚಕವಾಗಿ ನಮಸ್ಕಾರ ಅರ್ಥದಲ್ಲಿ ಬಳಕೆಯಾದ ಈ ಪದಗಳು ಮೊಹರಂ ಹಾಡುಗಳಲ್ಲಿಯೂ ಇವೆ. ಸಲಾಮ್ ಪದಗಳಲ್ಲಿ ಆರಂಭದಲ್ಲಿ ಶ್ರೋತೃವರ್ಗಕ್ಕೆ ಗೌರವ ಸೂಚಿಸುವಾಗ ಶರಣು ಎಂದೇ ಪ್ರಯೋಗಿಸಲಾಗಿದೆ.

ಕೊಪ್ಪಳ ಜಿಲ್ಲೆಯಾದ್ಯಾಂತಹ ಸಾಕಷ್ಟು ಸಲಾಂಪದಗಳು ಜನಪದರಲ್ಲಿ ಕಂಠಸ್ಥ ಇಲ್ಲವೇ ಗ್ರಂಥಸ್ಥ ರೂಪದಲ್ಲಿರುವದನ್ನು ನೋಡಬಹುದು. ಅವುಗಳಲ್ಲಿ ಅಧ್ಯಯನದ ದೃಷ್ಟಿಯಿಂದ ಕೆಲವು ಸಂಗ್ರಹದ ಸಲಾಂಪದಗಳನ್ನು ಇಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ. ಈ ಮೊಹರಂ ಪದಗಳು ಕಥನಗೀತೆಗಳು. ಪಲ್ಲವಿ, ಚಾಲ, ವಿರು, ನುಡಿ ಈ ಎರಡು ಸ್ಥಿತಿಗಳನ್ನು ಹೊಂದಿರುತ್ತದೆ. ಪಲ್ಲವಿಯನ್ನು ಗುಂಪಿನ ಎಲ್ಲ ಸದಸ್ಯರು ಹಾಡುತ್ತಾರೆ. ನುಡಿಗಳನ್ನು ಗುಂಪಿನ ಮುಖ್ಯ ಗಾಯಕರು ಒಬ್ಬ ಅಥವಾ ಇಬ್ಬರು ಹಾಡುತ್ತಿರುತ್ತಾರೆ. ಪ್ರತಿಯೊಂದು ನುಡಿಯ ನಂತರ ಪಲ್ಲವಿಯನ್ನು ಹಾಡುತ್ತಾರೆ. ರಚನೆಯ ದೃಷ್ಟಿಯಿಂದ ಆರಂಭ, ಕಥಾಪ್ರಸಂಗ, ಮುಕ್ತಾಯ ಹೀಗೆ ಮೂರು ಭಾಗಗಳನ್ನು ಗುರುತಿಸಬಹುದಾಗಿದೆ.ಕೂಡಿರುವ ಭಕ್ತವರ್ಗಕ್ಕೆ ಆರಂಭದಲ್ಲಿ ಸಲಾಂ ಗೌರವ ಸೂಚಿಸುವದರ ಮೂಲಕ ಆರಂಭಗೊಳ್ಳುತ್ತದೆ.

ಪಾಕ ದಿಲ್‌ಸೇ ಪಡೋಜಿ ಕಲಾಮ್ । ಮುಹಮ್ಮದ್ ಪರ್ ದರೋದ ಸಲಾಂ ।
ಆದಂ ಬಾವಾ,ಅಮ್ಮಾ ಹೂವ್ವಾ । ಈನ್ಸೆ ದುವ್ವಾ । ಸಬ್ ಪರ್ ವುವಾ ।
ಇನ್‌ಸೇ ಬನ್‌ಗಯಿ ದುನಿಯಾ ತಮಾಮ್ ।
ಆದಮ್ ಹವ್ವಾಕೋ ಪೈಲಾ ಸಲಾಂ । ......

ಎಂದು ಆರಂಭವಾಗುವ ಈ ಮೊಹರಂ ಪದದಲ್ಲಿ ನಿರ್ಮಲವಾದ ಮನಸ್ಸಿನಿಂದ ಕಲ್ಮಾ ಓದಬೇಕೆಂದು, ಕೊನೆಯ ಪೈಗಂಬರ ಮ.ಪೈಗಂಬರ್ ಅವರಿಗೆ ಸಲಾಂ ಎಂದು, ಇಸ್ಲಾಂ ಧರ್ಮದ ಪ್ರಕಾರ ಪ್ರಥಮ ಮನುಷ್ಯರೆಂದು ನಂಬಲಾದ ಆದಂ, ಹವ್ವಾ ಅವರಿಗೆ ಮೊದಲು ಸಲಾಂ ಎಂದು ಹಾಗೇ ಅವರ ಕೃಪೆಯಿಂದ ಜಗತ್ತು ಸೃಷ್ಟಿಯಾಗಿದೆ ಅದಕ್ಕಾಗಿ ಅವರಿಗೆ ಮೊದಲು ಸಲಾಂ ಎಂದು ಜನಪದ ಕವಿ ನೆನೆದಿದ್ದಾನೆ. ಮುಂದುವರಿದು

ಬಾಪ್ ಮದೀನಾ ಮಕ್ಕಾ ಹೈಜಮಾ ಮಾ ।
ಬಾಪುಕಿ ಮೇರಾ ಸಲಾಂ ।
ಅಬೂಬಕರ್ ಸಿದ್ದೀಖ್ ।
ಉಮ್ರೆ ಫಾರೂಖ್ ಉಸ್ಮನೆ ಗನಿ ರಜಿ ಅಲ್ಲಾ ।
ಅನಾಹುಕು ಸಹಾವತ್ ಮೇಹೈ ಮೌಲಾಕಾ ನಾಮ ।
ಚಾರ ಖಲೀಪೋಂಕೋ ಮೇರಾ ಸಲಾಂ ।
ಮೆಹಫಿಲ್ ಬೈಟ ಹಿಂದೂ ಮುಸ್ಲಿಂ ಬಾಹಿ ಬಹನೋಂಕೋ ಮೇರಾ ಸಲಾಂ ।
ಹಸನ್ ಹುಸೇನ್ ಬೀಬಿ ಪಾತೀಮಾ ತುಂಪರ್ ಲಾಖೊಂದು ರೂಮೋ ಸಲಾಂ ।

ಎಂದು ಮಕ್ಕಾ ಮದೀನಾ ಇನ್ನಿತರ ಶರಣರನ್ನು, ಹಸನ್ ಹುಸೇನರನ್ನು ನಾಲ್ವರು ಖಲೀಫರನ್ನು, ನೆರೆದಿರುವ ಹಿಂದೂಮುಸ್ಲಿಂ ಜನರನ್ನು ಇತರೆ ಜನರನ್ನು ಮನದಲ್ಲಿ ನೆನೆದು ಅವರಿಗೆ ಶರಣು ಸೂಚಿಸಿ ಸಲಾಂ ಪದಗಳನ್ನು ಹಾಡುತ್ತಾರೆ.

ತಂದಿತಾಯಿಗೆ ಶರಣಾ ।
ಚೆಂದದಿಂದ ಕಂದಾ ನಿಮಗೆ ಮಾಡುವೆ ಶರಣಾ ।
ಹರುಷದಿಂದ ಶಿರಬಾಗಿ ನಾನು ಮಹಮ್ಮದರಿಗೆ ಮಾಡುವೆ ಶರಣಾ ।
ಇಮಾಮ್ ಹುಸೇನ ಹಸನರಿಗೆ ಮಾಡುವೆ ಶರಣಾ ।
ಹಜರತ ಮಹಿಬೂಬ ಸುಬಾನಿ ಶರಣಾ ।
ಅವರ ಪಾದಕ್ಕೆ ವಂದನಾ ।

ಎಂದು ಶುರುವಾಗುವ ಈ ಮೊಹರಂ ಪದದ ಆರಂಭದಲ್ಲಿ ಹಡೆದ ತಂದೆ ತಾಯಿಗಳ ಸ್ಮರಣೆ ಕಂಡುಬರುತ್ತದೆ. ಏಕೆಂದರೆ ತಂದೆ ತಾಯಿಗಿಂತ ಮಿಗಿಲಾದ ದೇವರಿಲ್ಲ ಎಂಬ ನಂಬಿಕೆ ಭಾರತೀಯರಲ್ಲಿದೆ. ಈ ಕಾರಣಕ್ಕಾಗಿ ಅವರ ಸಾರ್ಥಕ ಪರಿಶ್ರಮ ಗಮನಿಸಿ ಹಾಡುಗಾರರು ನೆರೆದ ಎಲ್ಲರೆದುರು ಮಾತಾಪಿತೃಗಳಿಗೆ ಶರಣು ಸೂಚಿಸುತ್ತಾರೆ. ಕೇವಲ ಹಿರಿಯರಿಗಲ್ಲದೇ ಕಿರಿಯ ಮಗುವಿಗೂ ಗೌರವ ಸೂಚಿಸಿ ತಮ್ಮ ದೊಡ್ಡತನವನ್ನು ಮೆರೆಯುತ್ತಾರೆ. ದೇವನೊಬ್ಬ ನಾಮ ಹಲವು ಎನ್ನುವಂತೆ ಮಹಮ್ಮದ ಕರ್ಬಾಲದಲ್ಲಿ ದುರುಳ ಯಾಜೀದನೊಂದಿಗೆ ಹೋರಾಡಿ ವೀರಮರಣವನ್ನಪ್ಪಿದ ಹಸನ್, ಹುಸೇನ, ಸತ್ಯ ಶರಣ ಮಹಿಬೂಬ ಸುಬಾನಿ ಎಲ್ಲರನ್ನು ಸ್ಮರಿಸಿಯೇ ಮುಂದೆ ಸಾಗುತ್ತಾರೆ. ಮುಂದುವರಿದು

ಗಾಂಧಿ ಮಹಾತ್ಮಾ ನೆಹರು ಅವರಿಗೆ ಮಾಡುವೆ ಶರಣಾ ।
ಸಾದು ಸತ್ ಪುರುಷರಿಗೆ ಮಡುವೆ ನಾನು ಶರಣಾ ।
ಆರು ಗುಣಗಳು ಅಳಿದವರಿಗೆ ಮಾಡುವೆ ಶರಣಾ ।
ಪೀರ ನಮ್ಮ ಮಹಿಬೂಬ ಶರಣಾ, ಹಿಡಿಯುವೆ ಅವರ ಚರಣ ।
ಸರಿಯಾಗಿ ಶರಣ ನಮ್ಮನ್ನ ಕಾಪಾಡುವರನ್ನ ।

ಇಸ್ಲಾಂ ಧರ್ಮದ ಆಧ್ಯಾತ್ಮಿಕ ಪುರುಷರಲ್ಲದೇ ಈ ದೇಶದ ಐತಿಹಾಸಿಕ ವ್ಯಕ್ತಿಗಳಾದ ಗಾಂಧೀಜಿ, ನೆಹರು ಅವರನ್ನು ಮೊಹರಂ ಪದಗಳಲ್ಲಿ ಸ್ಮರಿಸಲಾಗುತ್ತದೆ. ಇದು ನಮ್ಮ ಜನಪದೀಯರ ಕೈಚಳಕ ಎನ್ನಬಹುದು. ಧರ್ಮವನ್ನ ಕಟ್ಟಿದವರಲ್ಲದೇ ದೇಶವನ್ನು ಕಟ್ಟಿದವರ ನೆನಪು ಚಿರಕಾಲವಾಗಿರಲೆಂಬುದು ಅವರ ವಿಚಾರವಾಗಿರಬಹುದು. ಆದಕ್ಕಾಗಿ ಸ್ವಾತಂತ್ರ್ಯದಾತ ಗಾಂಧೀಜಿ, ನೆಹರು ಅವರಿಗೆ ಶರಣು ಸೂಚಿಸಿದ್ದಾರೆ. ಎಲ್ಲ ಧರ್ಮದ ಸಾಧು-ಸಂತರನ್ನೊಳಗೊಂಡು, ಸತ್‌ಪುರುಷರಿಗೂ ಶರಣು ಸೂಚಿಸಿದ್ದಾರೆ. ಅದೇ ರೀತಿ ದೇವ ಮಹಿಬೂಬ ಶರಣ ಅವರ ಚರಣ ಹಿಡಿದರೆ, ಅರ್ಥಾತ್ ನಂಬಿದರೆ ಆ ಶರಣ ನಮ್ಮನ್ನು ಕಾಪಾಡುವನೆಂದು ಈ ಮೊಹರಂ ಪದದ ಪ್ರಮುಖ ನುಡಿ ಹೇಳುತ್ತದೆ.

ಸಣ್ಣ ಬಾಲ ಸಾರುವೆನಯ್ಯ, ಸರ್ವರಿಗೂ ಮುಗಿದು ಕೈಯ ।
ಸತ್ಯವಂತ ಸಭಾಕೆ, ನಮ್ಮ ಸಲಾಮು ಬಂತಯ್ಯ ।
ವಿದ್ಯಾಬುದ್ಧಿಯೆಂದರೆ ನಮಗೆ ಸಧ್ಯ ಇಲ್ಲಯ್ಯ ।
ಎದ್ದು ಬಂದು ಹಾಡುವೆ ಬಾಲ ಸಧ್ಯ ಕಾಯಯ್ಯಾ ।

ಎಂದು ಆರಂಭವಾಗುವ ಈ ಮೊಹರಂ ಪದದಲ್ಲಿ ನಮ್ಮ ಜನಪದರ ಅನಕ್ಷರತೆ ಕಂಡುಬರುತ್ತದೆ. ಮೊಹರಂ ಪದದ ಹಾಡುಗಾರರು ಸಾಮಾನ್ಯವಾಗಿ ಅಕ್ಷರಸ್ಥರಾಗಿರುವದಿಲ್ಲ. ಈ ಕಾರಣಕ್ಕಾಗಿ ಹಾಡುಗಾರ ನಾನು ಸಣ್ಣವನು, ಸರ್ವರಿಗೂ ಗೌರವ ಸೂಚಿಸಲು ಕೈಯನ್ನು ಮುಗಿಯುತ್ತೇನೆಂದು, ಸತ್ಯವಂತ ಸಭೆಗೆ ನನಗೆ ವಿದ್ಯಾ, ಬುದ್ಧಿ ಇಲ್ಲವೆಂದೂ, ಆದರೂ ಪದ ಹಾಡುವೆನೆಂದು ಆರಂಭದಲ್ಲಿ ಸಲಾಂ ಸೂಚಿಸುತ್ತಾನೆ. ಇದೇ ಮೊಹರಂ ಪದ ಮುಂದುವರಿದು,

ತಾಯಿ ತಂದಿಗೆ ನಮ್ಮ ಸಲಾಮು ಬಂತಯ್ಯ ।
ಕುಟುಗನಹಳ್ಳಿ ನಮ್ಮೂರಯ್ಯ ।
ಇಲ್ಲಿಕುಂತವರು ನಮ್ಮವರಯ್ಯ ।
ಗುರು ಹಿರಿಯರಿಗೆ ಸಲಾಮು ಬಂತಯ್ಯ ।
ಮಕ್ಕಳದಾನಾ ಮಾಡಯ್ಯ ಮಹಾದಾನಿ ಅನಿಸಯ್ಯ ।
ಮೌಲಾಲಿ ಫಾತೀಮಾಗೆ ಸಲಾಮು ಬಂತಯ್ಯ ।
ಹಲ್ಲ ಕಡಿದವರಿಗೆ ಹಾಲ ಕುಡಿಸುವೆನಯ್ಯ ।
ಮಹಮ್ಮದ ಪೈಗಂಬರರಿಗೆ ಸಲಾಮು ಬಂತಯ್ಯ ।
ಕುರಾನು ಹಿಡಿದು ಹಾಡಬೇಕಯ್ಯ ।
ಅಲಿಕಿ ಪದ ಹಾಡಬಾರದಯ್ಯ ।
ಶ್ಯಾಹೀರೆ ಜನರಿಗೆ ಸಲಾಮು ಬಂತಯ್ಯ ।

ಮುಂದುವರಿದ ಈ ಮೊಹರಂ ಪದಗಳಲ್ಲಿ ತಾಯ್ತಂದೆಗಳಿಗೆ ಸಲಾಮು ಸೂಚಿಸುತ್ತಾ ಪ್ರೀತಿಯಿಂದ ತನ್ನ ಹಳ್ಳಿಯನ್ನು ನೆನೆಯುತ್ತಾನೆ. ನೆರೆದಿರುವ ಜನಸ್ತೋಮ ಹಿಂದೂ, ಮುಸ್ಲಿಂ ಭೇದ ಭಾವವಿಲ್ಲದೆ ಅವರೆಲ್ಲರೂ ನಮ್ಮವರಯ್ಯ ಎಂದು ಭಾವೈಕ್ಯತೆ ಭಾವನೆಯನ್ನು ಸಾರುತ್ತಾನೆ. ಗುರು, ಹಿರಿಯರಿಗೆ ಹ. ಮೌಲಾಲಿ ಹಾಗೂಅವರ ಪತ್ನಿ ಫಾತೀಮಾಗೆ ಫಾತೀಮಾಳ ತಂದೆ ಮ. ಪೈಗಂಬರರಿಗೆ, ಶ್ಯಾಹೀರ ಜನರಿಗೆ ಆ ಕವಲೂರ ಕವಿ ಸಲಾಮು ತಿಳಿಸುವದು ಕಂಡು ಬರುತ್ತದೆ. ಈ ಮೊಹರಂ ಪದದಲ್ಲಿ ಹಲ್ಲು ಕಡಿದವರಿಗೆ, ಹಾಲ ನಾನು ಕುಡಿಸುವೆನಯ್ಯ .. ಎನ್ನುವ ಸಾಲು ಅರ್ಥಗರ್ಭಿತವಾದುದಾಗಿದೆ. ವಿಷವುಣಿಸಿದವರಿಗೂ ಹಾಲೆರೆಯುತ್ತೇನೆಂಬುವ ಅಂದರೆ ವೈರಿಗಳಿಗೂ ನಾನು ಪ್ರೀತಿಸುತ್ತೇನೆಂದೂ, ವೈರತ್ವ ಇರಕೂಡದೆಂಬ ಭಾವ ವ್ಯಕ್ತವಾಗಿದೆ.

ಸಭೆಯೊಳು, ಮೊದಲು, ನಾ ಬಂದೆ ಶಿರಬಾಗಿ ಮಾಡುವೆ ಸಲಾಮು ।

ಅಲ್ಲಮಪ್ರಭುವಿಗೆ, ಬೀಬಿ ಪಾತೀಮಾಗೆ ಶಿರಬಾಗಿ ಮಾಡುವೆ ಸಲಾಮು ।

ತಾಯಿ ತಂದೆಗೆ ಮಾಡುವೆ ಸಲಾಮು ।

ವಿದ್ಯಾ ಬುದ್ದಿ ಕಲಿಸಿದ ಗುರುವಿಗೆ ಶಿರಬಾಗಿ ಮಾಡುವೆ ಸಲಾಮು ।

ನನ್ನ ಸರಿಗೂಡಿ ಹಾಡುವ ಶ್ಯಾಹೀರನಿಗೆ ಮಾಡುವೆ ಸಲಾಮು ।

ಹೀಗಿರುವ ರಾಜಧಾನಿಗೆ ಬಿಡದೇ ಶಿರಬಾಗಿ ಮಾಡುವೆ ಸಲಾಮು ।

ದುಷ್ಟ ಯಾಜೀದನೊಂದಿಗೆ ಹೋರಾಡಿ ।

ಮರಣವನಪ್ಪಿದ ಹಸನ್ ಹುಸ್ಸೇನರಿಗೆ ಮಾಡುವೆ ಸಲಾಮು ।

ಬಹದ್ದೂರ ಬಂಡಿ ಯಮನೂರಸ್ವಾಮಿಗೆ ಮಾಡುವೆ ಸಲಾಮು ।

ಈ ಮೊಹರಂ ಪದದಲ್ಲಿ ಹಾಡಿನ ಆರಂಭದ ಸಂಪ್ರದಾಯಕ್ಕೆ ತಕ್ಕಂತೆ ಸಭೆಗೆ ಬಂದಿರುವ ಜನರಿಗೆ, ಅಲ್ಲಮಪ್ರಭುದೇವರಿಗೆ, ಬೀಬಿ ಫಾತೀಮಾರಿಗೆ, ಜನ್ಮ ನೀಡಿದ ತಾಯ್ತಂದೆಗಳಿಗೆ, ಗುರುವಿಗೆ, ಸಂಗಡಿಗ ಕವಿಗೆ ಸಲಾಮು ಹೇಳುತ್ತಾನೆ. ಅಲ್ಲದೇ ರಾಜಧಾನಿಗೂ ಸಲಾಮು ಹೇಳುತ್ತಾ ಸಾರ್ವತ್ರಿಕ ಗೌರವ ಸಮನ ಸೂಚಿಸುತ್ತಾನೆ.ಮೊಹರಂ ಘಟನೆಗೆ ಕಾರಣವಾದ ಮ.ಪೈಗಂಬರರ ಮೊಮ್ಮಕ್ಕಳಾದ ಹಸನ್ ಹುಸೇನರಿಗೂ ಸಲಾಮು ಹೇಳುತ್ತಾ ಸ್ಥಳೀಯ ಶ್ಯಾಹೀರ ಬಹದ್ದೂರ ಬಂಡಿಯ ಯಮನೂರಸ್ವಾಮಿಗೆ ಶಿರಬಾಗಿ ಸಲಾಮು ಎಂದು ನೆನೆದಿರುತ್ತಾನೆ.

ಕುಂತಿರಿ ಅಸಲಾ ಬುದ್ದಿವಂತರೆಲ್ಲಾ ।

ಪಂಡಿತರಿಗೆನಮ್ಮ ಸಲಾಮು ಮೊದಲಾ ।

ಸಲಾಮು ಮಾಡಿದ ಬಳಿಕ । ಕೋಡಿ ನೀಡು ಹಾಡಬೇಕಾ ।

ಸುಳ್ಳು, ಸುಳ್ಳು ಯಾಕ । ವಾದಿ ಹಗಲೆಲ್ಲ ।

ನಾಡಿನ ಮೇಲಾಸರ್ವ ಶ್ಯಾಹೀರಗೆಲ್ಲಾ ।

ಹಾಕೇನಿ ಕುದ್ರಿಮೋತಿ ಶ್ಯಾಹೀರಾ ನಾನೊಂದ ಬಿಕ್ಕಟ್ಟು ಸವಾಲ ।

ಈ ಮೊಹರಂ ಪದವು ಒಂದು ಸವಾಲ್ ಪದವಾಗಿದೆ. ಆದರೂ ಮೊಹರಂ ಪದದ ಪರಂಪರೆಯಂತೆ ಸಲಾಮು ಹೇಳುವ ಕಲೆ ವ್ಯಕ್ತವಾಗಿದೆ. ಅದರಂತೆ ಹಾಡಿನ ಸಂಧರ್ಭದಲ್ಲಿ ಕೂಡಿರುವ ಜನರಿಗೆ ಬುದ್ದಿವಂತರೆಂದು, ಪಂಡಿತರೆಂದು ತಿಳಿಯುವ ಔದಾರ್ಯ ಹಾಡುಗಾರರಲ್ಲಿದೆ. ಅದಕ್ಕಾಗಿ ಅಸಲಾ ಬುದ್ದಿವಂತರಿಗೆ, ಪಂಡಿತರಿಗೆ, ಸಲಾಮು ಹೇಳಿ ಶ್ಯಾಹೀರರು ಪರಸ್ಪರ ಸವಾಲುಗಳಲ್ಲಿ ತೊಡಗುತ್ತಾರೆ.

ಮೊದಲು ಸಭೆಗೆ ನಾ ಬಂದೆ ಕರಜೋಡಿಸಿ ಮಾಡುವೆ ಸಲಾಮು ।

ಹತ್ತು ದೈವದೊಳಗೆ ಮೇಲಾಗಿ ಸಾರುವೆ । ಶರಣರ ಲೀಲಾ ।

ವಿದ್ಯೆ ಕಲಿಸಿದ ಗುರುವಿಗೆ ಮೊದಲು ಮಾಡುವೆ ಸಲಾಮು ।

ಎಂದು ಹೇಳುತ್ತಾ ಎಂದಿನ ಪರಂಪರೆ ಮುಂದುವರಿಯುತ್ತದೆ. ಹತ್ತು ದೈವದೊಳಗೆ ಶರಣರ ಲೀಲೆಯನ್ನು

ಹಾಡಿನ ಮೂಲಕ ಸಾರುವ ಅಥವಾ ಪ್ರಚಾರ ಮಾಡುವ ಪ್ರಯತ್ನ ಮಾಡುತ್ತಾನೆ. ಶರಣರ ಲೀಲೆಗಳನ್ನ ಸಾರುತ್ತಾ ಅವರ ಕೃಪೆಗೆ ಒಳಗಾಗುವಂತೆ ಮಾಡುವ ಚತುರತೆ ಮೊಹರಂ ಪದಗಳಲ್ಲಿದೆ.

ಸವಾಲ್-ಜವಾಬ ಪದಗಳು :

ಒಂದು ಜನಪದ ಕಲೆಯು ಜೀವಂತವಿರಬೇಕಾದರೆ ಅದು ಜನರ ಬಾಯಿಯಲ್ಲಿ ನಿರಂತರವಾಗಿ ನಲಿದಾಡುತ್ತಿರಬೇಕು. ಒಂದು ಗಂಡು ಹೆಣ್ಣಿನ ಸಂವಾದ ಹೊಂದಿದ ಕಥೆಯಾಗಿರಬೇಕು. ಇಲ್ಲವೇ ಗಂಡು ಗಂಡಿನ ವಾಗ್ವಾದದ ಕಥೆಯಾಗಿರಬೇಕು. ಇಲ್ಲವೇ ಚಾರಿತ್ರಿಕ ವಿಷಯವನ್ನು ಎತ್ತಿಕೊಂಡು ಚರ್ಚಿಸುವುದು ಇದರಲ್ಲಿ ಇಂತಹ ಚರ್ಚೆಯಲ್ಲಿ ಯಾರು ಬುದ್ಧಿವಂತರೆಂಬುದನ್ನು ಸಭೆ ನಿರ್ಣಯಿಸುತ್ತದೆ. ಸ್ಪರ್ಧೆಯಿದ್ದಾಗ ಮಾತ್ರ ಅದರ ಕುರಿತು ಅಭಿರುಚಿ ಹೆಚ್ಚಾಗಿರುತ್ತದೆ. ಸೋಲು-ಗೆಲುವು ಮನುಷ್ಯರ ಗಮನವನ್ನು ಸೆಳೆಯುತ್ತದೆ. ಸವಾಲ್ ಮತ್ತು ಜವಾಬ್‌ನ ಹಾಡುಗಳು ಮಾತ್ರ ಸಮಕಾಲೀನ ಸಮಸ್ಯೆಯನ್ನು ಎತ್ತಿಕೊಂಡು ಚರ್ಚಿಸಲು ಅನುಕೂಲ.

ಮೊಹರಂ ಕಾಲದಲ್ಲಿ ಇಲ್ಲವೇ ಕೆಲವು ಸ್ಥಳೀಯ ಉರುಸುಗಳಲ್ಲಿ ಈ ಸವಾಲ್-ಜವಾಬ ಪದಗಳನ್ನು ಹಾಡುವುದುಂಟು. ರಿವಾಯತ್ ದಾಟಿಯ ಸವಾಲ್ ಜವಾಬ ಪದಗಳ ಜೊತೆಗೆ ಇತ್ತೀಚಿನ ಕವಿಗಳು ರಚಿಸಿದ ಪದಗಳನ್ನು ಹಾಡುವರು. ಸವಾಲ್ ಜವಾಬು ಪದಗಳು ಪೈಗಂಬರ ಜೀವನಕ್ಕೆ ಸಂಬಂಧಿಸಿದಂತೆ, ಕರ್ಬಲಾ ಕಾಳಗಕ್ಕೆ ಸಂಬಂಧಿಸಿದಂತೆ ಖಲೀಫರಿಗೆ ಸಂಬಂಧಿಸಿದಂತೆ, ಇತರೇ ವಿಷಯಗಳಿಗೆ ಸಂಬಂಧಿಸಿದಂತೆ ಇರುತ್ತವೆ. ಸ್ಪರ್ಧಾ ಕಣಕ್ಕೆ ಬಂದಿರುವ ಆರಂಭದಲ್ಲಿ ಸಭಿಕರಿಗೆ ಸಲಾಂ ಪದ ಹೇಳಿ ಸವಾಲ್ ಪದ - ಜವಾಬು ಪದ ಹೇಳುವರು. ಹಾಡುಗಾರರು ಮುಮ್ಮೇಳದಲ್ಲಿ ಇಬ್ಬರಿದ್ದರೆ ಹಿಮ್ಮೇಳದಲ್ಲಿ ನಾಲ್ಕೈದು ಜನರಿರುವರು. ಅವರು ನುಡಿಗಳ ಕೊನೆಯ ಸಾಲನ್ನು ಏರುಧ್ವನಿಯಲ್ಲಿ ಹೇಳುವರು. ಇವುಗಳಲ್ಲಿ ಇಸ್ಲಾಂಧರ್ಮಕ್ಕೆ ಸಂಬಂದಿಸಿದ,ಇಸ್ಲಾಂಮೇತರ ಧರ್ಮಕ್ಕೆ ಸಂಬಂಧಿಸಿದ ಸವಾಲ್-ಜವಾಬ ಪದಗಳುಂಟು. ಈ ಎರಡು ಪ್ರಕಾರದ ಪದಗಳು ಏರು, ಇಳಿವು, ಛ್ಯಾಲ, ಅಂತ್ಯಪ್ರಾಸ ಹೊಂದಿರುತ್ತವೆ. ಕೇಳುಗರಲ್ಲಿ ಏಕಕಾಲಕ್ಕೆ ಕುತೂಹಲವನ್ನು ಕೆರಳಿಸುತ್ತವೆ. ಅವರ ಮನಸ್ಸಾಕರ್ಷಿಸುತ್ತವೆ. ಇಂತಹ ಸವಾಲ್-ಜವಾಬ್ ಪದಗಳನ್ನು ಮೊಹರಂ ಹಬ್ಬದಲ್ಲಿ ಹಾಡುತ್ತಾರೆ. ಕೆಲವು ಸವಾಲ್-ಜವಾಬ್ ಪದಗಳಲ್ಲಿ ಯಾವ ಕಥೆಯೂ ಇರದೇ ನೇರವಾಗಿ ಸವಾಲುಗಳು ಇರುತ್ತವೆ. ಇನ್ನೂ ಕೆಲವು ಜವಾಬು ಪದಗಳು ಸವಾಲಿಗೆ ಜವಾಬು ಹೇಳುತ್ತವೆ.

ಎಲ್ಲೋದ ಕರೀ ನಿಮ್ಮ ಶ್ಯಾಹೀರ ಕೊಟ್ಟುಹೋಗಲಿ ಇದಕ ಉತ್ತರ ।
ಖಾಲೀ ಖಟ ಪಟ ಯಾಕೋ ಶ್ಯಾಹೀರ, ಯಾವಲ್ಲಿ ಕಲಿತಿದಿ ಹಲಲ್ ಖೋರ ॥
ಹಲ್ಲ ಕಿಸಿತಿದಿ ನೀನು ಹದಿನಾರು ಜಾತಿ ಜಲ್ಮಕೆ ನಾಚಿಕಿಲ್ಲೊ ಪೋರ ॥

ಎಂದು ಮೊಹರಂ ಪದದ ಹಾಡುಗಾರ ಸವಾಲನ್ನು ಆರಂಭಿಸುತ್ತಾನೆ. ಮತ್ತೊಬ್ಬ ಸವಾಲ್‌ಕಾರರನ್ನು ಕುರಿತು ನಿಮ್ಮ ಕವಿ ಎಲ್ಲಿರುವನೆಂದು ನನ್ನ ಸವಾಲಿಗೊಂದು ಉತ್ತರವನ್ನ ಕೊಟ್ಟು ಹೋಗಲಿ ಎಂದು

ಹಲುಬುತ್ತಾನೆ. ಹಾಗೆಯೇ ಅವನಿಗೆ ಯಾವಲ್ಲಿ ಕಲಿತಿದಿ, ಹಲಲ್ ಕೋರನೆಂದು, ಹದಿನಾರು ಜಾತಿ ಜಲ್ಮಕ್ಕೆ ನಾಚಿಕೆ ಇಲ್ಲವೆಂದೂ ಮೂದಲಿಸುತ್ತಾನೆ. ಇದು ಕೇಳುಗರಲ್ಲಿ ಕುತೂಹಲವನ್ನು ಹುಟ್ಟಸುತ್ತದೆ.

ಜನಪದ ಜೀವಾಳವಾದ ಈ ಮೊಹರಂ ಪದಗಳಲ್ಲಿ ಹಾಡುಗಾರನು ಮತ್ತೊಬ್ಬ ಹಾಡುಗಾರನಿಗೆ ಕಠೋರ ಭಾಷೆಯಲ್ಲಿ, ಕಠೋರ ಪದಗಳಲ್ಲಿ ನಿಂದಿಸುವ ಈ ವೈಖರಿ ಕುತೂಹಲವನ್ನು ಹುಟ್ಟಸುತ್ತದೆ. ಜನರು ಕೂಡ ಇದಕ್ಕುತ್ತರವಾಗಿ ಜವಾಬು ಏನು ಬರುತ್ತದೆಂದು ನಿರೀಕ್ಷಿಸುತ್ತಾ ಇರುತ್ತಾರೆ. ಹಾಗೆ ಈ ಮೊಹರಂ ಪದ ಮುಂದುವರಿದು

ಪೊಳ್ಳು ಮಾತಿನ ಶ್ಯಾಹಿರಾ ಹೆಂಗಸರ ಮುಂದೆ ಇವನ ಬಡಿವಾರ ।
ಹುಡಿಕ್ಯಾಡಿ ತಗದೀನಿ ಶ್ಯಾಸ್ತರಾ, ಲಗು ಹುಡಿಕಿಕೋ ಇದಕೆ ಉತ್ತರ ।
ಸತ್ಯವಂತ ಮೌಲಾಲಿ ಶರಣರ ದಪನ್ ಮಾಡಿದವರು ಯಾರ ಅವರ ।
ಪ್ರಾಣಾ ಬಿಟ್ಟದ್ದು ಯಾವ ವಾರ ತಿಳಿದೇಳೋ ತಲಹರಕ ಕುಂಬಾರ ।
ತಡ ಮಾಡದೆ ಕೊಡು ಇದಕ ಉತ್ತರ, ಇಲ್ಲಂದ್ರ ಬಡಿದೇವು ಕುಂಡಿಗೆ ಕೇರಾ ।
ಹುಡಿಕ್ಯಾಡಿ ಹಾಕೀನಿ ಶಾಸ್ತರಾ, ಇಲ್ಲಿಂದ ಪಾರಾಗಿ ಸೇರೋ ಊರಾ ॥

ಎನ್ನುವ ಸಂಭಾಷಣೆಯ ಮಾತುಗಳು ಪರಸ್ಪರರಲ್ಲಿ ನಡೆಯುತ್ತವೆ. ಎದುರಾಳಿ ಹಾಡುಗಾರನಿಗೆ ಪೊಳ್ಳು ಮಾತಿನ ಶ್ಯಾಹೀರ ಎಂದು ಹೆಂಗಸರ ಮುಂದೆ ಇವನ ಬಡಿವಾರ ಎಂದು ಅವನನ್ನು ನಿಂದಿಸುವದು, ಹಾಗೆಯೇ ಅವನನ್ನು ಒಂದು ವಿಷಯದ ಮೇಲೆ ಪ್ರಶ್ನೆ ಕೇಳುವದು ಜನಪದರ ವಾಕ್ ಚಾತುರ್ಯ ಹಾಡಿನ ರೂಪದಲ್ಲಿರುವದು ತಿಳಿಯುತ್ತದೆ. ಈ ಸವಾಲ್ ಪದಗಳ ವಿಶೇಷತೆ ಏನೆಂದರೆ ಐತಿಹಾಸಿಕ ವಿಷಯಗಳನ್ನು ಒಳಗೊಂಡಿರುತ್ತವೆ. ಉದಾಹರಣೆ ಮು. ಪೈಗಂಬರ ಅವರ ಅಳಿಯ ಅಂದರೆ ಬೀಬಿ ಫಾತೀಮಾ ಅವರ ಪತಿ ಹ। ಮೌಲಾಲಿ ಕೊಂದವರಾರು, ಪ್ರಾಣ ಬಿಟ್ಟ ದಿನ ಯಾವುದು ಎಂದು ಪ್ರಶ್ನೆ ಬಂದಿರುವದು ಚಾರಿತ್ರಿಕ ದೃಷ್ಟಿಯ ವೈಶಿಷ್ಟ್ಯವಾಗಿದೆ. ಇದು ನಮ್ಮ ಜನಪದರಿಗೆ ಐತಿಹಾಸಿಕ ಪ್ರಜ್ಞೆ ಇತ್ತು ಎಂಬುದು ಗೊತ್ತಾಗುತ್ತದೆ. ಸವಾಲಿಗೆ ಬಂದಂತಹ ಉತ್ತರದ ಮೂಲಕ ಜನರಿಗೆ ಚಾರಿತ್ರಿಕ ವಿಷಯದ ಕಲ್ಪನೆ ತಿಳಿದು ಬರುತ್ತದೆ.

ಯಾಕೋ ನಮ್ಮಣ್ಣ ಸವಾಲ್ ಸಾಕೋ ಬೇಕಣ್ಣಾ ।
ಸವಾಲಿನೊಳು ಸಾರಿ ಹೇಳುವೆ ಕಳಕೊಂಡ್ಯೋ ಚೊಣ್ಣಾ ।
ಹೆಜ್ಜಿ ಅಲ್ಲದೇ ತಮ್ಮಾ ಕಾಲಿನ ಕಾಲಿನ ಗೆಜ್ಜಿ ಬಿಚ್ಚಲೇ ।
ಹೆಜ್ಜಿ ಹೆಜ್ಜೆಗೆ ಮೀಸಿ ಕಿತ್ತೆವು, ಬಹಳ ಚೋಕಲೆ ।
ಹಲ್ಲ ಹದಿನಾರು ಮುರಿಸಿಕೊಂಡ್ಯೋ ।
ಚೂರು ಮೂರು ದುಡ್ಡಿಗೆ ಶೇರ ತಂದು ಬಡಿದೇವ ಕೆರಾ ॥

ಎನ್ನುವ ಗಂಭೀರ ಸ್ವಭಾವದ ಸವಾಲ್ ಪದ ಅಚ್ಚರಿಯನ್ನು ಹುಟ್ಟಸುತ್ತದೆ. ಸವಾಲ್ ಸಾಕೋ ಬೇಕಣ್ಣ

ಕಳಕೊಂಡ್ಯೋ ಚೋಣ್ಣಾ, ಕಾಲಿನ ಗೆಜ್ಜೆ ಬಿಚ್ಚಲೇ, ಮೀಸೆ ಕಿತ್ತೇವು, ಹಲ್ಲ ಹದಿನಾರು ಮುರಿಸಿಕೊಂಡ್ಯೋ ಈ ಮೊದಲಾದ ಪದಗಳು ಜನಪದರ ಮಾತಿನ ಸೊಗಡನ್ನು, ವಿಡಂಬನೆಯನ್ನು ತಿಳಿಸುತ್ತದಲ್ಲದೇ ಎದುರಾಳಿಯನ್ನು ಹೇಗೆ ಮಣಿಸಬಹುದು, ಎಂತೆಂತಹ ಗಂಭೀರ ಸವಾಲುಗಳಿರುತ್ತವೆಂಬುದನ್ನು ತಿಳಿಸುತ್ತವೆ. ಕೇಳುಗ ಮುಂದೆ ಎಂತೆಂತಹ ವಿಚಾರಗಳು ಬರುತ್ತವೆಂಬುದನ್ನು ನಿರೀಕ್ಷಿಸುತ್ತಾನೆ. ಎದುರಾಳಿ ಗಟ್ಟಿಗನಾಗಿದ್ದರೆ ಜವಾಬು ನೀಡುತ್ತಾನೆ. ಇಲ್ಲದಿದ್ದರೆ ಸೋಲನ್ನು ಅನುಭವಿಸುತ್ತಾನೆ. ಮೊಹರಂನ ಸವಾಲ್-ಜವಾಬ್ ಪದಗಳಲ್ಲಿ ಇಸ್ಲಾಂ ಧರ್ಮದ ಜೊತೆಗೆ ಇಸ್ಲಾಮೇತರ ಹಾಡುಗಳು ಸವಾಲ್-ಜವಾಬ್ ರೂಪದಲ್ಲಿರುವುದು ಹಲವು ವೈಶಿಷ್ಟ್ಯಗಳಲ್ಲಿ ಒಂದು. ಈ ಎಲ್ಲಾ ಚಾಟಿ ಏಟಿನಂತಹ ಮಾತುಗಳು ಅದಕ್ಕೆ ಉತ್ತರವಾಗಿ ಬಂದಂತಹ ಗಂಭೀರ ಸ್ವರೂಪದ ಉತ್ತರಗಳು ಕೇಳುಗರನ್ನು ಮೌನಿಗಳನ್ನಾಗಿಸುತ್ತವೆ.

> ಸ್ವಂತ ಸಭಾ ಕೇಳರಿ ಹಿರಿಯರಾ, ಬಂದಾನ್ರಿ ಇಲ್ಲಿ ಹೊಸತಾಗಿ ಕಲಿತಾವ ।
> ಕದನಾ ಹಚ್ಚಿ ಕಡೆಗಾಗಾವ, ಇನ್ನು ಬಿಟ್ಟುಬಿಡ್ರಿ ನಡೆಲ್ಲ ನಿಮ್ಮ ಆಟ. ।
> ನಮ್ಮ ಕೈಯಾಗ ಸಿಕ್ಕು ಆಗಿ ಹೋದ್ರಿ ಬಹಳ ಚಪ್ಪ ।
> ಕೈಯಾಗ ಚಡಿ ಹಿಡಕೊಂಡು ಮಾಡುವೆ ಅರ್ಬಾಟ ।
> ಬಾಯಿಲೆ ಅಕ್ಷರ ನುಡಿಯೋ ಮುಡುದಾರ ।

ಎಂದು ಆರಂಭವಾಗುವ ಮತ್ತೊಂದು ಮೊಹರಂ ಪದದಲ್ಲಿ ಹೊಸತಾಗಿ ಕಲಿತವನು ಬಂದಿರುವನೆಂದು, ಆವ ಜಗಳ ಇಟ್ಟು ಹೋಗಾವನೆಂದು, ಅಂಥವರ ಆಟ ನಡೆಯುವದಿಲ್ಲವೆಂದು, ನಮ್ಮಂಥ ಅನುಭವಸ್ಥರ ಮುಂದೆ ಎದುರಾಳಿಯ ಆಟ ನಡೆಯುವದಿಲ್ಲವೆಂದು, ಏನಾದರೊಂದು ಪದ ನುಡಿದು ಜವಾಬು ನೀಡಬೇಕೆನ್ನುವ ಭಾವ ತಿಳಿದು ಬರುತ್ತದೆ. ಈ ಮೊಹರಂ ಪದ ಮುಂದುವರಿದು ಒಂದು ಕಥಾನಕ, ಆಧ್ಯಾತ್ಮಿಕ ವಿಷಯತಿಳಿಸುತ್ತದೆ. ಇವರಲ್ಲಿ ಒಬ್ಬ ಯಹೂದಿಯ ಮಗಳಿಗೆ ಹತ್ತಿದ ಹಿರೇಬ್ಯಾನಿ ಹೋಗಲಾರದ ಕಥೆ ತಿಳಿಯುತ್ತದೆ.

> ಹಿರೇಬ್ಯಾನಿ ಹತ್ತಿ ಯೂದೀಯ ಮಗಳು,ಮಾಡ್ಯಳು ಶೋಕ ।
> ಕೈಕಾಲು ಬೆರಳು ಹೊಡೆದು ಹೋದವರಿ ಪಕ್ಕ ।
> ವಾರೀಗಿ ಗೆಳತಿಯರು ಹಾಸ್ಯ ಮಾಡಿ ಹೋದರು ನಕ್ಕಾ ।
> ಹಾಕ್ಯಾಳೋ ಉಸುರಾ ಕಾಯೋ ನೀ । ಈಶ್ವರ ಅಲ್ಲಾ ॥

ಕುಷ್ಟರೋಗಕ್ಕೆ ಬಲಿಯಾಗಿ, ನೊಂದು, ಬೆಂದು, ಕೈ ಕಾಲು ಬೆರಳುಗಳನ್ನು ಕಳಕೊಂಡು, ಗೆಳತಿಯರೊಂದಿಗೆ ಅವಮಾನಗೊಂಡು ಅವಳು ಈಶ್ವರ ಅಲ್ಲಾನಿಗೆ ಮೊರೆ ಹೋದಳು, ಮನುಷ್ಯ ಪ್ರಯತ್ನ ಕೊನೆಗೊಂಡು ದೈವತ್ವಕ್ಕೆ ಮೊರೆಹೋದಳು. ಕಣ್ಣೀರು ಸುರಿಸುತ್ತಾ ಅಡವಿಯಲ್ಲಿ ಸಂಚರಿಸಿದಳು. ದಾರಿಯಲ್ಲಿ ಹುಲಿ ಕರಡಿಗಳಾವು ಮುಟ್ಟಲಿಲ್ಲ, ನೋವಿನಿಂದ ಸೊರಗುತ್ತಾ ಹೋದಳು.

ಹಿಡಿದಾಳು ದಾರಿ ಹೊಂಟಾಳು ನಾರಿ, ಹುಲಿ ಕರಡಿ ಮುಟ್ಟಲಿಲ್ಲ ।
ಹಗಲು ರಾತ್ರಿ ಬಾನಿಲಿಂದ ಆದಾಳು ಸಣ್ಣಾ, ಹಾಕ್ಯಾಳೋ ಉಸರಾ ।

ಆ ಯಹೂದಿಯ ಮಗಳು ಸುತ್ತಾಡುತ್ತಾ, ಗಿಡದ ಮೇಲೆ ರಕ್ತಸಿಕ್ತವಾದ ಪಾರಿವಾಳವನ್ನು ನೋಡುತ್ತಾಳೆ.

ಹುಸೇನ್ನೈನಾ, ಕದನಾ ಮಾಡಿದ ಬಹದ್ದೂರಾ ।
ಭಲ್ಲಿ । ಕಾಳಗದಲ್ಲಿ ಪಶು ಜಾತಿ ಪಾರಿವಾಳ ।
ರಕ್ತದಲ್ಲಿ ಮುಳುಗಿ ಹಾರೈತಿ ಮೇಲಾ ।
ಒಂದು ಗಿಡಕ ಕುಂತಿತು । ನೋಡ್ಯಾಳು ಚಲುವಿಹರುಷದಿಂದ ।
ಪಕ್ಕ(ರೆಕ್ಕೆ) ಜ್ಯಾಡಿಸಿದರ, ರಕ್ತ ಬಿದ್ದಿತ್ರಿ ।
ಮೊದಲಿನಂತೆಹೂದೀಯ ಮಗಳು ರೂಪವಾದಳು ಉದ್ಧಾರ ।
ಕುಂತು ಕೇಳ್ರಿ, ಹಿರಿಯರಾ ಪಾರಿವಾಳ ಹಾರಿತು ಮದೀನಾಕ ।

ದೇವರ ದಯೆ ಒಂದಿದ್ದರೆ ಏನೆಲ್ಲಾ ಒಳಿತು ಆಗಬಹುದೆಂಬುದಕ್ಕೆ ಇದೊಂದು ಉದಾಹರಣೆ. ಹಸನ ಹುಸೇನರು ಕಾಳಗ ಮಾಡಿದ ರಕ್ತದ ಮಡುವು ಪಾರಿವಾಳಕ್ಕೆ ತಾಗಿ ಆ ಪಾರಿವಾಳ ರೆಕ್ಕೆ ಬಡಿಯುವದರ ಮೂಲಕ ಅವಳ ಕುಷ್ಠರೋಗ ಮಾಯವಾದಂತ ಕತೆ ತಿಳಿಯುತ್ತದೆ. ಇದು ಹಸನ, ಹುಸೇನರ ಪಾವಿತ್ರ್ಯತೆ ತಿಳಿಸುತ್ತದೆ. ಕೊನೆಗೆ ಭಂಡಾ ಶ್ಯಾಹೀರಾ ನೀನು, ಲಂಡು ಹಾಕಿ ಹೋದಿಯಾ । ಇನ್ನಾ ನಮ್ಮ ಕೂಡಾ ಪದವನ್ನು ಹಾಡಬ್ಯಾಡ । ಇನ್ನಾ ಆದಿಯೋ .. ಶ್ಯಾಹೀರ । ಎಂದು ಸವಾಲ್ ಹಾಕುವದರೊಂದಿಗೆ ಮುಕ್ತಾಯವಾಗುತ್ತದೆ.

ಹಾಡು ಬಾರೋ ಕೈಯಾಗ ಸಿಕ್ಕೇದಿ ವೈರಿ ।
ಬಿಡು ಬಿಂಕ ವೈಯಾರಿ ನಡಿಬೇಕು ಶಾಸ್ತ್ರದ ಸರಿ ।
ಕಡುಹಾರ ಹಾಕಿರಿ ಹೊಡೆತ ತಿಂದೀಯೆ ಮೊದಲ ಬಾರಿ ।

ಎಂದು ಆರಂಭಗೊಳ್ಳುವ ಈ ಮೊಹರಂ ಪದದಲ್ಲಿ ಹಾಡುಗಾರ ಮತ್ತೊಬ್ಬನಿಗೆ ಸವಾಲನ್ನು ಹಾಕುತ್ತಾನೆ. ಕೈಯಾಗ ಸಿಕ್ಕೇದಿ ಎಂದು ನಿನ್ನಲ್ಲಿರುವ ಬಿಂಕ, ಅಹಂ, ವೈಯ್ಯಾರ ಬಿಡಬೇಕೆಂದು, ಧರ್ಮ ಶಾಸ್ತ್ರದ ಪ್ರಕಾರ ನಡೆಯಬೇಕೆಂದು ಇಲ್ಲದಿದ್ದರೆ ಹೊಡೆತ ತಿನ್ನುವಿಯೆಂದು ತಿಳಿದು ಬರುತ್ತದೆ.

ಅಡಿಗೆಯ ಮನೆಯೊಳು ಅಡಗುವ ನಾರಿ ।
ಹುಡುಗನ್ನ ತಡಿವೀದಿ ಎಲೆ ಪೋರಿ ।
ಗಡಿಗಿ ಗಂಗಾಳ ತೊಳೆ ಸ್ವಾರಿ ।
ಬಿಡುಗಡೆಯಾಗುವೆ ಬಿಕಾರಿ ।
ನಡುಮನೆಯ ನಾರಿ ನಾಚುವೆ ಗಂಡುಗೊಂಬ ಮಾರಿ ।

ಈ ಮೇಲಿನ ಪದವು ಮುಂದುವರಿದು ಹಾಡುಗಾರರು ಎದುರಾಳಿಗೆ ನೀನು ಹೆಂಗುಸು ಎಂದು ಜರಿದು,

ನಾನು ಗಂಡು (ಹುಡುಗ) ನನ್ನನ್ನು ಈಗ ತಡವೀದಿ ಎಂದು, ನಾನು ಮಾತ್ರ ನಿನ್ನ ಸವಾಲಿಗೆ ಜಗ್ಗುವದಿಲ್ಲವೆಂದು ನೀನೇ ನಾರಿಯಾಗಿ ಗಂಗಾಳ, ತಂಬಿಗೆ, ಗಡಿಗೆ ತೊಳೆ ಎಂದು ಜೊತೆಗೆ ಬಿಕಾರಿ ಎಂದೂ ಎದುರಾಳಿಯನ್ನು ಗಂಡುಗೊಂಬಿ ಮಾರಿ ಎಂದು ನಿಂದಿಸುತ್ತಾನೆ.

ಶಾಸ್ತ್ರದ ವಿರುದ್ಧ ನಡೆಯುವ ಬುದ್ಧಿಗೇಡಿ, ಕುಲಗೇಡಿ ।
ಮಾನಗೇಡಿಗಿಂತ ಬರುನುಡಿ ತನಗೊಬ್ಬನಗ ಸರಿ ।
ಜನದೊಳಗೆ ಆಗುವೆ ಛೀ ಮಾರಿ ।
ಗಂಡು ಕುದುರಿ ಆದರೆ ದಂಡಿನೊಳು ಬರುತ್ತಿತ್ತು ಖರೆ ।
ಭಂಡ ಬಿಡಾಡಿ ಬಿಟ್ಟ ಕುದುರಿ ಹಿರೇಹುಲಿ ಸರಿ ।

ಹಾಡುಗಾರನು ಎದುರಾಳಿಗೆ ಶಾಸ್ತ್ರದ ವಿರುದ್ಧ ನಡೆಯುವವನಿಗೆ ಬುದ್ಧಿಗೇಡಿ ಎಂದು, ಕುಲಗೇಡಿ ಎಂದು, ಮಾನಗೇಡಿ ಎಂದೂ ಇದು ನಿನ್ನ ಪಾಲಿಗೆ ಸರಿಯಾದರೂ ಜನರೊಳಗೆ ಛೀ ಮಾರಿ ಆಗಿ ಬಿಡುತ್ತಿ ಎಂದು ಇಲ್ಲಿ ಗಂಡು ಕುದುರಿ ಎನ್ನುವ ಪದ ಗೆಲ್ಲುವ ಕುದುರೆಯಾದರೆ ನನ್ನ ಸರಿ ಸಮಾನವಾಗಿ ಸ್ಪರ್ಧೆಗೆ ಬರುತ್ತಿತ್ತು, ಆದರೆ ಭಂಡ ಬಿಡಾಡಿ ಬಿಟ್ಟ ಕುದುರಿ ಎಂದು ವ್ಯಂಗ್ಯವಾಡಿದ್ದು ಕಂಡು ಬರುತ್ತದೆ. ಈ ರೀತಿ ಸವಾಲ್ ಪದಗಳು ಎದುರಾಳಿ ಮತ್ತು ಹಾಡುಗಾರನ ನಡುವೆ ಮಾತಿನ ಚಕಮಕಿ ಅಥವಾ ಸ್ಪರ್ಧೆಯಿಂದ ಕೂಡಿರುತ್ತದೆ. ಇದೇ ದೊಹರಂ ಪದದಲ್ಲಿ ಮೂಗು ಕೊಯ್ದು ಬಿಟ್ಟೇನಿ ಎರಡು ತೂತ । ಮತ್ತೇನು ನಿನ್ನ ಕಂತಾ । ಬೇಕ್ಯಾಗ ಆಡುವಂಥ ನಿರ್ಲಜ್ಜ ಮಾರಿ । ಮುಂದ ಬಂದರೆ ದೊದಲಿನ ಬೇರಿ । ಶಾಹೀರಾ ಕವಲೂರ ಏನು ದೂರ । ದೂರ ಆತೋ ನಾವು ಹಿರೇ ಮಸೂತಿ । ಎಂದು ಮುಕ್ತಾಯಗೊಳ್ಳುತ್ತದೆ.

ಬಂದೆ ಶ್ಯಾಹೀರ, ನಿನಗಾಗಿ ಮಾಡಿದೆ ಅವಸರಾ ।
ಲಗು ಮಾಡಿ ತಂದೀನಿ ಹುಡಿಕಿ ಇದಕ ಉತ್ತರ ।
ತಯಾರಾಗಿ ತಂದೀನಿ ನಿನಗೆ ಬಡಿಯೂಕ ಕೆರಾ ।
ಮಳ್ಳ ಶ್ಯಾರಾ ಮಾತಿಗೊಮ್ಮೆ ಚೈತೀದಿ ಬಂದು ಸರಾಸರಾ ।

ಎಂದು ಎದುರಾಳಿ ಸವಾಲ್‌ಪದಕಾರರನ್ನು ಇಂತಹ ಕಟು ಮಾತುಗಳ ಮೂಲಕ ಉತ್ತರಿಸುತ್ತಾನೆ. ಮುಂದುವರಿದು,

ನನ್ನ ಗುರುವಿನ ಹೆಸರು ಕೇಳ್ಯಾನೋ ಜನರಾ ।
ಹೆಸರ ಹೇಳುವೆ ಕಸರು ಇಲ್ಲದೇ ಬರಕೋ ಅಕ್ಷರಾ ।
ಲಗು ಬರಕೋ ಯಾವಾಗಾರ ಹಾಕುವಂತೆ ಪತ್ತರಾ ।
ಪ್ರಾಸೀನ ಅಕ್ಷರಾ ತಾಸಿಗೊಮ್ಮೆ ಹಾಕುವೆನು ಆಗೋ ಎಚ್ಚರಾ ।
ಪಟಕಾ ತೊಡಕಾ ಹಾಕೀನಿ ನಿನಗೆ ಹುಡಿಕಿ ।
ಜೋಡಿಗೆ ಜೋಡು ಕುಳಿತು ನಿನುಹಾಕುವಂತಿ ಉಸರಾ ।

ಎಂದು ಎದುರಾಳಿ ಸವಾಲ್‌ಗಾರ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾನೆ. ಎದುರಾಳಿಯನ್ನು ಕುರಿತು ನೀನು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸುವೆನೆಂದೂ ಹಾಗೆಯೇ ನಾನು ಉತ್ತರಿಸುತ್ತಿದ್ದೇನೆಂದು, ಲಗು ಬರಕೋ ಆನಂತರ ನನಗೆ ಪತ್ರ ಬರೆಯಲು ಅನೂಕೂಲವಾಗುತ್ತದೆಂದೂ, ಪ್ರಾಸಬದ್ದ ಅಕ್ಷರ ತಾಸಿಗೊಮ್ಮೆ ಹಾಕುವೆನೆಂದು ಪ್ರತಿಕ್ರಿಯಿಸುತ್ತಾನೆ. ಮುಂದುವರಿದು ಹಲಕಾ ಶಬ್ದ ನುಡಿದು ನೀನು ಆಗತಿದಿ ಚಿಲ್ಲರಾ । ಪ್ರಶ್ನೆ ಹೇಳುವೆ ನಿನಗೊಂದು ಶ್ಯಾಹಿರಾ । ಸಭಾದಾಗ ಹೇಳಿ ಆಗೋ ಹೆಸರಾ । ಎಂದು ಸವಾಲುಗಾರರ ನಡುವೆ ತೀವ್ರವಾದಂತಹ ಮಾತಿನ ಚಕಮಕಿ ನಡೆದಿರುತ್ತದೆ.

ರಾತ್ರಿಯ ಸಮಯದಲ್ಲಿ ನಡೆಯುವ ಇಂತಹ ಪ್ರದರ್ಶನಗಳ ಇನ್ನೊಂದು ವೈಶಿಷ್ಟ್ಯವೆಂದರೆ ಇಲ್ಲಿ ನಡೆಯುವ ಸ್ಪರ್ಧೆಗಳು. 'ಬೆಳ್ಳಿಯ ಕಡೆ', 'ಶಲ್ಲೆ' ಅಥವಾ 'ನಗದು' ಮುಂತಾದ ಬಹುಮಾನಗಳನ್ನು ಇಟ್ಟು ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ಅಂಥ ಸಂದರ್ಭಗಳಲ್ಲಿ ಒಂದು ಮೇಳದವರು ಹಾಡುಹೇಳಿ ಮುಗಿಸಿದ ನಂತರ ಇನ್ನೊಂದು ಮೇಳದವರು ಆರಂಭಿಸುತ್ತಾರೆ. ಇಂತಹ ಸ್ಪರ್ಧಾತ್ಮಕ ಹಾಡುಗಳಿಗೆ 'ಸವಾಲ್-ಜವಾಬ್' ಎಂದು ಹೆಸರು. ಈ 'ಸವಾಲ್ - ಜವಾಬ್' ಸ್ಪರ್ಧಾತ್ಮಕ ಪ್ರದರ್ಶನದಲ್ಲಿ ತಾತ್ವಿಕ ಸಮಸ್ಯೆಗಳನ್ನು ಮುಂದಿಟ್ಟು, ಎದುರಾಳಿ ಸ್ಪರ್ಧಿಗಳಿಗೆ ಸಮಸ್ಯೆ ಅಥವಾ ಒಗಟನ್ನು ಬಿಡಿಸಲು ಹೇಳಲಾಗುತ್ತದೆ. ಆಗ ಪ್ರತಿಸ್ಪರ್ಧಿ ಆ ಸಮಸ್ಯೆ ಅಥವಾ ಒಗಟನ್ನು ಬಿಡಿಸಿ ಉತ್ತರ ಹೇಳಿ, ನಂತರ ಅಂತಹುದೇ ಸಮಸ್ಯೆಯನ್ನು ಎದುರಾಳಿ ಮೇಳದವರ ಮುಂದಿಡುತ್ತಾನೆ. ಹೀಗೆ ಒಂದು ರೀತಿಯ ಪ್ರಶ್ನೆಗೆ ಮರುಪ್ರಶ್ನೆ, ಎದುರಾಳಿಗೆ ತಕ್ಕ ಉತ್ತರ, ನಂತರ ಮತ್ತೊಂದು ಪ್ರಶ್ನೆ ಮತ್ತೊಂದು ಸಮಸ್ಯೆಗಳನ್ನು ಒಡ್ಡುತ್ತಾ, ಪರಸ್ಪರ ಎರಡೂ ಮೇಳದವರು ತಮ್ಮ ತಮ್ಮ ವಾದಗಳನ್ನು ಮುಂದಿಟ್ಟು ಮೂದಲಿಸುತ್ತಾ, ತಮ್ಮ ಮೇಲ್ಮೆಯನ್ನು ಸಾರುತ್ತಾ, ಹಾಡುತ್ತ, ತಾಳಕ್ಕೆ ತಕ್ಕಂತೆ ಅಭಿನಯ, ಹಾವ-ಭಾವಗಳನ್ನು ಮಾಡುತ್ತಾ ರಾತ್ರಿಯಿಡೀ ಸಲಾಮ್ ಪದಗಳನ್ನು, ಸವಾಲ್-ಜವಾಬ್ ಪದಗಳನ್ನು, ಅಧ್ಯಾತ್ಮಿಕ ಪದಗಳನ್ನು, ಕಥಾನಕದ ಪದಗಳನ್ನು, ಚರಿತ್ರೆಯ ಪದಗಳನ್ನು ಹಬ್ಬದ ಪ್ರಯುಕ್ತ ಹಾಡುಗಳನ್ನು ಹಾಡಿ ಹಬ್ಬದ ರಸದೂಟ ನಡೆಸುತ್ತಾರೆ.

ಮೊಹರಂ ಹಬ್ಬವು ಏಕತೆಯನ್ನು ಮೆರೆಸುವ ಹಬ್ಬವಾಗಿದೆ. ಕೆಲವೊಂದು ಪ್ರದೇಶಗಳಲ್ಲಿ ಆಚರಿಸಲಾಗುವ ಮೊಹರಂ ಹಬ್ಬದ ಆಚರಣೆಯಲ್ಲಿ ಮುಸ್ಲಿಮೇತರರೇ ಹೆಚ್ಚಾಗಿ ಭಾಗವಹಿಸುತ್ತಾರೆ. ಹರಕೆ ಹೊತ್ತ ಹಿಂದೂ - ಮುಸ್ಲಿಮರು ಹುಲಿ ವೇಷ, ಅಳ್ಳಳ್ಳಿಬವ್ವಾ ವೇಷ ಹಾಕಿ ಕುಣಿದು ಕುಪ್ಪಳಿಸುತ್ತಾರೆ. ಕಂದೂರಿ ಮಾಡಿ ಎಡೆ ನೀಡಿ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಾರೆ. ದೀರ್ಘದಂಡ ನಮಸ್ಕಾರ ಹಾಕಿ ಧನ್ಯರಾಗುತ್ತಾರೆ. ಹತ್ತನೆಯ ದಿನ ಹೊರಡುವ ಕಾಸೀಮ ಅಲಂ ಮತ್ತು ಹಸನ ಅಲಂ ಒಂದಕ್ಕೊಂದು

ಭೇಟಿಯಾದಾಗ ನೆರೆದ ಜನ ಸಮೂಹ ತೇರಿನ ಮೇಲೆ ಹಣ್ಣುಕಾಯಿ ಎಸೆಯುವಂತೆ ಮಾಡಿ ಭಯ ಭಕ್ತಿಯಿಂದ ಕೈಮುಗಿದು ತೃಪ್ತರಾಗುತ್ತಾರೆ. ಹಿಂದೂಗಳ ಜಾತ್ರೆಯ ಸಂಭ್ರಮವನ್ನು ನೆನಪಿಸುವಂತೆ ಅನೇಕ ಮೊಹರಂ ಕೇಂದ್ರಗಳು ಸರ್ವರ ಇಷ್ಟಾರ್ಥಗಳನ್ನು ಪೂರೈಸುವ ಪುಣ್ಯಕ್ಷೇತ್ರೋತ್ಸವವೆಂದೇ ಪ್ರಚಲಿತವಾಗಿದೆ.

ಕೊಪ್ಪಳ ಜಿಲ್ಲೆಯ ಮೊಹರಂ ಹಬ್ಬದ ಆಚರಣೆಯ ಪ್ರಮುಖ ಸ್ಥಳಗಳು :

ಕೊಪ್ಪಳ ಜಿಲ್ಲೆಯೂ ಈ ಪ್ರಸಿದ್ಧ ಮೊಹರಂ ಹಬ್ಬದ ಆಚರಣೆಗೆ ಹೊರತಾದ ಸ್ಥಳವಲ್ಲ. ಈ ಸ್ಥಳದಲ್ಲಿಯೂ ಭಾವೈಕ್ಯತೆಯಿಂದ, ಯಾವುದೇ ಭೇದ - ಭಾವಗಳ ಕೀಳರಿಮೆಯಿಲ್ಲದೇ ಎಲ್ಲರೂ ಕೂಡಿ ಒಟ್ಟಾಗಿ ಆಚರಿಸುತ್ತಾರೆ. ಮೊಹರಂ ಹಬ್ಬ ಕೂಡಿ ಬಾಳುವ ಕಲೆಯತ್ತ ಹೆಚ್ಚಿನ ಪ್ರೋತ್ಸಾಹ ನೀಡಿ, ಏಕತೆಯನ್ನು ಮೆರೆಸಲು ಅನುವಾಗುತ್ತಿದೆ. ಜೊತೆಗೆ ಇಲ್ಲಿನ ಮತೀಯ ಸಾಮರಸ್ಯವನ್ನೂ ಮೆರೆಸುವ ಭಾವೈಕ್ಯತೆಯ ಕೊಂಡಿಯಾಗಿದೆ.

ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಟಗಿ ತಾಲೂಕುಗಳು ನನ್ನ ಅಧ್ಯಯನದ ವ್ಯಾಪ್ತಿಗೆ ಬರುತ್ತಿದ್ದು, ಈ ಎಲ್ಲ ತಾಲೂಕುಗಳ ಎಲ್ಲ ಗ್ರಾಮಗಳು, ಪಟ್ಟಣಗಳು, ನಗರಗಳು ಭಾವೈಕ್ಯತೆಯ ಕೊಂಡಿಯಂತಿರುವ ಮೊಹರಂ ಹಬ್ಬದ ಕೇಂದ್ರ ಸ್ಥಳಗಳಾಗಿವೆ. ಕೊಪ್ಪಳ ಹೈದರಾಬಾದ - ನಿಜಾಮನ ಆಳ್ವಿಕೆಗೆ ಒಳಪಟ್ಟದ್ದರಿಂದ, ಇಲ್ಲಿ ಬಹಮನಿ ಸುಲ್ತಾನ ಆಳ್ವಿಕೆಯ ಛಾಪೂ ಇರುವುದರಿಂದ, ಮುಸ್ಲಿಂ ಅರಸರ ಆಡಳಿತದ ಕೇಂದ್ರವಾಗಿರುವುದರಿಂದ ಇಲ್ಲಿನ ಭಾಷೆಯಲ್ಲಿ ಉರ್ದು ಮಿಶ್ರಿತವಾಗಿದೆ. ಅಂತೆಯೇ ಹಿಂದೂ ಧರ್ಮದ ಕೆಲವು ಆಚರಣೆಗಳು, ಸಂಪ್ರದಾಯಗಳಲ್ಲಿ ಇಸ್ಲಾಂ ಧರ್ಮದ ಆಚರಣೆಯ ಅಥವಾ ಸಂಪ್ರದಾಯದ ಪ್ರಭಾವ ಇರುವುದನ್ನು ಕಾಣುತ್ತೇವೆ. ಅಂತೆಯೇ ಉಳಿದೆಲ್ಲ ಪ್ರದೇಶಗಳಿಗೆ ಹೋಲಿಕೆ ಮಾಡಿ ನೋಡಿದಾಗ ಹೈದರಾಬಾದ - ಕರ್ನಾಟಕ ಪ್ರದೇಶದಲ್ಲಿಯೇ ಈ ಮೊಹರಂ ಹಬ್ಬದ ವಿಜೃಂಭಣೆ ಹೆಚ್ಚಾಗಿ ಕಾಣಬಹುದು. ಕೊಪ್ಪಳದ ಮೊಹರಂ ಆಚರಣೆಯೂ ಸಹಿತ ಅತ್ಯಂತ ವಿಜೃಂಭಣೆಯಿಂದ ಕೂಡಿದುದಾಗಿದ್ದು, ಇದಕ್ಕೆ ಈ ಪ್ರದೇಶದ ಮೇಲಿರುವ ಮುಸಲ್ಮಾನ ದೊರೆಗಳ ಆಳ್ವಿಕೆ, ಆಡಳಿತ ಮತ್ತು ಇಸ್ಲಾಂ ಧರ್ಮದ ಸಂಪ್ರದಾಯದ ಪ್ರಭಾವ ಕಾರಣವಾಗಿದೆ ಎನ್ನಬಹುದಾಗಿದೆ.

ಇಲ್ಲಿ ಆಚರಿಸಲಾಗುವ ಬಹುತೇಕ ಸ್ಥಳಗಳಲ್ಲಿ ಎಲ್ಲ ಸ್ಥಳಗಳೂ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಮೊಹರಂ ಆಚರಿಸುತ್ತಾರೆ.

ಕೊಪ್ಪಳ ಜಿಲ್ಲೆಯ ಪ್ರಮುಖ ಮೊಹರಂ ಹಬ್ಬದ ಆಚರಣೆಯ ಸ್ಥಳಗಳು ಇಂತಿವೆ.

ಕೊ.ಜಿ. ೧.೧ ಕೊಪ್ಪಳದಲ್ಲಿ ಸಿರಸಪ್ಪಯ್ಯನಮಠ, ೧.೨ ಹಿರೇಮಸೂತಿ, ೧.೩ ತೆಗ್ಗಿನಕೇರಿಯ ಮಡಿವಾಳಪ್ಪ ಮಸೀದೆಯ ಕೈಲಾಸಪತಿ, ೧.೪ ಅತ್ತಾರ ಗಲ್ಲಿ, ೧.೫ ಸರದಾರಗಲ್ಲಿ, ೧.೬ ಕುಂಬಾರ ಓಣಿ, ೧.೭ ಸಜ್ಜಿಹೊಲದ ಮುದಗಲ್ಲ ಮಸೀದಿ, ೧.೮ ಯಮನೂರಪ್ಪ ದರ್ಗಾದ ಮಸೀದಿ ಹೀಗೆ

ಹಲವಾರು ಮಸೀದಿಗಳಲ್ಲಿ ಮೊಹರಂ ಹಬ್ಬವನ್ನು ಭಾವೈಕ್ಯತೆಯಿಂದ, ಪರಸ್ಪರ ಸಹಕಾರ ಮನೋಭಾವದಿಂದ ಆಚರಿಸಲಾಗುತ್ತದೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಕೊ.ಜಿ. ೨.೧ ಕುಷ್ಟಗಿ, ೨.೨ ಚಂದಾಲಿಂಗೇಶ್ವರ, ೨.೩ ಹಿರೇಮನ್ನಾಪುರ, ೨.೪ ಹನುಮನಾಳ ಮೊದಲಾದ ಹಳ್ಳಿಗಳಲ್ಲೆಲ್ಲಾ ಭಕ್ತಿಭಾವದಿಂದ ಎಲ್ಲ ಕೋಮಿನವರೂ ಸೇರಿ ಮೊಹರಂ ಹಬ್ಬವನ್ನು ಆಚರಿಸುತ್ತಾರೆ.

ಗಂಗಾವತಿ ತಾಲೂಕಿನ ಕೊ.ಜಿ. ೩.೧ ಗಂಗಾವತಿ, ೩.೨ ಹಿರೇಜಂತಗಲ್ಲ, ೩.೩ ಕನಕಗಿರಿ, ೩.೪ ಬಸಾಪಟ್ಟಣ, ೩.೫ ವಡ್ಡರಹಟ್ಟಿ ೩.೬ ಚಿಕ್ಕ ಜಂತಕಲ್, ೩.೭ ಕಾರಟಗಿ, ೩.೮ ಬೂದಗುಂಪಾ, ೩.೯ ಹುಲಿಹೈದರ ಮುಂತಾದ ಹಳ್ಳಿಗಳಲ್ಲಿ ಕೂಡ ಮೊಹರಂ ಹಬ್ಬದ ಆಚರಣೆ ಮಾಡಲಾಗುತ್ತದೆ.

ಯಲಬುರ್ಗಾ ತಾಲೂಕಿನಲ್ಲಿ ಕೊ.ಜಿ. ೪.೧ ಕುದರಿಮೋತಿ, ೪.೨ ಯಲಬುರ್ಗಾ, ೪.೩ ಕುಕನೂರು, ೪.೪ ಮಂಗಳೂರು, ೪.೫ ತಳಕಲ್ಲ ಹೀಗೆ ಹಲವು ಹಳ್ಳಿಗಳಲ್ಲಿಯೂ ಕೂಡ ಮೊಹರಂ ಹಬ್ಬದ ಆಚರಣೆ ಮಾಡಲಾಗುತ್ತದೆ. ಯಲಬುರ್ಗಾ ತಾಲೂಕಿನ ಕುದರಿಮೋತಿ ಮೊಹರಂ ಹಬ್ಬದ ಪ್ರಮುಖ ಆಕರ್ಷಣೆ. ರಾಯಚೂರು ಜಿಲ್ಲೆಯಲ್ಲಿ ಮುದಗಲ್ ಹೇಗೆ ಪ್ರಸಿದ್ಧವೋ ಹಾಗೆಯೇ ಕೊಪ್ಪಳ ಜಿಲ್ಲೆಯಲ್ಲಿ ಯಲಬುರ್ಗಾ ತಾಲೂಕಿನ ಕುದರಿಮೋತಿ ಅಷ್ಟೇ ಪ್ರಸಿದ್ಧಿಯನ್ನು ಪಡೆದಿದೆ. ಕುದರಿಮೋತಿಯ ಮೊಹರಂ ಆಚರಣೆ ಐತಿಹಾಸಿಕ ಮಹತ್ವ ಹೊಂದಿದೆ. ಕೊಪ್ಪಳ ಜಿಲ್ಲೆಯಲ್ಲಿ ಮೊಹರಂ ಹಬ್ಬದ ಆಚರಣೆಯ ಬಹುಮುಖ್ಯ ಸ್ಥಳ ಎಂದರೆ ಕುದರಿಮೋತಿ.

ಕುದರಿಮೋತಿ ಮೊಹರಂ ಆಚರಣೆ :

ಕುದರಿಮೋತಿ ಎಂದರೆ ಮೊಹರಂ ಹಬ್ಬದ ಆಚರಣೆಗೆ ಹೆಸರುವಾಸಿಯಾದ ಕೊಪ್ಪಳ ಜಿಲ್ಲೆಯ ಭಾವೈಕ್ಯತೆಯ ಸ್ಥಳ. ಶತಮಾನಗಳಿಂದಲೂ ತನ್ನ ವೈಶಿಷ್ಟ್ಯ ಮತ್ತು ಗುರುತರವಾದ ಪರಂಪರೆಯನ್ನು ಕನ್ನಡ ನಾಡಿನಲ್ಲಿ ಸಾರುತ್ತ ಅಸಂಖ್ಯಾತ ಭಕ್ತಾದಿಗಳ ಅಭಿಮಾನ, ಭಕ್ತಿಯ ದ್ಯೋತಕವಾಗಿದೆ. ಗ್ರಾಮದ ಎಲ್ಲ ಕೋಮಿನವರೂ ಐಕ್ಯತೆಯಿಂದ, ಅನನ್ಯ ಭಕ್ತಿಯಿಂದ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಾ ಬಂದಿದ್ದು ಮೊಹರಂ ಆಚರಣೆಯ ಮೂಲಕ ಗತಿಸಿ ಹೋದ ದಂತಕಥೆಯ ಇತಿಹಾಸವನ್ನು ಸಾರುತ್ತಿದೆ.

ಕುದರಿಮೋತಿಯ ಮೊಹರಂ ಆಚರಣೆಯ ಇನ್ನೊಂದು ಪ್ರಮುಖ ಅಂಶವೆಂದರೆ ದೇಶದ ನಾನಾ ಮೂಲೆಗಳಿಂದ ಅಲೆಮಾರಿ ಜನಾಂಗದ, ಸುಡುಗಾಡು ಸಿದ್ದರು, ವೇಷಗಾರರು, ಹಾವಾಡಿಗರು, ಜಾತಿಗಾರರು, ಗೊಂದಲಿಗರು, ಶಿಂಧೂಳ ಇನ್ನೂ ಮುಂತಾದ ಜನರು ಪರಸ್ಪರ ಮುಖಾ-ಮುಖಿಯಾಗಿ ಒಂದೆಡೆ ಕೂಡುತ್ತಾರೆ.

ಪ್ರತಿ ಎರಡು ವರ್ಷಗಳಿಗೊಮ್ಮೆ ದೇಶದ ಮೂಲೆ ಮೂಲೆಗಳಿಂದ ಬರುವ ಇವರು ಅಲೆಮಾರಿ ಜನಾಂಗದರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಈ ಜನಾಂಗದ ಅಲೆದಾಟ, ತಿರುಗಾಟ ಇರುತ್ತದೆ. ಸಾಮಾನ್ಯವಾಗಿ ಇವರೆಲ್ಲರೂ ಹಿಂದೂಗಳಾಗಿದ್ದು ಭಾವೈಕ್ಯತೆಯಿಂದ ಒಂದೆಡೆ ಸೇರಿ ಮೊಹರಂ ಆಚರಿಸಿ,

ಹಬ್ಬದ ನಂತರ ಅದೇ ಅಲೆಮಾರಿ ಬದುಕು ಸಾಗಿಸುತ್ತಾರೆ.

ಇಲ್ಲಿ ಜಾತಿ, ಬೇಧಗಳಿಲ್ಲದೇ ಸುಮಾರು ಎರಡು ಶತಮಾನಗಳಿಂದಲೂ ಮೊಹರಂ ಹಬ್ಬದಾಚರಣೆ ಮಾಡಲಾಗುತ್ತಿದೆ. ಮೊಹರಂ ಹಬ್ಬವು ಊರಿನ ಜನರೆಲ್ಲರಿಗೂ ಒಂದು ರೀತಿಯ ಉತ್ಸವವಾಗಿದೆ. ಇಲ್ಲಿನ ಜನರು ಮೂರು ದಿನಗಳ ಕಾಲ ಊರಿಗೆ ಬಂದವರನ್ನು ಉಪಚರಿಸುತ್ತಾರೆ. ಜೊತೆಗೆ ಈ ಮೂರು ದಿನ ರಾತ್ರಿ, ಹೊತ್ತು ಮನೆಯ ಬಾಗಿಲು ಹಾಕದಿರುವ ಸಂಪ್ರದಾಯವೂ ಇದೆ. ಸಕ್ಕರೆ ಮಾದಲಿ, ಬೆಲ್ಲದ ಮಾದಲಿ, ಚೊಂಗೆಯಂತಹ ಸಿಹಿ ತಿಂಡಿಗಳು ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ತಯಾರಾಗಿರುತ್ತದೆ.

ಹರಕೆ ಹೊತ್ತುಕೊಂಡತಹ ಭಕ್ತರು, ವಲಸೆ ಹೋದವರು ಮೊಹರಂ ಹಬ್ಬಕ್ಕಾಗಿ ಬರುತ್ತಾರೆ. ತಮ್ಮ ತಮ್ಮ ನಂಬಿಕೆಯಂತೆ ಹುಲಿಯ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಕರ್ನಾಟಕದ ವಿವಿಧ ಭಾಗಗಳಿಂದಲ್ಲದೇ ದೆಹಲಿ, ಬಿಹಾರ, ಗುಜರಾತ್‌ಗಳಿಂದಲೂ ಜನ ತಮ್ಮ ಹರಕೆ ತೀರಿಸಲು ಹುಲಿ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಈ ಹಗಲು ವೇಷಗಾರರು ತಮ್ಮ ಕೈಯಲ್ಲಿನ ಚಾಟಿಯಿಂದ ಜನರಿಗೆ ಮೃದುವಾಗಿ ಏಟು ಹೊಡೆದು ಗಮನ ಸೆಳೆಯುತ್ತಾರೆ.

ಎರಡು ವರ್ಷಗಳಿಗೊಮ್ಮೆ ಕುದರಿಮೋತಿಯಲ್ಲಿ ಮೊಹರಂ ಹಬ್ಬದ ಸಮಯದಲ್ಲಿ ಸಾವಿರಾರು ಡೇರೆಗಳು ಮೇಲೆದ್ದು ನಿಲ್ಲುತ್ತವೆ. ಕಡಿಮೆ ಎಂದರೂ ೧೦ ರಿಂದ ೧೫ ಸಾವಿರದಷ್ಟು ಜನರು ಬಂದು ಇಲ್ಲಿ ಕೆಲವು ದಿನ ಉಳಿಯುತ್ತಾರೆ. ಒಂದೊಂದು ಕುಟುಂಬಕ್ಕೆ ಒಂದು ಡೇರೆ. ಅಲ್ಲಿಯೇ ಅಡುಗೆ, ದಿನನಿತ್ಯದ ದಿನಚರಿ. ಇವಲ್ಲದೇ ಸುಮಾರು ೧ ಸಾವಿರ ಡೇರೆಗಳಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಿಂದ ಬಂದ ಜನರ ವಾಸವಾಗಿರುತ್ತವೆ. ಇದೇ ಸಮಯದಲ್ಲಿಯೇ ಈ ಅಲೆಮಾರಿ ಜನಾಂಗದ ಬಹುತೇಕ ಮದುವೆಗಳ ನಿಶ್ಚಿತಾರ್ಥ, ಲಗ್ನ, ನ್ಯಾಯ ತೀರ್ಮಾನ ಆಗುತ್ತವೆ. ತಮ್ಮದೇ ಪಂಚರ ನ್ಯಾಯ ತೀರ್ಮಾನಕ್ಕೆ ಈ ಜನಾಂಗದವರು ಬದ್ಧರಾಗಿರುತ್ತಾರಲ್ಲದೇ, ತಪ್ಪಿಗೆ ದಂಡ ವಿಧಿಸಲಾಗುತ್ತದೆ. ಆ ದಂಡದ ಹಣವನ್ನು ದರ್ಗಾಕ್ಕೆ ಕಾಣಿಕೆಯಾಗಿ ಸಲ್ಲಿಸಿ ಜನಾಂಗ ಮತ್ತೆ ತಮ್ಮ ಅಲೆಮಾರಿ ಜೀವನಕ್ಕೆ ಮುಂದೆ ಹೋಗುತ್ತಾರೆ.

ಕುದರಿಮೋತಿ ದರ್ಗಾದ ಮತ್ತೊಂದು ವೈಶಿಷ್ಟ್ಯತೆ ಎಂದರೆ ಇಲ್ಲಿನ ದರ್ಗಾ ಕೇವಲ ಮುಸ್ಲಿಂ ಹಬ್ಬದಾಚರಣೆಯ ಸ್ಥಳವಾಗಿರದೇ, ನಾಗರ ಪಂಚಮಿ, ಮಹಾನವಮಿಗಳ ಆಚರಣೆಯೂ ನಡೆಯುತ್ತದೆ. ದರ್ಗಾವು ಸರ್ವ ಜನಾಂಗದ ಹಬ್ಬ, ಹರಿದಿನಗಳಿಗೆ, ಕಾರ್ಯಕ್ರಮಗಳಿಗೆ ಸ್ಥಳವಾಗಿರುವ ಭಾವೈಕ್ಯತೆಯ ವಿಶಿಷ್ಟ ತಾಣವಾಗಿದೆ.

ಕೊಪ್ಪಳ ಜಿಲ್ಲೆಯ ಮೊಹರಂ ಹಬ್ಬದ ಅನೇಕ ತಾಣಗಳಿಗೆ ಹೋಲಿಸಿದರೆ ಕುದರಿಮೋತಿ ಅಗ್ರಗಣ್ಯ ಸ್ಥಾನದಲ್ಲಿ ನಿಲುತ್ತದೆ. ಇಲ್ಲಿನ ಮೊಹರಂ ಇತಿಹಾಸ, ಆಚರಣೆ ದೇಶದಲ್ಲಿ ಹೆಸರು ಪಡೆದಿದೆ.

ಈ ಸುಪ್ರಸಿದ್ಧ ಕುದರಿಮೋತಿ ಮೊಹರಂ ಹಬ್ಬದ ಆಚರಣೆಯಲ್ಲಿ ಅನೇಕ ಬಗೆಯ ವಿವಿಧ ಆಚರಣಾ ಪದ್ಧತಿಗಳಿದ್ದು ಹೆಸರುವಾಸಿ ಪಡೆದಂಥ ಸಾಂಪ್ರದಾಯಿಕ ಆಚಾರ, ನಡತೆ ಅಥವಾ ಆಚರಣಾ ಪದ್ಧತಿಗಳು ಈ ರೀತಿಯಾಗಿವೆ.

ಮೊಹರಂ ಹಬ್ಬದ ಪೂರ್ವ ತಯಾರಿ ಕುರಿತು :

ಸಾಮಾನ್ಯವಾಗಿ ಮೊಹರಂ ಹಬ್ಬದ ಪೂರ್ವತಯಾರಿ ಕುದರಿಮೋತಿಯಲ್ಲಿ ಮೂರು ತಿಂಗಳುಗಳಿಂದಲೇ ಆರಂಭವಾಗುತ್ತದೆ. ಈ ಮೂರು ತಿಂಗಳುಗಳಿಂದ ಹಿಡಿದು ಮೂರನೇ ಅಮವಾಸ್ಯೆಯ ಮಾರನೇ ದಿನವೇ ಚಂದ್ರ ಕಾಣಿಸಿದ ಕೂಡಲೇ ಗುದ್ದಲಿಯನ್ನು ಹಾಕಲಾಗುತ್ತದೆ. ಗುದ್ದಲಿ ಹಾಕುವುದು ಎಂದರೆ ಕುಣಿಯನ್ನು ತೆಗೆಯುವುದು. ಆ ಕುಣಿಯನ್ನು ತೆಗೆದ ಐದು ದಿನಗಳ ನಂತರ ಮಸೀದೆಯಲ್ಲಿ ಒಂದು ದೇವರನ್ನು ಕೂಡಿಸಲಾಗುತ್ತದೆ. ಆ ದೇವರಿಗೆ ಹಿರಿಯ ದೇವರು, ಗ್ರಾಮಾಂತರ ಭಾಷೆಯಲ್ಲಿ ಹಿರೇದೇವರು ಎಂದು ಕರೆಯಲಾಗುತ್ತದೆ. ಈ ಹಿರಿಯ ದೇವರು ಪ್ರತಿಷ್ಠಾಪಿಸಲ್ಪಟ್ಟ ಮರುದಿನವೇ ನಾಲ್ಕು ಮರಿ ದೇವರುಗಳನ್ನು ಕೂಡಿಸುವದು ವಾಡಿಕೆ.

ಕಳ್ಳಳ್ಳಿಯಾಗುವ ಕುರಿತು :

ಕೆಲವೊಂದು ಕಡೆಗಳಲ್ಲಿ ಕಳ್ಳಳ್ಳಿ ಎಂದೂ, ಇನ್ನು ಕೆಲವೆಡೆ ಅಚ್ಚಳ್ಳಿ, ಪಿಚ್ಚಳ್ಳಿ ಎಂದೂ ಕರೆಯಲಾಗುವ ಈ ವೇಷ ತೊಡುವ ಪದ್ಧತಿ ಮೊಹರಂ ಹಬ್ಬದ ಒಂದು ವಿಶಿಷ್ಟ ಆಚರಣಾ ಪದ್ಧತಿಗಳಲ್ಲೊಂದು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಈ ಪದ್ಧತಿ ಕಂಡು ಬಂದರೂ, ಪಟ್ಟಣ, ನಗರ ಪ್ರದೇಶಗಳಲ್ಲಿಯೂ ಈ ಆಚರಣೆಯು ಜನರಿಂದ ಕಾಣೆಯಾಗಿಲ್ಲ. ಮನೆಯಲ್ಲಿನ ಆಂತರಿಕ ಸಮಸ್ಯೆಗಳ ಪರಿಹಾರಕ್ಕಾಗಿ, ಮಕ್ಕಳ ಆರೋಗ್ಯದ ಬೇಡಿಕೆಯಲ್ಲಿ, ಸಂಕಷ್ಟ ಸ್ಥಿತಿಯಿಂದ ಪಾರಾಗುವ ಹರಕೆ ಹೊತ್ತುಕೊಂಡಂತಹ ಜನತೆ ಹೊತ್ತುಕೊಂಡ ಹರಕೆಯನ್ನು ತೀರಿಸಲು ಮೊಹರಂ ತಿಂಗಳಲ್ಲಿ ಅಂದರೆ ಮೊಹರಂ ಹಬ್ಬದ ಸಮಯದಲ್ಲಿ ಮನೆಯ ಸದಸ್ಯರನ್ನು ಕಳ್ಳಳ್ಳಿ ಮಾಡುತ್ತಾರೆ. ಅಂದರೆ ಹರಕೆ ತೀರಿಸುವ ಸಲುವಾಗಿ ಈಚಲ ಮರದ ಬರಲನ್ನು ತೆಗೆದುಕೊಂಡು, ತಮ್ಮ ತಲೆಯ ಅಳತೆಯಷ್ಟು ಒಂದು ಸಿಂಬಿಯನ್ನು ಎಣೆದು, ಅದಕ್ಕೆ ಕೆಲವು ಈಚಲ ಬರಲುಗಳನ್ನು ಚುಚ್ಚಿಕೊಂಡು, ಕಿರೀಟದಂತೆ ಮಾಡಿ, ಬಣ್ಣದ ಹಾಳೆಗಳಿಂದ ಟೋಪಿಯನ್ನು ಸಿದ್ಧಪಡಿಸಿ ಹಾಕಿಕೊಳ್ಳುತ್ತಾರೆ. ಮೈ ತುಂಬಾ ಬಣ್ಣಗಳನ್ನು ಬಳಿದುಕೊಂಡು, ಕೈಯಲ್ಲೊಂದು ವಸ್ತ್ರದ ಸುರುಳಿ ಹಿಡಿದುಕೊಂಡು, ಕುಣಿಯುತ್ತಾ ಭಿಕ್ಷೆಗೆ ಬರುತ್ತಾರೆ. ಆ ಮೂಲಕ ತಾವು ಅಂದುಕೊಂಡಂತೆ ಹರಕೆಯನ್ನು ತೀರಿಸಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ.

ಫಕೀರನಾಗುವ ಕುರಿತು :

ಫಕೀರನಾಗುವದು ಸಹ ಮೊಹರಂ ಹಬ್ಬದ ಸಮಯದಲ್ಲಿ ನಡೆದುಕೊಂಡು ಬರುವಂತಹ ಒಂದು

ವಿಶಿಷ್ಟ ಸಂಪ್ರದಾಯ. ಈ ಸಂಪ್ರದಾಯದಲ್ಲಿಯೂ ಹಿಂದೂ - ಮುಸ್ಲಿಂರೆಂಬ ಭೇದ - ಭಾವವಿಲ್ಲದೇ, ಹರಕೆ ಹೊತ್ತುಕೊಂಡವರು ಫಕೀರರಾಗುತ್ತಾರೆ. ಆ ಮೂಲಕ ತಾವು ಅಂದುಕೊಂಡ ಇಷ್ಟಾರ್ಥ ಪೂರೈಕೆಗಾಗಿ ದೇವರಿಗೆ ಸೇವೆ ಸಲ್ಲಿಸುತ್ತಾರೆ. ಫಕೀರರಾಗುವವರಲ್ಲಿ ಕೆಲವರು ಐದು ದಿನಗಳವರೆಗೆ, ಇನ್ನು ಕೆಲವರು ಮೂರು ದಿನಗಳವರೆಗೆ ಫಕೀರರಾಗುವ ವಾಡಿಕೆ ಇದೆ. ಸಾಮಾನ್ಯವಾಗಿ ಮುಸ್ಲಿಮರು ಹಿರಿಯ ದೇವರು ಪ್ರತಿಷ್ಠಾಪನೆಯ ದಿನವೇ ಫಕೀರರಾದರೆ, ಹಿಂದೂ ಭಕ್ತರು ಫಕೀರರಾಗುವುದು ಸಂದಲ್ ರಾತ್ರಿಯಂದು. ಗ್ರಾಮಾಂತರ ಭಾಷೆಯ ಈ ಸಂದಾಲ್ ರಾತ್ರಿ ಅಥವಾ ಸಂದಲ್ ರಾತ್ರಿಗೆ ಉರ್ದು ಅಥವಾ ಹಿಂದಿಯಲ್ಲಿ ಸಂದಲ್ ಕೀ ರಾತ್ ಎಂದು ಕರೆಯುತ್ತಾರೆ. ಅಂದರೆ ಮೊಹರಂ ತಿಂಗಳ ಏಳನೆಯ ದಿನವನ್ನು ಸಂದಲ್ ರಾತ್ರಿ (ಗಂಧದ ರಾತ್ರಿ) ಎಂದು ಕರೆಯುವ ವಾಡಿಕೆ ಇದೆ. ಹಿಂದೂ ಭಕ್ತರು ಸಾಮಾನ್ಯವಾಗಿ ಮೊಹರಂ ಹಬ್ಬದ ದಿನವೇ ಹೊಸ ಬಟ್ಟೆ ಧರಿಸಿದರೆ, ಮುಸ್ಲಿಮರು ಸಾಮಾನ್ಯವಾಗಿ ಮೊಹರಂ ಹಬ್ಬದ ಇಪ್ಪತ್ತು ದಿನದ ಮೊದಲು ಆಚರಿಸುವ ಗ್ಯಾರವಿ ಹಬ್ಬದ ದಿನವೇ ಹೊಸ ಬಟ್ಟೆ ಧರಿಸುವ ಪದ್ಧತಿಯಿದೆ. ಸಾಮಾನ್ಯವಾಗಿ ಫಕೀರರಾಗುವುದು ಎಂದರೆ ಭಕ್ತರು ದೇವರಿಗೆ ಸಕ್ಕರೆ, ಕಾಣಿಕೆಯನ್ನು ಸಲ್ಲಿಸಿ, ದೇವರ ಸಮ್ಮುಖದಲ್ಲಿ ಕೈ ಲಾಡಿ (ಕೈ ಕಟ್ಟಿಕೊಳ್ಳುವ ಕೆಂಪು ಅಥವಾ ಕಪ್ಪು ಬಣ್ಣದ ಲಾಡಿ), ಕೊಳ್ಲಾಡಿ (ಕೊರಳಿಗೆ ಹಾಕಿಕೊಳ್ಳುವ ಲಾಡಿ) ಧರಿಸಿ ಅಂದುಕೊಂಡಷ್ಟು ದಿನ ಫಕೀರರಾಗಿ ಸೇವೆ ಸಲ್ಲಿಸುತ್ತಾರೆ. ಫಕೀರರಾದವರು ಆ ಸಮಯದಲ್ಲಿ ಸುಳ್ಳು ಹೇಳಬಾರದು, ಬರಿಗಾಲಿನಲ್ಲಿಯೇ ಅಡ್ಡಾಡಬೇಕು, ಅಶ್ಲೀಲ ಪದಗಳನ್ನು ಬಳಸಬಾರದು ಎಂಬ ಕರಾರುಗಳನ್ನು ಪಾಲಿಸಬೇಕಾಗುತ್ತದೆ.

ಹುಲಿಯ ವೇಷ ತೊಡುವ ಹುಲಿವೇಷಗಾರರ ಕುರಿತು :

ಹುಲಿಯ ವೇಷ ತೊಡುವುದೂ ಸಹ ಒಂದು ರೀತಿಯಲ್ಲಿ ಕಳ್ಳಿ, ಅಥವಾ ಫಕೀರರಾಗುವ ಪದ್ಧತಿ ಇದ್ದಂತೆ. ಜನರು ತಮ್ಮ ಇಷ್ಟಾರ್ಥಗಳ ಪೂರೈಕೆಗಾಗಿ ತಮ್ಮ ಮಕ್ಕಳನ್ನೋ ಅಥವಾ ಮನೆಯ ಸದಸ್ಯರನ್ನೋ ಹುಲಿಯ ವೇಷ ತೊಡಿಸಿ ಆ ಮೂಲಕ ಭಕ್ತಿಯನ್ನು ಮೆರೆಯುತ್ತಾರೆ. ಹರಕೆಯನ್ನು ತೀರಿಸುತ್ತಾರೆ. ಹುಲಿಯ ವೇಷ ತೊಟ್ಟವರು ಊರಿನ ಪ್ರಮುಖ ರಸ್ತೆಗಳಲ್ಲಿ, ಓಣಿಗಳಲ್ಲಿ ಹುಲಿಯ ಸೆಗೆತದಿಂದ ಭಿಕ್ಷೆ ಬೇಡುತ್ತಾ ಸಾಗುತ್ತಾರೆ. ಮೊಹರಂ ಹಬ್ಬದ ವಿಶಿಷ್ಟ ಆಚರಣಾ ಪದ್ಧತಿಗಳಲ್ಲಿ ಹುಲಿವೇಷಗಾರರ ಪದ್ಧತಿಯೂ ಒಂದಾಗಿದೆ.

ಸಂದಲ ರಾತ್ರಿ ಚಂದಪ್ಪನ ಸವಾರಿ :

ಮೊಹರಂ ಹಬ್ಬದ ಏಳನೆಯ ದಿನವನ್ನು ಸಂದಲ್ ರಾತ್ರಿ ಎಂದು ಕರೆಯುತ್ತಾರೆ. ಸಂದಲ್ ಕೀ ರಾತ್ ಎಂದು ಕರೆಯಲ್ಪಡುವ ಈ ಸಂದಲ್ ರಾತ್ರಿ ಎಂದರೆ ಗಂಧದ ರಾತ್ರಿ ಎಂದರ್ಥ. ಈ ದಿನ

ರಾತ್ರಿಯಿಡೀ ಫಕೀರರಾದವರು, ಭಕ್ತರೆಲ್ಲರೂ ಸೇರಿ 'ಚಂದಪ್ಪನ ಸವಾರಿ' ಎಂದು ಕರೆಯಲ್ಪಡುವ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಈ ಮೆರವಣಿಗೆಯು ತಾಶಾ, ಹಲಗೆ, ಡೋಲುಗಳ ಭಾಜಾ - ಭಜಂತ್ರಿಗಳಿಂದ ಕೂಡಿರುತ್ತದೆ. ಈ ಸವಾರಿಯು ಸರಿ ಸುಮಾರು ರಾತ್ರಿ ೩.೩೦ ರ ವರೆಗೆ ನಡೆಯುತ್ತದೆ. ರಸ್ತೆಯಲ್ಲಿ ಮೂಲಕ ಮೆರವಣಿಗೆ ಕೊನಗೆ ಕಂದನಕೇರಿ ಮಸೀದಿಗೆ ಬಂದು ಸೇರುತ್ತದೆ. ಅಲ್ಲಿ ಮತ್ತೆ ಅರ್ಧ ಗಂಟೆ ಡೋಲು, ಅದಕ್ಕೆ ತಕ್ಕಂತೆ ತಾಳ, ಮೇಳ ನಡೆದು, ನಸುಕಿನ ೪ ಗಂಟೆಯ ಸುಮಾರಿಗೆ ಚಂದಪ್ಪನ ಸವಾರಿ ನಡೆಯುತ್ತದೆ. ಚಂದಪ್ಪನ ಸವಾರಿಯ ಕುದುರೆಯು ಕೊಪ್ಪಳದಿಂದ ಕಾಲ್ನಡಿಗೆಯಲ್ಲಿ ಬಂದು ಇಲ್ಲಿಗೆ ಸೇರುತ್ತದೆ. ಚಂದಪ್ಪನ ಸವಾರಿಯ ಕುದುರೆ ಅಲಾವಿ (ಕುಣಿ) ಯನ್ನು ಸುತ್ತು ಹಾಕುತ್ತದೆ. ಅದರ ಹಿಂದೆ ಭಕ್ತರೂ ತಾವು ಮನೆಯಿಂದ ತಂದಂತಹ ಕಟ್ಟಿಗೆ, ಬೆಲ್ಲ ತಂದು ಅಲಾವದ ಸುತ್ತ ಐದು ಬಾರಿ ಪ್ರದಕ್ಷಿಣೆ ಹಾಕಿ ಅಲಾವಕ್ಕೆ ಕಟ್ಟಿಗೆ ಹಾಕುವರು. ತಂದಂತಹ ಬೆಲ್ಲ ಮತ್ತು ಸಕ್ಕರೆ ಮುಲ್ಲಾನ ಕೈಗೆ ಕೊಟ್ಟು ಫಾತೇಹ ಓದಿಸಿ ಲೋಬಾನ್ ಹಾಕಿ ಹೊಗೆ ಏರಿಸುವರು. ನಂತರ ಚಂದಪ್ಪನ ಸವಾರಿ ರಸ್ತೆಯ ಮೂಲಕ ಕೊನೆಗೆ ಮಸೀದೆಯನ್ನು ಪ್ರವೇಶಿಸುತ್ತದೆ.

ಕುದರಿಮೋತಿಯ ದೇವರುಗಳ ವಿಧ :

ಪ್ರಸಿದ್ಧ ಹಜರತ್ ಹುಸೇನಿ ಆಲಂ ದರ್ಗಾ, ಕಂದನಕೇರಿ ಮಸೀದಿಗಳು ಕುದರಿಮೋತಿಯ ಮೊಹರಂ ಹಬ್ಬದ ದೇವರುಗಳನ್ನು ಕೂರಿಸುವ ಪ್ರಮುಖ ಕೇಂದ್ರಗಳು. ಕಂದನಕೇರಿ ಮಸೀದೆಯಲ್ಲಿ ಕೂರಿಸಲಾಗುವ ದೇವರುಗಳ ಸಂಖ್ಯೆ ಎಂಟು. ಆ ದೇವರುಗಳೆಂದರೆ ಗ್ರಾಮಾಂತರ ಭಾಷೆಯಲ್ಲಿ ಕರೆಯಲಾಗುವ ಹಿರೇದೇವರು (ಹಿರಿಯ ದೇವರು) ಮತ್ತು ಹಿರೇದೇವರ ನಾಲ್ಕು ಮಕ್ಕಳು. ಚಂದಪ್ಪ ಮತ್ತು ಚಂದಪ್ಪನ ಇಬ್ಬರು ಮಕ್ಕಳು. ಈ ಕುದರಿಮೋತಿ ಮೊಹರಂ ಆಚರಣೆಯ ಇನ್ನೊಂದು ವಿಶಿಷ್ಟತೆಯಿಂದ ಇಲ್ಲಿ ಕೂರಿಸಲಾಗುವ ದೇವರುಗಳಿಗೆ ಚಂದಪ್ಪ ಇರುವುದಿಲ್ಲ, ಆದರೆ ಬದಲಾಗಿ ಡೋಲಿಗಳು ಇರುತ್ತವೆ. ಆ ಡೋಲಿಗಳಲ್ಲಿಯೇ ಚಂದಪ್ಪ ಮತ್ತು ಆತನ ಮಕ್ಕಳನ್ನು ಕೂರಿಸಲಾಗುತ್ತದೆ. ಅಲ್ಲದೇ ಕಂದನಕೇರಿ ಮಸೀದೆಯಲ್ಲಿ ಡೋಲಿಗಳನ್ನಷ್ಟೇ ಪ್ರತಿಷ್ಠಾಪಿಸಲಾಗಿರುತ್ತದೆ. ಈ ಡೋಲಿಯಲ್ಲಿಯೇ ಈ ಎಲ್ಲ ಎಂಟು ದೇವರುಗಳನ್ನು ಕೂರಿಸಲಾಗಿರುತ್ತದೆ.

ಕುದರಿಮೋತಿ ಜಾತ್ರೆಯಾಗಿ ಮೊಹರಂ :

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿಗೆ ಸೇರುವ ಗ್ರಾಮ ಕುದರಿಮೋತಿ ಮೊಹರಂ ಹಬ್ಬದ ಸಮಯದಲ್ಲಿ ಜಾತ್ರೆಯನ್ನು ನೆನಪಿಗೆ ತರುವಷ್ಟು ಜನ ಸೇರಿ ಭಾವೈಕ್ಯತೆಯಿಂದ ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಈ ಮೊಹರಂ ಹಬ್ಬಕ್ಕೆ ಅಲಾಯಿ ಹಬ್ಬ, ಅಲೆ ಹಬ್ಬ, ಹಲೆಬ್ಬ ಎಂದೂ ಕರೆಯುತ್ತಾರೆ. ಇನ್ನು ವಿಶೇಷ ಎಂದರೆ ಮುಸ್ಲಿಂ ಜನಾಂಗ ಇರದ ಊರಲ್ಲೂ ಮೊಹರಂ ಆಚರಿಸುತ್ತಾರೆ. ಇದಕ್ಕೆ

ಅಲ್ಲಾಸಾಬನ ಹಬ್ಬ, ಶರಣರ ಹಬ್ಬ ಅಂತಲೂ ಕರೆಯುತ್ತಾರೆ. ಈ ಮೊಹರಂ ಹಬ್ಬವು ಕುದರಿಮೋತಿ ಅಲ್ಲಾಸಾಬನ ಹಬ್ಬವೂ ಹೌದು. ಒಟ್ಟಿನಲ್ಲಿ ಈ ಮೊಹರಂ ಹಬ್ಬವು ಕುದರಿಮೋತಿಯ ಜಾತ್ರೆ ಎಂದರೂ ತಪ್ಪಾಗಲಿಕ್ಕಿಲ್ಲ. ಕುದರಿಮೋತಿ ಸರ್ವಜನಾಂಗದ ಭಾವೈಕ್ಯತೆಯ ತಾಣವಾಗಿದೆ.

ಕೊಪ್ಪಳದಿಂದ ಸುಮಾರು ೨೬ ಕಿ.ಮೀ. ದೂರದಲ್ಲಿರುವ ಕುದರಿಮೋತಿ ಕೊಪ್ಪಳ - ಕುಷ್ಟಗಿ ಮೂಲಕ ಹಾದು ಹೋಗುವ ರಾಜ್ಯದ ಹೆದ್ದಾರಿಗೆ ಅಂಟಿಕೊಂಡಿದೆ. ಕೊಪ್ಪಳದಿಂದ ಕಿನ್ನಾಳ ಮಾರ್ಗವಾಗಿಯೂ ಬೈರನಾಯಕನಹಳ್ಳಿಯ ತಿರುವಿನಿಂದಲೂ ಕುದರಿಮೋತಿಗೆ ರಸ್ತೆ ಸಂಚಾರವು ಇದೆ.

ಹುಸೇನಬಾಷಾ ದೇವರಿಗೆ ಶರಣಾದ ಜನಸಮೂಹ ತಮ್ಮ ನಿರ್ಮಲ ಮನಸ್ಸಿನಿಂದ ದರ್ಗಾಕ್ಕೆ ಜಾಗ, ಉತ್ಸವ ನಡೆಯಲು ವಿಸ್ತಾರವಾದ ಬಯಲಿಗೆ ಪ್ರಯತ್ನ ನಡೆದು, ಕಂದನಕೆರೆ ದರ್ಗಾದ ಸ್ಥಳವಾಯಿತು. ಹಿಂದೆ ಇದು ಹಸುಗೂಸುಗಳ ಸ್ಮಶಾನವಾಗಿತ್ತು, ಅದೇ ಇಂದು ಮೊಹರಂನ ಪ್ರಸಿದ್ಧ ಸ್ಥಳವಾಗಿ ಹೊರಹೊಮ್ಮಿದೆ.

ಈ ಕುದರಿಮೋತಿ ಗ್ರಾಮದ ಬ್ರಾಹ್ಮಣರಾದ ಸೋಮರಾಯರ ತಂದೆ ಬಾಳಾಜಿರಾವ್ ಅವರು ೧೨೦ ವರ್ಷಗಳ ಹಿಂದೆ ಮಸೀದಿ ಕಟ್ಟಿಸಿದರು. ದೇವರಕೋಣೆಯನ್ನು ಇದೇ ಊರಿನ ಜಂಭಯ್ಯಸ್ವಾಮಿ ವಣಗೇರಿಯವರು ಕಟ್ಟಿಸಿಕೊಟ್ಟಿದ್ದಾರೆ.

ಸಂದಲ ರಾತ್ರಿ, ಖತೀಲ ರಾತ್ರಿ ಮತ್ತು ಹೊಳೆಗೆ ಹೋಗುವ ಈ ಮೂರು ದಿನದಂದು ಹೊರ ರಾಜ್ಯಗಳಿಂದ ಅನೇಕ ಜಿಲ್ಲೆಗಳ ಸಹಸ್ರಾರು ಜನರು ಹಬ್ಬ ಆಚರಿಸಲೆಂದೇ ಬರುತ್ತಾರೆ. ಈ ವಿಶೇಷ ಮೂರು ದಿನಗಳಂದು ಊರಿನ ಯಾವ ಮನೆಯ ಬಾಗಿಲುಗಳೂ ಮುಚ್ಚುವುದಿಲ್ಲ. ಯಾತ್ರಿಕರು ಯಾರೇ ಬರಲಿ, ಲಗೇಜುಗಳನ್ನು ಯಾರ ಮನೆಯಲ್ಲಾದರೂ ಇಡಬಹುದು. ತಂಗಬಹುದು. ಯಾರ ಜಾತಿ, ಕುಲವನ್ನು ಪ್ರಶ್ನಿಸುವದಿಲ್ಲ. ಸೌಹಾರ್ದಯುತವಾಗಿ ಆಶ್ರಯ ನೀಡಿ ಗೌರವಿಸುವುದು ಇಲ್ಲಿನ ಸತ್ಸಂಪ್ರದಾಯವಾಗಿದೆ. ಈ ಹಬ್ಬಕ್ಕೆ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳದಿಂದ ಭಕ್ತರು, ಜನರು ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಬುಡಕಟ್ಟು ಜನಾಂಗದ ಜನರಾದ ವೇಷಗಾರರು, ಸಿದ್ದರು, ಕಾಡಸಿದ್ದರು, ಸುಡುಗಾಡು ಸಿದ್ದರು, ದುರುಗ ಮುರುಗಿಯವರು, ಡಂಬರು, ಮೋಡಿಕಾರರು, ಬುಡಬುಡಿಕೆಯವರು, ಹಾವಾಡಿಗರು ತಮ್ಮ ವೈವಾಹಿಕ ಸಂಬಂಧ, ಮನೆ ಜಗಳ, ಸಂಪ್ರದಾಯತೆ ಮೀರಿ ನಡೆದುಕೊಂಡಿದ್ದರೆ ಅವರಿಗೆ ದಂಡ ಶಿಕ್ಷೆ ಎಲ್ಲವೂ ಇಲ್ಲಿಯೇ ಜರುಗುತ್ತವೆ. ಮದುವೆಗಳು ಕೂಡ ಇದೇ ಊರಲ್ಲಿ ನಡೆಯುತ್ತವೆ. ಊರ ಹೊರಗಿನ ಹತ್ತಾರು ಎಕರೆ ಹೊಲಗಳಲ್ಲಿ ಬೀಡು ಬಿಟ್ಟು ತಮ್ಮೆಲ್ಲ ನ್ಯಾಯಗಳನ್ನು ಇತ್ಯರ್ಥ ಮಾಡಿಕೊಂಡು ಹೋಗುವ ಸ್ಥಳ ಕುದರಿಮೋತಿ. ವ್ಯಾಜ್ಯಗಳು ಬಗೆಹರಿಯದಿದ್ದಲ್ಲಿ ಹುಸೇನಬಾಷಾ ದರ್ಗಾದ ಕಟ್ಟೆಯಲ್ಲಿ ಅಂತಿಮ ತೀರ್ಪು ನಡೆಯುತ್ತದೆ.

ಒಟ್ಟಿನಲ್ಲಿ ಕುದರಿಮೋತಿಯಲ್ಲಿ ನಡೆಯುವ ಭಾವೈಕ್ಯತೆ ಸಂಕೇತವಾಗಿರುವ ಮೊಹರಂ ಹಬ್ಬವನ್ನು ಕಣ್ಣಿಂದ ನೋಡುವುದೇ ಒಂದು ಹಬ್ಬ, ಒಂದು ರೀತಿಯಲ್ಲಿ ಅದ್ಭುತದಂತೆಯೂ ಕಂಡು ಬರುವ ಈ

ಸಮಯದಲ್ಲಿನ ಜಗಳಗಳು, ವ್ಯಾಜ್ಯಗಳು, ವೈವಾಹಿಕ ಸಂಬಂಧಗಳು, ವ್ಯವಹಾರ ಮೊದಲಾದವುಗಳನ್ನು ಗಮನಿಸಿದರೆ ಜನರು ಮೊಹರಂ ಹಬ್ಬವನ್ನು ಕುದರಿಮೋತಿ ನೆಲದಲ್ಲಿ ಆಚರಿಸುವದನ್ನು ಎಷ್ಟರ ಮಟ್ಟಿಗೆ ಪವಿತ್ರ ಎಂದು ತಿಳಿದುಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅಲ್ಲಮಪ್ರಭುವಿನ ವಚನದಂತೆ ಎತ್ತಣಿಂದೆತ್ತ ಸಂಬಂಧವಯ್ಯ ಎನ್ನುವ ಹಾಗೆ ಕುದರಿಮೋತಿಯಲ್ಲಿ ನಡೆಯುವ ಮೊಹರಂ ಹಬ್ಬಕ್ಕೂ ಅಲೆಮಾರಿ ಜನಾಂಗದ ವ್ಯಾಜ್ಯ, ಜಗಳ, ವ್ಯವಹಾರ, ಮದುವೆ, ಸಂಪ್ರದಾಯಗಳ ಆಚರಣೆಗೂ ಎತ್ತಣಿಂದೆತ್ತ ಸಂಬಂಧ ಎನ್ನುವದು ಒಂದು ಪ್ರಶ್ನೆಯಾಗುತ್ತದೆಯಲ್ಲದೇ ಇವರ ಸಂಪ್ರದಾಯಗಳ ಆಚರಣೆಯ ಬಗ್ಗೆ ಕುತೂಹಲ, ಆಸಕ್ತಿ ಉಂಟಾಗುತ್ತದೆ.

ಮೊಹರಂ ಹಬ್ಬವನ್ನು ಊರ ಹಬ್ಬವೆಂದು ಆಚರಿಸಲಾಗುತ್ತದೆ. ಇಲ್ಲಿನ ಜನರು ಅತಿಥಿಗಳಿಗೆ ಸ್ವಂತ ಮನೆಯವರಂತೆ ಕಾಣುತ್ತಾರೆ. ಇದು ಮೊದಲಿಂದಲೂ ಬಂದ ಸಂಪ್ರದಾಯವಾಗಿದ್ದು ಮನೆಗೆ ಬಂದವರನ್ನು ಎಣಿಸುವ ಈ ಕಾಲದಲ್ಲಿಯೂ ಇಂತಹ ಅತಿಥಿ ದೇವೋಭವ ಎನ್ನುವ ಸತ್ಸಂಪ್ರದಾಯ ಹೊಂದಿರುವ ಕುದರಿಮೋತಿಯ ಜನ ನಿಜಕ್ಕೂ ಅಭಿನಂದನಾರ್ಹರು. ಮನೆಯ ಬಾಗಿಲುಗಳನ್ನು ಹಗಲು - ರಾತ್ರಿಯಿಡೀ ತೆಗೆದು ಅತಿಥಿ ಸತ್ಕಾರ ಕೈಗೊಳ್ಳುವ ಇಲ್ಲಿನ ಜನತೆಯ ಆತ್ಮೀಯತೆ ಅನಂತವಾದುದು. ಅಂತೆಯೇ ಮೊಹರಂ ಹಬ್ಬದ ವಾತಾವರಣ ಒಂದು ರೀತಿಯಲ್ಲಿ ಮನೆಯವರೆಲ್ಲರೂ ಸೇರಿ ಆಚರಿಸುವಂತೆ ಕಾಣುತ್ತದೆ. ಇಲ್ಲಿ ಯಾವುದೇ ಭೇದ -ಭಾವದ, ಕುಲ - ಗೋತ್ರ, ಜಾತಿ - ವಿಜಾತಿ, ಮತ -ಭ್ರಾಂತಿಗಳ ಯಾವುದೇ ವಿಚಾರಕ್ಕೂ ಆಸ್ಪದವಿರುವುದಿಲ್ಲ.

ಕೊಪ್ಪಳ, ಯಲಬುರ್ಗಾ, ಕುಷ್ಟಗಿ, ಗಂಗಾವತಿ ಹೀಗೆ ಕೊಪ್ಪಳ ಜಿಲ್ಲೆಯ ಬಹುತೇಕ ಎಲ್ಲ ತಾಲೂಕಿನ ಎಲ್ಲ ಗ್ರಾಮ, ಪಟ್ಟಣ, ನಗರಗಳಲ್ಲಿಯೂ ಮೊಹರಂ ಹಬ್ಬವನ್ನು ವಿಶಿಷ್ಟವಾಗಿ, ಭಾವೈಕ್ಯತೆಯ ಉತ್ಸವವಾಗಿ ಆಚರಿಸಲಾಗುತ್ತದೆ. ಅವರಲ್ಲೂ ಕೊಪ್ಪಳ ಜಿಲ್ಲೆಯಲ್ಲಿ ಕುದರಿಮೋತಿಯ ಮೊಹರಂ ಆಚರಣೆ ಸುಪ್ರಸಿದ್ಧವಾಗಿದೆ. ಕುದರಿಮೋತಿಯ ಮೊಹರಂ ಹಬ್ಬದ ಆಚರಣೆಗೆ ಬಹಳಷ್ಟು ಹಳೆಯ ಇತಿಹಾಸವಿದೆ. ಇಲ್ಲಿನ ಮೊಹರಂ ಆಚರಣೆ ದೇಶಪ್ರಸಿದ್ಧತೆಯನ್ನು ಪಡೆದಿದೆ. ಮೊಹರಂ ಹಬ್ಬದ ನಿಮಿತ್ತಕ್ಕೆಂದೇ ದೇಶದ ಮೂಲೆ - ಮೂಲೆಗಳ ಜನರು ಇಲ್ಲಿಗೆ ಬರುತ್ತಾರೆ. ಅದರಲ್ಲೂ ಪ್ರತಿ ಎರಡು ವರ್ಷಗಳಿಗೊಮ್ಮೆ ಬರುವ ಅಲೆಮಾರಿ ಜನಾಂಗದ ಜನತೆ ಇಲ್ಲಿ ಒಂದು ಊರನ್ನೇ ಸೃಷ್ಟಿ ಮಾಡುವಷ್ಟು ಜನಸಾಗರದಿಂದ ಬರುತ್ತದೆ. ಇಲ್ಲಿ ತಮ್ಮದೇ ಆದ ವಿಶಿಷ್ಟ ಪರಂಪರೆ, ಸಂಪ್ರದಾಯ, ಆಚರಣೆಗಳನ್ನು ಮುಗಿಸಿಕೊಂಡು ಎಂದಿನಂತೆ ತಮ್ಮ ಮುಂದಿನ ಅಲೆಮಾರಿ ಜೀವನಕ್ಕೆ ಸಾಗ ಹಾಕುತ್ತಾರೆ.

ಅಡಿಟಿಪ್ಪಣಿಗಳು :

೧. ಹಸನಬಿ ಬೀಳಗಿ - ಜಾನಪದ ಸೃಷ್ಟಿ - ದೃಷ್ಟಿ, ಪುಟ ಸಂಖ್ಯೆ - ೩೯

೨. ಹಸನಬಿ ಬೀಳಗಿ - ಜಾನಪದ ಸೃಷ್ಟಿ - ದೃಷ್ಟಿ, ಪುಟ ಸಂಖ್ಯೆ - ೪೦

೩. ಹಸನಬಿ ಬೀಳಗಿ - ಜಾನಪದ ಸೃಷ್ಟಿ - ದೃಷ್ಟಿ, ಪುಟ ಸಂಖ್ಯೆ - ೪೩-೪೪

೪. ಡಾ. ದಸ್ತಗೀರ ಅಲ್ಲೀಭಾಯಿ - ಮೊಹರಂ ಪದಗಳು, ಪುಟ ಸಂಖ್ಯೆ - ಪ್ರಸ್ತಾವನೆಯ ೯, ೧೦, ೧೧.

೫. ಡಾ. ಷಹಸೀನಾ ಬೇಗಂ - ಕರ್ನಾಟಕ ಮುಸ್ಲಿಮ್ ಜಾನಪದ, ಪುಟ ಸಂಖ್ಯೆ - ೧೪೨

೬. ಡಾ. ಷಹಸೀನಾ ಬೇಗಂ - ಕರ್ನಾಟಕ ಮುಸ್ಲಿಮ್ ಜಾನಪದ, ಪುಟ ಸಂಖ್ಯೆ - ೧೪೧

೭. ಡಾ. ದಸ್ತಗೀರ ಅಲ್ಲಿಭಾಯಿ - ಮೊಹರಂ ಪದಗಳು, ಪ್ರಸ್ತಾವನೆಯ ಪುಟ ಸಂಖ್ಯೆ - ೧೩

೮. ಹಸನಬಿ ಬೀಳಗಿ - ಜಾನಪದ ಸೃಷ್ಟಿ - ದೃಷ್ಟಿ, ಪುಟ ಸಂಖ್ಯೆ - ೬೨-೬೩

೯. ಡಾ. ದಸ್ತಗೀರ ಅಲ್ಲಿಭಾಯಿ - ಮೊಹರಂ ಪದಗಳು, ಪ್ರಸ್ತಾವನೆಯ ಪುಟ ಸಂಖ್ಯೆ - ೧೪

೧೦. ಇಬ್ರಾಹಿಂ ಸಯೀದ್ - ತಪ್ಪು ಕಲ್ಪನೆಗಳು? ಅಧ್ಯಾಯ :೫, ಪುಟ ಸಂಖ್ಯೆ ೩೦, ಶಾಂತಿ ಪ್ರಕಾಶನ, ಮಂಗಳೂರು

ಅಧ್ಯಾಯ - ೪

ಮೊಹರಂ ಹಬ್ಬಕ್ಕೆ ಆಗಮಿಸುವ ಅಲೆಮಾರಿ ಜನಾಂಗಗಳು

೧) ಹಗಲು ವೇಷಗಾರರು

೨) ಸುಡುಗಾಡು ಸಿದ್ಧರು

೩) ಗೊಂಧಳಿಗರು

೪) ಸಿಂಧೊಳ್ಳರು (ದುರಗಮುರಗಿಯವರು)

೫) ದೊಂಬರು

೬) ಇತರರು

ಅಧ್ಯಾಯ - ೪ ಮೊಹರಂ ಹಬ್ಬಕ್ಕೆ ಆಗಮಿಸುವ ಅಲೆಮಾರಿ ಜನಾಂಗಗಳು

ಹಗಲು ವೇಷಗಾರರು

ಕುದರಿಮೋತಿ ಗ್ರಾಮದ ಮೊಹರಂ ಆಚರಣೆಯ ಸಂದರ್ಭದಲ್ಲಿ ಪ್ರತಿ ಎರಡು ವರ್ಷಗಳಿಗೊಮ್ಮೆ ಇಲ್ಲಿ ದೇಶದ ಹಲವು ಅಲೆಮಾರಿ ಜನಾಂಗಗಳು ಒಂದೆಡೆ ಸೇರುತ್ತವೆ ಎಂಬ ಅಂಶವು ಈಗಾಗಲೇ ನಾಡಿನಾದ್ಯಂತ ಚಿರಪರಿಚಿತವಾಗಿದೆ. ಈ ಮೊಹರಂ ಹಬ್ಬದ ಆಚರಣೆಗೆಂದು ಬಂದು ಸೇರುವಂತವರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸುತ್ತಾಡುವ ಅಲೆಮಾರಿ ಜನಾಂಗದವರೇ ಆಗಿದ್ದಾರೆ. ಅಂತಹವರ ಬದುಕು-ಜೀವನ ಕ್ರಮ ಇನ್ನಿತರ ಅವಲೋಕನವನ್ನು ಸಂಶೋಧಿಸುವದು ಸೂಕ್ತ ಈ ದಿಸೆಯಲ್ಲಿ ಅಲೆಮಾರಿಗಳ ಕುರಿತು ಈ ಕೆಳಗಿನಂತೆ ಸಂಶೋಧನೆ ಮಾಡಿ ವಿಷಯ ಸಂಗ್ರಹ ಮಾಡಲಾಗಿದೆ.

ಮೊಹರಂ ಹಬ್ಬದ ಸಂದರ್ಭದಲ್ಲಿ ಕುದರಿಮೋತಿಯಲ್ಲಿ ಎರಡು ವರ್ಷಗಳಿಗೊಮ್ಮೆ ಆಗಮಿಸುವ ಹಲವು ಅಲೆಮಾರಿ ಜನಾಂಗದವರ ಪೈಕಿ ಹಗಲುವೇಷಗಾರರ ಕುರಿತು ೨೦೦೭-೦೮ ರಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ಕ್ಷೇತ್ರ ಕಾರ್ಯ ಮಾಡಿ ಅದರ ಪ್ರಕಾರ ಮತ್ತು ಹಗಲು ವೇಷಗಾರರ ಕುರಿತು ಇದುವರೆಗೆ ಪ್ರಕಟವಾಗಿರುವ ಎಲ್ಲ ಕೃತಿಗಳ ಅಧ್ಯಯನದ ಮೂಲಕ ಹಗಲು ವೇಷಗಾರರ ಮತ್ತು ಹಗಲುವೇಷದವರ ಬದುಕು, ಜೀವನ ಕ್ರಮ, ಸಂಸ್ಕೃತಿ ಕುರಿತು ಅಭ್ಯಸಿಸಿದ ನಂತರ ಹಗಲುವೇಷಗಾರರ ಕುರಿತು ಸಂಗ್ರಹಿಸಿದ ವಿಷಯ ವಿಶ್ಲೇಷಣೆ ಇಲ್ಲಿದೆ.

''ಒಂದು ಸಂಸ್ಕೃತಿಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಹಲವು ಜನಾಂಗದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಅನಿವಾರ್ಯತೆ ಇದೆ. ಸಾಂಸ್ಕೃತಿಕ ಮಾನವ ವಿಜ್ಞಾನದಲ್ಲಿ ಮಾನವ ಕುಲ ವಿಜ್ಞಾನ ಮತ್ತು ಮಾನವ ಕುಲ ವಿವರಣ ವಿಜ್ಞಾನ ಎನ್ನುವ ಎರಡು ಅಧ್ಯಯನ ವಿಷಯಗಳು ಬುಡಕಟ್ಟುಗಳ ಸಂಸ್ಕೃತಿಯನ್ನು ಅಭ್ಯಾಸ ಮಾಡುತ್ತವೆ. ಸಂಸ್ಕೃತಿ ಕಾಲದಿಂದ ಕಾಲಕ್ಕೆ ಬದಲಾಗುವುದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಸಾಂಸ್ಕೃತಿಕ ವ್ಯತ್ಯಾಸವನ್ನು ಅಧ್ಯಯನ ಮಾಡುವುದು ಅಷ್ಟೇ ಮುಖ್ಯವಾಗಿದೆ. ಆದುದರಿಂದ ಸಂಸ್ಕೃತಿಯ ವಿಕಾಸದ ಮೂರು ಹಂತಗಳಾದ

೧) ಆದಿವಾಸಿ ಸಂಸ್ಕೃತಿ

೨) ಗ್ರಾಮೀಣ ಸಂಸ್ಕೃತಿ

೩) ನಗರ ಸಂಸ್ಕೃತಿ

ಇವುಗಳನ್ನು ಗಮನಿಸಬೇಕಾಗುತ್ತದೆ. ಒಂದು ಸಮಾಜದಲ್ಲಿನ ಜನ ವಾಸ ಮಾಡುವ ಪ್ರದೇಶ ವಾಸ ಮಾಡುವ ವಿಧಾನದ ಆಧಾರದ ಮೇಲೆ ನಗರ ಸಂಸ್ಕೃತಿ ಮತ್ತು ಗ್ರಾಮೀಣ ಸಂಸ್ಕೃತಿ ಎಂದು ವಿಭಜಿಸಿ ನಿರ್ಧರಿಸಬಹುದಾಗಿದೆ. ಆದರೆ ಇವೆರಡರಿಂದಲೂ ದೂರವಿರುವ ಮತ್ತೊಂದು ವರ್ಗದ ಸಂಸ್ಕೃತಿ ಇದೆ.

ಅದೇ ಬುಡಕಟ್ಟು ಸಂಸ್ಕೃತಿ''[೧]. ಇಂಥವರನ್ನು ಅಲೆಮಾರಿಗಳೆನ್ನುತ್ತಾರೆ. ಅನೇಕ ಶತಮಾನಗಳಿಂದಲೂ ಬೆಟ್ಟ, ಗುಡ್ಡಗಳ ಪ್ರದೇಶಗಳಲ್ಲಿ, ದ್ವೀಪಗಳಲ್ಲಿ, ಮರಳು ಗಾಡಿನಲ್ಲಿ ವಾಸವಾಗಿರುವ ಸಾಮಾಜಿಕ ವರ್ಗಗಳು ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಪ್ರಭಾವಕ್ಕೆ ಸಿಕ್ಕರೆ ತಮ್ಮ ಸಂಸ್ಕೃತಿಯನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿರುವ ಜನಾಂಗವನ್ನು ಬುಡಕಟ್ಟು ಇಲ್ಲವೇ ಅಲೆಮಾರಿ ಜನಾಂಗಗಳೆಂದು ಕರೆಯುತ್ತಾರೆ. ಇಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಮಾಜದ ಪ್ರತಿಯೊಬ್ಬನನ್ನು ತಿಳಿದುಕೊಂಡಿರುತ್ತಾನೆ. ಇವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆ ರಕ್ತ ಸಂಬಂಧದ ಮೇಲೆ ಅವಲಂಬಿಸಿರುತ್ತದೆ. ಹೊರಗಿನ ಪ್ರತಿಯೊಬ್ಬನನ್ನು ಅನುಮಾನದಿಂದಲೇ ನೋಡುವ ಪದ್ಧತಿ ಈ ಜನರಲ್ಲಿ ಇರುತ್ತದೆ. ಇವರು ತಮ್ಮದೇ ಆದ ಆಚಾರ-ವಿಚಾರ, ಕಲೆ-ಸಾಹಿತ್ಯ ಹೊಂದಿರುತ್ತಾರೆ. ಇಂತಹ ಅಲೆಮಾರಿ ಜನಾಂಗದವರ ಪೈಕಿ ಹಗಲು ವೇಷಗಾರರು ಒಬ್ಬರು.

ಹಿನ್ನೆಲೆ :

ಒಂದು ಸಮಾಜದಲ್ಲಿನ ಜನ ವಾಸ ಮಾಡುವ ಪ್ರದೇಶ, ವಾಸ ಮಾಡುವ ವಿಧಾನದ ಆಧಾರದ ಮೇಲೆ ನಗರ ಸಂಸ್ಕೃತಿ ಹಾಗೂ ಗ್ರಾಮೀಣ ಸಂಸ್ಕೃತಿ ಎಂದು ವಿಭಜಿಸಿ ನಿರ್ಧರಿಸಬಹುದಾಗಿದೆ. ಆದರೆ ಇವೆರಡರಿಂದಲೂ ದೂರವಿರುವ ಮತ್ತೊಂದು ವರ್ಗದ ಸಂಸ್ಕೃತಿ ಇದೆ. ಅದೇ ಬುಡಕಟ್ಟು ಸಂಸ್ಕೃತಿ.

ಅನೇಕ ಶತಮಾನಗಳಿಂದಲೂ ಬೆಟ್ಟ ಗುಡ್ಡಗಳ ಪ್ರದೇಶಗಳಲ್ಲಿ, ಜನ ವಸತಿ ಪ್ರದೇಶಗಳಿಂದ ದೂರದ ಪ್ರದೇಶಗಳಲ್ಲಿ ನಗರ ಹಾಗೂ ಗ್ರಾಮೀಣ ಸಂಸ್ಕೃತಿಗಳ ಪ್ರಭಾವಕ್ಕೆ ಸಿಕ್ಕದೇ ತಮ್ಮ ಸಂಸ್ಕೃತಿಯನ್ನೇ ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿರುವ ಜನಾಂಗವನ್ನು ಬುಡಕಟ್ಟು ಜನಾಂಗ ಎಂದು ಕರೆಯಲಾಗುತ್ತಿದೆ. ಬುಡಕಟ್ಟು ಜನಾಂಗಗಳು ತುಂಬಾ ಕಟ್ಟುನಿಟ್ಟಾದ ನಿಯಮಗಳನ್ನು ಹೊಂದಿರುತ್ತವೆ.

''ಜಾತಿಗಳು ಹಿಂದೂ ಧರ್ಮದ ವೈದಿಕ ಸಂಪ್ರದಾಯದ ಹಿಡಿತಕ್ಕೆ ಹಿಂದಿನಿಂದಲೂ ಸಿಕ್ಕಿದ್ದರಿಂದ, ಈ ಜಾತಿಗಳ ಸಂಪ್ರದಾಯಗಳಲ್ಲಿ ಎಷ್ಟೇ ವ್ಯತ್ಯಾಸಗಳಿದ್ದರೂ ಮೂಲಭೂತವಾಗಿ ಹಿಂದೂ ಧರ್ಮದಿಂದ ಪ್ರತ್ಯೇಕ ಅಸ್ತಿತ್ವ ಪಡೆಯಲು ಇವಕ್ಕೆ ಸಾಧ್ಯವಾಗಿಲ್ಲ''[೨]. ಬುಡಕಟ್ಟುಗಳು ಜಾತಿಗಳಾಗಿ ಪರಿವರ್ತನೆಗೊಂಡಿರುವ ಸಾಧ್ಯತೆಗಳೂ ಇವೆ.

ಒಂದು ಸಮಾಜವನ್ನು ಬುಡಕಟ್ಟು ಎಂದು ನಿರ್ಧರಿಸುವಾಗ ಅದರ ಭಾಷೆ ಮತ್ತು ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಒಂದು ಸಮೂಹವನ್ನು ಬುಡಕಟ್ಟೆಂದು ನಿರ್ಧರಿಸಬೇಕಾದರೆ ಆ ಸಮೂಹಕ್ಕೆ ತನ್ನದೇ ಆದ ಭಾಷೆ ಇರಬೇಕು ಹಾಗೂ ಆ ಸಮೂಹದ ಒಟ್ಟು ಜನಸಂಖ್ಯೆ ಐದು ಸಾವಿರವನ್ನು ಮೀರಿರಬಾರದು. ಆದರೆ ಭಾರತದಂಥ ಸಂದರ್ಭದಲ್ಲಿ ಬುಡಕಟ್ಟಿನ ಭಾಷೆ ಅನಿವಾರ್ಯವಾದರೆ ಅದರ ಜನಸಂಖ್ಯೆಯ ಮಿತಿ ಮಾತ್ರ ವ್ಯತ್ಯಾಸವಾಗಿರುವುದು ಕಂಡು ಬಂದಿದೆ. ಏಕೆಂದರೆ ಬುಡಕಟ್ಟು ಪ್ರದೇಶದ ಜನರು ಒಂದೆಡೆ ನೆಲೆ ನಿಂತು ಬದುಕದೇ ಅಲೆಮಾರಿಗಳಾಗಿ ವಲಸೆ ಜೀವನ ಹೊಂದಿದ್ದಾರೆ.

ಹಗಲುವೇಷಗಾರರ ಕುರಿತಾದ ವ್ಯಾಖ್ಯೆಗಳು :

ಥರ್ಸ್ಟನ್ ಎನ್ನುವ ವಿದ್ವಾಂಸರ ಪ್ರಕಾರ :

> **A class of Telugu beggars, who put in tisguises (Vesham) while begging. At the annual festival at Tirupati in honour of the Goddess Gangamma, custom requires the people to appear in a different disguise every morning and every evening. These disguise include those of a Bairagi serpant etc.**

ಕನ್ನಡದ ಭಾವಾರ್ಥ :

> ತಿರುಪತಿಯ ಗಂಗಮ್ಮ ಎನ್ನುವ ದೇವತೆಯ ಗೌರವಾರ್ಥ ನಡೆಯುವ ವಾರ್ಷಿಕ ಜಾತ್ರೆಯಲ್ಲಿ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಬೈರಾಗಿ, ಸರ್ಪ ಮುಂತಾದ ಬೇರೆ ಬೇರೆ ವೇಷ ಧರಿಸಿ, ಭಿಕ್ಷೆ ಎತ್ತುವ ತೆಲುಗು ಭಿಕ್ಷುಕ ವರ್ಗ.

ಪ್ರೊ. ಬಿ. ಭೀಮರಾಜುರವರು ತಮ್ಮ ತೆಲುಗು ಜಾನಪದ 'ಗೇಯ ಸಾಹಿತ್ಯಂ' ಎನ್ನುವ ಕೃತಿಯಲ್ಲಿ :

> 'ಬುಡಿಗೆ' ಎನ್ನುವ ವಾದ್ಯವನ್ನು ನುಡಿಸುತ್ತಾ ಕಥೆ ಹೇಳುವ ಅಲೆಮಾರಿ ಜನಾಂಗವೇ 'ಬುಡ್ಗ ಜಂಗಾಲು'. ಎಂದು ಕರೆದಿದ್ದಾರೆ.

ಮೊರುವ್ವೂರು ಕೋದಂಡರಾಮರೆಡ್ಡಿ ಅವರು 'ಮಾಂಡಲಿಕ ಪದಕೋಶಂ' ಎನ್ನುವ ಗ್ರಂಥದಲ್ಲಿ ಹಗಲುವೇಷಗಾರರ ಜನಾಂಗವನ್ನು ವಿವರಿಸುತ್ತಾ :

> 'ತಂದಾನ' ಕತೆಗಳನ್ನು ಜೇವಿಸುವ ಬುರ್ರ ಕಥೆಯವರು 'ಬುಡಗೇರು' ವಾದ್ಯವನ್ನು ನುಡಿಸುತ್ತ ಭಿಕ್ಷೆ ಎತ್ತುವವರು 'ಬುಡ್ಗ ಜಂಗಾಲು' ಎಂದು ತಿಳಿಸಿದ್ದಾರೆ.

ಮಿಕ್ಕಿಲಿನೇನಿ ರಾಧಾಕೃಷ್ಣ ಮೂರ್ತಿಯವರು ತಾವು ರಚಿಸಿರುವ 'ಆಂಧ್ರ ನಾಟಕ ರಂಗ ಚರಿತ್ರೆ' ಎನ್ನುವ ಗ್ರಂಥದಲ್ಲಿ ಈ ಜನಾಂಗವನ್ನು ಕುರಿತು :

> ಪೂರ್ವ ಕಾಲದಿಂದ ತೆಲುಗು ದೇಶದಲ್ಲಿ ಬಹಳ ಪ್ರಚಾರ ಹೊಂದಿದ್ದ ಕತೆಗಳನ್ನೇ ಈ ಬುರ್ರ ಕತೆಗಳು ಎನ್ನುತ್ತಾರೆ. ಪೂರ್ವ ಮತ ಪ್ರಬೇಧಕ್ಕೆ, ದೇಶ ಭಕ್ತಿಗೆ ಪ್ರತಿಬಿಂಬವಾಗಿ ನಿಂತಿರುವ ಈ ಕತೆಗಳು ಕ್ರಮವಾಗಿ ಭಿಕ್ಷೆಗೆ, ಉದರ ಪೋಷಣೆಗೆ ಉಪಯೋಗವಾಗುತ್ತಿವೆ. ಜಂಗಾಲು ಜನಾಂಗದವರು ವಂಶ ಪಾರಂಪರ್ಯವಾಗಿ ಹೇಳುವ ಈ ಕತೆಗಳಿಗೆ 'ಜಂಗಾಲು ಕತೆಗಳು' ಎನ್ನುವ ವಾದ್ಯವನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ಇದಕ್ಕಾಗಿ 'ಬುಡ್ಗ ಜಂಗಾಲು' ಎನ್ನುವ ಹೆಸರು ಬಂದಿದೆ ಎಂದು ಹೇಳಿದ್ದಾರೆ.

ಬುಡ್ಗ ಜಂಗಾಲು ಜನಾಂಗವನ್ನು ಕುರಿತ ವಿಷಯಗಳು ಕನ್ನಡ ಸಾಹಿತ್ಯದಲ್ಲಿ ಲಭ್ಯವಾಗುತ್ತಿಲ್ಲ. ಈ ಜನಾಂಗ ನಾನಾ ವೇಷಗಳನ್ನು ಹಾಕುವವರು ಆಗಿರುವುದರಿಂದ ಬಹುರೂಪಿಗಳು ಎನ್ನುವ ಉಲ್ಲೇಖಗಳು ಅಲ್ಲಲ್ಲಿ ಸಿಗುತ್ತವೆ. ಬಬ್ಬಿ ಬಾಚಯ್ಯ ವಚನವೊಂದು ಈ ರೀತಿ ಇದೆ.

ನಾನಾ ವೇಷವ ತೊಟ್ಟು ಆಡುವವನಂತೆ
ಬಹುರೂಪ ಬೇರಲ್ಲದೇ ಆಡುವ ತಾನೊಬ್ಬನೇ
ಎಲ್ಲಿ ಅರ್ಪಿತ ಮುಖ ಅಲ್ಲಿಯೂ ನೀನೇ
ಏಣಾಂಕಧರ ಸೋಮೇಶ್ವರ ಲಿಂಗವೇ

ಈ ರೀತಿಯ ಉಲ್ಲೇಖಗಳು ಅಲ್ಲಲ್ಲಿ ಸಿಗುತ್ತವೆ.

'ಹಗಲುವೇಷಗಾರ' ಶಬ್ದದ ಅರ್ಥ :

ಆಂಧ್ರ ಪ್ರದೇಶಕ್ಕೆ ಹೊಂದಿಕೊಂಡ ಕರ್ನಾಟಕದ ಗಡಿ ಪ್ರದೇಶಗಳ ಭಾಗಗಳಲ್ಲಿ ''ಗೊತ್ತು ಗುರಿ ಇಲ್ಲದೇ ಸುಮ್ಮನೆ ತಿರುಗಾಡುವ ವ್ಯಕ್ತಿಯನ್ನು ಕುರಿತು 'ಒಳ್ಳೆ ಜಂಗಾಲೇರು ತಿರುಗಾಡಿದ್ಹಂಗೆ ತಿರುಗಾಡ್ತೀಯಲ್ಲಲೆ' ಎಂದು ಹೇಳುವ ಜನಬಳಕೆಯ ಒಂದು ವಾಕ್ಯವಿದೆ''[೩]. ಇದರಿಂದ ತಿಳಿದು ಬರುವ ವಿಷಯವೇನೆಂದರೆ 'ಜಂಗಾಲೇರು' ಎನ್ನುವ ಪದದ ಅರ್ಥ ಸದಾ ಸುತ್ತುವವರು ಎನ್ನುವುದಾಗುತ್ತದೆ. ಆಂಧ್ರದ ಮತ್ತು ಕರ್ನಾಟಕದ ಕೆಲವು ಭಾಗ ಹಿಂದೆ ಹೈದರಾಬಾದ್ ನಿಜಾಮನ ಆಳ್ವಿಕೆಯಲ್ಲಿ ಇದ್ದುದ್ದರಿಂದ ಅಲ್ಲಿನ ಆಡಳಿತ ಭಾಷೆಯಾದ ಉರ್ದುವಿನ ಪ್ರಭಾವ 'ಜಂಗಾಲೇರು' ಪದದ ಉತ್ಪತ್ತಿಯಾಗಿರಬಹುದಾದ ಸಾಧ್ಯತೆಗಳೂ ಇವೆ. 'ಜಂಗಲ್' ಎಂದರೆ ಕಾಡು ಎಂದು ಅರ್ಥ. ಸುಮ್ಮನೆ ಕಾಡಿನಲ್ಲಿ ಸುತ್ತುವ ಅಥವಾ ಕಾಡಿನಲ್ಲಿ ವಾಸವಾಗಿರುವ ಒಂದು ಅಲೆಮಾರಿ ಜನಾಂಗವೇ 'ಜಂಗಾಲೇರು' ಆಗಿರಬಹುದಾದ ಸಾಧ್ಯತೆಗಳು ಇವೆ.ಒಟ್ಟಾರೆಯಾಗಿ ಹಗಲು ವೇಷ ಹಾಕುವ ಜನರನ್ನು 'ಬುಡ್ಗ ಜಂಗಾಲು' ಎಂದು ಕರೆದಿರುವ ಹೆಸರಿನ ನಿಷ್ಪತ್ತಿಯ ಬಗ್ಗೆ ಇನ್ನೂ ಚರ್ಚೆಯಾಗುತ್ತಲಿದೆ.

ಇನ್ನೊಂದು ಮೂಲದ ಪ್ರಕಾರ ತೆಲುಗು ಭಾಷೆಯಲ್ಲಿ ಬೇಟೆಯನ್ನು ಕೊಂದು ತಿನ್ನುವ ಬೇಟೆಗಾರ ಜನಾಂಗದವರನ್ನು 'ಬೋಯ' ಎಂದು ಕರೆಯುತ್ತಾರೆ. ಇದೇ ಜನರನ್ನು ಕನ್ನಡ ಭಾಷೆಯಲ್ಲಿ 'ಬೇಡ' ಎಂದು ಕರೆಯುತ್ತಾರೆ. ಈ ಬೇಟೆಯಾಡಿ ಹೊಟ್ಟೆಯನ್ನು ಹೊರೆದುಕೊಳ್ಳುವ ಅಲೆಮಾರಿ ಜನಾಂಗದರನ್ನೇ 'ಬೇಡ ಜಂಗಾಲು' ಎಂದು ಕರೆದಿರಬಹುದು.

'ಬುಡ್ಗ ಜಂಗಾಲು' ಜನಾಂಗದವರನ್ನು ಹೇಳುವ ವಿಷಯಗಳು ಕನ್ನಡ ಸಾಹಿತ್ಯದಲ್ಲಿ ಸಿಗುವುದು ಬಹಳ ಅಪರೂಪ. ಆದರೆ ಈ ಜನಾಂಗದವರು ವಿವಿಧ ಬಗೆಯ ವೇಷಗಳನ್ನು, ನಾನಾ ರೀತಿಯ ಉಡುಗೆ-ತೊಡುಗೆಗಳ ಮೂಲಕ ಭಿಕ್ಷೆ ಎತ್ತಿಯೋ, ಬೇಟೆಯಾಡಿಯೋ, ಕತೆ ಹೇಳಿಯೋ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಜನರಾಗಿದ್ದರಿಂದ ಇವರನ್ನು 'ಬಹುರೂಪಿಗಳು' ಎಂದು ಕೆಲವು ಕಡೆ ಉಲ್ಲೇಖಿಸಲಾಗಿದೆ.

ಕನ್ನಡ ಸಾಹಿತ್ಯ ಶ್ರೇಷ್ಠ ಮೈಲಿಗಲ್ಲಾದ ವಚನ ಸಾಹಿತ್ಯದ ಅನೇಕ ಶರಣರಲ್ಲಿ ಒಂದಾದ ಅಂಬಿಗರ

ಚೌಡಯ್ಯ ಬಹುರೂಪಿ ಜನಾಂಗಕ್ಕೆ ಸೇರಿದ ವ್ಯಕ್ತಿ ಎನ್ನುವ ಮಾತು ಇರುವುದರಿಂದ ಮತ್ತು ಬೆಸ್ತರೂ ಬೇಟೆಯಾಡುವ ಹವ್ಯಾಸ ಹೊಂದಿರುವುದರಿಂದ ಇವರನ್ನೂ 'ಬೇಡ ಜಂಗಾಲು' ಎಂದು ಕರೆದಿರಬಹುದೇನೋ ಎನ್ನುವ ಚರ್ಚೆ ಶುರುವಾಗುತ್ತದೆ. ಇದರಿಂದ ಈ ಜನಾಂಗದ ಕುರುಹುಗಳು ಹನ್ನೆರಡನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ.

ಹಗಲುವೇಷಗಾರರ ಪ್ರಾತಿನಿಧಿಕ ಕಾವ್ಯ 'ಗಂಗಮ್ಮ-ಗೌರಮ್ಮ' ಎನ್ನುವ ಕಥನ ಕಾವ್ಯ. ಇದು ಬಡ್ಗ ಜಂಗಾಲು ಜನಾಂಗದ ಒಂದು ಸಾಂಪ್ರದಾಯಿಕ ಕಾವ್ಯವಾಗಿ ಅಂದಿನಿಂದ ಇಂದಿನವರೆಗೂ ಉಳಿದುಕೊಂಡು ಬಂದಿದೆ. ಇದರ ಆಧಾರ ಇಟ್ಟುಕೊಂಡರೆ ಈ ಜನಾಂಗ ಬೇಟೆಯಾಡಿ, ಕಲಾ ಪ್ರದರ್ಶನ ನೀಡಿ ಬದುಕುತ್ತಿದ್ದ ದ್ರಾವಿಡ ಶೈವ ಬೇಡರ ಕಾಲವನ್ನೂ ಪ್ರತಿನಿಧಿಸುತ್ತದೆ ಎಂದು ಅಂದಾಜಿಸಬಹುದಾಗಿದೆ. ಒಟ್ಟಾರೆಯಾಗಿ ಬುಡ್ಗ ಜನಾಂಗಲುದವರೇ ಹಗಲುವೇಷಗಾರರಾಗಿ ಗಮನ ಸೆಳೆದಿದ್ದಾರೆ ಎಂದರೆ ತಪ್ಪಾಗಲಿಕ್ಕಿಲ್ಲ.

'ಹಗಲುವೇಷಗಾರ'ರು ಹೆಚ್ಚಾಗಿ ಕಂಡು ಬರುವ ಪ್ರದೇಶಗಳು :

ಹಗಲು ವೇಷ ಹಾಕುವ ಜನರನ್ನು ಬುಡ್ಗ ಜಂಗಾಲು ಎಂದು ಕರೆದಿದ್ದಾರೆ. ಹೈದರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ಆಂಧ್ರದ ತೆಲಂಗಾಣ ಪ್ರದೇಶದಲ್ಲಿ ಕಾಡಿನಲ್ಲಿ ವಾಸ ಮಾಡುವ ಹಾಗೂ ಸದಾ ಸುತ್ತುವ ಜನರನ್ನು 'ಜಂಗಾಲು' ಎಂದು ಕರೆಯುವುದು ವಾಡಿಕೆಯಲ್ಲಿದೆ. ಕರ್ನಾಟಕದ ಅವಿಭಜಿತ ರಾಯಚೂರು ಜಿಲ್ಲೆಯ ಗಂಗಾವತಿ, ಯಲಬುರ್ಗಾ, ಮಾನ್ವಿ, ಬಳ್ಳಾರಿ ಜಿಲ್ಲೆಯ ಸಿರಗುಪ್ಪ ಸಂಡೂರು, ಹೊಸಪೇಟೆ, ಬಳ್ಳಾರಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು, ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗಿರಿ, ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ, ಗೌರಿಬಿದನೂರು, ಚಿಂತಾಮಣಿ ತಾಲೂಕುಗಳಲ್ಲಿ ಹಗಲುವೇಷ ಹಾಕುವ ಬುಡ್ಗ ಜಂಗಾಲು ಜನಾಂಗ ಕಂಡು ಬಂದಿದ್ದಾರೆ.

ಹಗಲುವೇಷಗಾರರ ಆಹಾರ ಪದ್ಧತಿ :

ಕರ್ನಾಟಕದಲ್ಲಿ ಕಂಡುಬರುವ ಬಹುಪಾಲು ಹಗಲು ವೇಷಗಾರರು ಭಿಕ್ಷಾಟನೆ, ಬೇಟೆ ಹಾಗೂ ಕಾಡು ಪ್ರಾಣಿಗಳನ್ನು ಸಾಕುವುದನ್ನು ವೃತ್ತಿಯನ್ನಾಗಿಸಿದ್ದಾರೆ. ವೇಷ ಹಾಕಿಕೊಂಡ ಓಡಾಡುವ ಗಂಡಸರು, ಮತ್ತೆ ವೇಷ ಅಳಿಸಿಕೊಳ್ಳುವವರೆಗೆ ಊಟ, ತಿಂಡಿಗಳನ್ನು ತಿನ್ನುವುದಿಲ್ಲ. ಇವರ ಪೂರ್ವಿಕರು ಬೆಳಗ್ಗಿ ತಂಗಳು ಆಹಾರವನ್ನು ಸೇವಿಸಿ ವೇಷ ಹಾಕಿದ ಮೇಲೆ ಅದನ್ನು ಅಳಿಸುವವರೆಗೂ ಕಾಫಿ, ಟೀಯನ್ನು ಕುಡಿಯುತ್ತಿರಲಿಲ್ಲ. ಇತ್ತೀಚಿಗೆ ಕಾಫಿ, ಟೀ ಕುಡಿಯುವುದು ಕಂಡುಬಂದಿದೆ. ಹಗಲು ವೇಷಗಾರರು ವೇಷಗಳನ್ನು ಹಾಕಿಕೊಂಡು ಮೂರು ದಿನ, ಐದು ದಿನ, ಏಳು ದಿನ, ಒಂಭತ್ತು ದಿನ ಹೀಗೆ ಯಾವುದಾದರೂ ಒಂದು ಅವಧಿಯನ್ನು ನಿರ್ಧರಿಸಿಕೊಂಡು ಊರಾಡುತ್ತಾರೆ. ಪ್ರತಿದಿನ ಬೇರೆ ಬೇರೆ

ವೇಷ ಹಾಕಿಕೊಂಡು ಮನೆ-ಮನೆಗೆ ಹೋಗಿ ಬರುತ್ತಾರೆ. ಬೇರೆ ಬೇರೆ ಕಥಾ ಸಂದರ್ಭದ ಪಾತ್ರಗಳನ್ನು ಹಾಕಿಕೊಂಡು ಗಮನ ಸೆಳೆಯುತ್ತಾರೆ.

ಮಳೆಗಾಲದಲ್ಲಿ ಹೆಚ್ಚಿನ ಮಳೆಯಾಗುತ್ತಿದ್ದರೆ ಮಾತ್ರ ಈ ಜನಾಂಗದವರು ಸ್ವಂತವಾಗಿ ತಮ್ಮ ವಾಸಸ್ಥಳದಲ್ಲಿಯೇ ಎರಡು ಹೊತ್ತು ಅಡುಗೆ ಮಾಡಿಕೊಂಡು ಊಟ ಮಾಡುತ್ತಾರೆ. ಆದರೆ ಸಾಮಾನ್ಯವಾಗಿ ಇವರ ಊಟ ಅವಲಂಬನೆಯಾಗಿರುವುದು ಭಿಕ್ಷಾಟನೆಯ ಮೇಲೆಯೇ. ಇವರು ಎಂದಿಗೂ ಬೇಯಿಸಿ ಸಿದ್ಧಪಡಿಸಿದ ಆಹಾರವನ್ನು ತೆಗೆದುಕೊಳ್ಳುವುದಿಲ್ಲ.

ಹಗಲು ವೇಷಗಾರರು ಮಾಂಸಾಹಾರಿಗಳು. ಆದ್ದರಿಂದ ಇವರು ತಮ್ಮ ಆಹಾರಕ್ಕಾಗಿ ಕೋಳಿ, ಮೇಕೆ ಹಾಗೂ ಇನ್ನಿತರ ಪ್ರಾಣಿಗಳನ್ನು ಸಾಕುತ್ತಾರೆ. ಬಿಡುವು ಸಿಕ್ಕಾಗಲೆಲ್ಲ ಇವರು ಬೇಟೆಯಾಡಲು ತೆರಳುತ್ತಾರೆ. ಮೀನು, ಮುಂಗುಸಿ, ಕೌಜ, ಬುರ್ಲಿ, ಉಡ, ತಾಂಬೇಲಿ ಮುಂತಾದ ಪ್ರಾಣಿಗಳು ಇವರ ಅಚ್ಚು-ಮೆಚ್ಚಿನ ಬೇಟೆಗಳು. ಮಾಂಸಾಹಾರಿಗಳಾಗಿದ್ದರೂ ಯಾವುದೇ ಕಾರಣಕ್ಕಾಗಿಯೂ ಹಂದಿ ಮತ್ತು ದನದ ಮಾಂಸವನ್ನು ಮುಟ್ಟುವುದಿಲ್ಲ. ಧೂಮಪಾನ, ಮದ್ಯಪಾನ, ಮಾದಕ ಪಾನೀಯ, ಹೊಗೆಸೊಪ್ಪು ಸೇವನೆ ಈ ಜನಾಂಗದವರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಚಿಕ್ಕಮಕ್ಕಳಿಂದ ಹಿಡಿದು ಮುದುಕರವರೆಗೂ ಮದ್ಯಪಾನ ಸೇವನೆ ಮಾಡುತ್ತಾರೆ. ಮದ್ಯಪಾನ ಇಲ್ಲಿನ ಜನರಿಗೆ ಒಂದು ರೀತಿಯ ಸಾಮಾನ್ಯ ಆಹಾರವಾಗಿದೆ.

ಮನೆ ಬಳಕೆಯ ವಸ್ತುಗಳು :

ಹಗಲುವೇಷಗಾರರು ಮೂಲತಃ ಅಲೆಮಾರಿಗಳಾಗಿರುವುದರಿಂದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಬೇಕಾಗುತ್ತದೆ. ಆದ್ದರಿಂದ ಅವರು ಮನೆ ಬಳಕೆಗಾಗಿ ಕಡಿಮೆ ಬೆಲೆಯ, ಹಗುರವಾದ ವಸ್ತುಗಳನ್ನು ಬಳಸುತ್ತಾರೆ. ಅಡುಗೆ ಮಾಡಲು ಮಡಕೆಗಳು, ನೀರು ತರಲು ಗಡಿಗೆ, ನೀರು ಕುಡಿಯಲು 'ಮುಂತ' (ಮಗಿ, ಕುಂಬ) ಸಾರು ತುಂಬಲು 'ಕ್ವಾರಸಿಪ್ಪ' (ಕ್ವಾರಬಟ್ಟು) ಹೀಗೆ ಮಣ್ಣಿನ ವಸ್ತುಗಳನ್ನೇ ಬಳಸುತ್ತಾರೆ. ಸಾರು ಬಡಿಸಲು ಮರದ ತುಂಡಿನಿಂದ ತಯಾರಿಸಿದ 'ಹುಟ್ಟು', ಚಟ್ನಿ ಅರೆಯಲು ಅರೆಯಲು 'ರಾಳ್ಳುಸಿಪ್ಪ' ಅಥವಾ 'ಗುಣಿಸಿಪ್ಪ' ಎನ್ನುವ ಮಣ್ಣಿನ ಪಾತ್ರೆ, ಬೆಳಕಿಗಾಗಿ ' ಕೈ ಕಂದೀಲಿ', ಬೇಟೆಗಾಗಿ ಮತ್ತು ಮಾಂಸ ಸೀಳಲು 'ಚಿಪ್ಪುಕೊಡ್ಲಿ' ಹೀಗೆ ಹಗುರವಾದ ವಸ್ತುಗಳೇ ಇವರ ದಿನಬಳಕೆಯ ವಸ್ತುಗಳಾಗಿವೆ. ಆದರೆ ಇತ್ತೀಚಿಗೆ ಆಧುನಿಕತೆಯ ಪ್ರಭಾವದಿಂದ ಚಾಕು, ಸೌಟು, ತಾಟು, ಅಲ್ಯೂಮಿನಿಯಂ ಪಾತ್ರೆಗಳನ್ನು ಬಳಸಲು ಆರಂಭಿಸಿದ್ದಾರೆ. ದವಸ ಧಾನ್ಯಗಳನ್ನು ಹಿಂದಿನಂತೆ ಕುಟ್ಟದೇ, ಗಿರಣಿಗಳಿಗೆ ಹಾಕಿಸಿಕೊಂಡು ಬರುವ ವಿಧಾನವೂ ಶುರುವಾಗಿದೆ. ಪ್ಲಾಸ್ಟಿಕ್ ವಸ್ತುಗಳೂ ಅವರ ಮನೆಯನ್ನು ಆಕ್ರಮಿಸಿಕೊಂಡಿವೆ. ಕಾಲ ಬದಲಾದಂತೆ ಅವರ ಜೀವನ ಶೈಲಿಯಲ್ಲಿಯೂ ಬದಲಾವಣೆಗಳು ಕಂಡು ಬರುತ್ತಿವೆ.

ಮನೆಯಲ್ಲಿ ಹೆಣ್ಣುಮಕ್ಕಳು ಅಡುಗೆಗಾಗಿ ಬಳಸುವ ಸಾಮಾನು, ಸರಂಜಾಮುಗಳು

ವಿಶಿಷ್ಟವಾಗಿರುತ್ತವೆ. ಈಗ ಆಧುನಿಕತೆಯ ಪಾತ್ರೆ, ಸಾಮಾನುಗಳನ್ನು ಈ ಅಲೆಮಾರಿಗಳು ಬಳಸಲು ಪ್ರಾರಂಭಿಸಿದ್ದರೂ ಸಹ ತಮ್ಮ ಪೂರ್ವಜರಿಂದ ಕಾಪಾಡಿಕೊಂಡು ಬಂದಂತಹ ಖಾರ ಅಥವಾ ಚಟ್ನಿ ಅರೆಯಲು ಬಳಸುವ ರಾಳ್ಳುಸಿಪ್ಪ ಅಥವಾ ಗುಣಿಸಿಪ್ಪ ಕಟ್ಟಿಗೆಯಿಂದ ತಯಾರಿಸಿದ ಒಳ್ಳು, ಒನಕೆಗಳು, ಲಟ್ಟಣಿಗೆಗಳು, ಪರಾತದಂತ ಅಗಲವಾದ ಕಟ್ಟಿಗೆಯ ಪಾತ್ರೆ ಇವರ ವೈವಿಧ್ಯತೆಯನ್ನು ತೋರಿಸುತ್ತವೆ.

ಜೀವನ ಪದ್ಧತಿ :

ಹಗಲು ವೇಷಗಾರರು ಬಹುಪಾಲು ಅಲೆಮಾರಿಗಳಾದರೂ ವರ್ಷದ ಒಂದೆರಡು ತಿಂಗಳು ಬೇರೆ ಬೇರೆ ಊರಿನಲ್ಲಿ ನಿಲ್ಲುತ್ತಾರೆ. ಕುದರಿಮೋತಿಯಲ್ಲಿ ಪ್ರತಿ ಎರಡು ವರ್ಷಗಳಿಗೊಮ್ಮೆ ಮೊಹರಂ ಹಬ್ಬದ ಸಂದರ್ಭದಲ್ಲಿ ೧೦-೧೫ ದಿವಸಗಳ ಕಾಲ ಸೇರುತ್ತಾರೆ. ವರ್ಷದ ಏಳೆಂಟು ತಿಂಗಳು ಅಲೆಮಾರಿಗಳಾಗಿರುತ್ತಾರೆ. ಇವರು ವೇಷಗಳ ಪ್ರದರ್ಶನಕ್ಕಾಗಿ ಒಂದು ಊರಿನಲ್ಲಿ ಹೆಚ್ಚಿಗೆ ಅಂದರೆ ೧೫-೨೦ ದಿನಗಳು ಉಳಿಯಬಹುದು. ಈ ಅವಧಿಯಲ್ಲಿ ಗುಡಾರಗಳನ್ನು ಹಾಕಿಕೊಳ್ಳುತ್ತಾರೆ. ಹಗಲು ವೇಷಗಾರರು ಗುಂಪು-ಗುಂಪಾಗಿ ವಾಸಿಸುತ್ತಾರೆ. ರಕ್ತ ಸಂಬಂಧಿಗಳೂ ಆಗಿರಬಹುದು, ಬೇರೆ ಕುಟುಂಬದವರೂ ಆಗಿರಬಹುದು. ಮದುವೆಯಾಗಿರುವ ಮಗ-ಸೊಸೆ ಅವರ ಮಕ್ಕಳಿದ್ದರೆ ಬೇರೆ ಗುಡಾರ ಮಾಡಿಕೊಳ್ಳುತ್ತಾರೆ. ಹಗಲು ವೇಷದವರು ಬಸ್ಸುಗಳಲ್ಲಿ ಪ್ರಯಾಣ ಮಾಡುವುದರಿಂದ ಹಸು, ಕುರಿ, ಮೇಕೆಗಳನ್ನು ಜೊತೆಯಲ್ಲಿ ಕರೆದೊಯ್ಯುವುದಿಲ್ಲ. ಬಹುಮಾನದಿಂದ ಬಂದ ಹಸುಗಳನ್ನು ಅಲ್ಲಿಯೇ ಮಾರಿಹೋಗುತ್ತಾರೆ. ಕುರಿ, ಮೇಕೆಗಳನ್ನು ಅಲ್ಲಿಯೇ ತಿನ್ನುತ್ತಾರೆ. ಇವರು ಒಂದೂರಿಂದ ಇನ್ನೊಂದೂರಿಗೆ ಅಲೆದಾಡುವ ಜನರಾಗಿರುವುದರಿಂದ ಇವರ ಜೀವನ ಕ್ರಮದ ಉಪಕರಣಗಳು ಸಾಮಾನ್ಯವಾಗಿ ಕಡಿಮೆ ಬೆಲೆಯ ಮತ್ತು ಹಗುರವಾದ ವಸ್ತುಗಳಾಗಿರುತ್ತವೆ. ಅಲ್ಲದೇ ಸುಲಭವಾಗಿ ಸಾಗಿಸುವಂತಹ ವಸ್ತುಗಳಾಗಿರುತ್ತವೆ.

ಸಾಮಾನ್ಯವಾಗಿ ಹಗಲು ವೇಷಗಾರರು ಅಲೆಮಾರಿಗಳಾಗಿದ್ದರೂ ಸಹ ವರ್ಷದಲ್ಲಿ ಒಂದು ಇಲ್ಲವೇ ಎರಡು ತಿಂಗಳು ಒಂದು ಊರಿನಲ್ಲಿ ನೆಲೆ ನಿಂತು ಜೀವನ ಸಾಗಿಸುವವರೂ ಇದ್ದಾರೆ. ವರ್ಷದಲ್ಲಿ ಒಂದೇ ಸ್ಥಳದಲ್ಲಿ ಇವರು ನೆಲೆ ನಿಲ್ಲುವುದರಿಂದ ಆ ಸ್ಥಳವನ್ನೇ ಅವರು ತಮ್ಮ ಊರು ಎಂದು ಭಾವಿಸುತ್ತಾರೆ. ಉಳಿದ ಎಂಟತ್ತು ತಿಂಗಳು ಇವರು ಒಂದು ಸ್ಥಳದಲ್ಲಿ ೧೫ ದಿನಕ್ಕಿಂತ ಹೆಚ್ಚಿಗೆ ನೆಲೆ ನಿಲ್ಲಲಾರರು. ಊರ ಹೊರಗಿನ ಗುಧಾರಗಳೇ ಇವರ ವಾಸಸ್ಥಳಗಳಾಗಿರುತ್ತವೆ. ಆದರೆ ಇತ್ತೀಚಿಗೆ ಜನತಾ ಮನೆಗಳ ಸೌಲಭ್ಯ ಈ ಜನಾಂಗದವರಿಗೆ ದೊರಕಿರುವುದರಿಂದ ಅವರು ಆ ಮನೆ ಇರುವ ಸ್ಥಳವನ್ನೇ ಸ್ವಂತ ಊರು ಎಂದು ಕರೆದುಕೊಳ್ಳುವದು ಅನಿವಾರ್ಯವಾಗಿದೆ.

ಉಡುಗೆ-ತೊಡುಗೆ :

ಇವರ ಉಡುಗೆ-ತೊಡುಗೆಗಳು ಬಹಳ ಸಾಮಾನ್ಯವಾದವು. ಗಂಡಸರು ಕಿವಿಗಳಿಗೆ ರಿಂಗುಗಳನ್ನು

ಕುತ್ತಿಗೆಗೆ ಮೆಡಕಂಟಿ, ಬಲಗೈನ ಮುಂಗೈಗೆ ಕಡಗ, ಎಡಗಾಲಿಗೆ ಕಡಗ ಅಥವಾ ಸರಿಗೆ ಮುಂತಾದ ಒಡವೆಗಳನ್ನು ಧರಿಸುತ್ತಾರೆ. ಭೀಮ, ಆಂಜನೇಯ, ಈಶ್ವರ ಮುಂತಾದ ಪಾತ್ರಗಳನ್ನು ಧರಿಸುವವರು ಕಡಗವನ್ನು ಎಡಗಾಲಿಗೆ ಬದಲು ಬಲಗಾಲಿಗೆ ಧರಿಸುತ್ತಾರೆ. ಎಲ್ಲ ಒಡವೆಗಳು ಬೆಳ್ಳಿಯವೇ ಆಗಿರುತ್ತವೆ. ಕೈ ಬೆರಳುಗಳಿಗೆ ಸದಾ ಬೆಳ್ಳಿಯ ಉಂಗುರಗಳನ್ನು ಹಾಕಿರುತ್ತಾರೆ. ಹೆಣ್ಣುಮಕ್ಕಳು ಯಾವ ಒಡವೆಗಳನ್ನೂ ತಲೆಗೆ ಧರಿಸುವುದಿಲ್ಲ. ಕಿವಿಗೆ ಸಾದಾ ಓಲೆ, ಬುಗುಡಿ ಕುತ್ತಿಗೆ ತಾಳಿ, ತೋಳಿಗೆ ಬಂಧಿ, ಮುಂಗೈಗೆ ಮಣಿಕಟ್ಟಿಗೆ, ಗಾಜಿನ ಬಳೆ, ಸೊಂಟ ಪಟ್ಟಿ ಕಾಲ್ಬೆರಳಿಗೆ ಕಾಲುಂಗರವನ್ನು ಧರಿಸುತ್ತಾರೆ. ತಾಳಿಯನ್ನು ಉಳಿದು ಎಲ್ಲವೂ ಬೆಳ್ಳಿಯವು. ವಯಸ್ಸಾದ ಗಂಡಸರು ತಲೆಕೂದಲನ್ನು ಉದ್ದವಾಗಿ ಬೆಳೆಸಿ, ತುರುಬು ಕಟ್ಟಿ, ರುಮಾಲು ಸುತ್ತಿಕೊಳ್ಳುತ್ತಾರೆ. ಯುವಕರು ಕೂದಲನ್ನು ಕುತ್ತಿಗೆಯ ಕೆಳಮಟ್ಟದವರೆಗೆ ಬಿಡುತ್ತಾರೆ. ವೇಷ ಧರಿಸುವ ಗಂಡಸರು ಪ್ರತಿದಿನವೂ ಕೂದಲಿಗೆ ಕೊಬ್ಬರಿ ಎಣ್ಣೆಯನ್ನು ಹಚ್ಚಿ ಬಾಚಿಕೊಳ್ಳುತ್ತಾರೆ. ಆಧುನಿಕತೆಯ ಪ್ರಭಾವವೂ ಇವರ ಜನಾಂಗದವರ ಮೇಲೆ ಇತ್ತೀಚಿಗೆ ಆಗಿರುವುದರಿಂದ ಈ ಜನಾಂಗದ ಇತ್ತೀಚಿನ ಯುವಕರು ಯಾವ ಒಡವೆಗಳನ್ನೂ ಹಾಕಿಕೊಳ್ಳುತ್ತಿಲ್ಲ.

ಉದ್ಯೋಗ :

ಕರ್ನಾಟಕದಲ್ಲಿ ವಾಸಿಸುತ್ತಿರುವ ಹಗಲು ವೇಷದವರ ಮುಖ್ಯ ಕಸುಬುಗಳೆಂದರೆ ವೇಷ ಹಾಕಿಕೊಂಡು ಭಿಕ್ಷೆ ಬೇಡುವುದು. ಬೇಟೆ ಮತ್ತು ಪಶುಪಾಲನೆ, ಚಾಪೆ ಹೆಣೆಯುವುದು ಮತ್ತು ಬಲೆ ನೇಯುವುದು. ವೇಷಗಾರರು ಹಾಡು ಮತ್ತು ಮಾತುಗಳಿಂದ ಕೂಡಿದ ಸಂಗೀತ ಪ್ರಧಾನವಾದ ಕಥಾ ಸಂದರ್ಭಗಳನ್ನು ವೇಷ ಹಾಕಿ, ಅಭಿನಯಿಸಿ ಪ್ರದರ್ಶಿಸುತ್ತಾರೆ. ಇಬ್ಬರು ಅಥವಾ ಮೂವರು ಜನರು ಬೇರೆ ಬೇರೆ ವೇಷ ಧರಿಸಿದರೆ, ಒಬ್ಬರು ಹಾರ್ಮೋನಿಯಂ ಮತ್ತೊಬ್ಬರು ತಬಲಾ ಬಾರಿಸುತ್ತಾರೆ. ಪೌರಾಣಿಕ, ಐತಿಹಾಸಿಕ ಹಾಗೂ ರಾಮಾಯಣ, ಮಹಾಭಾರತಕ್ಕೆ ಸಂಬಂಧಪಟ್ಟಂತೆ ಹಲವಾರು ಅಣಕುಗಳನ್ನು ಪ್ರದರ್ಶಿಸುತ್ತಾರೆ.

ಈ ಜನಾಂಗದ ಎಲ್ಲರೂ ಒಂದೇ ರೀತಿಯ ಉದ್ಯೋಗ ಮಾಡುತ್ತಿಲ್ಲ. ಕೆಲವರಿಗೆ ಬೇಟೆ, ಮತ್ತೆ ಕೆಲವರಿಗೆ ಭಿಕ್ಷಾಟನೆ, ಇನ್ನು ಹಲವರಿಗೆ ವೇಷ ಧರಿಸಿ ಪ್ರದರ್ಶನ ನೀಡುವುದು ಹೀಗೆ ಅನೇಕ ರೀತಿಯ ಕಸುಬುಗಳನ್ನು ಇವರು ಹೊಂದಿದ್ದಾರೆ.

ಕಲೆ ಮತ್ತು ಸಾಹಿತ್ಯ :

ಈ ಜನಾಂಗ ಅಲೆಮಾರಿಗಳಾಗಿರುವುದರಿಂದ ಇವರ ಮಕ್ಕಳು ವಿದ್ಯಾಭ್ಯಾಸದಿಂದ ಸಂಪೂರ್ಣ ವಂಚಿತರಾಗಿದ್ದಾರೆ. ಜನರು ಕೇವಲ ಇವರನ್ನು ಭಿಕ್ಷುಕರಂತೆ ನೋಡುತ್ತಿದ್ದಾರೆ. ಈ ಜನಾಂಗದಲ್ಲಿ ಅಮೂಲ್ಯವಾದ ಸಾಹಿತ್ಯ, ಜಾನಪದ ಸಂಗೀತ, ಕಥನ ಗೀತೆಗಳು ಮೊದಲಾದ ಸಾಂಪ್ರದಾಯಿಕ ಮೂಲಗಳಿವೆ. ಅಲ್ಲದೇ ಈ ಜನಾಂಗದಲ್ಲಿ ಕಲೆಯೂ ಉತ್ತಮವಾಗಿದೆ. ಮದುವೆಯ ಸಂದರ್ಭದಲ್ಲಿ

ಹಾಕಲಾಗುವ ಕರಿಯ ಕಂಬಳಿಯ ಮೇಲಿನ ಗದ್ದಿಗೆಯ ಮೇಲೆ ಅಕ್ಕಿ ಹಸೆಯ ಅಚ್ಚು ವಿಶಿಷ್ಟವಾಗಿದೆ. ಈ ಅಕ್ಕಿ ಹಸೆಯ ಅಚ್ಚು ಈ ಜನಾಂಗದವರ ಕಲೆಯ ವೈವಿಧ್ಯತೆಯನ್ನು ಸಾದರಪಡಿಸುತ್ತದೆ. ಬುಡ್ಗ ಜನಾಂಗ ಅಥವಾ ಈ ಹಗಲು ವೇಷಗಾರರು ತಮ್ಮ ಸಾಂಪ್ರದಾಯಿಕ ವಾದ್ಯಗಳಿಂದ ತಮ್ಮ ವೃತ್ತಿಯ ಪ್ರದರ್ಶನ ಮಾಡುತ್ತಾ ಸಂಚರಿಸುತ್ತಾರೆ. ತಾವೇ ತಯಾರಿಸಿದ ವಿವಿಧ ಪ್ರಾಣಿ, ಪಕ್ಷಿಗಳ ಚರ್ಮಗಳಿಂದ ವಾದ್ಯಗಳನ್ನು ಇವರು ಬಳಸುತ್ತಾರೆ. ಅವುಗಳಲ್ಲಿ ಮುಖ್ಯವಾದವುಗಳು ತಂಬೂರಿ, ಗಗ್ಗರ ಹಾಗೂ ಬುಡಿಗೆಗಳು.

ಈ ಜನಾಂಗದಲ್ಲಿ ಮದುವೆ, ಸೀಮಂತ, ಸಾವು, ಹೆಣ್ಣುಮಕ್ಕಳು ಋತುಮತಿಯಾದಾಗ ಮಾಡುವ ಆಚರಣೆಗಳೆಲ್ಲವೂ ವಿಶೇಷವಾಗಿರುತ್ತವೆ. ಇವರ ಪ್ರದರ್ಶನಾತ್ಮಕ ಕಲೆಗಳು ಮೋಹಿನಿ, ಭಸ್ಮಾಸುರ, ಭೀಮ, ಆಂಜನೇಯ, ಅರ್ಧನಾರೇಶ್ವರ, ಜಂಗಮ, ದಾಸ, ಲಂಬಾಣಿ, ಪೋಲೀಸು, ಲವ-ಕುಶ ಮೊದಲಾದವು.

ಭಾಷೆ :

ಭಾರತದಲ್ಲಿ ಬಳಕೆಯಲ್ಲಿರುವ ಎಲ್ಲಾ ಭಾಷೆಗಳಿಗೂ ಲಿಪಿ ಇಲ್ಲ. ಅದೇ ರೀತಿ ಈ ಹಗಲು ವೇಷಗಾರರ ಭಾಷೆಗೂ ಲಿಪಿಯಿಲ್ಲ. ಆದುದರಿಂದ ಇವರ ಭಾಷೆಯನ್ನು ಆಡುಭಾಷೆ ಎಂದು ಪರಿಗಣಿಸಬಹುದಾಗಿದೆ. ಇವರ ಭಾಷೆಯಲ್ಲಿ ತೆಲುಗು ಭಾಷೆಯ ಪ್ರಭಾವ ಅಧಿಕವಾಗಿದೆ. ಇವರು ಬಳಸುವ ಭಾಷೆಯು ತನ್ನ ಮೂಲತ್ವದಿಂದ ತೆಲುಗಿ ಭಾಷೆಗೆ ಬದಲಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ತೆಲುಗು ಮಿಶ್ರಿತ ಭಾಷೆಯಾಗಿ ಇವರ ಭಾಷೆ ಹೊರಹೊಮ್ಮಿದ್ದು ಮೇಲುನೋಟಕ್ಕೆ ಗೋಚರಿಸಿದರೂ, ಇದು ತೆಲುಗು ಅಲ್ಲ. ತೆಲುಗು ಭಾಷೆಯ ಸ್ವರ, ಪ್ರತ್ಯಯಗಳೇ ಇವರ ಮೂಲಭಾಷೆಯಲ್ಲಿ ಕಂಡು ಬರುವುದರಿಂದ ಎರಡು ಭಾಷೆಗಳ ಸಮ್ಮಿಶ್ರತೆಯಲ್ಲಿ ಇವರ ಭಾಷೆಯನ್ನು ಸರಳವಾಗಿ ಅಧ್ಯಯನ ಮಾಡುವ ಕಷ್ಟಸಾಧ್ಯ.

ಸಾಮಾಜಿಕ ಸ್ಥಿತಿ-ಗತಿ :

ಬುಡ್ಗ ಜನಾಂಗವೆಂದು ಚಿರಪರಿಚಿತವಾಗಿರುವ ಈ ಹಗಲುವೇಷಗಾರರ ಜನಾಂಗದಲ್ಲಿ ಗುರು ಪರಂಪರೆಯಾಗಲೀ, ಮಠ ಮಾನ್ಯಗಳಾಗಲಿ ಇಲ್ಲ. ಆದ್ದರಿಂದ ಈ ಜನಾಂಗದವರಲ್ಲಿ ಒಂದು ಕೇಂದ್ರೀಕೃತವಾದ ಸಾಮಾಜಿಕ ವ್ಯವಸ್ಥೆ ಕಂಡು ಬರುವುದಿಲ್ಲ. ಇವರ ಸಾಮಾಜಿಕ ಸ್ಥಿತಿ-ಗತಿ ಬಹಳಷ್ಟು ಹೀನಾಯವಾಗಿದೆ. ಮೂಢ ನಂಬಿಕೆಗಳು, ಕಟ್ಟುಪಾಡುಗಳ ಆಚರಣೆಗಳೇ ಇವರ ಜೀವಾಳವಾಗಿವೆ. ಇವರ ಸಾಮಾಜಿಕ ವ್ಯವಸ್ಥೆಯಲ್ಲಿ ಹೊರಗಿನ ಪ್ರದೇಶದ ಜನರ ಪ್ರವೇಶ ನಿಷಿದ್ಧವಾಗಿದೆ.

'ಯಡವಲ್ಲಿ' ಮತ್ತು 'ಸಿರಿಸ್ಯಾಲ' ವಂಶದವರು ಇಲ್ಲಿನ ಜನಾಂಗದವರಲ್ಲಿ ಕೆಲವು ಸಂದರ್ಭಗಳಲ್ಲಿ ಮುಖ್ಯರಾಗುತ್ತಾರೆ. ಇವರು ಆ ಜನಾಂಗದಲ್ಲಿ ಒಂದು ರೀತಿಯ ಪುರೋಹಿತರಿದ್ದಂತೆ. ಜಾತಿ ಪದ್ಧತಿ ಇಲ್ಲಿ ಹೇರಳವಾಗಿದೆ. ಅಂತರ್ಜಾತಿ ವಿವಾಹಕ್ಕೆ ಆಸ್ಪದವಿಲ್ಲ. ತಪ್ಪಿತಸ್ಥರಿಂದ ದಂಡವನ್ನು ಹಣದ ರೂಪದಲ್ಲಿ

ಸಂಗ್ರಹಿಸಲಾಗುತ್ತದೆ. ಇಂತಹ ಹಣವನ್ನು ಕುಲದೈವದ ಬೇಟಿ ಎಂದು ಕರೆಯುವ ಹಬ್ಬದಲ್ಲಿ ಮಾಂಸದ ಊಟಕ್ಕೆ ಬಳಸುತ್ತಾರೆ. ಸಮಾಜದ ಹಣವನ್ನು ಯಾರೊಬ್ಬರೂ ಸ್ವಂತಕ್ಕೆ ಬಳಸುವುದಿಲ್ಲ. ಅವರ ಸಾಮಾಜಿಕ ವ್ಯವಸ್ಥೆ ಒಕ್ಕೂಟ ವ್ಯವಸ್ಥೆಯಾಗಿದ್ದರೂ ನ್ಯೂನ್ಯತೆಗಳಿಂದ ಹೊರತಾಗಿಲ್ಲ.

ಸಾಮಾನ್ಯವಾಗಿ ಬುಡಕಟ್ಟು ಜನಾಂಗದ ಸಮಾಜಗಳು ಹೊರ ಜಗತ್ತಿನ ಸಾಮಾಜಿಕ ಚೌಕಟ್ಟಿನಿಂದ ದೂರವಾಗಿರುತ್ತವೆ ಮತ್ತು ಭಿನ್ನವಾಗಿರುತ್ತವೆ. ಇದಕ್ಕೆ ಹಗಲುವೇಷಗಾರರ ಸಮುದಾಯದ ಸಾಮಾಜಿಕ ವ್ಯವಸ್ಥೆಯೂ ಹೊರತಾಗಿಲ್ಲ. ಹಗಲು ವೇಷಗಾರರ ಸಾಮಾಜಿಕ ವ್ಯವಸ್ಥೆಯು ಅನೇಕ ಕಟ್ಟುಪಾಡುಗಳಿಂದ ಕೂಡಿದೆ. ಇವರ ಸಮುದಾಯದಲ್ಲಿ ಎಲ್ಲವೂ ಕಟ್ಟು ನಿಟ್ಟಿನ ವ್ಯವಸ್ಥೆಯಿಂದ ಕೂಡಿರುತ್ತದೆಯಾದ್ದರಿಂದ ಇಲ್ಲಿ ಶಿಸ್ತಿಗೆ ಹೆಚ್ಚಿನ ಆದ್ಯತೆ ನೀಡಲಾಗಿರುತ್ತವೆ.

ಇಂದಿನ ಜಾಗತೀಕರಣದ ಕಾಲದಲ್ಲಿಯೂ ಈ ಬುಡಕಟ್ಟು ಜನಾಂಗದವರು ಹಿಂದಿನ ರೀತಿಯಲ್ಲಿಯೇ ಬದುಕುತ್ತಿದ್ದಾರೆ. ಅವರನ್ನು ಅಕ್ಷರಸ್ಥರನ್ನಾಗಿ ಮಾಡಿ, ಅವರ ಸೀಮಿತ ಚೌಕಟ್ಟಿನಿಂದ ಹೊರಗೆ ತರುವ ಕೆಲಸವನ್ನು ಮಾಡಬೇಕಾಗಿದೆ.

ಈ ಬುಡಕಟ್ಟಿನ ಜನ ಸಾಮಾಜಿಕ ಒಳಾಡಳಿತ ಪದ್ಧತಿ ಹೊಂದಿರುತ್ತಾರೆ. ತಮ್ಮ ಸಮಾಜದ ತಮ್ಮ ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ. ಸಮಾಜದ ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಹೋಗುವದು ಎಲ್ಲ ಮುಖ್ಯ ಗುರಿಯಾಗಿರುತ್ತದೆ.

ಇವರ ನ್ಯಾಯ ಪದ್ಧತಿಯಲ್ಲಿ ತಪ್ಪು ದಂಡದ, ದೈಹಿಕ ಶಿಕ್ಷೆಯ ಮೂಲಕ ತಪ್ಪಿತಸ್ಥನಿಗೆ ಶಿಕ್ಷೆ ವಿಧಿಸಲಾಗುತ್ತದೆ. ಸಮುದಾಯದ ನೀತಿ-ನಿಯಮುಗಳನ್ನು ಪಾಲಿಸದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಮುಖಂಡ ಅಥವಾ ನಾಯಕನೇ ನ್ಯಾಯ ಪಂಚಾಯಿತಿಯ ಮುಖ್ಯಸ್ಥನಾಗಿರುತ್ತಾನೆ. ಪ್ರತಿಯೊಬ್ಬರಿಗೂ ನ್ಯಾಯವನ್ನು ದೊರಕಿಸಿಕೊಡುವುದು ಪಂಚಾಯಿತಿ ವ್ಯವಸ್ಥೆ ಮುಖ್ಯ ಕರ್ತವ್ಯವಾಗಿರುತ್ತದೆ. ಇದನ್ನು ಎಲ್ಲ ಮುಖಂಡರು ಅಚ್ಚುಕಟ್ಟಾಗಿ ನೆರವೇರಿಸುತ್ತಾರೆ.

ಹಗಲು ವೇಷಗಾರರ ಪ್ರಸ್ತುತ ಸ್ಥಿತಿ-ಗತಿ :

ಪ್ರೊ. ಆರ್.ಎಸ್. ನಿಡೋಣಿ ಎಂಬುವರು ಈ ಹಗಲುವೇಷಗಾರರ ಬಗ್ಗೆ ಅಧ್ಯಯನ ಮಾಡಿ, ಆಧುನಿಕತೆಯ ಭರಾಟೆಯಲ್ಲಿ ಜನಪದ ಪರಂಪರೆಯ ಕೊನೆಯ ಕೊಂಡಿಗಳಾದ ಹಗಲು ವೇಷಗಾರರು ಮೂಲೆಗುಂಪಾಗಿ ನೆಲೆ ತಪ್ಪಿದ ಹಕ್ಕಿಗಳಾಗಿ ಬದುಕುವ ಸಲುವಾಗಿ ಹೋರಾಟ ಮಾಡುತ್ತಿದ್ದಾರೆಂದು ವಿಷಾದ ವ್ಯಕ್ತಪಡಿಸುತ್ತಾರೆ.

ಪತ್ರಿಕೆಯೊಂದರಲ್ಲಿ ಪ್ರೊ. ಆರ್.ಎಸ್. ನಿಡೋಣಿ ಅವರು ಬರೆದ ಲೇಖನವನ್ನೋದಿ ಕಾರ್ಯಕ್ಷೇತ್ರಕ್ಕೆಂದು ಕುಷ್ಟಗಿ ತಾಲೂಕಿನ ಹನುಮಸಾಗರಕ್ಕೆ ಹೋದಾಗ ಆ ಗ್ರಾಮದ ಶ್ರೀ ಶರಣ ಬಸವೇಶ್ವರ ಪ್ರೌಢಶಾಲೆಯ ಮುಂಭಾಗದ ಹೊಲದಲ್ಲಿ ಮೂರು ಟೆಂಟುಗಳನ್ನು ಹಾಕಿಕೊಂಡು ನೆಲೆ ನಿಂತ ಹಗಲು ವೇಷಗಾರರ ಕುಟುಂಬದ ಪರಿಚಯವಾಯಿತು. ಈ ಕುಟುಂಬದಲ್ಲಿ ಹುಸೇನ-ಜ್ಯೋತಿ

ಮತ್ತು ಹನುಮಂತ-ಸವಿತಾ ಎಂಬ ನವವಿವಾಹಿತ ದಂಪತಿಗಳಿದ್ದು, ಜ್ಯೋತಿಯವರ ತವರು ಮನೆ ಮುಧೋಳ ತಾಲೂಕಿನ ಮುಗಳಕೋಡ ಗ್ರಾಮ ಮತ್ತು ಸವಿತಾ ಅವರ ತವರು ಮನೆ ನಿಡಗುಂದಿ ಎಂದು ತಿಳಿದುಬಂದಿತು. ಇವರೆಲ್ಲ ಅಂಬಿಗ ಜಾತಿಯವರಾಗಿದ್ದು, ಇವರ ಪೂರ್ವಜರು ಆಂಧ್ರದಿಂದ ವಲಸೆ ಬಂದವರು.

ಬೆಳಿಗ್ಗೆ ೭ ಗಂಟೆಗೆ ಕೈ, ಮುಖ, ಮೈಗೆಲ್ಲ ಬಣ್ಣ ಹಚ್ಚಿಕೊಂಡು ಈ ಕುಟುಂಬದ ಐದು ಜನ ರಾಮ, ಲಕ್ಷ್ಮಣ, ಹನುಮಂತ, ರಾವಣನ ವೇಷಧಾರಿಗಳಾಗಿ ಪಟ್ಟಣದ ಬೀದಿ ಬೀದಿಗಳಲ್ಲಿ ಸಂಚರಿಸುತ್ತಾ, ಮನೆ-ಮನೆಗಳ ಮುಂದೆ ನಿಂತು ಹಾಡಿ, ಕುಣಿದು, ನಗಿಸಿ ದವಸ ಧಾನ್ಯಗಳನ್ನು, ದುಡ್ಡನ್ನು ಪಡೆಯುತ್ತಾರೆ. ಆದರೆ ಇತ್ತೀಚಿಗೆ ಪಟ್ಟಣದಲ್ಲಿ ನಮ್ಮ ಕಲೆಗೆ ಬೆಲೆಯೇ ಇಲ್ಲ. ನಮ್ಮನ್ನು ಅವಮಾನಿಸುತ್ತಾರೆ, ಕಡೆಗಣಿಸುತ್ತಾರೆ, ಬಾಯಿಗೆ ಬಂದಂತೆ ಬೈಯ್ಯುತ್ತಾರೆ ಎಂದು ಈ ಕುಟುಂಬದವರು ಬೇಸರ ವ್ಯಕ್ತಪಡಿಸುತ್ತಾರೆ.

ಅಲೆಮಾರಿಗಳಾದ ಹಗಲು ವೇಷಗಾರರು ಎರಡು ವರ್ಷಕ್ಕೊಮ್ಮೆ ಮಾತ್ರ ತಾವು ದೇಶದ ಯಾವುದೇ ಮೂಲೆಯಲ್ಲಿದ್ದರೂ ತಪ್ಪದೇ ಮೊಹರಂ ಹಬ್ಬದ ಸಮಯದಲ್ಲಿ ಕುದರಿಮೋತಿ ಗ್ರಾಮಕ್ಕೆ ಬರುತ್ತಾರೆ. ಅಲ್ಲಿ ಎಲ್ಲರೂ ಒಂದುಗೂಡುತ್ತಾರೆ. ನಂತರ ಮತ್ತೆ ಅಲೆಮಾರಿ ಬದುಕಿಗೆ ಮರಳುತ್ತಾರೆ.

ಇವರಿಗೆ ಸರಿಯಾದ ನೆಲೆಯಿಲ್ಲ, ಸರಕಾರದ ಸಹಾಯವಿಲ್ಲ. ಮತದಾರರ ಪಟ್ಟಿಯಲ್ಲಿ ಹೆಸರನ್ನು ಇವರು ಹೊಂದಿದ್ದರೂ ಮತದಾನದ ಸಮಯದಲ್ಲಿ ಮಾತ್ರ ಇವರನ್ನು ವಾಹನದಲ್ಲಿ ಕರೆದುಕೊಂಡು ಹೋಗಿ ಐವತ್ತೋ-ನೂರೋ ರೂಪಾಯಿಗಳನ್ನು ನೀಡಿ ಮತ್ತೆ ಮಾತನಾಡಿಸುವುದೇ ಇಲ್ಲ. ಇವರ ಬದುಕಿಗೆ, ಕಲೆಗೆ, ಬಣ್ಣಕ್ಕೆ ಪ್ರೋತ್ಸಾಹ ಮತ್ತು ನೆರವಿನ ಅಗತ್ಯತೆ ಇದೆ.

ಉಪಸಂಹಾರ :

ಒಟ್ಟಾರೆಯಾಗಿ ಬುಡ್ಗ ಜನಾಂಗವೆಂದು ಕರೆಯಲಾಗುವ ಹಗಲುವೇಷಗಾರರ ಜೀವನ ಕ್ರಮ, ಹಿನ್ನೆಲೆಯನ್ನು ನೋಡಲಾಗಿ ಅವರು ಅನಕ್ಷರಸ್ಥರು, ಅನೇಕ ಕಟ್ಟುಪಾಡುಗಳ ನಂಬಿಕೆಗೆ ಜೋತು ಬಿದ್ದ ಜನಾಂಗದವರು ಎಂದು ಮೇಲುನೋಟಕ್ಕೆ ಗೋಚರವಾದರೂ ಅವರಲ್ಲಿ ಅಮೂಲ್ಯವಾದ ಜಾನಪದ ಸಂಪತ್ತು ಇದೆ. ಇವರು ಹಾಡುವ ಕಥನ ಗೀತಗಳು ಹಾಗೂ ಬುರ್ರಕಥದಂಥ ಸಾಂಪ್ರದಾಯಿಕ ಹಾಡುಗಳ ಧ್ವನಿಯನ್ನು ಮುದ್ರಿಸಿ ಸಂಗ್ರಹಿಸಬೇಕಾದ ಅನಿವಾರ್ಯತೆ ಇದೆ.

ಬುಡ್ಗ ಜಂಗಾಲು ಜನಾಂಗ ಎಲ್ಲೂ ನೆಲೆ ನಿಲ್ಲದೇ ಸದಾ ಅಲೆಮಾರಿಗಳಾಗಿರುವುದರಿಂದ ಇವರಿಗೆ ಮತ್ತು ಅವರು ಅನಕ್ಷರಸ್ಥರಾಗಿರುವುದರಿಂದ ಅವರಲ್ಲಿನ ಅಪಾರ ಸಾಹಿತ್ಯ ನಶಿಸಿ ಹೋಗುವ ಸಾಧ್ಯತೆಗಳು ಹೆಚ್ಚಿವೆಯಾದ್ದರಿಂದ ಅವುಗಳನ್ನು ಸಂರಕ್ಷಿಸುವ ಕಾರ್ಯವಾಗಬೇಕಾಗಿದೆ.

ಅವರಲ್ಲಿನ ಸಾಹಿತ್ಯ, ಕಲೆ, ಕತೆ ಹೇಳುವ ಶೈಲಿ, ಹಾಡುಗಾರಿಕೆ ಅವರ ಹಿಂದೆಯೇ ಹೋಗಲಾರದೇ ಶಾಶ್ವತವಾಗಿ ಉಳಿದು ಮುಂದಿನ ಜನಾಂಗಕ್ಕೆ ದೊರಕುವಂತಾದರೆ ಅದರ ಪ್ರಯೋಜನವಾಗಬಹುದಾಗಿದೆ. ಆ ದಿಸೆಯಲ್ಲಿ ಅವರ ಸಾಹಿತ್ಯ, ಕಲೆಗಳಿಗೆ ಸಾಧ್ಯವಾದಷ್ಟು ರಕ್ಷಣೆ

ಒದಗಿಸಬೇಕಾಗಿದೆ.

ಅವರ ಅಲೆಮಾರಿ ಬದುಕು ಕೊನೆಯಾಗಿ ಬದಲಾದ ಕಾಲಚಕ್ರಕ್ಕೆ ತಕ್ಕಂತೆ ಒಂದೆಡೆ ನೆಲೆ ನಿಂತು ತಮ್ಮ ಮೂಲ ಕಸುಬು, ಹಾಡುಗಾರಿಕೆ ಬಿಟ್ಟು ಆಧುನಿಕತೆಯ ಕಾಲದಲ್ಲಿ ಬೇರೆ ಬೇರೆ ಉದ್ಯೋಗಗಳನ್ನು ಅರಸಿಕೊಂಡು ಹೋಗುತ್ತಿರುವುದು ಇತ್ತೀಚಿಗೆ ಈ ಜನಾಂಗದಲ್ಲಿಯೂ ಕಂಡು ಬರುತ್ತಿರುವುದರಿಂದ ಅವರಲ್ಲಿನ ಅಗಾಧ ಪ್ರತಿಭೆ, ಸಾಹಿತ್ಯ, ಕಲೆ, ಹಾಡುಗಾರಿಕೆ ಮರೆಯಾಗಬಹುದಾಗಿದೆ. ಆದ್ದರಿಂದ ಇವರ ಸಾಹಿತ್ಯ, ಕಲೆ ಪೋಷಣೆಯಾಗಬೇಕಾಗಿದೆ. ಇವರ ಕಲೆಗಾಗಲೀ, ಸಾಹಿತ್ಯಕ್ಕಾಗಲೀ ಸರಕಾರದಿಂದ ಯಾವುದೇ ರೀತಿಯ ಮಾನ್ಯತೆ, ಗೌರವ ದೊರಕುತ್ತಿಲ್ಲವಾದ್ದರಿಂದ ಮತ್ತು ಇವರನ್ನು ಭಿಕ್ಷುಕರಂತೆ ಮನಗಂಡು ಅವರ ಮನಸ್ಸಿಗೆ ನೋವಾಗುವಂತೆ ಬೈಗುಳಗಳಿಂದ ಮಾತನಾಡುತ್ತಿರುವುದು ಅವರ ಕೊರಗಿಗೆ ಕಾರಣವಾಗಿದೆ ಎನ್ನಬಹುದು.

ಇವರ ವೇಷಭೂಷಣದ ಪರಿಕರಗಳು, ಬಣ್ಣ, ಕುಲಾಯಿ, ಬಣ್ಣ ತಯಾರಿಸುವ ಎಲೆಗಳ ತಯಾರಿಕೆಯಲ್ಲಿ ಸಸ್ಯಗಳ ಮಹತ್ವವನ್ನು ಅರಿತ ಇವರಲ್ಲಿ ಆಯುರ್ವೇದದ ಜ್ಞಾನವಿದೆ. ಕಾಡು-ಮೇಡುಗಳಲ್ಲಿ ಅಲೆದಾಡುವುದರಿಂದ ಇವರಿಗೆ ವಿಶಿಷ್ಟ ವಿಶೇಷ ಸಸ್ಯಗಳ ಪರಿಚಯವಿದೆ. ಅವುಗಳ ಪ್ರಯೋಜನವನ್ನು ವೈದ್ಯಕೀಯ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಲು ಈ ಬುಡಕಟ್ಟು ಜನಾಂಗಕ್ಕೆ ಸೇರಿದ ಹಗಲುವೇಷಗಾರರ ಸಹಾಯ ಪಡೆದುಕೊಂಡರೆ ತಪ್ಪೇನಿಲ್ಲ.

ಹೀಗೆ ವಿವಿಧ ರೀತಿಯಲ್ಲಿ ತನ್ನದೇ ಆದ ವೈಶಿಷ್ಟ್ಯ ಮತ್ತು ವಿಭಿನ್ನತೆಯನ್ನು ಹೊಂದಿದ ಹಗಲು ವೇಷದವರ ಸಮುದಾಯದ ಜನತೆ ಕುದುರಿಮೋಡಿ ಮೊಹರಂ ಹಬ್ಬದಲ್ಲಿ ಭಾಗಿಗಳಾಗಿ ತಮ್ಮ ಭಕ್ತಿಯ ಪರಾಕಾಷ್ಠೆ ಮೆರೆದು ಮತ್ತೆ ಅಲೆಮಾರಿ ಬದುಕಿಗೆ ಸಾಗುತ್ತಾರೆ.

ಸುಡುಗಾಡು ಸಿದ್ಧರು

ಮೊಹರಂ ಹಬ್ಬಕ್ಕೆ ಆಗಮಿಸುವ ಹಲವು ಅಲೆಮಾರಿ ಜನಾಂಗದವರಲ್ಲಿ 'ಸುಡುಗಾಡು ಸಿದ್ಧರು' ಒಬ್ಬರಾಗಿದ್ದಾರೆ. ಮೊದಲಿಗೆ ಸುಡುಗಾಡು ಸಿದ್ಧರ ಹಿನ್ನೆಲೆಯತ್ತ ನೋಡಿದರೆ ಇವರು ಆಂಧ್ರದ ಮೂಲದವರೆನ್ನಲಾಗುತ್ತಿದೆ. ಗುಂಪು-ಗುಂಪಾಗಿ ತಿರುಗಾಡುವ ಸುಡುಗಾಡು ಸಿದ್ಧರು ಹೊಟ್ಟೆಪಾಡಿಗಾಗಿ ಅಲೆದಾಡುತ್ತ ಕರ್ನಾಟಕಕ್ಕೂ ಕಾಲಿಟ್ಟರು. ಬಿಜಾಪುರ, ಗುಲಬರ್ಗಾ, ಬಳ್ಳಾರಿ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಇವರು ವಾಸವಾಗಿರುವುದು ತಿಳಿದು ಬಂದಿದೆ. ಕರ್ನಾಟಕದ ಇನ್ನೂ ಅನೇಕ ಕಡೆ ವಾಸವಾಗಿರುವ ಕುರುಹುಗಳಿದ್ದರೂ ಹೆಚ್ಚಾಗಿ ವಾಸವಾಗಿದ್ದುದು ಈ ಮೇಲ್ಕಾಣಿಸಿದ ಜಿಲ್ಲೆಗಳಲ್ಲಿಯೇ.

ಸುಡುಗಾಡು ಸಿದ್ಧರು ವಾಸವಾಗಿರುವ ಯಾವುದೇ ಹಟ್ಟಿಗೂ ನಿರ್ದಿಷ್ಟ ಹಾಗೂ ಪ್ರತ್ಯೇಕ ಹೆಸರುಗಳಿರುವುದು ಕಾಣಸದು. ಸಾಮಾನ್ಯವಾಗಿ ಅವರು ವಾಸಿಸುವ ಸ್ಥಳಗಳ ಹೆಸರುಗಳಿಂದಲೇ ಅವರು ಪರಿಗಣಿಸಲ್ಪಡುತ್ತಾರೆ. ಅವರು ಸಾಮಾನ್ಯವಾಗಿ ಊರಿನ ಹೊರಗಡೆ ವಾಸವಾಗಿರುತ್ತಾರೆ. ಸುಡುಗಾಡು ಸಿದ್ಧರು ಮೂಲತಃ ಅಲೆಮಾರಿಗಳು. ಆದರೆ ಈಗ ಕೆಲವರು ತಮ್ಮದೇ ಆದ ನಿರ್ದಿಷ್ಟ ಸ್ಥಳವನ್ನು ಹೊಂದಿದ್ದು ಒಂದೆಡೆ ಜೀವಿಸುತ್ತಿದ್ದಾರೆ. ಸುಗ್ಗಿ ಹಾಗೂ ಕೆಲವು ಧಾರ್ಮಿಕ ಹಬ್ಬಗಳ ಸಂದರ್ಭಗಳಲ್ಲಿ ಸುಡುಗಾಡು ಸಿದ್ಧರು ಊರಿಂದೂರಿಗೆ ಸಂಚರಿಸಿ, ಡೇರೆ ಹಾಕಿ ಬದುಕುವುದು ಈಗಲೂ ಕಂಡುಬರುತ್ತಿದೆ.

ಅಲೆಮಾರಿಗಳಾದ ಸುಡುಗಾಡು ಸಿದ್ಧರು ಅತ್ಯಲ್ಪ ಜನಸಂಖ್ಯೆ ಹೊಂದಿದ್ದಾರೆ. ''ಎಲ್.ಜಿ. ಹಾವನೂರ ಅವರು ೧೯೬೧ ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಸುಡುಗಾಡು ಸಿದ್ಧರ ಜನಸಂಖ್ಯೆ ಕೇವಲ ೩,೧೨೩ ಎಂದು ಅಂದಾಜು ಮಾಡಿದ್ದಾರೆ''[೪]. ೧೯೮೧ ರ ಭಾರತದ ಜನಗಣತಿ ವರದಿ ಪ್ರಕಾರ ಇವರ ಸಂಖ್ಯೆ ೧೧,೧೧೬ ಎಂದು ದಾಖಲಾಗಿದೆ. ಇದರಲ್ಲಿ ೫,೬೪೧ ಗಂಡಸರು ಮತ್ತು ಹೆಂಗಸರು ೪,೪೬೫ ಎಂದು ಹೇಳಲಾಗಿದೆ. ಕೆಲವು ಹಿರಿಯ ಸುಡುಗಾಡು ಸಿದ್ಧರು ತಮ್ಮ ಜನಾಂಗದ ಜನಸಂಖ್ಯೆ ಸುಮಾರು ೧೫ ರಿಂದ ೨೦ ಸಾವಿರ ಎಂದು ಹೇಳುತ್ತಾರೆಯೇ ಹೊರತು ಖಚಿತವಾಗಿ ಗೊತ್ತಾಗಿಲ್ಲ. ೧೯೯೧ ರ ಜನಗಣತಿ ವರದಿ ಪ್ರಕಾರವೂ ಸುಡುಗಾಡು ಸಿದ್ಧರ ಸಂಖ್ಯೆ ನಿಖರವಾಗಿ ಅಳೆಯಲು ಸಾಧ್ಯವಾಗಿಲ್ಲ. ಅಂದಾಜಿನ ಪ್ರಕಾರ ಇಂದಿನ ಸುಡುಗಾಡು ಸಿದ್ಧರ ಜನಸಂಖ್ಯೆ ೨೫ ಸಾವಿರ ಇರಬಹುದು.

ಯಾವುದೇ ಒಂದು ಉಪಸಂಸ್ಕೃತಿಯ ಅಧ್ಯಯನದಲ್ಲಿ ಆ ಸಂಸ್ಕೃತಿಯ ಜನತೆಯ ವಾಸಿಸುವ ಸುತ್ತಮುತ್ತಲ ಪರಿಸರ, ವಾಸಪ್ರದೇಶ, ಪರಂಪರೆ, ಸಮಾಜ ರಚನೆ, ಸಾಮಾಜಿಕ ಸ್ಥಾನಮಾನ, ಸಂಪ್ರದಾಯ, ರೀತಿ-ರಿವಾಜು, ವೇಷ-ಭೂಷಣ, ಕುಲ-ಕಸುಬು, ಜನನ-ಮರಣ, ಮದುವೆ, ಆಹಾರ ಪದ್ಧತಿ, ಭಾಷೆ, ಕಲೆ-ಸಾಹಿತ್ಯ ಮುಂತಾದವುಗಳನ್ನು ಗಮನಿಸಬೇಕಾದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸುಡುಗಾಡು ಸಿದ್ಧರ ಕುರಿತಾದ ಅಧ್ಯಯನವೂ ಒಂದು ಮಹತ್ವದ್ದಾಗಿರುವುದರಿಂದ ನನ್ನ ಸಂಶೋಧನಾ ವ್ಯಾಪ್ತಿಯಲ್ಲಿ ಅವರ ಬಗೆಗಿನ ವಿಶ್ಲೇಷಣೆ ಮಾಡಿದ್ದೇನೆ.

ಹಿನ್ನೆಲೆ :

ಪ್ರತಿಯೊಂದು ಜಾತಿ-ಜನಾಂಗಗಳ ಮೂಲ ಇಲ್ಲವೆ ವಂಶೋತ್ಪತ್ತಿಯ ಬಗೆಗೆ ಸಾಮಾನ್ಯವಾಗಿ ಅವರಲ್ಲಿ ಪ್ರಚಲಿತವಿರುವ ಜನಪದ ಕತೆಗಳು, ಐತಿಹ್ಯಗಳು ಮತ್ತು ಪೌರಾಣಿಕಾಂಶಗಳನ್ನು ಪರಿಶೀಲಿಸಬೇಕಾಗುತ್ತ. ಇವುಗಳಿಂದ ಸತ್ಯಾಸತ್ಯತೆಗಳನ್ನು ನಿರ್ಧರಿಸುವುದು ಕಷ್ಟವಾದರೂ ನಿರ್ದಿಷ್ಟ ದಾಖಲೆಗಳಿಲ್ಲದಿರುವಾಗ ಅವುಗಳನ್ನೇ ಆಧಾರವಾಗಿಟ್ಟುಕೊಂಡು ಪರಾಮರ್ಶಿಸದರೆ ಕೆಲವು ಸತ್ಯ ಸಂಗತಿಗಳನ್ನು ಕಂಡುಕೊಳ್ಳಬಹುದು. ಸುಡುಗಾಡು ಸಿದ್ದರು ತಮ್ಮ ಜನಾಂಗದ ಮೂಲವನ್ನು ವಿವಿಧ ರೀತಿಯಲ್ಲಿ ಗುರುತಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸುಡುಗಾಡು ಸಿದ್ಧರ ಮೂಲದ ಬಗೆಗಿನ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

ಪೌರಾಣಿಕವಾಗಿ ಹಿನ್ನೆಲೆಯನ್ನು ಗಮನಿಸಬಹುದಾದರೆ ''ಈಶ್ವರ ತಪಸ್ಸು ಮಾಡುವಾಗ ಅವನ ಸೇವೆಗಾಗಿ ಪಾರ್ವತಿ ಈ ನವಕೋಟಿ ಸಿದ್ಧರನ್ನು ಸೃಷ್ಟಿಸಿದಳೆಂದೂ, ಆ ಕಾರ್ಯ ಮುಗಿದ ನಂತರ ವಿಭೂತಿ, ಕಾವಿ, ಕಮಂಡಲ, ರುದ್ರಾಕ್ಷಿ, ಶಿವಗಂಟೆಯನ್ನು ಕೊಟ್ಟು ಭೂಲೋಕಕ್ಕೆ ಕಳುಹಿಸಿದಳೆಂದೂ ಹೇಳುತ್ತಾರೆ''[೫]. (ನೆಲ್ಲಿಸರ : ೧೯೮೪ : ೧)

ನಮ್ಮ ರಾಜ್ಯದಲ್ಲಿ ವಾಸವಾಗಿರುವ ಅನೇಕ ಬುಡಕಟ್ಟು ವಿಭಿನ್ನ ಅಲೆಮಾರಿ ಜನಾಂಗದವರಲ್ಲಿ ಸುಡುಗಾಡು ಸಿದ್ಧರು ಒಬ್ಬರಾಗಿದ್ದಾರೆ. ಕರ್ನಾಟಕದಲ್ಲಿ ಅವರನ್ನು ಸಿದ್ಧರು, ಸುಡುಗಾಡು ಸಿದ್ಧರು, ಮಸಣದ ಸಿದ್ಧರು, ಬೈರಾಗಿಗಳು, ಬಹುರೂಪಿಗಳು, ವೇಷಗಾರರು, ಬಾಳ ಸಂತೋಷಿಗರು, ಮಸಣದ ಜೋಗಿಗಳು ಹೀಗೆ ಹಲವಾರು ಹೆಸರುಗಳಿಂದ ಕರೆಯಲಾಗುತ್ತಿದೆ. ಬಹು ವಿದ್ವಾಂಸರ ಅಭಿಪ್ರಾಯವನ್ನು ಒಪ್ಪುವುದಾದರೆ ಇವರು ಮೂಲತಃ ಆಂಧ್ರ ಪ್ರದೇಶದವರು. ಇವರು ತಮ್ಮನ್ನು 'ತೆಲುಗು ಜಂಗಮ'ರೆಂದು ಕರೆದುಕೊಳ್ಳುತ್ತಾರೆ. ಕೆಲವರು ಇವರನ್ನು 'ಕಾಡುಪಾಪ'ರೆಂದು ಕರೆದಿದ್ದಾರೆ.

ಸುಡುಗಾಡು ಸಿದ್ಧರದು ಪ್ರತ್ಯೇಕ ಜಾತಿಯಾಗಿದೆ. ಈ ಜನರು ಸ್ಮಶಾನದಲ್ಲಿ ಸಂಚರಿಸಿ ಮಾಟ-ಮಂತ್ರ ಮತ್ತು ಇಂದ್ರಜಾಲಕ್ಕೆ ಅನುಕೂಲವಾಗುವ ಮಾನವನ ಎಲುಬುಗಳನ್ನು ಸಂಗ್ರಹಿಸುತ್ತ ಆ ಸ್ಥಳದ ಶಕ್ತಿಯನ್ನು ಪಡೆದುಕೊಂಡವರಾಗಿರುತ್ತಾರೆ. ಇನ್ನೊಂದು ಅರ್ಥದಲ್ಲಿ ಈ ಜನರು ಸ್ಮಶಾನದ ಒಡೆಯನಾದ ಶಿವನ ಆರಾಧಕರಾಗಿದ್ದಾರೆ. ತಮ್ಮ ಜೀವನೋಪಾಯಕ್ಕಾಗಿ ಶಿಳ್ಳೇಕ್ಯಾತರಂತೆ, ಗೊಂಬೆಯಾಟಗಳನ್ನೂ ಪ್ರದರ್ಶಿಸುತ್ತಾರೆ. ಸ್ಪಷ್ಟವಾಗಿ ಹೇಳಬೇಕೆಂದರೆ ಅವರು ಜೋಗಿಗಳ ಒಳಪಂಗಡಕ್ಕೆ ಸಂಬಂಧಪಟ್ಟವರು.

''ಸಿದ್ಧರ ಪೂರ್ವಜರು ಭೂತ ಮತ್ತು ಭವಿಷ್ಯಗಳನ್ನು ತಿಳಿದವರೆಂದು ಹೇಳಲಾಗುತ್ತದೆ. ಇವರು ಕಾಲಜ್ಞಾನವನ್ನು ಚೆನ್ನಾಗಿ ಬಲ್ಲವರೆಂದು ತಿಳಿದು ಬರುತ್ತದೆ. ಸತ್ತವರನ್ನೂ ಸಹ ತಮ್ಮ ಮಂತ್ರಶಕ್ತಿಯಿಂದ ಬದುಕಿಸಬಲ್ಲವರಾಗಿದ್ದರೆಂದು ಪೌರಾಣಿಕ ಮೂಲಗಳು ತಿಳಿಸುತ್ತವೆ. ದೆವ್ವ, ಭೂತ, ಪೀಡೆ, ಪಿಶಾಚಿಗಳನ್ನು ಬಿಡಿಸಬಲ್ಲವರಾಗಿದ್ದು, ನೂರಾರು ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದರು. ಸದಾ ಊರ ಹೊರಗಿನ ಸ್ಮಶಾನದಲ್ಲಿದ್ದು, ಕೆಲವರು ಅವರ ಕಾವಲುಗಾರರೂ ಆಗಿದ್ದು ತಾವು ಹರಿಶ್ಚಂದ್ರನ ಪರಂಪರೆಯವರೆಂದೂ ಹೇಳುತ್ತಾರೆ''[೬].

ಇನ್ನೊಂದು ಮೂಲದ ಪ್ರಕಾರ ಸುಡುಗಾಡು ಸಿದ್ದರು ಕುರುಬ ಸಂತತಿಯ ಮತ್ತೊಂದು ರೂಪ ಎನ್ನಲಾಗುತ್ತದೆ. ರಾಮಾಯಣ ಮತ್ತು ಮಹಾಭಾರತಗಳಲ್ಲದೇ ಪುರಾಣ ಮತ್ತು ಕಾವ್ಯಗಳಲ್ಲಿಯೂ ಸಿದ್ದರ ಬಗ್ಗೆ ಉಲ್ಲೇಖಗಳು ಕಂಡು ಬಂದಿವೆ. ಸುಡುಗಾಡು ಸಿದ್ದರು ತಮ್ಮನ್ನು ಶಿವನ ವಂಶಸ್ಥರೆಂದು ಹೇಳಿಕೊಳ್ಳುತ್ತಾರೆ.

ಸುಡುಗಾಡು ಸಿದ್ದರ ಹಿನ್ನೆಲೆಯ ಕುರಿತಾಗಿ ಪೌರಾಣಿಕ ಕತೆಗಳಿಂದ ಹಿಡಿದು, ಶಬ್ದನಿಷ್ಪತ್ತಿಯವರೆಗೆ ಹಲವಾರು ಕತೆಗಳು, ಐತಿಹ್ಯಗಳು, ಅಭಿಪ್ರಾಯಗಳು ವ್ಯಕ್ತವಾಗಿದ್ದರೂ, ಇವರು ಮೂಲತಃ ಆಂಧ್ರದವರೆಂದು ಬಹುವಿದ್ವಾಂಸರ ಅಭಿಪ್ರಾಯವಾಗಿದೆ.

ಶಬ್ದಾರ್ಥದಲ್ಲಿ 'ಸುಡುಗಾಡು ಸಿದ್ದರು' :

'ಸುಡುಗಾಡು' ಎಂಬ ಹೆಸರು ಶವಗಳನ್ನು ಸುಡುವ ಸ್ಥಳವೆಂದೂ, 'ಸಿದ್ದ' ಎಂದರೆ ತನ್ನದೇ ಆದ ವಸ್ತುವಿನ ಬಯಕೆಯನ್ನು ಈಡೇರಿಕೊಂಡವನು ಎಂದರ್ಥ. ಒಂದು ಕಾಲಕ್ಕೆ ಇವರು ಸುಡುವ ಸ್ಥಳದ ಮಾಲೀಕರಾಗಿದ್ದರು. ಕುವಾಡಿಗಳು ಶವದ ಬಟ್ಟೆಯನ್ನು ಪಡೆಯುವುದರ ಜೊತೆಗೆ ಶವ ಸಂಸ್ಕಾರದ ಶುಲ್ಕವನ್ನು ಸಹಿತ ತೆಗೆದುಕೊಳ್ಳುತ್ತಿದ್ದರು. ಈ ಜನರು ಗಂಗಾಡಿಕರ ಒಕ್ಕಲು ಜಾತಿಯ ಏಜೆಂಟರಾಗಿದ್ದು ಸುಡುಗಾರು ಸಿದ್ದರ ಹೆಸರಿನಲ್ಲಿ ಬರೆಯಲ್ಪಡುತ್ತಾರೆ.

ಹೆಸರೇ ಸೂಚಿಸುವಂತೆ ಇವರು ಸುಡುಗಾಡಿನಲ್ಲಿ (ಸ್ಮಶಾನ) ವಾಸ ಮಾಡುವವರು. ಹೆಣ ಹೂಳುವುದು, ಸುಡುವುದು ಇವರ ಕಾಯಕವಾಗಿದೆ. ಇವರು ಸುಡುಗಾಡಿನಲ್ಲಿ ಕೆಲವು ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದರಿಂದ ಇವರನ್ನು ಸುಡುಗಾಡು ಸಿದ್ದರು ಎಂದು ಕರೆಯಲಾಗಿದೆ. ಸುಡುಗಾಡು (ಸ್ಮಶಾನ) ಹಲವು ರೀತಿಯ ಯಕ್ಷವಿದ್ಯೆಗಳಾದ ಮಾಯ, ಮಾಟ, ಮಂತ್ರ, ಯಕ್ಷಿಣಿ, ಇಂದ್ರಜಾಲಗಳನ್ನು ಕಲಿಯಲು ಪ್ರಶಸ್ತವಾದ ಸ್ಥಳ ಎಂಬುದು ಇವರ ಹೇಳಿಕೆಯಾಗಿದೆ. ಜಾದೂ ಮೂಲಕ ಮನರಂಜನೆ ನೀಡುವುದು ಅವರ ಅಂದಿನ ಉದ್ದೇಶವಾಗಿತ್ತು. ಆದರೆ ಈಗ ಜಾದೂ ಈಗ ಹವ್ಯಾಸಿ ಕಲೆಯಾಗಿ ಮಾರ್ಪಾಟಾಗಿದೆ.

ಒಟ್ಟಾರೆಯಾಗಿ ಸುಡುಗಾಡು ಸಿದ್ದರು ಸ್ಮಶಾನ ಕಾಯುವವರು. ಸ್ಮಶಾನದಲ್ಲಿ ಹೆಣ ಹೂಳುವ, ಸುಡುವ ಕಾಯಕ ಮಾಡುತ್ತ, ಹಲವು ರೀತಿಯ ವಿದ್ಯೆಗಳನ್ನು ಕರಗತ ಮಾಡಿಕೊಂಡು ಸಿದ್ದತ್ವ ಪಡೆದುಕೊಂಡಿದ್ದಕ್ಕೆ ಶಬ್ದೋತ್ಪತ್ತಿಯ ಪ್ರಕಾರ ಇವರನ್ನು ಸುಡುಗಾಡು ಸಿದ್ದರು ಎಂದು ಕರೆದಿರುವ ಸಾಧ್ಯತೆಗಳು ಹೆಚ್ಚಿವೆ.

ಸುಡುಗಾಡು ಸಿದ್ದರು ಹೆಚ್ಚಾಗಿ ಕಂಡು ಬರುವ ಪ್ರದೇಶಗಳು :

ಕರ್ನಾಟಕದಲ್ಲಿ ಸುಡುಗಾಡು ಸಿದ್ದರ ಪ್ರಮುಖ ತಾಣಗಳೆಂದು ಕೊಪ್ಪಳ, ಬಿದರೆಟ್ನಾಳ, ಕೆಲಕೋರಿ, ಓಬಳಾಪುರ, ಹಂಪಾಪಟ್ಟಣ, ನಿಡಗುಂದಿ, ಬಿಜಾಪುರ, ಗೆದ್ದಲಮರಿ, ಧಾರವಾಡ, ಮಿಣಜಗಿ, ಕೂಡ್ಲಿಗಿ, ರಾಯಚೂರು, ಗಂಗಾವತಿ, ಗಾಣಗಾಪುರ, ಗುಲಬರ್ಗಾ, ಹಾಸನ,

ಚಿಕ್ಕಮಗಳೂರು, ಶಿವಮೊಗ್ಗ, ಬಳ್ಳಾರಿ, ದಕ್ಷಿಣ ಕನ್ನಡ, ಚಳ್ಳಕೆರೆ, ಕುಷ್ಟಗಿ ಇತ್ಯಾದಿ. ಇವರು ಆಂಧ್ರ ಮೂಲದವರಾಗಿದ್ದರೂ ಆಹಾರ ಅರಸುತ್ತ ಕರ್ನಾಟಕಕ್ಕೂ ಕಾಲಿಟ್ಟರು. ಅಲೆಮಾರಿಗಳಾಗಿ ಅಲ್ಲಿಂದಿಲ್ಲಿಗೆ ನಡೆದಾಡುತ್ತ ಹೊಟ್ಟೆಪಾಡಿಗಾಗಿ ಭಿಕ್ಷಾಟನೆ ಮಾಡುತ್ತ ಕಾಲ ಕಳೆದವರು.

ಸುಡುಗಾಡು ಸಿದ್ದರನ್ನು ಕುದರಿಮೋತಿ ಗ್ರಾಮದ ಮೊಹರಂ ಹಬ್ಬದ ಸಂದರ್ಭದಲ್ಲಿ ಹತ್ತಿರದಿಂದ ಅಧ್ಯಯನ ಮಾಡಲಾಗಿ ಅವರು ಮೂಲತಃ ಆಂಧ್ರದವರೆಂಬ ವಿದ್ವಾಂಸರ ಮಾತನ್ನು ಒಪ್ಪುವಂತೆ ಮಾಡಿದೆ. ಬಹುಪಾಲು ಜನ ತೆಲುಗು ಭಾಷೆಯನ್ನು, ತೆಲುಗರ ವೇಷ-ಭೂಷಣವನ್ನು, ತೆಲುಗರ ಜೀವನ ಕ್ರಮವನ್ನು ಅನುಸರಿಸುತ್ತಿರುವುದು ಈ ಮಾತಿಗೆ ಪುಷ್ಟಿ ನೀಡುತ್ತದೆ.

ಸುಡುಗಾಡು ಸಿದ್ದರು ಹೆಚ್ಚಾಗಿ ತೆಲುಗು ಭಾಷಾ ಪ್ರದೇಶಗಳಿಂದ ಕನ್ನಡ ನಾಡಿಗೆ ವಲಸೆ ಬಂದಿದ್ದು ಕೆಲವು ಪ್ರದೇಶಗಳಲ್ಲಿ ಸಾಕಷ್ಟು ಪ್ರಬಲರಾಗಿರುವುದು ಕಂಡು ಬರುತ್ತದೆ. ಆಂಧ್ರ ಪ್ರದೇಶದ ತೆಲಂಗಾಣದಲ್ಲಿ ಇವರ ಜನಾಂಗ ಸಾಕಷ್ಟು ಸಂಖ್ಯೆಯಲ್ಲಿ ಕಾಣಸಿಗುತ್ತದೆ.

ಜೀವನ ಪದ್ಧತಿ :

ಅಲೆಮಾರಿ ಸುಡುಗಾಡು ಸಿದ್ದರು ಹೆಚ್ಚಾಗಿ ಸಾರಾಯಿಯ ಆರಾಧಕರಾಗಿರುವುದರಿಂದ ಹೆಚ್ಚಾಗಿ ಈಚಲು ಮರಗಳಿದ್ದಲ್ಲಿಯೇ ಬೀಡು ಬಿಡುವುದು ಹೆಚ್ಚಾಗಿ ಕಂಡು ಬರುತ್ತದೆ. ಈಚಲು ಮರಗಳಿಂದ ಇವರಿಗೆ ಎರಡು ರೀತಿಯ ಅನುಕೂಲ. ಒಂದು ಗಂಡಸರಿಗೆ ಉಚಿತವಾಗಿ ಸಾರಾಯಿ ಸಿಗುತ್ತದೆ. ಹೆಂಗಸರಿಗೆ ಚಾಪೆ ಹೆಣೆಯಲು ಸಹಾಯಕವಾಗುತ್ತದೆ. ಹೀಗಾಗಿ ಇವರು ಈಚಲು ಮರಗಳ ಪ್ರದೇಶಗಳನ್ನೇ ಆಶ್ರಯಿಸುತ್ತಾರೆ.

ಇವರ ಮನೆಗಳು ತಾತ್ಕಾಲಿಕವಾದ ಡೇರೆಗಳು, ಗುಡಿಸಲುಗಳು. ಹಗುರವಾದ ಸಲಕರಣೆಗಳನ್ನು ಬಳಸಿ ಭಾರವಲ್ಲದ ಮನೆ ನಿರ್ಮಿಸಿಕೊಳ್ಳುತ್ತಾರೆ. ಗುಡಿಸಲುಗಳನ್ನು ಚಾಪೆ, ಕವದಿ ಇಲ್ಲವೇ ಹುಲ್ಲಿನ, ಮೇವಿನಿಂದ ನಿರ್ಮಿಸಿಕೊಂಡಿರುತ್ತಾರೆ. ಮೇವು, ಹುಲ್ಲಿನಿಂದ ನಿರ್ಮಿತವಾದ ಗುಡಿಸಲುಗಳಿದ್ದರೆ ಹೊಗೆ ಹೋಗಲು ಒಂದು ಚಿಕ್ಕ ಕಿಂಡಿ ಬಿಟ್ಟಿರುತ್ತಾರೆ.

ಒಂದೇ ಗುಡಿಸಲಿನಲ್ಲಿ ಇಡೀ ಸಂಸಾರದ ಜೊತೆಗೆ ಪ್ರಾಣಿಗಳನ್ನು, ಸಾಮಗ್ರಿ ಸಲಕರಣೆಗಳನ್ನು ಇಟ್ಟುಕೊಂಡಿರುತ್ತಾರೆ. ಬಲಬದಿಯನ್ನು ತಮ್ಮ ವಾಸಕ್ಕೆ, ಎಡಬದಿಗೆ ಪ್ರಾಣಿಗಳಿಗೆ ಮತ್ತು ಹಿಂಭಾಗವನ್ನು ಸಾಮಗ್ರಿಗಳನ್ನು ಇಡಲು ಉಪಯೋಗಿಸಿಕೊಳ್ಳುತ್ತಾರೆ. ಗುಡಿಸಲುಗಳನ್ನು ಬಿದಿರು ಕೋಲುಗಳಿಂದ ಕಟ್ಟಿರುತ್ತಾರೆ. ಗುಡಿಸಲಿನ ಮುಂಭಾಗದ ಬಯಲು ಪ್ರದೇಶದಲ್ಲಿ ಸಾಕುಪ್ರಾಣಿಗಳಾದ ಆಕಳು, ಕುದುರೆಗಳನ್ನು ಕಟ್ಟಲು ಉಪಯೋಗಿಸಿಕೊಳ್ಳುತ್ತಾರೆ.

ಹಾಸಲು ಈಚಲು ಚಾಪೆ, ಹೊದೆಯಲು ಕವದಿ ಉಪಯೋಗಿಸುತ್ತಾರೆ. ಕಾಲ ಬದಲಾದಂತೆ ಸುಡುಗಾಡು ಸಿದ್ಧರ ಜೀವನ ಪದ್ಧತಿಯಲ್ಲಿಯೂ ಸಾಕಷ್ಟು ಬದಲಾವಣೆಯಾಗಿದೆ. ಈಗೀಗ ಸುಡುಗಾಡು ಸಿದ್ಧರು ಒಂದೆಡೆ ತಳವೂರಿ ಬದುಕಲು ಆರಂಭಿಸಿದ್ದು ಅವರ ಆಧುನಿಕ ಜಗತ್ತಿನ ಹೊಂದಿಕೆಗೆ ಸಾಕ್ಷಿಯಾಗಿದೆ.

ಕೆಲವರು ಆಸ್ತಿಯನ್ನು ಹೊಂದಿದ್ದಾರೆ. ಬೇಸಾಯ ಮತ್ತಿತರ ಕಸಬುಗಳನ್ನು ಮಾಡುತ್ತಿದ್ದಾರೆ. ಅಲ್ಲಲ್ಲಿ ಕಲ್ಲು, ಮಣ್ಣಿನ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ವಾಸದ ಮನೆಯಲ್ಲೇ ದನಕರುಗಳಿಗೆ ಒಂದೆಡೆ ಕೊಟ್ಟಿಗೆ, ಕೋಳಿಗೂಡ, ಕುದುರೆಲಾಯ, ಕುರಿ ಮೊದಲಾದ ಸಾಕುಪ್ರಾಣಿಗಳಿಗೂ ಇರಲು ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಸುಡುಗಾಡು ಸಿದ್ಧರ ಆಹಾರ ಪದ್ಧತಿ :

ಸುಡುಗಾಡು ಸಿದ್ಧರು ಮೂಲತಃ ಮಾಂಸಾಹಾರಿಗಳು. ಅವರು ಸಾಮಾನ್ಯವಾಗಿ ಆಯಾ ಪ್ರಾದೇಶಿಕ ಆಹಾರವನ್ನೇ ಸೇವಿಸಿ ಜೀವಿಸುವ ಪದ್ಧತಿ ಹೊಂದಿದ್ದಾರೆ. ಇವರು ಸಾಮಾನ್ಯವಾಗಿ ಭಿಕ್ಷೆಯಿಂದ ಆಹಾರ ಸಂಗ್ರಹಣೆ ಮಾಡುತ್ತಾರೆ. ಇವರಿಗೆ ಜಮೀನು, ಮನೆ, ಆಸ್ತಿ-ಪಾಸ್ತಿಗಳಿಲ್ಲ, ಅವರು ಖಾಯಂ ಸಂಚಾರಿಗಳು. ಊರಿಂದೂರಿಗೆ ಡೇರೆಗಳನ್ನು ಹಾಕಿಕೊಳ್ಳುತ್ತ ಅಲೆಮಾರಿ ಜೀವನದೊಂದಿಗೆ ಬದುಕು ಸಾಗಿಸುತ್ತಿರುತ್ತಾರೆ. ಅಲ್ಲಿ ಇಲ್ಲಿ ಬೀಡು ಬಿಟ್ಟು ಕೆಲವು ಹಳ್ಳಿಗಳನ್ನು ಉಂಬಳಿ ಮಾಡಿಕೊಂಡು ರಾತ್ರಿಯೆಲ್ಲ ಊರ ಪ್ರದಕ್ಷಿಣೆ ಮಾಡಿ ಊರನ್ನು ರಕ್ಷಿಸುವ ಹೊಣೆಯನ್ನು ಹೊತ್ತಿರುತ್ತಾರೆ. ಇದರಿಂದ ಭಿಕ್ಷಾಟನೆಗಾಗಿ ಪ್ರತಿ ಮನೆ ಮನೆಗೂ ಹೋಗಿ ಆಹಾರ ಸಂಗ್ರಹಿಸುತ್ತಾರೆ.

ಸಾಮಾನ್ಯವಾಗಿ ಸುಡುಗಾಡು ಸಿದ್ಧರು ರಾತ್ರಿಯೆಲ್ಲ ಕಾಡುಮೇಡುಗಳಲ್ಲಿ ಸಂಚರಿಸುವುದರಿಂದ ತಮ್ಮ ಉಪಜೀವನಕ್ಕಾಗಿ ಬಲೆ ಹಾಕಿ ಬೇಟೆಯಾಡುತ್ತಾರೆ. ಬೇಟೆಯಿಂದ ಬಂದ ಪ್ರಾಣಿ, ಪಕ್ಷಿಗಳನ್ನು ಬೇಯಿಸಿ ಮಕ್ಕಳು, ಮರಿಗಳೊಂದಿಗೆ ತಿನ್ನುತ್ತಾರೆ. ಮಾಂಸವಿಲ್ಲದ ಊಟ ಅವರಿಗೆ ರುಚಿಸುವುದಿಲ್ಲವೆಂಬ ವಾಡಿಕೆಯಿದೆ. ಅವರ ಬೇಟೆಯ ಪ್ರಾಣಿಗಳೆಂದರೆ ಕೋಳಿ, ಕುರಿ, ಅಡವಿಬೆಕ್ಕು, ಕವಜುಗ, ಮೊಲ, ಮೀನು ಮೊದಲಾದವುಗಳು. ಗಮನಿಸಬೇಕಾದ ಅಂಶವೆಂದರೆ ಈ ಸುಡುಗಾಡು ಸಿದ್ಧರು ದನಕರುಗಳ ಮತ್ತು ಹಂದಿಯ ಮಾಂಸವನ್ನು ಮುಟ್ಟುವುದಿಲ್ಲ.

ಸುಡುಗಾಡು ಸಿದ್ಧರಿಗೆ ಮಾಂಸದ ಊಟದಷ್ಟೇ ಅವಶ್ಯಕವಾದದ್ದು ಸೇಂದಿ, ಸಾರಾಯಿ. ಕೆಲವೊಂದು ಸಾರಿ ಊಟವಿಲ್ಲದಿದ್ದರೂ ಅವರಿಗೆ ಕುಡಿಯಲು ಸಾರಾಯಿ ಬೇಕೇ ಬೇಕು. ರಾತ್ರಿ ವೇಳೆ ಸಾರಾಯಿ ಪಾನ ಇವರಿಗೆ ಕಡ್ಡಾಯವಾಗಿ ಬೇಕಿರುವದರಿಂದ ಇವರು ಸದಾ ಕಾಲ ನಿಶಾ ಜೀವಿಗಳಾಗಿ ಅಡ್ಡಾಡುತ್ತಿರುತ್ತಾರೆ. ಮದ್ಯಪಾನಕ್ಕೆ ಇವರು ಹೆಚ್ಚಿನ ಮಹತ್ವ ನೀಡುತ್ತಾರೆ.

ಸುಡುಗಾಡು ಸಿದ್ಧರ ಹೆಂಗಸರು ಸಾಮಾನ್ಯವಾಗಿ ಮನೆಯ ಹೊರಗೆ ಮೂರು ಕಲ್ಲುಗಳನ್ನಿಟ್ಟು ಮಾಂಸ ಬೇಯಿಸುತ್ತಾರೆ. ಮೊದಲು ಕೈ ರೊಟ್ಟಿಯನ್ನು ಮಾಡಿ ಬೆಂಕಿಕೆಂಡದ ಮೇಲೆ ಹಾಕುತ್ತಿದ್ದರು. ಈಗ ಅಡುಗೆಯನ್ನು ಆಧುನಿಕ ಜಗತ್ತಿಗೆ ಹೊಂದಿಕೊಂಡು ಕ್ರಮಬದ್ಧವಾಗಿ ಮಾಡುತ್ತಿದ್ದಾರೆ. ಇತ್ತೀಚಿಗೆ ಸುಡುಗಾಡು ಸಿದ್ಧರ ಮನೆಯಲ್ಲಿಯೂ ಅನೇಕ ಆಧುನಿಕ ಸಲಕರಣೆಗಳ ಬಳಕೆಯಾಗುತ್ತಿರುವುದು ಕಂಡು ಬರುತ್ತಿದೆ.

ಮನೆ ಬಳಕೆಯ ವಸ್ತುಗಳು :

ಸುಡುಗಾಡು ಸಿದ್ಧರ ಜನಾಂಗದ ಮಹಿಳೆಯರು ಅಡುಗೆಗಾಗಿ ಯಾವುದೇ ಲೋಹದ ಪಾತ್ರೆಗಳನ್ನು ಬಳಸುವುದಿಲ್ಲ. ಮಣ್ಣಿನ ಮಡಕೆ, ಕುಡಿಕೆಗಳೇ ಇವರ ಅಡುಗೆ ಸಾಮಾನುಗಳು. ಲೋಹದ ಪಾತ್ರೆಯಲ್ಲಿ ತಯಾರಿಸಿದ ಊಟ ಇವರಿಗೆ ರುಚಿಸುವುದಿಲ್ಲವಂತೆ. ಊಟ ಮಾಡಲೂ ಸಹ ಮಣ್ಣಿನ ಪರ್ಯಾಣ (ತಟ್ಟೆ), ನೀರು ಕುಡಿಯಲು ಮಣ್ಣಿನ ಮಗಿ (ಲೋಟ) ಇಲ್ಲವೆ ತಂಬೂರಿ ಕಾಯಿಯ ಪರಟೆಗಳನ್ನು ಬಳಸುತ್ತಾರೆ. ಮಾಂಸದ ಸಾರು ಬಳಸಲು , ಪಲ್ಯೆ ನೀಡಲು ತೆಂಗಿನ ಚಿಪ್ಪೆಯ ಸೌಟನ್ನು, ಖಾರ, ಮಸಾಲೆ ಅರೆಯಲು ಮಣ್ಣಿನ ಗುಂಡಾಳಿ (ಗುಣಿಚಿಪ್ಪು) ಬಳಸುತ್ತಾರೆ. ಈ ಎಲ್ಲ ಸಾಮಾನುಗಳು ಹಗುರವಾಗಿರುವುದರಿಂದ ತಮ್ಮೊಂದಿಗೆ ಬೇರೆಡೆಗೆ ತೆಗೆದುಕೊಂಡು ಹೋಗಲು ಅನುಕೂಲಕರವಾಗಿವೆ.

ಉಡುಗೆ-ತೊಡುಗೆ :

ಸುಡುಗಾಡು ಸಿದ್ಧರು ಹಿಂದೂ ಸ್ತ್ರೀ-ಪುರುಷರು ಹಾಕಿಕೊಳ್ಳುವ ಸಾಮಾನ್ಯ ಉಡುಪುಗಳನ್ನೇ ಧರಿಸುತ್ತಾರೆ. ಭಿಕ್ಷಾಟನೆಗೆ ಹೋದಾಗ ಮಾತ್ರ ವೇಷಭೂಷಣಗಳನ್ನು ತೊಡುತ್ತಾರೆ. ವೇಷಭೂಷಣದಲ್ಲಿ ಸ್ತ್ರೀಯರಿಗಿಂತ ಗಂಡಸರ ವೇಷಭೂಷಣಗಳು ವಿಶಿಷ್ಟವಾಗಿರುತ್ತವೆ. ಅವುಗಳು ಅವರ ಪರಂಪರೆಯ ಪ್ರತೀಕಗಳಾಗಿವೆ.

ಗಂಡಸರು ಕಾವಿಕಪನಿ, ಕೊರಳಿಗೆ ಗಂಟೆ, ರುದ್ರಾಕ್ಷಿ ಮಾಲೆ, ಕಿವಿಗೆ ಕರ್ಣಕುಂಡಲ, ಹಣೆಗೆ ವಿಭೂತಿ ಹಚ್ಚಿಕೊಂಡು ಎರಡೂ ಕೈ ಬೆರಳುಗಳಿಗೆ ಬೆಳ್ಳಿ ಇಲ್ಲವೇ ತಾಮ್ರದ ವಿವಿಧ ನಮೂನೆಯ ಹರಳುಗಳ ಉಂಗುರಗಳನ್ನು ಧರಿಸಿ ಭಿಕ್ಷೆಗೆ ಹೋಗುತ್ತಾರೆ. ಕೈಯಲ್ಲಿ ಶಂಖ, ಬೆತ್ತಗಳನ್ನು ಹಿಡಿದಿರುತ್ತಾರೆ. ಹೆಗಲಲ್ಲಿ ಹಾಕಿಕೊಂಡ ಜೋಳಿಗೆಯನ್ನು ರೇವಣಸಿದ್ಧನ ಜೋಳಿಗೆ ಎಂದು ಕರೆಯುತ್ತಾರೆ. ತಲೆಮುಡಿಗೆ ನವಿಲುಗರಿ, ಜೋಳಿಗೆಗೆ ಗಿಲಗಂಚಿ ಕಟ್ಟಿರುತ್ತಾರೆ. ಕೈಯಲ್ಲಿ ಕಪಾಲಿ ಚೆಂಬುವನ್ನು (ಕಮಂಡಲ) ಹಿಡಿದುಕೊಳ್ಳುತ್ತಾರೆ. ಮೈ ಕೈಗೆಲ್ಲ ಬೂದಿ ಬಡಿಸಿಕೊಂಡು ಭಿಕ್ಷೆಗೆ ಸಂಚರಿಸುತ್ತಾರೆ.

ಭಿಕ್ಷಾಟನೆಗೆ ಹೋಗುವ ಪುರುಷರ ವೇಷಭೂಷಣ ಬದಲಾವಣೆಯಾಗಿರುತ್ತದೆ. ಆದರೆ ಸ್ತ್ರೀಯರು ಭಿಕ್ಷೆಗೆ ಹೋದಾಗ ವಿಶೇಷವಾದ ಉಡುಗೆ ತೊಡುವುದಿಲ್ಲ. ಕೈಯಲಿ ಗಂಗಿ-ಗೌರಮ್ಮರ ಗೊಂಬೆಗಳನ್ನು ಮಾತ್ರ ಹಿಡಿದುಕೊಂಡು, ಬಗಲಿಗೆ ಒಂದು ಜೋಳಿ ಇಳಿ ಬಿಟ್ಟಿಕೊಂಡು ಭಿಕ್ಷೆ ಎತ್ತುತ್ತಾರೆ. ಮೈ ಕೈ ಹಾಗೂ ಹಣೆಗೆ ಭಸ್ಮಧಾರಣೆ ಮಾಡಿಕೊಳ್ಳುತ್ತಾರೆ.

ಉದ್ಯೋಗ :

ಸುಡುಗಾಡು ಸಿದ್ಧರ ಕುಲಕಸುಬು ನಸುಕಿನಲ್ಲಿ ಊರ ಪ್ರದಕ್ಷಿಣೆ ಹಾಕುವುದು. ಉಂಬಳಿಯರಾಗಿ ಮಾಡಿಕೊಂಡಿರುವ ಕೆಲವು ಹಳ್ಳಿಗಳಲ್ಲಿ ಅವರು ಬೆಳಗಿನ ಜಾವ ಸುಡುಗಾಡಿಗೆ ಹೋಗಿ ಬಂದು ಶಂಖ ಊದಿ ಹರಕೆ ಮಾಡಿ ಊರ ಸುತ್ತಲೂ ಸಂಚರಿಸುತ್ತಾರೆ. ನೂರಾರು ದೇವರುಗಳನ್ನು ಸ್ತುತಿಸಿ ಹರಕೆ

ಮಾಡುವರು. ಮಲಗಿದ ಊರಿನ ಜನರನ್ನು ಬೆಳಗಾಯಿತೆಂದು ಎಚ್ಚರಿಸುವುದು, ಭಿಕ್ಷಾಟನೆಯ ಸಂದರ್ಭದಲ್ಲಿ ಕುಲಕೋಟಿಯನ್ನು ರಕ್ಷಿಸುವಂತೆ, ಉದ್ಧರಿಸುವಂತೆ, ಕರುಣಿಸುವಂತೆ ದೇವರಲ್ಲಿ ಹರಕೆ ಮಾಡುವುದು ಮೂಲ ಉದ್ಯೋಗವಾಗಿತ್ತು.

ಸಾಮಾನ್ಯವಾಗಿ ಮಳೆಗಾಲದಲ್ಲಿ ಇವರು ಭಿಕ್ಷೆಗೆ ಹೋಗುವುದಿಲ್ಲ. ಆ ಸಂದರ್ಭದಲ್ಲಿ ಮೀನು ಹಿಡಿಯುವುದು, ಬೇಟೆಯಾಡುವುದನ್ನು ಮಾಡುತ್ತಾರೆ. ಉಳಿದ ಸಮಯದಲ್ಲಿ ತಿಂಗಳೆರಡು ತಿಂಗಳವರೆಗೆ ಭಿಕ್ಷಾಟನೆಗಾಗಿ ಉಂಬಳಿ ಊರುಗಳಿಗೆ ಹೋಗುತ್ತಾರೆ. ಸಿದ್ದರ ಹೆಂಗಸರು ಗಂಡಸರೊಂದಿಗೆ ಭಿಕ್ಷಾಟನೆಗಾಗಿ ಹೋಗದೆ ಮನೆಯಲ್ಲಿ ಕುಳಿತು ಚಾಪೆ ಹೆಣೆಯುವುದು, ಕೌದಿ ಹೊಲಿಯುವುದು, ನೂಲುವುದನ್ನು ಮಾಡುತ್ತಾರೆ. ಹೀಗೆ ತಯಾರಿಸಿ ಸಾಮಾನುಗಳನ್ನು ಊರಲ್ಲಿ ಹೋಗಿ ಮಾರಿ ಬದುಕು ಸಾಗಿಸುತ್ತಾರೆ. ಕೆಲ ಹೆಂಗಸರು ಕೂಲಿ ಕೆಲಸಕ್ಕೆ ಹೋಗುತ್ತಾರೆ. ಮಕ್ಕಳು ತಂದೆಯ ಹಿಂದೆಯೇ ಅಲೆಮಾರಿಗಳಾಗಿ ಹೋಗುತ್ತಾರೆ. ಹೆಚ್ಚು ಕಷ್ಟ ಪಟ್ಟು ದುಡಿದು ತಿನ್ನುವ ಪ್ರವೃತ್ತಿ ಸುಡುಗಾಡು ಸಿದ್ದರಲ್ಲಿ ಕಾಣಸಿಗದು. ಕೈ ಚಳಕ, ಯಂತ್ರ, ತಂತ್ರ, ಮಂತ್ರ, ಮಾಟಗಳನ್ನು ಮಾಡುವುದು, ವಶೀಕರಣ, ಹಗಲು ವೇಷಗಾರಿಕೆ ಹಾಕುವುದು, ಕಾಲಜ್ಞಾನ ಹೇಳುವುದು, ಗಿಡಮೂಲಿಕೆಗಳನ್ನು ಕೊಡುವುದು ಈ ಮೊದಲಾದವುಗಳು ಅವರ ಉಪಜೀವನದ ಕಸುಬುಗಳಾಗಿವೆ.

ಆಂಧ್ರಮೂಲದಿಂದ ಕರ್ನಾಟಕಕ್ಕೆ ವಲಸಿಗರಾಗಿ ಬಂದ ಸಂದರ್ಭದಲ್ಲಿಯೂ ಭಿಕ್ಷಾಟನೆಯ ಮೂಲಕವೇ ಜೀವಿಸುತ್ತಿದ್ದರು. ಆದರೆ ಇವರು ಇತ್ತೀಚಿಗೆ ಕೆಲವರು ಅಲ್ಲಲ್ಲಿ ಪಡಭೂಮಿಯನ್ನು ಗೇರು ರೈತರಾಗಿ ಒಂದು ಕಡೆಗೆ ನೆಲಸಿ ಬದುಕನ್ನು ಸಾಗಿಸಿದ್ದಾರೆ. ಅಲೆಮಾರಿ ಬದುಕು ಸ್ವಲ್ಪ ಕಡಿಮೆ ಮಾಡಿ ಒಂದೆಡೆ ನೆಲೆಯೂರಲಾರಂಭಿಸಿದ್ದಾರೆ. ಭಿಕ್ಷೆಯಲ್ಲದೇ ಬೇಸಾಯ ಮತ್ತಿತರ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ತಮ್ಮ ಮೂಲ ವೃತ್ತಿಯನ್ನು ತೊರೆದು ಕೃಷಿ ಮತ್ತಿತರ ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅಂದರೆ ಒಂದೆಡೆ ನೆಲೆಯೂರಿ ಬದುಕಲು ಆರಂಭಿಸಿದ್ದಾರೆ.

ಕಲೆ ಮತ್ತು ಸಾಹಿತ್ಯ :

ಸುಡುಗಾಡು ಸಿದ್ದರು ಬುಡಕಟ್ಟು ಸಮುದಾಯಕ್ಕೆ ಸೇರಿದ್ದರೂ, ಇವರು ಅನಕ್ಷರಸ್ಥರಾಗಿದ್ದರೂ, ತೀರ ಹಿಂದುಳಿದವರಾಗಿದ್ದರೂ ಇವರಲ್ಲಿನ ಸಾಹಿತ್ಯ ಜನಪದ ಸಾಹಿತ್ಯದಲ್ಲಿ ಪಾರಂಪರಿಕವಾದ ಸಮೂಹ ಪ್ರಜ್ಞೆ ಮೂಡಿಸುತ್ತದೆ. ಇವರಲ್ಲಿ ವಿಶೇಷವಾದ ಜಾನಪದ ಕಲೆಯಿದೆ. ಅವರ ಸಾಹಿತ್ಯದಲ್ಲಿ ಧರ್ಮ-ಅಧರ್ಮ, ಪಾಪ-ಪುಣ್ಯ, ಸ್ವರ್ಗ-ನರಕಗಳ ಕಲ್ಪನೆಗಳು, ಪುನರ್ಜನ್ಮದ ನಂಬಿಕೆಗಳು, ನ್ಯಾಯ-ನೀತಿ, ವಿಡಂಬನೆ, ಆದರ್ಶ, ಹಿತೋಪದೇಶ, ವಿನೋದ, ಲೈಂಗಿಕ ದೃಷ್ಟಿಕೋನಗಳು ಹೀಗೆ ಅನೇಕ ವಿಷಯಗಳ ಚಿತ್ರಿತವಾಗಿವೆ.

ಭಿಕ್ಷಾಟನೆಯ ಸಂದರ್ಭದಲ್ಲಿ ಇವರು ಪ್ರಾದೇಶಿಕ ಗ್ರಾಮದೇವತೆಗಳ ನಾಮವನ್ನು ಕೊಂಡಾಡುತ್ತಾ ಹೋಗುವಾಗ, ಭಿಕ್ಷೆ ಹಾಕಿದವರನ್ನು ಹೊಗಳುವಾಗ ಅವರ ಬಾಯಿಂದ ಕಾವ್ಯವಾಗಿ

ಮಾತುಗಳು ಹೊರಬರುತ್ತವೆ. ಈ ಕಾವ್ಯಾತ್ಮಕ ಹಾಗೂ ರಾಗಬದ್ಧವಾದ ಹಾಡುಗಳು ಸರಾಗವಾಗಿ ಹರಿದು ಬರುತ್ತವೆ.

ಸುಡುಗಾಡು ಸಿದ್ದರು ಹಾಡುವ ಹಾಡುಗಳು ತೀರ ಸರಳ-ಸುಲಭವಾಗಿದ್ದು, ಜನ ಸಾಮಾನ್ಯರಿಗೂ ಅರ್ಥವಾಗುವಂತಿರುತ್ತವೆ. ಕೈಯಲ್ಲಿ ಗಂಟೆ ಹಿಡಿದು ಬಾರಿಸುತ್ತ ಆ ನಾದಕ್ಕೆ ಒಗ್ಗುವ ರೀತಿಯಲ್ಲಿ ಗುನುಗುತ್ತ ಹಾಡುತ್ತಾ ಸಾಗುತ್ತಾರೆ. ಅವರ ಹಾಡುಗಳು ಪ್ರಾಸಬದ್ಧವಾಗಿರುತ್ತವೆ. ಪ್ರಾಸಬದ್ಧತೆ ಅವರ ಹಾಡಿನ ವೈಶಿಷ್ಟ್ಯವಾಗಿರುತ್ತದೆ.

ತಮ್ಮ ಬದುಕಿನ ಶುಭ ಸಂದರ್ಭಗಳಲ್ಲಿ ಸುಡುಗಾಡು ಸಿದ್ದರ ಬಾಯಿಂದ ಹೊರಡುವ ಜನಪದ ಸಾಹಿತ್ಯ ಅತ್ಯಂತ ಗಮನ ಸೆಳೆಯುತ್ತದೆ. ಮದುವೆ, ನಿಶ್ಚಯ, ಋತುಮತಿ, ಸೋಬನ, ಜೋಗುಳ ಪದಗಳು ಅಷ್ಟೇ ಅಲ್ಲದೇ ಕುಟ್ಟುವಾಗ, ಬೀಸುವಾಗ, ಚಾಪೆ ಹೆಣೆಯುವಾಗ, ಹಬ್ಬ ಹರಿದಿನ, ಜಾತ್ರೆ, ಉತ್ಸವ, ಕಾಯಕದ ಸಂದರ್ಭದಲ್ಲಿ ಸ್ತ್ರೀಯು ಹಾಡಲಾಗುವ ಹಾಡುಗಳು ಜನಪದ ಸಾಹಿತ್ಯಕ್ಕೆ ಅದ್ಭುತವಾದ ಕಾಣಿಕೆಯಾಗಿದೆ.

ಹೀಗೆ ಪ್ರತಿಯೊಂದು ಜನಾಂಗದ ಜನಜೀವನದ ಸಂಸ್ಕೃತಿಯು ಜನಪದ ಕಲೆಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ವಿಶೇಷ ಸಂದರ್ಭಗಳಲ್ಲಿ ಮತ್ತು ಜೀವನ ಪದ್ಧತಿ ಸಾಗುವಳಿಯ ದೈನಂದಿನ ಚಟುವಟಿಕೆಗಳಲ್ಲಿ ವ್ಯಕ್ತವಾಗುವ ಸುಡುಗಾಡು ಸಿದ್ದರ ಕಲೆ ಮತ್ತು ಸಾಹಿತ್ಯ ಅಮೋಘವಾದದ್ದು. ಅಂತಹ ಕಲೆ ಮತ್ತು ಸಾಹಿತ್ಯದ ಪೋಷಣೆ ಇಂದು ಅವಶ್ಯಕವಾಗಿದೆ ಮತ್ತು ಅನಿವಾರ್ಯವಾಗಿದೆ. ಒಂದು ಜನಾಂಗದ ಕಲೆ ಮತ್ತು ಸಾಹಿತ್ಯ ಕೇವಲ ಆ ಜನಾಂಗಕ್ಕೆ ಸೀಮಿತವಾಗದೇ, ಪ್ರತಿಯೊಬ್ಬರಿಗೂ ತಲುಪುವಂತಾದರೆ ಆ ಜನಾಂಗದ ಸಾಂಸ್ಕೃತಿಕ ಶ್ರೀಮಂತಿಕೆ ಎಲ್ಲರಿಗೂ ಅರ್ಥವಾಗಲು ಸಹಕಾರಿಯಾಗುತ್ತದೆ. ಆ ಮೂಲಕ ಆ ಸಂಸ್ಕೃತಿಯಲ್ಲಿ ಅಡಕವಾಗಿರುವ ವಿಶೇಷ ಹಾಗೂ ವಿಶಿಷ್ಟತೆ ಮನವರಿಕೆಯಾಗುತ್ತದೆ.

ಭಾಷೆ :

ಯಾವುದೇ ಒಂದು ಜನಾಂಗದ ಸಂಸ್ಕೃತಿಯ ಅಧ್ಯಯನಲ್ಲಿ ಸಾಹಿತ್ಯ, ಕಲೆ ಮೊದಲಾದವುಗಳೊಂದಿಗೆ ಆ ಜನಾಂಗದ ಭಾಷೆಯೂ ತುಂಬಾ ಮುಖ್ಯವಾಗುತ್ತದೆ. ಭಾರತದಲ್ಲಿ ಅನೇಕ ಭಾಷೆಗಳು ಇದ್ದು, ಅವುಗಳಲ್ಲಿ ಕೆಲವು ಲಿಪಿ ಇರುವ ಮತ್ತೆ ಕೆಲವು ಲಿಪಿ ಇರದ ಭಾಷೆಗಳಾಗಿವೆ. ಸಾಮಾನ್ಯವಾಗಿ ಬುಡಕಟ್ಟಿಗೆ ಸೇರಿರುವ ಜನರ ಭಾಷೆಗಳಿಗೆ ಲಿಪಿ ಇರುವುದಿಲ್ಲ. ಅದಕ್ಕೆ ಸುಡುಗಾಡು ಸಿದ್ದರ ಭಾಷೆಯೂ ಹೊರತಾಗಿಲ್ಲ.

ಆಂಧ್ರ ಮೂಲದವರೆನ್ನಲಾದ ಇವರ ಭಾಷೆಯ ಮೇಲೆ ತೆಲುಗು ಭಾಷೆಯ ಪ್ರಭಾವ ಬಹಳಷ್ಟು ಇದೆ. ಇವರ ಮೂಲ ಭಾಷೆ ತೆಲುಗು ಭಾಷೆಯ ಸ್ವರ, ಪ್ರತ್ಯಯಗಳನ್ನು ಒಳಗೊಂಡಿರುವುದರಿಂದ ಇವರ ಭಾಷೆಯ ಮೂಲವನ್ನು ಕಂಡು ಹಿಡಿಯುವುದು ಕಷ್ಟವಾಗುತ್ತದೆ.

ಇವರದು ತೆಲುಗು ಮಿಶ್ರಿತ ಭಾಷೆಯಾಗಿದೆ. ಹೊರಗೆ ಕನ್ನಡವನ್ನು ಸಂವಹನ ಭಾಷೆಯನ್ನಾಗಿ ಮಾಡಿಕೊಂಡಿದ್ದಾರೆ. ಅಲ್ಲದೆ ಕನ್ನಡಿಗರ ಬದುಕಿನ ಜೊತೆಗೆ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ.

ಸುಡುಗಾಡು ಸಿದ್ದರ ಆಡುಮಾತುಗಳು ಅನ್ಯ ಬುಡಕಟ್ಟುಗಳ ಭಾಷೆಯ ಲಕ್ಷಣಗಳನ್ನೇ ಹೋಲುತ್ತವೆ. ಅವರ ಭಾಷೆ ಕೇವಲ ಆಡುಮಾತಿನಲ್ಲಿ ಬಳಕೆಯಲ್ಲಿರುವದರಿಂದ ಸುಲಭವಾಗಿ ಪರಿಸರದ ಇತರ ಭಾಷೆಗಳ ಪ್ರಭಾವಕ್ಕೊಳಗಾಗಿದೆ.

ಜನಪದ ವೈದ್ಯರಾಗಿ ಸುಡುಗಾಡು ಸಿದ್ಧರು :

ಸುಡುಗಾಡು ಸಿದ್ದರ ಜೋಳಿಗೆಯಲ್ಲಿ ಸದಾ ಗಿಡಮೂಲಿಕೆಗಳಿರುತ್ತವೆ. ಅಲೆಮಾರಿಗಳಾದ ಇವರು ಕಾಡು ಮೇಡುಗಳಲ್ಲಿ ಸಂಚರಿಸಿ ಗಿಡಮೂಲಿಕೆಗಳನ್ನು ಸಂಗ್ರಹಿಸಿಕೊಂಡು ಬಂದು ಊರಿನ ಜನರ ರೋಗ-ರುಜಿನಗಳನ್ನು ಗುಣಪಡಿಸುತ್ತಾರೆ. ಆಸ್ಪತ್ರೆಗಳನ್ನೇ ಕಂಡರಿಯದ ಈ ಜನ ಎಂಥ ರೋಗ-ರುಜಿನಗಳಿಗೂ ಔಷಧಿಗಳನ್ನು ಕೊಡುತ್ತಾರೆ. ಮಕ್ಕಳಿಗೆ ಕಾಯಿಲೆಯಾದರೆ ಕಾಲ ಧೂಳು ತೆಗೆಯುವುದು, ಕಿಂದ ಹಾಕುವುದು, ರಂಚು ಮಾಡುವುದು, ಬಾಲಗ್ರಹ ಕಟ್ಟುವುದು ಮೊದಲಾದವುಗಳನ್ನು ಮಾಡುತ್ತಾರೆ.

ಇವರು ಅನೇಕ ರೋಗಗಳಿಗೆ ತಮ್ಮ ಗಿಡಮೂಲಿಕೆಗಳಿಂದ ಗುಣಪಡಿಸುತ್ತಾರೆ. ಇವರ ಜೋಳಿಗೆಯಲ್ಲಿ ಅನೇಕ ತರಹದ ಗಿಡಮೂಲಿಕೆಗಳಿರುತ್ತದೆ. ಸಿದ್ಧೌಷಧಿಯ ಮೂಲಕ, ಗಿಡಮೂಲಿಕೆಗಳ ಮೂಲಕ ಅನೇಕ ರೋಗಗಳನ್ನು ಗುಣಪಡಿಸುವ ಆಯುರ್ವೇದ ಸೂತ್ರಗಳ ಮಹತ್ವ ಅರಿತಿದ್ದಾರೆ.

ಸಿದ್ದರ ಜೋಳಿಗೆಯಲ್ಲಿ ಬಾಗಾತಿ ಹಸ್ತ, ಪಾತಾಳ ಗರಡಿ, ನಾಗಬೂತಾಳಿ, ರಕ್ತಬೂತಾಳಿ, ಹಾಲಬೂತಾಳಿ, ಹೇಲಭೂತಾಳಿ, ಅಡವಿ ತೆಂಗಿನಕಾಯಿ, ತಾಮ್ರಕಡ್ಡಿ, ಮಯೂರಿಶಿಕೆ, ಅಕ್ಕಿಕಾಲು, ಬೆಸ್ತ್ರ, ಬೆಕ್ಕಿನ ಹೆಜ್ಜೆ, ಬಾಳ ಸಮುದ್ರದ ಕಾಯಿ, ತಾಯಿತದ ವಸ್ತುಗಳು, ಎಡಮುರಿಗೆ ಕಾಯಿ, ಬಲಮುರಿಗೆ ಕಾಯಿ, ಅಗ್ನಿಸ್ತಂಭ, ಜಲಸ್ತಂಭ, ಗರುಡ ಸ್ತಂಭ, ವಾಯುಸ್ತಂಭ, ಸಾಲಿಗ್ರಾಮಗಳು ಹೀಗೆ ಹಲವು ರೀತಿಯ ಗಿಡಮೂಲಿಕೆಗಳು ಹಾಗೂ ಸಲಕರಣೆಗಳಿರುತ್ತವೆ. ಇವುಗಳ ಸಹಾಯದಿಂದ ಇವರು ವಿವಿಧ ರೋಗ-ರುಜಿನಗಳಿಗೆ ತಮ್ಮದೇ ಆದ ಆಯುರ್ವೇದದ ಅಪಾರ ಜ್ಞಾನದ ಸಹಾಯದಿಂದ ರೋಗಕ್ಕೆ ತಕ್ಕಂತೆ ಗಿಡಮೂಲಿಕೆಗಳ ಔಷಧಿಗಳನ್ನು ಕೊಡುತ್ತಾರೆ.

ಕಾಮಾಲೆ, ಕಿವಿ ಸೋರುವಿಕೆ, ಕಣ್ಣು ಬೇನೆ, ಮೂರ್ಛೆ ರೋಗ, ಮೂಲವ್ಯಾಧಿ, ಗಂಡಮಲಗಿ ಹಾಗೂ ಹಾವು, ಚೇಳು, ನಾಯಿ ಮೊದಲಾದ ವಿಷಜಂತುಗಳು ಕಚ್ಚಿದರೆ ತಮ್ಮ ಸಿದ್ಧೌಷಧಿಯಿಂದ ಅವರು ರೋಗವನ್ನು ಗುಣಪಡಿಸುತ್ತಾರೆ. ಆ ಮೂಲಕ ಅವರು ಆಯುರ್ವೇದದಲ್ಲಿ ತಮಗಿರುವ ಅಪಾರ ಜ್ಞಾನದ ಹರಿವನ್ನು ತೋರಿಸುತ್ತಾರೆ. ಇವರ ಸಿದ್ಧೌಷಧಿಗಳಿಗೆ ಭಾರೀ ಬೇಡಿಕೆಯಿದೆ. ಸಿದ್ಧೌಷಧಿಗಳನ್ನು ಇವರು ದೂರದೂರದ ಕಾಡು ಪ್ರದೇಶಗಳಲ್ಲೆಲ್ಲ ಅಲೆದಾಡಿ ತಂದಿರುತ್ತಾರೆ. ಎಲ್ಲ ಪ್ರದೇಶಗಳಲ್ಲಿಯೂ ಇವು ದೊರಕಲಾರವು. ಆದ್ದರಿಂದ ಇವರ ಸಿದ್ಧೌಷಧಿಗಳು ವಿಶಿಷ್ಟ ಔಷಧಿ ಗುಣಗಳನ್ನು ಹೊಂದಿರುತ್ತದೆ.

ಸಾಮಾಜಿಕ ಸ್ಥಿತಿ-ಗತಿ :

ಬುಡಕಟ್ಟಿನ ಜನ ಸಾಮಾನ್ಯವಾಗಿ ಹೊರಜಗತ್ತಿನ ಸಮಾಜದಿಂದ ದೂರವಿರುವ ಕಾರಣ ತಮ್ಮಲ್ಲಿಯೇ ಸಾಮಾಜಿಕ ಒಳಾಡಳಿತ ಪದ್ಧತಿ ಹೊಂದಿರುತ್ತಾರೆ. ತಮ್ಮ ಸಮಾಜದ ಆಂತರಿಕ ವಿಚಾರಗಳನ್ನು ಹೊರಬಿಡದೇ ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ಸಮಾಜದ ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಹೋಗುವ ಮನೋಭಾವವನ್ನು ತಾಳಿರುತ್ತಾರೆ. ಅವರಿಗೆ ಪ್ರಾಣಕ್ಕಿಂತ ಮಾನವೇ ಹೆಚ್ಚಾಗಿರುವುದರಿಂದ, ಕುಲಕ್ಕೆ ಮೀರಿದವರನ್ನು ಕುಲದಿಂದ ಬಹಿಷ್ಕರಿಸುವ ಕಠಿಣ ಶಿಕ್ಷೆಯನ್ನೂ ಸಹ ಕೆಲವು ಸಂದರ್ಭಗಳಲ್ಲಿ ತಪ್ಪಿತಸ್ಥನಿಗೆ ನೀಡಲಾಗುತ್ತದೆ.

ತಮ್ಮಲ್ಲಿಯೇ ನ್ಯಾಯ ಪದ್ಧತಿ ವ್ಯವಸ್ಥೆ ಹೊಂದಿದ್ದಾರೆ. ತಪ್ಪು ದಂಡದ, ದೈಹಿಕ ಶಿಕ್ಷೆಯ ಮೂಲಕ ತಪ್ಪಿತಸ್ಥನಿಗೆ ಶಿಕ್ಷೆ ವಿಧಿಸಲಾಗುತ್ತದೆ. ಸಾಮಾಜಿಕ ಬಂಧ ಮೀರಿದವರಿಗೆ ಉಗ್ರಕ್ರಮ ಕೈಗೊಳ್ಳಲಾಗುತ್ತದೆ. ಸುಡುಗಾಡು ಸಿದ್ದರ ಸಮಾಜದ ಎಲ್ಲ ವ್ಯವಹಾರಗಳು ಹಟ್ಟಿಯ ಮುಖಂಡ ಅಥವಾ ನಾಯಕನ ಮೂಲಕ ನಡೆಯುತ್ತವೆ. ಪ್ರತಿಯೊಬ್ಬರಿಗೂ ನ್ಯಾಯವನ್ನು ದೊರಕಿಸಿಕೊಡಲು ಜಾತಿ ಪಂಚಾಯಿತಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಪಂಚಾಯಿತಿ ರಚನೆಯಲ್ಲಿ ಸಮಾಜದ ಯಜಮಾನ ಬುದ್ಧಿವಂತ, ತೆಲಿಗಾರ (ಭಂಡಾರಿ) ಮೊದಲಾದವರನ್ನು ನೇಮಿಸಿಕೊಂಡಿರುತ್ತಾರೆ.

ಸುಡುಗಾಡು ಸಿದ್ದರ ಕೆಲವು ಜಟಿಲ ಹಾಗೂ ಸಮಸ್ಯಾತ್ಮಕ ತೀರ್ಮಾನಗಳು ಅಂತಿಮವಾಗಿ ಕಟ್ಟೆಮನೆಯಲ್ಲಿ ಪರಿಹಾರ ಕಂಡುಕೊಳ್ಳುತ್ತವೆ. ಕಟ್ಟೆಮನೆ ತೀರ್ಮಾನವೇ ಅವರಿಗೆ ಹೈಕೋರ್ಟು, ಸುಪ್ರೀಮ್ ಕೋರ್ಟು ತೀರ್ಮಾನಗಳಿದ್ದಂತೆ. ಕಟ್ಟೆಮನೆ ತೀರ್ಮಾನವೆಂದರೆ ಸುಡುಗಾಡು ಸಿದ್ದರು ತಾವು ನಂಬಿರುವ ದೇವ-ದೇವತಾರಾಧನೆಯ ಸ್ಥಳಗಳು. ಅವರ ನಂಬಿಕೆಯ ಧಾರ್ಮಿಕ ಸ್ಥಳಗಳಲ್ಲಿ ಪ್ರಮಾಣೀಕರಿಸುವುದರ ಮೂಲಕ ವಾದಿ-ಪ್ರತಿವಾದಿಗಳಲ್ಲಿ ಯಾರು ತಪ್ಪಿತಸ್ಥ ಎಂದು ಮುಖಂಡರು ತೀರ್ಮಾನಿಸುತ್ತಾರೆ. ಅಂತಹ ಕಟ್ಟೆಮನೆಗಳು ಕರ್ನಾಟಕದಲ್ಲಿಯೂ ಇವೆ.

ಒಟ್ಟಾರೆಯಾಗಿ ಬುಡಕಟ್ಟು ಜನಾಂಗಗಳಲ್ಲಿ ಪ್ರಮುಖವಾಗಿರುವ ಈ ಸುಡುಗಾಡು ಸಿದ್ದರ ಸಾಮಾಜಿಕ ವ್ಯವಸ್ಥೆಯಲ್ಲಿ ಹೊರಗಿನವರಿಗೆ ಪ್ರವೇಶವಿಲ್ಲ. ಇಂದಿನ ಆಧುನಿಕತೆಯ ಯುಗದಲ್ಲಿಯೂ ಈ ಬುಡಕಟ್ಟು ಜನಾಂಗದವರು ಹಿಂದಿನಂತೆಯೇ ಆದಿಮಾನವನ ರೀತಿಯಲ್ಲಿಯೇ ಬದುಕುತ್ತಿರುವುದು ವಿಷಾದನೀಯ. ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತಂದು, ಅಕ್ಷರಸ್ಥರನ್ನಾಗಿ ಮಾಡಿ, ಅವರ ಸೀಮಿತ ಚೌಕಟ್ಟಿನಿಂದ ಅವರನ್ನು ಹೊರಗೆ ತರುವ ಕೆಲಸವನ್ನು ಮಾಡಿ, ಅವರಲ್ಲಿನ ಅಗಾಧ ಸಾಹಿತ್ಯ, ಕಲೆ ಮತ್ತು ಆಯುರ್ವೇದದ ಜ್ಞಾನವನ್ನು ಹೊರಗೆ ತರಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ. ಆ ದಿಶೆಯಲ್ಲಿ ನನ್ನ ಸಂಶೋಧನಾ ಪ್ರಬಂಧ ಅವರ ಜೀವನ ಮತ್ತು ಜ್ಞಾನದ ಮಹತ್ವವನ್ನು ತಿಳಿಸಿಕೊಡುವಲ್ಲಿ ಸಹಕಾರಿಯಾಗಲಿದೆ ಎಂದು ಭಾವಿಸಿದ್ದೇನೆ.

ಇಂತಹ ಅನೇಕ ವಿಶೇಷತೆಗಳನ್ನು ಹೊಂದಿರುವ ಸುಡುಗಾಡು ಸಿದ್ದರು ಮೊಹರಂ ಸಂದರ್ಭದಲ್ಲಿ ತಮ್ಮ ವಾಸ್ತವ್ಯವನ್ನು ಇಲ್ಲಿ ಹೂಡುತ್ತಾರೆ. ತಮ್ಮ ವಿಶಿಷ್ಟ ಜೀವನ ಪದ್ಧತಿ, ನಂಬಿಕೆ, ಆಚರಣೆಗಳ ಮೂಲಕ

ಭಕ್ತಿಯನ್ನು ಮೆರೆಯುತ್ತಾರೆ. ಮೊಹರಂ ಹಬ್ಬ ಮುಗಿಯುವವರೆಗೂ ದೈವ ಸನ್ನಿಧಿಯಲ್ಲಿ ತಮ್ಮೆಲ್ಲ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುತ್ತಾರೆ. ಹೊಸ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಾರೆ. ಕೊಡು-ಕೊಳ್ಳುವ ವ್ಯವಹಾರ ಮುಗಿಸಿಕೊಳ್ಳುತ್ತಾರೆ. ಮೊಹರಂ ಹಬ್ಬದ ನಂತರ ಮತ್ತೆ ತಮ್ಮ ಅಲೆಮಾರಿ ಜೀವನಕ್ಕೆ ಸಾಗ ಹಾಕುತ್ತಾರೆ.

ಸುಡುಗಾಡು ಸಿದ್ಧರ ಪ್ರಸ್ತುತ ಸ್ಥಿತಿ-ಗತಿ :

ಆಧುನಿಕತೆಯ ಭರಾಟೆಯಲ್ಲಿ ಜನಪದ ಪರಂಪರೆಯ ಕೊಂಡಿಗಳಾಗಿರುವ ಸುಡುಗಾಡು ಸಿದ್ದರು ಮತ್ತು ಸುಡುಗಾಡು ಸಿದ್ದರ ಜಾನಪದ ಸಾಹಿತ್ಯ ಹಾಗೂ ಅವರ ಆಯುರ್ವೇದ ಸಸಿಗಳ ಜ್ಞಾನ ಅವರ ಹಿಂದೆಯೇ ಮರೆಯಾಗಿ, ಮೂಲೆಗುಂಪಾಗಿ, ಹಾಳಾಗಿ ಹೋಗುವ ಸ್ಥಿತಿಗೆ ಬಂದು ತಲುಪಿದ್ದು, ನೆಲೆ ತಪ್ಪಿದ ಹಕ್ಕಿಗಳಾಗಿ ಉಪಜೀವನಕ್ಕಾಗಿ ಹೋರಾಟ ಮಾಡುತ್ತಿರುವ ಅವರ ಇಂದಿನ ಸ್ಥಿತಿ ಅತ್ಯಂತ ಡೋಲಾಯಮಾನವಾಗಿದೆ.

ಸುಡುಗಾಡು ಸಿದ್ದರ ಹಿಂದಿನ ಮತ್ತು ಇಂದಿನ ಜೀವನ ಪದ್ಧತಿಯಲ್ಲಿ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ-ಗತಿಗಳಲ್ಲಿ ಅಂತಹ ಹೇಳಿಕೊಳ್ಳುವಷ್ಟು ಬದಲಾವಣೆಗಳು ಕಂಡು ಬಂದಿಲ್ಲ. ಅವರು ಬಹುತೇಕ ಹಿಂದಿನ ರೀತಿಯಲ್ಲಿಯೇ ಬದುಕುತ್ತಿದ್ದಾರೆ. ಹೊಟ್ಟೆಪಾಡಿಗಾಗಿ ಭಿಕ್ಷಾವೃತ್ತಿಯನ್ನೇ ಕೈಗೊಂಡಿದ್ದಾರೆ. ಅವರು ಯಾವ ಬಗೆಯ ಆಸ್ತಿ-ಪಾಸ್ತಿಗಳ ಸಂಪಾದನೆಯ ಕಡೆಗೆ ಗಮನ ಹರಿಸಿದಂತಿಲ್ಲ. ಊರಿಂದೂರಿಗೆ ಅಲೆಯುವುದು, ಔಷಧೋಪಚಾರಗಳನ್ನು ಕೊಡುವುದು, ಕೈ ಚಳಕದ ಆಟಗಳನ್ನು ಪ್ರದರ್ಶಿಸುವುದು ಇಂದಿಗೂ ರೂಢಿಸಿಕೊಂಡು ಬಂದಿದ್ದು, ಊರುಗಳ ಹೊರ ಭಾಗದಲ್ಲಿ ನೀರು ದೊರಕುವ ಜಾಗದಲ್ಲಿ ಈಗಲೂ ಚೌದಿಯ ಗುಡಿಸಲುಗಳನ್ನು ಹಾಕಿಕೊಂಡು ಜೀವಿಸುತ್ತಿದ್ದಾರೆ. ಅಲ್ಲಲ್ಲಿ ಕೆಲವೇ ಕೆಲವು ಜನ ಮಾತ್ರ ರೈತಾಪಿಗಳಾಗಿ, ಕೂಲಿಕಾರರಾಗಿ, ಶಾಶ್ವತವಾಗಿ ಒಂದೆಡೆ ನೆಲೆಯೂರಿ ಕಲ್ಲಿನ ಮನೆಗಳನ್ನು ಕಟ್ಟಿಕೊಂಡಿದ್ದರೂ ಸಹ ಬಹುಪಾಲು ಸುಡುಗಾಡು ಸಿದ್ದರ ಜನಾಂಗದವರು ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಿದ್ದಾರೆ.

ಈ ಸುಡುಗಾಡು ಸಿದ್ದರ ಜನಾಂಗದವರಲ್ಲಿ ರಟ್ಟೆ ಮುರಿದು ದುಡಿದು ತಿನ್ನುವ ಪ್ರವೃತ್ತಿ ಕಂಡು ಬರದು. ಭಿಕ್ಷೆಯಿಂದಲೇ ತಮ್ಮ ಬದುಕು ಸಾಗಬೇಕೆನ್ನುತ್ತಾರೆ. ಸದಾ ಸಂಚಾರಿಗಳಾದ ಇವರಿಗೆ ತಮ್ಮ ಬದುಕಿನ, ಜೀವನದ, ಭವಿಷ್ಯದ ಬಗೆಗಿನ ಚಿಂತೆಯೇ ಇಲ್ಲ. ದಿನಕ್ಕಾಗುವಷ್ಟು ಭಿಕ್ಷೆ ಬೇಡಿ ಹೊಟ್ಟೆ ಹೊರೆದುಕೊಳ್ಳುವುದಕ್ಕಷ್ಟೇ ಇವರು ಸೀಮಿತವಾಗಿದ್ದಾರೆ. ಇತರರಂತೆ ಕಷ್ಟ ಪಟ್ಟು ದುಡಿದು ಸಂಪಾದಿಸಿಕೊಳ್ಳಬೇಕೆನ್ನುವ ಗೊಡವೆ ಅವರಿಗಿಲ್ಲ. ಹೀಗಾಗಿ ತುಂಬಾ ಶೋಚನೀಯವಾದ ಬದಕನ್ನು ಸಾಗಿಸುತ್ತರೆ. ಸದಾಕಾಲ ಹೆಂಡ, ಸಾರಾಯಿ ಕುಡಿಯುವುದು ಹಿಂದಿನ ಕಾಲದಿಂದಲೇ ಮುಂದುವರಿದಿದೆ. ಅವರಲ್ಲಿ ಹೆಂಡ - ಸಾರಾಯಿ ಕುಡಿತವನ್ನುವುದು ಅವರ ಸಾಂಸ್ಕೃತಿಕ ಬದುಕಿನ ಒಂದು ಅಂಗವಾಗಿ ಉಳಿದು ಕೊಂಡು ಬಂದಂತೆ ಕಾಣಿಸುತ್ತದೆ. ಈ ಎಲ್ಲ ಮೂಢತ್ವದ ಆಚರಣೆಗಳು, ನಂಬಿಕೆಗಳು ಅವರನ್ನು ಇನ್ನೂ ಅಲೆಮಾರಿ ಜೀವನದಲ್ಲೇ ಮುಂದುವರಿಯುವಂತೆ ಮಾಡಿದೆ.

ಸುಡುಗಾಡು ಸಿದ್ಧರಲ್ಲಿ ಜಾಗೃತಿಯ ಕೊರತೆ ಇದೆ. ಇವರಲ್ಲಿನ ಅನಕ್ಷರತೆ, ಅಂಧಕಾರ ಹೋಗಲಾಡಿಸಿದರೆ ಮನುಕುಲಕ್ಕೆ ಉಪಯೋಗವಿರುವ ಇವರ ಕಲೆಯನ್ನು, ಜಾನಪದ ಸಾಹಿತ್ಯವನ್ನು, ಆಯುರ್ವೇದದ ಜ್ಞಾನವನ್ನು ಬೆಳಕಿಗೆ ತರಬಹುದು. ಇವರಿಗೆ ವಿದ್ಯಾಭ್ಯಾಸದ ಅವಶ್ಯಕತೆ ಇರುವುದರಿಂದ ಇವರನ್ನು ಮೊದಲು ಅಕ್ಷರಸ್ಥರನ್ನಾಗಿ ಮಾಡುವುದು ಅತ್ಯವಶ್ಯಕವಾಗಿದೆ.

ಇವರಿಗೆ ಕಾಡು-ಮೇಡುಗಳ, ಎಲ್ಲ ರೀತಿಯ ಗಿಡ-ಗಂಟೆಗಳ ಪರಿಚಯವಿರುವುದರಿಂದ ಇವರಲ್ಲಿನ ಆಯುರ್ವೇದದ ಜ್ಞಾನ ಭಾರತೀಯ ವೈದ್ಯ ಲೋಕಕ್ಕೆ ಉತ್ತಮ ಕೊಡುಗೆಯನ್ನು ನೀಡುವ ಸಾಮರ್ಥ್ಯವನ್ನು ಹೊಂದಿದೆ. ಈ ಎಲ್ಲ ದೃಷ್ಟಿಕೋನಗಳಿಂದ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರುವ ಹೊಣೆಗಾರಿಕೆಯನ್ನು ಸರಕಾರ ಹೊರಬೇಕು.

ಈ ರೀತಿಯ ವೈಶಿಷ್ಟ್ಯ ಮತ್ತು ವಿಭಿನ್ನತೆಯನ್ನು ಹೊಂದಿದ ಸುಡುಗಾಡು ಸಿದ್ಧರ ಸಮುದಾಯದ ಜನತೆ ಕುದರಿಮೋತಿ ಮೊಹರಂ ಹಬ್ಬದಲ್ಲಿ ಭಾಗಿಗಳಾಗಿ ತಮ್ಮ ಭಕ್ತಿಯ ಪರಾಕಾಷ್ಠೆ ಮೆರೆದು ಮತ್ತೆ ಅಲೆಮಾರಿ ಬದುಕಿಗೆ ಸಾಗುತ್ತಾರೆ.

ಗೊಂಧಳಿಗರು

ಗೊಂಧಳಿ ಸಮುದಾಯವು ಪ್ರಾಚೀನ ಸಮುದಾಯದಲ್ಲಿ ಒಂದು. ಇದು ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿರಲು ಇವರ ಅಲೆಮಾರಿ ವೃತ್ತಿಯೇ ಕಾರಣವಾಗಿದೆ. ನಾಡಿನಾದ್ಯಂತ ಗೊಂಧಳಿ, ಬುಡಬುಡಕೆ, ಜೋಶಿ ಎಂಬ ಹಲವು ಹೆಸರುಗಳಿಂದ ಕರೆಯಲ್ಪಡುತ್ತದೆ. ಕರ್ನಾಟಕದಲ್ಲಿ ಸುಡುಗಾಡು ಸಿದ್ದರು, ಡೊಂಬರು, ಹಗಲು ವೇಷಗಾರರು, ಹಕ್ಕಿ-ಪಿಕ್ಕಿ ಮೊದಲಾದ ಅಲೆಮಾರಿ ಬುಡಕಟ್ಟು ಸಮುದಾಯಗಳು ಇರುವಂತೆ ಗೊಂಧಳಿ ಸಮುದಾಯವೂ ಒಂದು. ಇವರು 'ಗೊಂಧೂಳ' ಎನ್ನುವ ಆಚರಣೆಯಿಂದ ಗೊಂದಲಿಗ ಎಂಬ ಪದ ಈ ಜನಾಂಗಕ್ಕೆ ಬಂದಿದೆ ಎಂದು ಹಲವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಗೊಂಧಲ ಎನ್ನುವುದು ಒಂದು ಪೂಜಾ ಪ್ರಕಾರ. ಗೊಂಧಲ ಎಂದರೆ ಗದ್ದಲ. ಗಾಬರಿಯಾಗು, ಗಡಿಬಿಡಿಗೊಳ್ಳು ಎಂಬ ಅರ್ಥಗಳಿವೆ.

ಗೊಂಧಲ ಹಾಕುವ ಆಚರಣೆಯು ಕ್ರಿ.ಶ. ಆರನೆಯ ಶತಮಾನದಲ್ಲಿ ಇತ್ತೆಂಬ ಉಲ್ಲೇಖ ದೊರೆಯುತ್ತದೆ. ಆಗಿನ ಅರಸರಾದ ಕದಂಬರು ಗೊಂಧಲ ಹಾಕಿಸುತ್ತಿದ್ದರು. ಕದಂಬ ಅರಸರು ತುಳಜಾಪುರದ ಅಂಭಾಭವಾನಿಯ ಭಕ್ತರಾಗಿದ್ದರು. ಈ ದೇವತೆಯ ಉತ್ಸವದಲ್ಲಿ ಅವರು ಗೊಂಧಲ ಹಾಕಿಸುತ್ತಿದ್ದರು ಎಂದು ತಿಳಿಯುತ್ತದೆ. ಇವರು ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯವನ್ನು ಆಳಿದ್ದರು. ಈ ಸಮುದಾಯದಲ್ಲಿ ಹಲವಾರು ಒಳಪಂಗಡಗಳಿವೆ. ಅವರನ್ನು ಗೊಂಧಲಿಗರು, ಗೊಂಧಲ ಹಾಕುವವರು, ಬುಡಬುಡಕಿಯವರು, ಜೋಯಿಸರು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಇವರೆಲ್ಲ ಗೊಂಧಳಿ ಸಮುದಾಯದವರೇ. ಈ ಎಲ್ಲ ಹೆಸರುಗಳು ವೃತ್ತಿ ಮೂಲದ ಹೆಸರುಗಳು.

ಹಿನ್ನೆಲೆ :

ಈ ವಂಶವು ಉಗಮವಾದ ಬಗ್ಗೆ ಹಲವಾರು ಪುರಾಣದ ಕತೆಗಳ ಉಲ್ಲೇಖಗಳಿವೆ. ''ಜಮದಗ್ನಿಯ ಹೆಂಡತಿಯಾದ ಶ್ರೀ ರೇಣುಕಾ ಯಲ್ಲಮ್ಮದೇವಿ ಗೊಂಧಲಿಗರ ಪಂಗಡದ ಸ್ಥಾಪಕಳೆಂದು ಹೇಳಲಾಗುತ್ತಿದೆ''[೭]. ಶ್ರೀ ರೇಣುಕಾದೇವಿಯ ಮಗ ಪರಶುರಾಮನು ಬೆಟ್ಟಾಸುರನೆಂಬ ರಾಕ್ಷಸನನ್ನು ಸಂಹರಿಸಿ ಅವರನ ತಲೆಬುರಡೆಯನ್ನು ಟೌಡಿಕ ಮಾಡಿ, ಅದರ ಬ್ರಹ್ಮ ರಂಧ್ರದಲ್ಲಿ ಅವನು ತಲೆಯ ತುಂತುವನ್ನು ಪೋಣಿಸಿ ತ್ರಿಂ, ತ್ರಗಾಂ ಎಂದು ನಾದಘೋಷ ಮಾಡುತ್ತಾ ಉಧೋ ಉಧೋ ಎಂದು ಘೋಷ ಮಾಡುತ್ತಾ ಆನಂದಮಯವಾಗಿ ಪರಶುರಾಮನು ಗೊಂಧಲ ರೂಪದಿಂದ ಸ್ತುತಿಸಿದ ವಾಕ್ಯವೇ ಗೊಂಧಳವ್. ಇದು ಸೌನ್ಕಕಾದಿ ಮುನಿಗಳು ರಚಿಸಿದ ಪುರಾಣದಲ್ಲಿದೆ ಎಂದು ಮೋಹನ ಕಳಸದ ಅವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಇಲ್ಲಿಂದಲೇ ಗೊಂಧಲ, ಗೊಂಧಳ, ಗೊಂದಲಿಗರು ಹುಟ್ಟಿದರೆಂದು ಸಮರ್ಥ ರಾಮದಾಸರ ಶಿಷ್ಯರಾದ ದಿನಕರ ಸ್ವಾಮಿಯು 'ಸ್ವಾನುಭವ ದಿನಕರ' ಎಂಬ ಮರಾಠಿ ಪುಸ್ತಕದಲ್ಲಿ ಹೇಳಿದ್ದಾರೆ. ಗೊಂದಲಿಗರ ಸಮುದಾಯವು ಪೌರಾಣಿಕವಾಗಿ ಅಲ್ಲದೇ ಐತಿಹಾಸಿಕವಾಗಿಯೂ ಪರಿಚಯವಾಗಿದೆ.

ಹಿಂದೂ ಸಾಮ್ರಾಟವನ್ನು ಛತ್ರಪತಿ ಶಿವಾಜಿಯವರ ಕಾಲದಲ್ಲಿ ಮುಸಲ್ಮಾನರ ಆಡಳಿತಕ್ಕೊಳಪಟ್ಟ ಸಂದರ್ಭದಲ್ಲಿ ಇವರು ಭಿಕ್ಷಾಟನಾ ವೃತ್ತಿಯೊಂದಿಗೆ ಮಾರುವೇಷದಲ್ಲಿ ಗುಪ್ತಚರರಾಗಿ ಶಿವಾಜಿ ಮಹಾರಾಜರಿಗೆ ಸೇವೆ ಸಲ್ಲಿಸಿದ ಬಗ್ಗೆ ತಿಳಿದು ಬರುತ್ತದೆ. ಗೋಂಧಳಿ ಅಥವಾ ಗೊಂಥಲ ಶಬ್ದವನ್ನು ಕನ್ನಡದ ಕವಿ ಪಂಪ, ರುದ್ರಭಟ್ಟ ಅಭಿನವ ಪಂಪ ಶರಣರು ಬಳಸಿದ್ದಾರೆ. ನಾಗಚಂದ್ರ ಕವಿ, ಮಲ್ಲಿನಾಥ ಪುರಾಣದಲ್ಲಿ 'ಗೊಂಧಣ' ಎಂಬ ಪದ ಪ್ರಯೋಗಿಸಿದ್ದಾನೆ. ಆಂಧ್ರದಲ್ಲಿ ಇವರನ್ನು 'ಗೊಂದಲಿಗವಾಳ್ಳು' ಎಂದು ಕರೆಯುತ್ತಾರೆ.

ಕ್ರಿ.ಶ. ೧೨೪೦ ರಲ್ಲಿ ವಾರಂಗಲ್‌ನ ಕಾಕತೀಯ ಗಣಪತಿ ರಾಜನ ಗಜದಳಪತಿಯಾದ ಜಾಯಣ್ಣ ಕಲ್ಯಾಣದ ರಾಜ, ಮುಮ್ಮಡಿ ಸೋಮೇಶ್ವರನು ತನ್ನ ರಾಜಧಾನಿಯಾದ ಕಲ್ಯಾಣದಲ್ಲಿ ಭೋತಮಾತ್ರ ಮಹೋತ್ಸವದ ನಿಮಿತ್ಯವಾಗಿ ಗೊಂದಳಿ ಎಂಬ ನೃತ್ಯವನ್ನು ತನ್ನ ಗ್ರಂಥದಲ್ಲಿ ಕಾಣಿಸಿದ್ದಾನೆ. ಈ ಅಲೆಮಾರಿ ಸಮುದಾಯವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಹಿಂದುಳಿದಿದೆ. ಶಿಕ್ಷಣದ ಕೊರತೆಯಿಂದ ಅಜ್ಞಾನದ ಆಗರದಿಂದ ತೀರಾ ಹಿಂದುಳಿದಿದೆ.

ಆದಿಶಕ್ತಿ ತುಳಜಾ ಭವಾನಿ, ರೇಣುಕಾದೇವಿಯ ಭಕ್ತರಾದ ಸಂಭಾಳ, ಚೌಡಿಕೆ ಇವು ಗೊಂದಲಿಗರ ಸಮುದಾಯದ ಮೂಲ ವಸ್ತುಗಳು. ಬುಡ ಬುಡಕಿಯವರು, ಜ್ಯೋತಿಷ್ಯ ಹೇಳುವವರು, ಗಿಳಿ ಭವಿಷ್ಯ ಹೇಳುವವರು ಇವರೆಲ್ಲರೂ ಇದೇ ಸಮುದಾಯದವರಾಗಿದ್ದಾರೆ. ವೃತ್ತಿ ಬೇರೆ ಬೇರೆಯಾದರೂ ಸಮುದಾಯ ಒಂದೇ ಆಗಿದೆ. ಇವರೆಲ್ಲರ ಆರಾಧ್ಯ ದೈವ ಅಂಬಾಭವಾನಿ ಯಲ್ಲಮ್ಮ ಆಗಿದ್ದಾಳೆ. ಇವರೆಲ್ಲರೂ ಅಲೆಮಾರಿ ಬುಡಕಟ್ಟಿನವರು.

ಈ ಸಮುದಾಯದವರು ಮಹಾರಾಷ್ಟ್ರದ ತುಳಜಾಪುರದ ಕಡೆಯಿಂದ ಬಂದಿದ್ದಾರೆಂದು ಹೇಳುತ್ತಾರೆ. ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ವಿಶಾಲವಾಗಿತ್ತು. ಸುಮಾರು ೪೦೦ ವರ್ಷಗಳ ಹಿಂದೆ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದಿರುವರೆಂದು ಹೇಳುತ್ತಾರೆ. ಈ ಕಾರಣಕ್ಕಾಗಿ ಮರಾಠಿ ಭಾಷೆ ಮಾತೃಭಾಷೆಯಾಗಿದೆ. ಮತ್ತು ಮೂಲ ಮಹಾರಾಷ್ಟ್ರದವರು ಎಂದು ಹೇಳಲಾಗುತ್ತದೆ.

ಹದಿನೇಳನೆಯ ಶತಮಾನದ ಆದಿಯಲ್ಲಿ ತುಳಜಾಪುರದ ಅಂಬಾಭವಾನಿಯನ್ನು ಪೂಜಿಸುವುದು ಪ್ರತಿಯೊಬ್ಬ ಮರಾಠಿಗನ ಕರ್ತವ್ಯವಾಗಿತ್ತು. ಅಂದು ತುಳಜಾಪುರ ಧಾರ್ಮಿಕ ಚಟುವಟಿಕೆಯ ಕೇಂದ್ರವಾಗಿತ್ತು, ರಾಜಕೀಯ ಚಟುವಟಿಕೆಗಳಿಂದಲೂ ಕೂಡಿತ್ತು. ಮುಸ್ಲಿಂರ ದಾಳಿಗಳಿಂದ ನೊಂದ ಕಾಲವೂ ಆಗಿತ್ತು. ಆ ಹೊರೆಯಿಂದ ತಮ್ಮನ್ನು ಮುಕ್ತಗೊಳಿಸಬಲ್ಲ ಯಾವುದಾದರೂ ದಿವ್ಯವೊಂದರ ಕಡೆಗೆ ಜನ ಪ್ರಾರ್ಥನೆ ಸಲ್ಲಿಸುತ್ತಿದ್ದ ಕಾಲ ಅದು. ಹೆಣ್ಣುದೇವರುಗಳು ಒಲಿಯುವಷ್ಟು ಗಂಡು ದೇವರುಗಳು ಪ್ರಾರ್ಥನೆಗೆ ಒಲಿಯುವುದಿಲ್ಲವೆಂಬ ನಂಬಿಕೆ ಇದ್ದುದರಿಂದ ಹೆಣ್ಣು ದೇವರುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿತ್ತು. ಅವರ ಮೊರೆಗೆ ಶೀಘ್ರದಲ್ಲಿ ಅಂಬಾಭವಾನಿ ಪ್ರಸನ್ನಳಾದಳು. ಕೆಲವರಿಗೆ ಕನಸಿನಲ್ಲಿಯೂ ಕಾಣಿಸಿಕೊಂಡಳು. ಇತರ ಕೆಲವರನ್ನು ಸಂಕಷ್ಟಗಳಿಂದ ಪಾರು ಮಾಡಿದಳು. ಕೆಲವು ಜನರಿಗೆ

ಗುಪ್ತ ನಿಧಿಯನ್ನು ತೋರಿಸಿದಳು. ಆದರೆ ಗೊಂದಲಿಗರಿಗೆ ಮಾತ್ರ ಆ ಎಲ್ಲವುಗಳಿಗಿಂತ ಹೆಚ್ಚಿನದನ್ನು ಕರುಣಿಸಿದಳು. ಗೊಂದಲಿಗರು ಗೊಂದಲದ ನರ್ತನದಲ್ಲಿ ತೊಡಗಿದ್ದಾಗ ದೇವಿ ಅವರಲ್ಲಿನ ಒಬ್ಬನಲ್ಲಿ ಮೈದುಂಬಿ ಭವಿಷ್ಯವನ್ನು ಹೇಳತೊಡಗಿದಳು. ಅನೇಕ ಪವಾಡಗಳನ್ನು ಜರುಗಿಸಿದಳು ಎಂಬುದಾಗಿ ತಿಳಿದು ಬರುತ್ತದೆ. ಕವಡೆಗಳ ಮಾಲೆಯನ್ನು ಹಾಕಿಕೊಂಡು, ದೀವಟಿಕೆ ಹಿಡಿದು ಗೊಂಧಳ ಹಾಕಬೇಕು. ಎಲ್ಲಿ ಗೊಂಧಲ ಹಾಕಬೇಕೋ ಅಲ್ಲಿ ಆ ಸ್ಥಳದಲ್ಲಿರುವ ಎಲ್ಲರನ್ನೂ ಆಮಂತ್ರಿಸಬೇಕು. ಗೊಂಧಳಕ್ಕೆ ದೀವಟಿಕೆ, ಕವಡೆಗಳ ಮಾಲೆ, ಮಾತೃವಾದ್ಯ, ತಾಳ, ಶಂಖ, ಮೃದಂಗ, ವೀಣೆ, ಚಂಡೆ ಇತ್ಯಾದಿ ವಾದ್ಯಗಳ ಅವಶ್ಯಕತೆ ಇರುತ್ತದೆ. ಇದರಲ್ಲಿ ಉತ್ತಮ, ಮಧ್ಯಮ, ಕನಿಷ್ಠ ಎಂಬ ಮೂರು ಪ್ರಕಾರಗಳಿವೆ. ಉತ್ತಮ ಗುಂಪಿನಲ್ಲಿ ೩೨ ಮಂದಿ ಇರುತ್ತಾರೆ. ನಾಲ್ಕು ಮುಖ್ಯ ಗಾಯಕರು, ಎಂಟು ಸಮ ಗಾಯಕರು, ಎಂಟು ನರ್ತಕರು, ನಾಲ್ಕು ವಾಂಶಿಕರು, ನಾಲ್ಕು ತಾಳದಾರಿಗಳು ಹೀಗೆ ಮಧ್ಯಮ ಗುಂಪಿನಲ್ಲಿ ಒಟ್ಟು ೧೬ ಮಂದಿ ಇರುತ್ತಾರೆ. ಕನಿಷ್ಠಗುಂಪಿನಲ್ಲಿ ಎಂಟು ಮಂದಿ ಇರುತ್ತಾರೆ. ಒಟ್ಟಿನಲ್ಲಿ ಹೇಗೆ ನೃತ್ಯ ಮಾಡಬೇಕು. ದೀವಟಿಕೆಯನ್ನು ಯಾರು ಹಿಡಿಯಬೇಕು. ಯಾರು ವಾದ್ಯವನ್ನು ಹಿಡಿಯಬೇಕು. ಇವು ಮೊದಲೇ ನಿಶ್ಚಯವಾಗಿರುತ್ತವೆ.

'ಗೊಂಧಳಿಗರ' ಕುರಿತಾದ ವ್ಯಾಖ್ಯೆಗಳು :

ಎಂಥೋವನ್ ಅವರು ಗೊಂದಲಿಗರ ಕುರಿತು ಹೇಳುತ್ತಾ : ಗೊಂಧಳಿಗರ ಜನಸಂಖ್ಯೆ ೧೯೦೧ ರಲ್ಲಿ ೧೧,೬೮೨ ರಷ್ಟಿತ್ತು. ಸತಾರಾ, ಕೊಲ್ಹಾಪುರ, ಖಾಂದೇಶ, ಕೊಲ್ಲಬಾ ಜಿಲ್ಲೆಗಳಲ್ಲಿ ಕೊಲ್ಹಾಪುರದಲ್ಲಿ ಗೊಂಧಳಿಗರು ಕಂಡು ಬರುತ್ತಾರೆ. ೧೬ ನೆಯ ಶತಮಾನದ ಸುಮಾರಿಗೆ ತುಳಜಾಪುರದ ಅಂಬಾಭವಾನಿ ಆರಾಧಕರಾದ ಇವರು ಗೊಂಧಳ ಅಥವಾ ಗೊಂಧಲ ಎನ್ನುವ ವಿಶಿಷ್ಟ ಆರಾಧನಾ ವಿಧಾನವನ್ನು ಆಚರಿಸುತ್ತಿರುವ ಕುರಿತು ಗೊಂಧಲ ಹಾಕುವಾಗ ನೃತ್ಯ ಮಾಡುವ ವಿಚಾರಗಳನ್ನು ತಿಳಿಸುತ್ತಾರೆ. ಇವರ ವಿವಾಹ, ರೀತಿ-ನೀತಿ ಇತ್ಯಾದಿ ವಿಚಾರಗಳನ್ನು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ.

ಸೈಯದ್ ಸಿರಾಜ್ ಉಲ್ ಹಸನ್ ಇವರು ಮರಾಠಿ ಭಿಕ್ಷುಕರು, ಸಂಗೀತಗಾರರು ಮತ್ತು ನೃತ್ಯಗಾರರು ಆಗಿದ್ದಾರೆ. ಮರಾಠವಾಡದ ಎಲ್ಲಾ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ರೇಣುಕಾ ಮತ್ತು ಜಮದಗ್ನಿಯವರಿಂದ ಗೊಂದಲಿಗರು ಹುಟ್ಟಿದ್ದಾರೆ. ಹೀಗೆ ಮುಂತಾದ ವಿಷಯಗಳನ್ನು ತಿಳಿಸುತ್ತಾ ಈ ಸಮುದಾಯದ ಬೆಡಗುಗಳು, ವಿವಾಹ ಪದ್ಧತಿ ಇತರೆ ಆಚರಣೆಗಳನ್ನು ಕುರಿತು ಇವರು ಹೇಳುತ್ತಾರೆ.

ರಸಲ್ ಆರ್.ವಿ. ಇವರು ಗೊಂದಳಿಗರ ಕುರಿತು ವಿವರಿಸುತ್ತಾ : ಮರಾಠಾ ಜಿಲ್ಲೆಗಳಲ್ಲಿಯ ಸಂಗೀತ ವಾದ್ಯ ಪರಿಕರಗಳನ್ನು ನುಡಿಸುತ್ತಾ ಭಿಕ್ಷೆ ಬೇಡುವವರನ್ನು ಗೊಂದಲಿಗರು ಎಂದು ತಿಳಿಸುತ್ತಾರೆ.

ಕೆ.ಎಸ್. ಸಿಂಗ್ ಇವರು : ಗೊಂದಳಿ, ಗೊಂದಲಿಗ ಎನ್ನುವ ಶಿರೋನಾಮೆಯಲ್ಲಿ ಗೊಂದಳಿಗರ ವಿವರಗಳನ್ನು ನೀಡಿದ್ದಾರೆ. ಇವರು ಮಹಾರಾಷ್ಟ್ರ ಮತ್ತು ಕರ್ನಾಟಕದ ಗೊಂದಲಿಗರ ವಿವರಗಳನ್ನು ನೀಡಿದ್ದಾರೆ. ಕ್ಯಾತನಹಳ್ಳಿ ರಾಮಣ್ಣ ಇವರು 'ಗೊಂದಲಿಗರು ಒಂದು ಅಧ್ಯಯನ' ಎಂಬ ಪುಸ್ತಕದಲ್ಲಿ ಗೊಂದಳಿಗರು ಗೊಂದಳ ಹಾಕುವ ಕ್ರಮ, ಅವರ ಮೂಲ, ವಿವಾಹ ಪದ್ಧತಿ ಮತ್ತು ಇತರೆ ವಿಧಿ

ವಿಧಾನಗಳನ್ನು ನೀಡಿದ್ದಾರೆ. ಇದು ಗೊಂದಲಿಗರ ಕುರಿತು ಕನ್ನಡದ ಪ್ರಥಮ ಕೃತಿ.

ನಿಂಗಣ್ಣ ಸಣ್ಣಕ್ಕಿಯವರ 'ಗೊಂದಲಿಗರ ಸಂಸ್ಕೃತಿ' ಎನ್ನುವ ಕೃತಿ, ಮುದೇನೂರು ಸಂಗಣ್ಣನವರು 'ಗೊಂದಲಿಗರ ಕಾವ್ಯಗಳು' ಎನ್ನುವ ಕೃತಿಯೊಂದನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಎಚ್.ಜೆ. ಲಕ್ಕಪ್ಪಗೌಡ ಅವರು ಸಂಪಾದಿಸಿರುವ ಕರ್ನಾಟಕದ ಬುಡಕಟ್ಟುಗಳಲ್ಲಿ ಮಂಜುನಾಥ ಬೇವಿನಕಟ್ಟಿ ಇವರು ಬುಡಬುಡಕಿಯವರ ಕುರಿತು ಲೇಖನವೊಂದನ್ನು ಬರೆದಿದ್ದಾರೆ. ಇದರಲ್ಲಿ ಬುಡಬುಡಕಿಯವರ ಆಚರಣೆ, ಹಾಡುವ ರೀತಿ, ಭವಿಷ್ಯ ನುಡಿಯುವ ಕ್ರಮ ಮೊದಲಾದವುಗಳ ಬಗ್ಗೆ ಉಲ್ಲೇಖಗಳಿವೆ.

ಡಾ. ಎಂ.ಬಿ. ಎಮಿನೊ ಮತ್ತು ಟಿ. ಬರೂ ಅವರು ಗೊಂದಳಿಗರು ದ್ರಾವಿಡ ವಂಶದವರು. ಮಾಂಸಹಾರಿಗಳು ಎಂದು ತಿಳಿಸಿದ್ದಾರೆ. ಒಟ್ಟಾರೆ ಈ ಸಮುದಾಯದ ಬುಡಬುಡಕಿಯವರು, ಜ್ಯೋತಿಷ್ಯ ಹೇಳುವವರು, ಗಿಳಿ ಶಕುನ ಹೇಳುವವರು, ಗೊಂದಳಿಗರು, ಗೊಂಧಳ ಹಾಕುವವರು ಎಂಬ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತದೆ.

'ಗೊಂಧಳಿಗರ' ಶಬ್ದದ ಅರ್ಥ :

ದೇಶದ ನಾನಾ ಭಾಗಗಳಲ್ಲಿ ನೆಲೆಸಿರುವ ತಮ್ಮದೇ ಆದ ಸಂಸ್ಕೃತಿ ಹೊಂದಿದ ಈ ಜನಾಂಗದವರಿಗೆ ಗೊಂಧಲಿಗ್ಯಾರು, ಬುಡಬುಡಕ್ಯಾರು, ಜ್ಯೋತಿಷ್ಯಗಾರರು ಎಂದು ಕರೆಯುತ್ತಾರೆ. ವೃತ್ತಿ ಬೇರೆ ಬೇರೆಯಾದರೂ ಇವರ ಭಾಷೆ, ವೇಷ-ಭೂಷಣ, ಆಚಾರ-ವಿಚಾರ ಒಂದೇ. ಇವರು ದಪ್ಪನೆಯ ಮೈಕಟ್ಟು, ಸಾಮಾನ್ಯ ನಸುಗೆಂಪು, ಕಪ್ಪು ಬಣ್ಣವನ್ನು ಹೊಂದಿದ್ದು, ಕಪ್ಪು ಕೂದಲನ್ನು ಹೊಂದಿರುತ್ತಾರೆ. ಗೊಂಧಳಿ ವಾದ್ಯ, ಸಂಭಾಳ ಚೌಡಿಕೆಗಳಿಂದ ಹಾಡುಗಳನ್ನು ಹಾಡುತ್ತಾ ಭಿಕ್ಷಾಟನೆ ಮಾಡಿ, ಆಹಾರ ಪದಾರ್ಥ, ಕಾಳು-ಕಡಿ ಇತ್ಯಾದಿಗಳನ್ನು ಸಂಗ್ರಹಿಸುತ್ತಾರೆ. ಇವರು ಮಾತನಾಡುವ ಭಾಷೆ ಮರಾಠಿ ಇದ್ದರೂ ಖಿವಾರಿ ಭಾಷೆಯನ್ನು ಈ ಸಮುದಾಯದವರು ಬಳಸುತ್ತಾರೆ. "ಗೊಂಧಳ ಎನ್ನುವ ಪದ ಮರಾಠಿ ಭಾಷೆಯ ಗೊಂದಲ, ಗದ್ದಲ ಎಂಬ ಅರ್ಥ. ಅದೇ ರೀತಿ ಒಬ್ಬರಿಗಿಂತ ಹೆಚ್ಚಿನವರು ಕೂಡಿಕೊಂಡು ಗೊಂದಲಿಗರು, ಕತೆ ಹಾಗೂ ಹಾಡುಗಳನ್ನು ಹಾಡುವುದರಿಂದ ಗೋಂದಲಿ ಅಥವಾ ಗೋಂಧಳ, ಗೊಂದಲಿಗರು ಎಂದು ಕುಲಕಸುಬಿನಿಂದಲೇ ಗುರುತಿಸುತ್ತಾರೆ"[೮].

ಗೊಂಧಳಿಗರು ಕಂಡು ಬರುವ ಪ್ರದೇಶಗಳು :

ಗೊಂದಲಿಗರು ಮೂಲ ಮಹಾರಾಷ್ಟ್ರಿಗರೆಂದು, ಕರ್ನಾಟಕದವರು ಎಂದು ಹಲವರು ತಮ್ಮ ತಮ್ಮ ಅಭಿಪ್ರಾಯಗಳ ಮೂಲಕ ವಾದ ಮಂಡಿಸುತ್ತಾರೆ. ನಾನು ಇವರು ಮೂಲತಃ ಮರಾಠಿಗರೇ ಎಂದು ವಾದಿಸುತ್ತೇನೆ. ಈ ಹಿಂದೆ ಮಹಾರಾಷ್ಟ್ರ ಮತ್ತು ಕರ್ನಾಟಕ ಒಂದೇ ಆಗಿತ್ತು, ನೆಹರೂ ಅವರ ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ಪ್ರತ್ಯೇಕ ರಾಜ್ಯಗಳು ನಿರ್ಮಾಣವಾದವು. ಇವರ ಆದಿದೇವತೆ ತುಳಜಾಪುರದ ಅಂಬಾಭವಾನಿ. ಇದು ಮಹಾರಾಷ್ಟ್ರದಲ್ಲಿಯೇ ಉಳಿದುಕೊಂಡಿದೆ. ಕರ್ನಾಟಕದಲ್ಲಿನ ಸವದತ್ತಿಯ

ರೇಣುಕಾ ಯಲ್ಲಮ್ಮನ ಮಹಿಮೆ ಅಪಾರವಾದುದಾಗಿದೆ. ಅದರಂತೆ ಕರ್ನಾಟಕದವರೂ ಮಹಾರಾಷ್ಟ್ರದಲ್ಲಿನ ಶಕ್ತಿ ದೇವತೆಗಳಿಗೆ ಮೊರೆ ಹೋಗುತ್ತಾರೆ. ಮಹಾರಾಷ್ಟ್ರದಲ್ಲಿನ ಅನೇಕ ಜನರೂ ರೇಣುಕಾದೇವಿಗೆ ಬಂದು ಹೋಗುತ್ತಾರೆ. ಇವರು ಇಂದಿನವರೆಗೂ ಅಲೆಮಾರಿಗಳಾಗಿರುವುದರಿಂದ ಯಾವುದೇ ಮೂಲೆಯಲ್ಲಿ ವಾಸವಾಗಿರುತ್ತಾರೆ. ಕರ್ನಾಟಕದಲ್ಲಿ ಕನಿಷ್ಟ ೨೫ ಜಿಲ್ಲೆಗಳಲ್ಲಿ ಕಾಣ ಸಿಗುತ್ತಾರೆ. ಕುದರಿಮೋತಿ ಗ್ರಾಮದ ಮೊಹರಂ ಹಬ್ಬಕ್ಕೆ ಆಗಮಿಸುವ ಗೊಂದಲಿಗರು ಈ ೨೫ ಜಿಲ್ಲೆಗಳಿಂದ ಬಂದವರೇ ಆಗಿರುತ್ತಾರೆ. ಉದಾಹರಣೆಗೆ ಧಾರವಾಡ, ಬೆಳಗಾವಿ, ಬಾಗಲಕೋಟೆ, ಬಿಜಾಪುರ, ಬೀದರ, ಗುಲಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ, ಕೂರ್ಗ, ಗದಗ, ಹಾವೇರಿ, ಮಂಡ್ಯ, ಹಾಸನ, ಚಿತ್ರದುರ್ಗ, ದಾವಣಗೇರಾ, ತುಮಕೂರು, ಬೆಂಗಳೂರು, ಮೈಸೂರು, ಚಾಮರಾಜ ನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕಾರವಾರ, ಕೋಲಾರ ಹೀಗೆ ಅನೇಕ ಜಿಲ್ಲೆಗಳಲ್ಲಿ ಕಾಣಸುತ್ತಾರೆ. ನಗರ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ಬೀಡು ಬಿಟ್ಟಿರುತ್ತಾರೆ. ವೃತ್ತಿ ಜೀವನಕ್ಕಾಗಿ ಮೂರು ಅಥವಾ ಆರು ತಿಂಗಳುಗಳವರೆಗೆ ವಲಸೆ ಹೋಗಿ ಮತ್ತೆ ತಮ್ಮ ಸ್ವಂತ ಸ್ಥಳಕ್ಕೆ ಹಿಂದಿರುಗುತ್ತಾರೆ. ಇದರಲ್ಲಿ ಸಾಮಾನ್ಯವಾಗಿ ಎಂಟು - ಹತ್ತು ಕುಟುಂಬಗಳು ಇರಬಹುದು.

ಗೊಂದಲಿಗರು ಹಿಂದಿನ ಕಾಲದಿಂದ ಇಂದಿನವರೆಗೂ ಅಲೆಮಾರಿಗಳಾಗಿ ಕರ್ನಾಟಕದ ಅನೇಕ ಮೂಲೆಗಳಲ್ಲಿ ವಾಸವಾಗಿದ್ದಾರೆ. ಇವರು ಕರ್ನಾಟಕದಲ್ಲಿಯಷ್ಟೇ ಅಲ್ಲದೇ ಮಹಾರಾಷ್ಟ್ರ, ಗುಜರಾತ, ಆಂಧ್ರ ಪ್ರದೇಶ, ಮಧ್ಯ ಪ್ರದೇಶಗಳಲ್ಲಿಯೂ ವಾಸವಾಗಿರುವ ಕುರುಹುಗಳು ಬಹಳಷ್ಟಿವೆ. ಈ ಹಿಂದೆ ಅಲೆಮಾರಿಗಳಾಗಿದ್ದರು ಈಗ ಅರೆ ಅಲೆಮಾರಿಗಳಾಗಿ ಬದಲಾಗುತ್ತಿದ್ದಾರೆ.

ಜೀವನ ಪದ್ಧತಿ :

ಗೊಂದಲಿಗರ ಮೂಲ ವೃತ್ತಿ ಸಂಬಾಳ, ದೌಡಿಕೆ ಸಹಾಯದಿಂದ ಗೋಂಧಳ ಹಾಕುವುದು. ಅಂದರೆ ವಂಶ ಪಾರಂಪರಿಕವಾಗಿ ಕಥೆಯನ್ನು ಹೇಳುತ್ತಾ, ಹಾಡುಗಳ ಮೂಲಕ ಕಥೆಗಳನ್ನು ಕಟ್ಟುತ್ತಾ ಭಿಕ್ಷಾಟನೆ ಮಾಡುವುದು. ಗೊಂದಲಿಗರ ಜನಾಂಗದ ಹೆಣ್ಣುಮಕ್ಕಳ ಕೆಲಸ ಹರಕು ಚಿಂದಿ ಬಟ್ಟೆಯಿಂದ ಕೌದಿ ಹೊಲೆಯುವುದು. ಈ ಜನಾಂಗದವರು ಗೋಂಧಳ ಹಾಕುವುದನ್ನು ದೇವರ ಕೆಲಸ ಎಂದು ನಂಬಿ ಆ ನಂಬಿಕೆಯ ಮೂಲಕವೇ ತಮ್ಮ ಜನಾಂಗದ ಮೂಲ ಕಸುಬನ್ನು ಕೈಗೊಳ್ಳುತ್ತಾರೆ.

ಬುಡ ಬುಡಕೆ ಬಾರಿಸುತ್ತ ಭಿಕ್ಷೆ ಬೇಡುವುದು, ಭಂಟ್ಯಂಗಿ, ಎಣ್ಣೆ ಜೋಗಪ್ಪನ ವೇಷ ಹಾಕಿಕೊಂಡು ಭಂಟ್ಯಂಗಿ ಸಾರುವ ಕಾಯಕವು ಇವರಲ್ಲಿ ಹಲವರಿಗಿದೆ. ಈಗೀಗ ಹೆಣ್ಣುಮಕ್ಕಳು ಹಾಗೂ ಗಂಡಸರು ಪಾತ್ರೆ, ಬುಟ್ಟಿ ಹೊತ್ತುಕೊಂಡು ತಿರುಗಾಡುತ್ತಾ ವ್ಯಾಪಾರ ಮಾಡಿಕೊಂಡು ತಮ್ಮ ಉಪಜೀವನ ಸಾಗಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ಕೆಲವರು ಪಾತ್ರೆಗಳ ಮೇಲೆ ವಿಳಾಸ ಹೆಸರು ಹಾಕುತ್ತಾರೆ. ಕೆಲವರು ಕಸ ಮತ್ತು ಕಿವಿಯಲ್ಲಿ ಕೂಕಣಿಯನ್ನು ತೆಗೆದು ಉಪಜೀವನ ಸಾಗಿಸುತ್ತಾರೆ. ಇನ್ನು ಕೆಲವರು ಗಿಳಿ ಶಕುನ ಹೇಳುವ ಮೂಲಕ, ಮತ್ತೆ ಕೆಲವು ಜ್ಯೋತಿಷ್ಯ ಶಾಸ್ತ್ರವನ್ನು ಹೇಳುವುದರ ಮೂಲಕ ತಮ್ಮ ಆರ್ಥಿಕ ಬದುಕನ್ನು

ಸಾಗಿಸಿಕೊಂಡು ಹೋಗುತ್ತಿರುವುದನ್ನು ಕಾಣಬಹುದಾಗಿದೆ.

ಇಳಕಲ್ ಕೆರೂರ, ಗುಳೇದಗುಡ್ಡ, ಹೊಸಪೇಟೆ, ಬೀದರ ಹೀಗೆ ಹಲವು ಪ್ರದೇಶಗಳ ಕಡೆಗೆ ಈ ಜನಾಂಗಕ್ಕೆ ಸೇರಿದವರು ನಪೂರಿಯಲ್ಲಿ ಹಾಡುಗಳನ್ನು ನುಡಿಸುವ ಮೂಲಕ ಹೊಟ್ಟೆ ಹೊರೆದುಕೊಳ್ಳುತಿದ್ದಾರೆ.

'ಡೌರಿ' ಮತ್ತು 'ಪಿಂಗಳೆ'ಗಳೆಂದು ಕರೆಸಿಕೊಳ್ಳುವ ಈ ಜನಾಂಗದ ಬುಡಬುಡಕಿಯವರ ಆಹಾರ, ಆಚಾರ, ನಡಾವಳಿ ಮೊದಲಾದವರು ಕುಣಬಿಗಳಂತೆ ಇರುತ್ತವೆ. ಇವರು ಭಿಕ್ಷೆ ಬೇಡಲಿಕ್ಕೆ ಹೋದಾಗ ತಲೆಗೆ ಕೆಂಪು ಬಣ್ಣದ ಮುಂಡಾಸ ಹಾಕಿಕೊಳ್ಳುತ್ತಾರೆ. ಇಲ್ಲವೇ ಬಿಳಿ ಬಣ್ಣದ ಮುಂಡಾಸ ಹಾಕಿಕೊಂಡು ಅದರ ಮೇಲೆ ಕೆಂಪು ಅರಿವೆಯನ್ನು ಹಾಕಿಕೊಳ್ಳುವರು. ಚಿತ್ರಗಳುಳ್ಳ ಪ್ರಶ್ನೆಯ ಪುಸ್ತಕದ ಮೂಲಕ ಕಡ್ಡಿ ಭವಿಷ್ಯ ಹೇಳುತ್ತಾ ಇವರು ಊರೂರು ಅಲೆದು ಆಹಾರ ಕಂಡುಕೊಳ್ಳುತ್ತಾರೆ.

ಸಾಮಾನ್ಯವಾಗಿ ಈ ಜನಾಂಗದ ಬಹುತೇಕ ಮಹಿಳೆಯವರು ಕೌದಿಯನ್ನು ಹೊಲೆಯುವ ಕಸುಬನ್ನೇ ಮಾಡುತ್ತಾರೆ. ಹರಕು ಚಿಂದಿ ಬಟ್ಟೆಗಳನ್ನು ಆರಿಸಿಕೊಂಡು ಬಂದು, ಅವುಗಳನ್ನು ಹೊಲೆದು ನೂರಾರು ರೂಪಾಯಿಗಳಿಗೆ ಕೌದಿಯನ್ನು ಮಾರಿ ತಮ್ಮ ಜೀವನ ನಿರ್ವಹಣೆ ಮಾಡುತ್ತಾರೆ. ಒಂದು ಕೌದಿಯನ್ನು ತಯಾರು ಮಾಡಲು ಇವರು ೪ ರಿಂದಿ ೫ ದಿನಗಳನ್ನು ತೆಗೆದುಕೊಳ್ಳುವರು. ಆಧುನಿಕತೆಯ ಪ್ರಭಾವ ಈ ಜನಾಂಗದ ಮೇಲೆ ಆಗಿದ್ದರೂ, ಕೌದಿ ಹೊಲೆಯುವ ಕೆಲಸವನ್ನು ಇವರು ಇಂದಿಗೂ ಬಿಟ್ಟಿಲ್ಲ. ಇವರ ಕತೆಗಳಲ್ಲಿನ ನಂಬಿಕೆಯ ಪ್ರಕಾರ ಈ ಕೌದಿ ಹೊಲೆಯುವ ಕೆಲಸವು ಇವರ ವಂಶಪಾರಂಪರ್ಯದಿಂದ ಬಂದದ್ದು, ದೇವಿಯ ಆಶಿರ್ವಾದವಿರುವುದರಿಂದ ಇವರಿಗೆ ಈ ಕುಲಕಸುಬಿನ ಬಗ್ಗೆ ಅತ್ಯಂತ ಶ್ರದ್ಧೆ, ವಿಶ್ವಾಸ ಮತ್ತು ನಂಬಿಕೆಯ ಮನೋಭಾವನೆಗಳು ಇವೆ.

ಇವರು ಮೂಲತಃ ಕಾಡುಗಳಲ್ಲಿ ವಾಸವಾಗಿದ್ದ ಜನರಾದ್ದರಿಂದ ಬೇಟೆಗಾರಿಕೆಯೂ ಇವರ ವೃತ್ತಿಗಳಲ್ಲಿ ಒಂದಾಗಿದೆ. ಈಗಲು ಈ ಜನ ವನ್ಯಜೀವಿಗಳನ್ನು ಬೇಟೆಯಾಡುವುದು ಕಂಡು ಬಂದಿದೆ. ಮೊಲ, ಚಿಗರೆ, ಹಂದಿ, ಕೌಜಕ, ಅಡವಿಕೋಳಿ, ಮೀನುಗಳು ಇವರ ಆಹಾರದ ಬೇಟೆಗಳು.

'ಪಾಸಾ' ಎಂದು ಕರೆಯಲಾಗುವ ೨೦ ರಿಂದ ೬೦ ಅಡಿಯವರೆಗಿನ ಉದ್ದವಾದ ಬಲೆಯನ್ನು ಎಸೆದು, ಆ ಮೂಲಕ ಮೀನುಗಳನ್ನು ಹಿಡಿಯುತ್ತಾರೆ. ಮೂಲತಃ ಇವರು ಅಲೆಮಾರಿಗಳಾಗಿದ್ದರಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದು ಸಾಮಾನ್ಯವಾಗಿದೆ. ಆದ್ದರಿಂದ ಇವರು ತಮ್ಮ ಸಾಮಾನು, ಸರಂಜಾಮುಗಳನ್ನು ಸಾಗಿಸಲು ಪ್ರಾಣಿಗಳನ್ನು ಸಾಕುವುದು ಅನಿವಾರ್ಯವಾಗಿದೆ. ಆದ್ದರಿಂದ ಪಶುಪಾಲನೆಯೂ ಸಹ ಇವರ ಜೀವನ ಕ್ರಮದ ಒಂದು ಅವಿಭಾಜ್ಯ ಅಂಗವಾಗಿದೆ. ಆಕಳು, ಎತ್ತು, ಕುದುರೆ, ಕುರಿ, ಕೋಳಿಗಳು ಇವರ ಪಶು ಪಾಲನೆಯ ಪ್ರಾಣಿಗಳು.

ಆಹಾರ ಪದ್ಧತಿ :

ಗೊಂದಲಿಗರು ಮೂಲತಃ ಮಾಂಸಾಹಾರಿಗಳು. ಇವರು ವಲಸೆಗಾರರು.

ಮಾಂಸಾಹಾರಿಗಳಾಗಿದ್ದರೂ ಇವರು ಎಲ್ಲ ರೀತಿಯ ಪ್ರಾಣಿಗಳನ್ನು ತಿನ್ನುವುದಿಲ್ಲ. ತಮ್ಮ ನಂಬಿಕೆ, ಸಂಸ್ಕೃತಿ, ಪಾರಂಪರ್ಯಗಳ ಅನುಸಾರವಾಗಿ ತಾವು ಶ್ರೇಷ್ಠ ಹಾಗೂ ಪವಿತ್ರ ಎಂದು ನಂಬಿರುವ ಆಕಳು, ಕುದುರೆ ಮತ್ತು ಕನಿಷ್ಟ ಎಂದು ನಂಬಿರುವ ಹಂದಿಯ ಮಾಂಸ ಮುಟ್ಟುವುದಿಲ್ಲ. ಸಾಮಾನ್ಯವಾಗಿ ಕುರಿ, ಆಡು, ಚಿಗರೆ, ಮೊಲ, ಕೋಳಿ, ಮೀನು ಮುಂತಾದ ಪ್ರಾಣಿಗಳ ಮಾಂಸಗಳನ್ನು ಮಾತ್ರ ಇವರು ತಿನ್ನುತ್ತಾರೆ.

ಇವರ ಮೂಲವಾಸಸ್ಥಾನ ಅರಣ್ಯವಾಗಿದ್ದರಿಂದ ಇವರು ಮಾಂಸಹಾರಿಗಳಾಗಿರು ಕಾರಣವಾಗಿದೆ. ಬೇಟೆಯ ಮೂಲಕ ಹಿಡಿದು ತಂದ ಪ್ರಾಣಿಗಳನ್ನು ಬೇಯಿಸಿ ತಿನ್ನುವ ಪರಿಪಾಠ ಇವರಲ್ಲಿದೆ. ದೇವಿಯ ಹಬ್ಬ, ಜಾತ್ರೆ ಮತ್ತು ಇನ್ನಿತರ ವಿಶೇಷ ಸಂದರ್ಭಗಳಲ್ಲಿ ಇಡೀ ಸಮುದಾಯವೇ ಮಾಂಸಾಹಾರಿ ಊಟವನ್ನು ಸವಿಯುವುದರ ಮೂಲಕ ಆಚರಣೆಯನ್ನು ಮಾಡುತ್ತಾರೆ.

ಇನ್ನು ಸಸ್ಯಾಹಾರಕ್ಕೆ ಬಂದರೆ ಇವರು ಆಹಾರ ಧಾನ್ಯಗಳಲ್ಲಿ ಹೆಚ್ಚಾಗಿ ತಾವು ನೆಲೆಯೂರಿನ ಸ್ಥಳಗಳಲ್ಲಿ ಲಭ್ಯವಿರುವ ಆಹಾರ ಪದಾರ್ಥಗಳನ್ನೇ ಬಳಸುತ್ತಾರೆ. ಜೋಳ, ಗೋಧಿ, ಸಜ್ಜೆ ಅಕ್ಕಿ, ಬೇಳೆ ಕಾಳು, ಕಾಯಿಪಲ್ಲೆಗಳನ್ನು ಹೆಚ್ಚಾಗಿ ಉಪಯೋಗಿಸುವರು. ರೊಟ್ಟಿ ಮತ್ತು ಅನ್ನವನ್ನು ಇವರು ಹೆಚ್ಚಾಗಿ ತಿನ್ನುತ್ತಾರೆ. ಆದರೆ ಮಾಂಸಾಹಾರ ಇವರಿಗೆ ಪಂಚಪ್ರಾಣವಾಗಿದೆ. ಮಾಂಸ ಮತ್ತು ಖಾರ ವಸ್ತುಗಳನ್ನು ತಿನ್ನುವುದು ಇವರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಹೈನುಗಾರಿಕೆಯ ತುಪ್ಪ, ಬೆಣ್ಣೆ, ಹಾಲುಗಳ ಬಳಕೆ ಈ ಜನಾಂಗದವರಲ್ಲಿ ಹೆಚ್ಚಾಗಿ ಕಂಡು ಬರುವುದಿಲ್ಲ.

ಮೂಲತಃ ವಲಸೆಗಾರರಾಗಿರುವುದರಿಂದ ಇವರು ಕುಟುಂಬದ ನಿರ್ವಹಣೆಯ ವಿಷಯದಲ್ಲಿ ಹೆಚ್ಚಿನ ಕಾಳಜಿ ವಹಿಸುತ್ತಾರೆ. ಅಲೆಮಾರಿಗಳಾಗಿದ್ದರೂ ಕಾಲಮಾನಗಳ ಬದಲಾವಣೆಯ ಬಗ್ಗೆ ಚೆನ್ನಾಗಿ ಬಲ್ಲವರಾಗಿದ್ದರಿಂದ ಆಹಾರವನ್ನು ಹೇಗೆ ಸಂರಕ್ಷಣೆ ಮಾಡಬೇಕೆನ್ನುವುದರ ಕುರಿತು ತಿಳುವಳಿಕೆ ಹೊಂದಿದ್ದಾರೆ.

'ಕಾಳಕಿ' ಎಂದು ಕರೆಯಲಾಗುವ ಪಾನೀಯಗಳನ್ನು ಇವರು ಸೇವಿಸುತ್ತಾರೆ. ಸಾಮಾನ್ಯವಾಗಿ ಇವು ಮಾದಕ ಪೇಯಗಳು. ಇವರು ಊರೆಲ್ಲಾ ಸಂಚರಿಸಿ ದಣಿದು ಮನೆಗೆ ಬರುವುದರಿಂದ ಇದರ ಸೇವನೆ ಅವರಿಗೆ ಅನಿವಾರ್ಯವಾಗಿದೆ. ವೈಯಕ್ತಿಕವಾಗಿ ಇಲ್ಲವೇ ಸಾಮೂಹಿಕವಾಗಿ ಇವರು ಮದ್ಯ ಪೇಯಗಳನ್ನು ಉಪಯೋಗಿಸುತ್ತಾರೆ. ಹಬ್ಬ, ಹರಿದಿನ, ಜಾತ್ರೆ, ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಇವರು ಸಾಮೂಹಿಕವಾಗಿ ಮದ್ಯಪಾನ ಸೇವಿಸಿದರೆ, ದಣಿದು ಬಂದ ಸಂದರ್ಭಗಳಲ್ಲಿ ವೈಯಕ್ತಿಕವಾಗಿ ಸೇವನೆ ಮಾಡುತ್ತಾರೆ. ಒಂದೇ ರೀತಿಯ ಪಾನೀಯಗಳನ್ನು ಇವರು ಉಪಯೋಗಿಸುವುದಿಲ್ಲ. ಶೇಂದಿ, ಸರಾಯಿ, ಬತ್ತಿಸಾಕಾದ, ಕಾಳಕಿ, ಭಟ್ಟಿ ಸಾರಾಯಿ ಹೀಗೆ ಅನೇಕ ರೀತಿಯ ಮದ್ಯ ಪಾನೀಯಗಳನ್ನು ಇವರು ಸೇವಿಸುತ್ತಾರೆ. ಬೇರೆ ಜನಾಂಗದವರಂತೆ ಈ ಜನಾಂಗದ ಮಕ್ಕಳು, ಹೆಣ್ಣು ಮಕ್ಕಳು ಮದ್ಯಪಾನ ಮಾಡುದಿರುವುದು ವಿಶೇಷವಾಗಿದೆ.

ಆದರೆ ಇತ್ತೀಚಿಗೆ ಆಧುನಿಕ ಮದ್ಯ ಪಾನೀಯಗಳಾದ ಬಿಯರ್, ವಿಸ್ಕಿ, ಬ್ರ್ಯಾಂಡಿಗಳ ಸೇವನೆಯ ದುಶ್ಚಟಕ್ಕೆ ಈ ಜನಾಂಗದ ಗಂಡಸರು ಒಳಗಾಗಿದ್ದು, ಈ ಅಲೆಮಾರಿ ಜನಾಂಗದ ಗಂಡಸರು ತಮ್ಮ

ದುಡಿಮೆಯ ಬಹುಭಾಗದ ಹಣವನ್ನು ಕುಡಿತಕ್ಕೇ ಹಾಳು ಮಾಡುತ್ತಿರುವುದು ಕುಟುಂಬದ ಆರ್ಥಿಕ ಅಧಃಪತನಕ್ಕೆ ಕಾರಣವಾಗಿದೆ. ಕುಟುಂಬದ ಹೆಣ್ಣುಮಕ್ಕಳು ಮತ್ತು ಮಕ್ಕಳು ಇದರಿಂದ ಉಪವಾಸ ಬೀಳಬೇಕಾದ ಪ್ರಸಂಗಗಳು ಎದುರಾಗಿವೆ. ಇದರ ಜೊತೆಯಲ್ಲಿ ಪುರುಷರು ಎಲೆ, ಅಡಿಕೆ, ತಂಬಾಕು, ಚುಟ್ಟ, ಬೀಡಿ, ಹೊಗೆಸೊಪ್ಪು ಹೀಗೆ ಹೆಚ್ಚಿನ ಚಟಗಳಿಗೆ ಬದ್ಧಿರುವುದರಿಂದ ಪುರುಷರನ್ನು ಅವಲಂಬಿಸಿರುವ ಈ ಜನಾಂಗದ ಕುಟುಂಬಗಳು ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಿವೆ.

ಉಡುಗೆ-ತೊಡುಗೆ :

ಗೊಂದಲಿಗರ ಸಂಸ್ಕೃತಿಯಲ್ಲಿ ಇವರ ವಿಭಿನ್ನ ರೀತಿಯ ವೇಷಭೂಷಣಗಳಿಗೆ ತಮ್ಮದೇ ಆದ ಮಹತ್ವವನ್ನು ಹೊಂದಿದ್ದಾರೆ. ಇದರಿಂದ ಇವರ ವೇಷಭೂಷಣಗಳ ಆಧಾರದ ಮೇಲೆ ಇವರನ್ನು ಗುರುತಿಸುವುದು ಸುಲಭವಾಗಿದೆ. ಕಂಜರಭಾಟರು ರಸಿಕರು ಎಂಬುದನ್ನು ಅವರ ಉಡುಗೆ-ತೊಡುಗೆಗಳ ಮೂಲಕ ಗುರುತಿಸಬಹುದಾಗಿದೆ.

ಈ ಜನಾಂಗದ ಮಹಿಳೆಯರು ಸೌಂದರ್ಯ ಉಪಾಸಕರು. ಬಟ್ಟೆಗಳ ಜೊತೆಗೆ ಆಭರಣಗಳು, ಆಭರಣಗಳಿಂದ ಅವರ ರೂಪಕ್ಕೆ ಸೌಂದರ್ಯ ಒದಗುತ್ತದೆ. ಅವರ ಮೈ ಮೇಲೆಲ್ಲ ಆಭರಣಗಳು ಕಾಣಸಿಕೊಳ್ಳುತ್ತವೆ. ಬಂಗಾರ, ಬೆಳ್ಳಿ ಮತ್ತು ಇತರ ಲೋಹಗಳಿಂದ ಧರಿಸಿದ ಆಭರಣಗಳನ್ನು ಇವರು ಹಾಕಿಕೊಳ್ಳುತ್ತಾರೆ. ಆಭರಣಗಳು ಭಾರವಾಗಿದ್ದರೂ ಇವರು ಇವುಗಳನ್ನು ಧರಿಸಲು ಹಿಂದೆ ಮುಂದೆ ನೋಡುವುದಿಲ್ಲ. ಅವುಗಳ ಭಾರಕ್ಕಿಂತಲೂ ಅವುಗಳಿಂದ ಸೌಂದರ್ಯ ಒದಗುತ್ತದೆನ್ನುವ ಭಾವನೆ ಈ ಜನಾಂಗದ ಹೆಣ್ಣುಗಳಲ್ಲಿ ಬೇರು ಬಿಟ್ಟಿದೆ.

ಕೈಯಲ್ಲಿ ಉಂಗುರ ಬಳೆಗಳು, ೨೦-೩೦ ತೊಲೆಯ ಬೆಳ್ಳಿಯ ದಪ್ಪ ನಕ್ಲೆಸ್, ಮೂಗುತಿ, ಜುಮುಕಿ, ಹೂಬುಗಡಿ, ಕಾಲಿನಲ್ಲಿ ಬೆಳ್ಳಿ ಚೈನು, ತೊಡೆ, ಕಾಲಕಡ್ಗ, ಟೀಕಿ, ಚೋರಮಾಳ, ಝೂಲರಾ ಎಂದು ಕರೆಯುವ ಬೆಳ್ಳಿ ನಾಣ್ಯಗಳ ಸರ, ಸೊಂಟಕ್ಕೆ ಬೆಳ್ಳಿಯ ಪಟ್ಟಿ ಹೀಗೆ ಇವರು ಅನೇಕ ರೀತಿಯ ಆಭರಣಗಳನ್ನು ಧರಿಸಿ ತಮ್ಮ ಸೌಂದರ್ಯೋಪಾಸನೆ ತೋರಿಸುತ್ತಾರೆ.

ಇವರ ಬಟ್ಟೆಗಲು ರಾಜಸ್ಥಾನ ಮಹಿಳೆಯರ ಉಡುಗೆ-ತೊಡುಗೆಗಳನ್ನು ನೆನಪಿಗೆ ತರುತ್ತವೆ. ಬಣ್ಣ ಬಣ್ಣದ ಬಟ್ಟೆಗಳು, ಅದರ ಮೇಲೆ ಧರಿಸುವ ವಿವಿಧ ತರಹದ ಆಭರಣಗಳು ಇವರ ಸಹಜ ಸೌಂದರ್ಯಕ್ಕೆ ಮೆರಗು ತರುತ್ತವೆ. ಕೆಂಪು, ನೀಲಿ, ಹಳದಿ ಇವು ಇವರ ಅತ್ಯಂತ ಮೆಚ್ಚಿನ ಬಣ್ಣಗಳು. ಹೆಚ್ಚಾಗಿ ಇವರು ಇವೇ ಬಣ್ಣಗಳ ಬಟ್ಟೆಗಳನ್ನು ಧರಿಸುತ್ತಾರೆ.

ಉದ್ಯೋಗ :

ಈ ಹಿಂದೆ ಹೇಳಿದಂತೆ ಇವರ ಉದ್ಯೋಗ ಮೂಲತಃ ಬೇಟೆಗಾರಿಕೆ ಮತ್ತು ಭಿಕ್ಷಾಟನೆ. ಈ ಜನಾಂಗದ ವಿವಿಧ ಉಪಜಾತಿಗಳು ವಿವಿಧ ರೀತಿಯ ಕಸುಬುಗಳನ್ನು ನಡೆಸುತ್ತಿದ್ದಾರೆ. ಬುಡಬುಡಕಿಯವರು

ಬುಡಬುಡಕಿ ವಾದ್ಯ ಬಾರಿಸುತ್ತಾ ಭಿಕ್ಷಾಟನೆಯ ಮೂಲಕ, ಜೋಳಿಗೆಯಲ್ಲಿ ಚಿತ್ರಗಳುಳ್ಳ ಪ್ರಶ್ನೆಗಳ ಪುಸ್ತಕದ ಮೂಲಕ ಜ್ಯೋತಿಷ್ಯ ನುಡಿಯುವ ಮೂಲಕ, ಕಡ್ಡಿ ಭವಿಷ್ಯದ ಮತ್ತು ಹಾಲಕ್ಕಿಯ ನುಡಿಗಳ ಮೂಲಕ ಜೀವನ ಸಾಗಿಸಿದರೆ, ಭಾಟರು ಬೇಟೆ ಮತ್ತು ಭಿಕ್ಷಾಟನೆಯ ಮುಲಕ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಆದರೆ ಈ ಗೊಂದಲಿಗರ ಮೂಲ ಉದ್ಯೋಗ ಬೇಟೆಯಾಡುವುದು ಎಂದು ತಿಳಿದು ಬರುತ್ತದೆ. ಇವರ ಮೂಲ ಅರಣ್ಯವಾಗಿದ್ದರಿಂದ ಮತ್ತು ಇವರು ಮಾಂಸಾಹಾರಿ ಪ್ರಾಣಿಗಳ ಆರಾಧಕರಾಗಿದ್ದರಿಂದ ಅರಣ್ಯದಲ್ಲಿ ಸಿಗುವ ಪ್ರಾಣಿಗಳ ಬೇಟೆಯಿಂದಲೇ ಹೊಟ್ಟೆ ಹೊರೆದುಕೊಳ್ಳುತ್ತಿದ್ದರೆಂಬ ಉಲ್ಲೇಖಗಳಿವೆ. ನಂತರ ದೇವಿಯ ಆಶೀರ್ವಾದದಿಂದ ಕೌದಿಯನ್ನು ಹೊಲೆಯುವುದನ್ನು ತಮ್ಮ ವೃತ್ತಿ ಕಸುಬನ್ನಾಗಿ ಮಾಡಿಕೊಂಡರೆಂಬ ಮಾತುಗಳು ಇವೆ. ಈ ಜನಾಂಗದ ಬಹುತೇಕ ಮಹಿಳೆಯರ ಕಸುಬು ಕೌದಿ ಹೊಲೆಯುವುದೇ ಆಗಿದೆ. ಪಶುಪಾಲನೆಯೂ ಇವರಲ್ಲಿ ಕಂಡು ಬರುತ್ತದೆ.

ಮನೆ ಬಳಕೆಯ ವಸ್ತುಗಳು :

ಮೂಲತಃ ಇವರು ಅಲೆಮಾರಿಗಳಾಗಿದ್ದರಿಂದ ಒಂದೇ ಕಡೆ ನೆಲೆ ನಿಂತು ಬದುಕು ಸಾಗಿಸುವುದು ಇವರಿಗೆ ನಿಷಿದ್ಧವಾಗಿದೆ. ಆದ್ದರಿಂದ ಇವರು ತಮ್ಮ ವಲಸೆ ಜೀವನಕ್ಕೆ ತಕ್ಕಂತೆ ಸಹಾಯವಾಗಬಲ್ಲ ಹಗುರ ಹಾಗೂ ಕಡಿಮೆ ಬೆಲೆಗೆ ದೊರಕುವ ವಸ್ತುಗಳನ್ನು ಸಾಮಾನ್ಯವಾಗಿ ಬಳಸುತ್ತಾರೆ.

ಮೂಲತಃ ಇವರು ಕಟ್ಟಿಗೆಯ ಮತ್ತು ಮಣ್ಣಿನಿಂದ ತಯಾರಿಸಿದ ಅಡುಗೆಯ ವಸ್ತುಗಳನ್ನು ಬಳಸುತ್ತಿದ್ದರೂ ಇತ್ತೀಚಿಗೆ ಆಧುನೀಕರಣದ ಪ್ರಭಾವದಿಂದ ಪ್ಲಾಸ್ಟಿಕ್, ಅಲ್ಯೂಮಿನಿಯಂ ಮತ್ತು ಇನ್ನಿತರ ಸ್ಟೀಲ್‌ನ ವಸ್ತುಗಳನ್ನು ಬಳಸುತ್ತಿದ್ದಾರೆ.

ಕಲೆ ಮತ್ತು ಸಾಹಿತ್ಯ :

ಎಲ್ಲ ಅಲೆಮಾರಿ ಜನಾಂಗದವರಂತೆ ಇವರೂ ಅನಕ್ಷರಸ್ಥರು. ಆದರೂ ಸಹ ಇವರಲ್ಲಿನ ಕಲೆ, ಸಾಹಿತ್ಯ, ಭಾಷೆಯ ಬಳಕೆ, ಹಾಡು, ಪದಗಳ ಸೊಗಡು ಮನೋಹರವಾಗಿದೆ. ಇವರ ಮೂಲದ ಬಗ್ಗೆ ಉಗಮದ ಬಗ್ಗೆ ಸ್ಕಂದ ಪುರಾಣಾಂತರ್ಗತ ಖಂಡದ ಉತ್ತರಾರ್ಧದ ೪೦ ಅಧ್ಯಾಯಗಳ ರೇಣುಕಾ ಮಹಾತ್ಮೆಯಲ್ಲಿ, ೩೪ ನೇ ಅಧ್ಯಾಯದಲ್ಲಿ ಗೊಂಧಳಿ ನೃತ್ಯದ ಎಂಬ ಶಿರೋನಾಮೆಯಲ್ಲಿ ವಿವರಣೆ ಇದೆ.

ಇವರ ಸಾಹಿತ್ಯ ಅತ್ಯಂತ ಉಪಯೋಗಕಾರಿಯಾಗಿದ್ದು ಅದನ್ನು ಸಂರಕ್ಷಿಸಬೇಕಾದದ್ದು ಅನಿವಾರ್ಯವಾಗಿದೆ. ಕೇವಲ ಮೌಖಿಕ ಸಾಹಿತ್ಯವಾಗಿರುವ ಗೊಂದಲಿಗರ ಸಾಹಿತ್ಯವನ್ನು ಬರವಣಿಗೆ ರೂಪದಲ್ಲಿ ಶಾಶ್ವತವಾಗಿ ಸಂರಕ್ಷಿಸಲು ಅನೇಕ ಸಾಹಿತಿಗಳು, ಹಿರಿಯರು ಪ್ರಯತ್ನಿಸಿದ್ದಾರೆ. ಗೊಂದಲಿಗರ ಕತೆಗಳು ಅದ್ಭುತ ಹಾಗೂ ರಮ್ಯವಾದವುಗಳು. ಇವರ ಕಥಾ ಸಾಹಿತ್ಯವನ್ನು ಜನಪದ ಪದ್ಯವಾಗಲೀ ಅಥವಾ ಜನಪದ ಗದ್ಯವಾಗಲೀ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಗೊಂದಲಿಗರ ಕಥೆಗಲಲ್ಲಿ ಪ್ರಮುಖವಾದವುಗಳೆಂದರೆ :

೧) ಅದ್ಭುತ ಕತೆಗಳು

೨) ಅತಿಮಾನಸ ಕತೆಗಳು

೩) ಪೌರಾಣಿಕ ಕತೆಗಳು

೪) ಐತಿಹಾಸಿಕ ಕತೆಗಳು

ಇಷ್ಟೇ ಅಲ್ಲದೇ ಇವರ ಒಗಟುಗಳು, ಹಾಡುಗಳು, ಗೀಗೀ ಪದಗಳ ಸಾಹಿತ್ಯ, ಅದ್ಭುತವಾದ ಗಾದೆಗಳು, ತತ್ವಪದ, ದೇವಿಪದ ಹೀಗೆ ವಿಪುಲವಾಗಿರುವ, ಅರ್ಥಗರ್ಭಿತವಾಗಿರುವ ಮತ್ತು ಸಾಹಿತ್ಯ ಲೋಕಕ್ಕೆ ಪ್ರಯೋಜನಕಾರಿಯಾಗಿರುವ ಗೊಂದಲಿಗರ ಸಾಹಿತ್ಯವನ್ನು ಸಂಪೂರ್ಣವಾಗಿ ಬರವಣಿಗೆ ರೂಪದಲ್ಲಿ ಶಾಶ್ವತವಾಗಿ ಕಾಪಾಡಬೇಕಾದ ಅವಶ್ಯಕತೆಯನ್ನು ಮನಗಂಡು ನನ್ನ ಸಂಶೋಧನಾ ಪ್ರಬಂಧದಲ್ಲಿ ಇವರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ.

ಭಾಷೆ :

ಗೊಂದಲಿಗರ ಚರಿತ್ರೆ, ಹಿನ್ನೆಲೆ ಮತ್ತು ಭಾಷೆಯ ಬಗ್ಗೆ ಅನೇಕ ವಿದ್ವಾಂಸರು ಅನೇಕ ರೀತಿಯ ವಾದಗಳನ್ನು ಮುಂದಿಡುತ್ತಾರೆ. ಆದರೆ ಬಹುತೇಕ ವಿದ್ವಾಂಸರ ಅಭಿಪ್ರಾಯದ ಪ್ರಕಾರ ಗೋಂಧಳಿ ಸಮುದಾಯವೆಂದು ಕರೆಸಿಕೊಳ್ಳುವ ಈ ಗೊಂದಲಿಗರ ಭಾಷೆಯ ಮೂಲ ಮರಾಠಿಯಾಗಿದೆ. ಕರ್ನಾಟಕದಲ್ಲಿ ವಾಸವಾಗಿರುವವರು ಕನ್ನಡ ಮಾತನಾಡುತ್ತಾರೆ. 'ಖಿವಾರಿ' ಭಾಷೆಯನ್ನೂ ಸಹ ಇವರು ಹೆಚ್ಚಾಗಿ ಬಳಸುತ್ತಾರೆ. ''ಖಿವಾರಿ ಭಾಷೆ ಇವರ ಅನನ್ಯತೆಯ ಪ್ರತೀಕವಾಗಿದೆ. ಖಿವಾರಿ ಭಾಷೆಯು ಗೋಂಧಳಿ ಸಮುದಾಯವರಿಗೆ ಬಿಟ್ಟರೆ ಬೇರೆ ಯಾರಿಗೂ ಅರ್ಥವಾಗುವುದಿಲ್ಲ. ಆ ಕಾರಣದಿಂದಲೇ ಆ ಭಾಷೆ ಜೀವಂತವಾಗಿದೆ''[೪]. ಈ ಖಿವಾರಿ ಭಾಷೆಗೆ ಲಿಪಿ ಇಲ್ಲವಾದರೂ ಇವರು ಬಳಸುವ ಮರಾಠಿ ಮತ್ತು ಕನ್ನಡ ದ್ರಾವಿಡ ಮೂಲದ ಭಾಷೆಗಳಾಗಿದ್ದು, ಸಂವಿಧಾನಬದ್ಧ ರಾಜ್ಯಭಾಷೆಗಳಾಗಿವೆ.

ಸಾಮಾಜಿಕ ಸ್ಥಿತಿ-ಗತಿ :

ಇವರ ಸಾಮಾಜಿಕ ವ್ಯವಸ್ಥೆಯಲ್ಲಿ ಯಾರದೇ ಪ್ರವೇಶದ ಅವಕಾಶವಿಲ್ಲದಿರುವುದರಿಂದ ಇವರ ಸಾಮಾಜಿಕ ವ್ಯವಸ್ಥೆ ಅವರದೇ ಆದ ಚೌಕಟ್ಟು ಹೊಂದಿದೆ. ಗೊಂಧಳಿ ಸಮುದಾಯಲ್ಲಿ ಆಗುವ ತಪ್ಪು ತಡೆಗಳು, ಕುಲಪದ್ಧತಿಯ ಆಚಾರ, ಆಚರಣೆಗಳು, ಸಂಪ್ರದಾಯಗಳು, ರೀತಿ ರಿವಾಜುಗಳು ಪಾಲನೆಯಲ್ಲಿನ ತಂಟೆ ತಕರಾರುಗಳನ್ನು ಬಗೆಹರಿಸುವ ಪ್ರಕ್ರಿಯೆಯನ್ನು ಜಾತಿ ಪಂಚಾಯಿತಿ ನಿರ್ವಹಿಸುವುದು.

ಈ ಸಮುದಾಯದ ಮುಖ್ಯಸ್ಥನನ್ನು ಮಾನದಾರ ಎಂದು ಕರೆಯಲಾಗುತ್ತದೆ. ಇವರ ಸಾಮಾಜಿಕ ವ್ಯವಸ್ಥೆಯಲ್ಲಿ ಪಾಟೀಲ ಅಥವಾ ಪಂಚಾಯಿತಿಯ ಮುಖ್ಯಸ್ಥ, ನಾಯಕ, ಪಾಯಿಕ ಮತ್ತು ವಾಲಿಕಾರರು ಇರುತ್ತಾರೆ. ಇದಲ್ಲದೇ ಐದು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಉಳಿದ ಹಿರಿಯರನ್ನು

ಸಮುದಾಯದ ಪಂಚರೆಂದು ನೇಮಿಸುತ್ತಾರೆ.

ಈ ಪಂಚರು ಸಮುದಾಯದ ಸಾಮಾಜಿಕ ವ್ಯವಸ್ಥೆ ಸುವ್ಯವಸ್ಥಿತವಾಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ. ಹಬ್ಬ, ಹರಿದಿನ, ಜಾತ್ರೆ, ದೇವಿಯ ಹಬ್ಬ ಹೀಗೆ ಆಚರಣೆಗಳ ಪಾಲನೆಯಾಗುವಲ್ಲಿ ಯಾವುದೇ ರೀತಿಯ ಸಮಸ್ಯೆಗಳು, ತೊಡಕುಗಳು ಬರದಂತೆ ನೋಡಿಕೊಳ್ಳುತ್ತಾರೆ. ಸಮುದಾಯ ಸಮಾಜದಲ್ಲಿ ಮುಂದುವರಿಯಬೇಕಾದರೆ ಕುಲಪಂಚಾಯಿತಿ ಪಂಚರ ಮಾರ್ಗದರ್ಶನ ಇವರಿಗೆ ಅವಶ್ಯಕವಾಗಿದೆ.

ನ್ಯಾಯ ನಿರ್ಣಯಗಳನ್ನು ಈ ಪಂಚರೇ ಕೈಗೊಳ್ಳುತ್ತಾರೆ. ಕೂಲಂಕುಷವಾಗಿ ವಾದಿ - ಪ್ರತಿವಾದಿಯ ವಾದ - ಪ್ರತಿವಾದಗಳನ್ನು ಪರಿಶೀಲಿಸಿ ಸೂಕ್ತವಾದ ನಿರ್ಣಯ ಕೈಗೊಳ್ಳುತ್ತಾರೆ. ತಪ್ಪಿತಸ್ಥನಿಗೆ ದೈಹಿಕವಾದ ಮತ್ತು ದಂಡ ರೂಪದ ಶಿಕ್ಷೆಯನ್ನು ವಿಧಿಸುತ್ತಾರೆ. ಅತಿದೊಡ್ಡ ತಪ್ಪು ಎಸಗಿದ್ದಾಗ ಸಮಾಜದಿಂದ ದೂರ ಇಡುವ ಶಿಕ್ಷೆಯನ್ನೂ ವಿಧಿಸುತ್ತಾರೆ. ಒಟ್ಟಿನಲ್ಲಿ ಗೋಂದಲಿಗರ ಸಾಮಾಜಿಕ ನ್ಯಾಯ ವ್ಯವಸ್ಥೆ ಅವರದೇ ಸೀಮಿತ ಚೌಕಟ್ಟನ್ನು ಒಳಗೊಂಡಿದೆ.

ಗೊಂದಲಿಗರ ಸಮುದಾಯದಲ್ಲಿ ಅನೇಕ ಒಳಪಂಗಡಗಳಿವೆ. ಗೊಂದಲಿಗರು, ಜೋಷಿ, ಭಟ್ಟಂಗಿ, ಬುಡಬುಡಕಿಯವರು, ವಾಸುದೇವ, ಭೂತೇರು ಹೀಗೆ ಅವರನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಇವರ ಸಮಾಜವು ಹೆಚ್ಚಾಗಿ ರಕ್ತ ಸಂಬಂಧಿಗಳಿಂದಲೇ ಕೂಡಿದ್ದಾಗಿರುತ್ತದೆ.

ಗೊಂದಲಿಗರು ಇಂದಿನ ಆಧುನಿಕ ಯುಗಕ್ಕೆ ತಕ್ಕಂತೆ ಸಾಮಾಜಿಕ ಸ್ಥಾನ-ಮಾನ ಹೊಂದಿ, ಒಂದು ಕಡೆ ನೆಲೆ ನಿಲ್ಲುವ ಅಗತ್ಯವಿದೆ. ಅವರ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಿ, ವಿದ್ಯಾವಂತರನ್ನಾಗಿ ಮಾಡಿ ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸವಾಗಬೇಕಾಗಿದೆ.

ಉಪಸಂಹಾರ :

ಒಟ್ಟಾರೆಯಾಗಿ ಈ ಗೊಂದಲಿಗರ ಹಿನ್ನೆಲೆ, ಜೀವನ ಕ್ರಮ, ಅವರು ನಡೆದು ಬಂದ ದಾರಿ ಮತ್ತು ಅವರ ಇಂದಿನ ಸ್ಥಿತಿ-ಗತಿಗಳ ಅವಲೋಕನ ಮಾಡಲಾಗಿ ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸ್ಥಿತಿ ಅತ್ಯಂತ ಹೀನಾಯವಾಗಿದೆ ಎಂಬ ನಿರ್ಧಾರಕ್ಕೆ ಬರಬಹುದಾಗಿದೆ. ಮೂಲತಃ ಅವರು ಅನಕ್ಷರಸ್ಥರಾಗಿದ್ದು, ತಮ್ಮ ಬಗ್ಗೆ, ಕುಟುಂಬದ ಬಗ್ಗೆ, ಸಮುದಾಯದ ಬಗ್ಗೆ, ಸಾಹಿತ್ಯ-ಸಂಸ್ಕೃತಿ ಮತ್ತು ಅದರ ಅಳಿವು-ಉಳಿವಿನ ಬಗ್ಗೆ ಜಾಗೃತಿಯನ್ನೇ ಹೊಂದಿರದ ಜನರಾಗಿದ್ದಾರೆ.

ಮೂಢನಂಬಿಕೆಗಳ, ವಂಶ ಪಾರಂಪರ್ಯದ ಕಸುಬುಗಳಿಗೇ ಅವರು ಅವಲಂಬಿತರಾಗಿದ್ದರಿಂದ ಅವರು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಅವರು ಅಲೆಮಾರಿಗಳಾಗಿದ್ದರಿಂದ ವಿಸ್ತಾರ ಜಗತ್ತಿನ ಕೊಂಡಿಯೇ ಅವರಿಗೆ ಇಲ್ಲವಾಗಿದೆ.

ಅವರು ಅನಕ್ಷರಸ್ಥರಾಗಿದ್ದರೂ, ಅವರಲ್ಲಿ ಜಾಗೃತಿಯಿಲ್ಲದಿದ್ದರೂ ಅವರ ಮೌಖಿಕ ಹಾಗೂ ಮೌಲಿಕ ಸಾಹಿತ್ಯದಲ್ಲಿ ಅತ್ಯುತ್ತಮವಾದ ತಿರುಳು ಇದೆ. ಅವರ ಸಾಹಿತ್ಯ ಸಮಾಜಕ್ಕೆ ಉಪಯುಕ್ತವಾಗುವ

ಸಾಹಿತ್ಯವಾಗಿದೆ. ಗಾದೆಮಾತುಗಳು ಮತ್ತು ಗೀಗಿಪದಗಳಂತೂ ಅದ್ಭುತ ವಾಕ್ಯರಚನೆಗಳನ್ನುಹೊಂದಿವೆ. ಇವರ ಸಾಹಿತ್ಯದ ಅಧ್ಯಯನ ಈಗಾಗಲೇ ಬಹಳಷ್ಟು ವಿದ್ವಾಂಸರಿಂದ, ಹಿರಿಯರಿಂದ ಆಗಿದ್ದರೂ ಅವರ ಸಂಪೂರ್ಣ ಸಾಹಿತ್ಯದ ಅಭ್ಯಾಸ ಸಾಧ್ಯವಾಗಿಲ್ಲ. ಆದ್ದರಿಂದ ಅವರ ಕಥೆ, ಕಾವ್ಯ, ಗಾದೆ, ಒಡಪುಗಳು ಧ್ವನಿ ಮುದ್ರಿಕೆಯಲ್ಲಿಯೇ, ಹಾಳೆಯ ಮೇಲೆಯೋ ಶಾಶ್ವತವಾಗಿ ನಿಲ್ಲುವಂತೆ ಮಾಡುವ ಅವಶ್ಯಕತೆ ಇದೆ. ಇದನ್ನು ಮನಗಂಡು ಅವರ ಬಗ್ಗೆ ಕುದರಿಮೋತಿ ಗ್ರಾಮದ ಮೊಹರಂ ಹಬ್ಬದ ಸಂದರ್ಭದಲ್ಲಿ ಅವರ ಜೀವನ ಕ್ರಮದಿಂದ ಹಿಡಿದು ಭಾಷೆ, ಸಾಹಿತ್ಯ, ನಂಬಿಕೆ, ಆಚರಣೆಗಳ ಬಗ್ಗೆ ವಿಸ್ತೃತವಾದ ಕಾರ್ಯಕ್ಷೇತ್ರ ಮೂಲಕ ಅನೇಕ ವಿಷಯಗಳನ್ನು ಸಂಗ್ರಹಿಸಿ ವಿವರಿಸಿದ್ದೇನೆ.

ಇವರು ಮೂಲತಃ ಅರಣ್ಯ ಪ್ರದೇಶದವರಾಗಿದ್ದರಿಂದ ಆಯುರ್ವೇದದ ಅಪಾರ ಜ್ಞಾನ ಇವರಿಗಿದ್ದದ್ದು ಇವರು ಕಾಯಿಲೆ, ರೋಗದಿಂದ ಬಳಲುತ್ತಿರುವ ಸಂದರ್ಭದಲ್ಲಿ ವಿವಿಧ ರೀತಿಯ ಹಸಿರು ಎಲೆಗಳನ್ನು, ಕಾಂಡಗಳನ್ನು, ಬೇರುಗಳನ್ನು ತಮ್ಮಲ್ಲಿ ಸಂಗ್ರಹಿಸಿಟ್ಟುಕೊಂಡು, ಬಳಸುವದನ್ನು ನೋಡಿದಾಗ ಗೊತ್ತಾಗುತ್ತದೆ.

ಒಟ್ಟಿನಲ್ಲಿ ಇವರ ಸಾಹಿತ್ಯ, ಕಲೆ, ವೇಷಭೂಷಣದ ಪರಿಕರಗಳು, ವಿಶಿಷ್ಟತೆಯ ಬದುಕು, ಆಯುರ್ವೇದದಲ್ಲಿ ವಿವಿಧ ಸಸ್ಯಗಳ ಮಹತ್ವ ಹೀಗೆ ಅವರ ಜ್ಞಾನವನ್ನು ಸಂರಕ್ಷಿಸುವುದರ ಜೊತೆಗೆ ಸಮಾಜದಲ್ಲಿ ಅವರಿಗೂ ಸೂಕ್ತ ಸ್ಥಾನ-ಮಾನ ಸಿಗುವ ಕೆಲಸವಾಗಬೇಕೆಂಬುದನ್ನು ನಾನು ನನ್ನ ಸಂಶೋಧನಾ ಪ್ರಬಂಧದಲ್ಲಿ ಪ್ರತಿಪಾದಿಸುತ್ತೇನೆ.

ಹೀಗೆ ವಿವಿಧ ರೀತಿಯಲ್ಲಿ ತನ್ನದೇ ಆದ ವೈಶಿಷ್ಟ್ಯ ಮತ್ತು ವಿಭಿನ್ನತೆಯನ್ನು ಹೊಂದಿದ ಗೊಂಧಳಿಗ ಸಮುದಾಯದ ಜನತೆ ಕುದರಿಮೋತಿ ಮೊಹರಂ ಹಬ್ಬದಲ್ಲಿ ಭಾಗಿಗಳಾಗಿ ತಮ್ಮ ಭಕ್ತಿಯ ಪರಾಕಾಷ್ಠೆ ಮೆರೆದು ಮತ್ತೆ ಅಲೆಮಾರಿ ಬದುಕಿಗೆ ಸಾಗುತ್ತಾರೆ.

ಸಿಂಧೊಳ್ಳರು

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಸಿಂದೊಳ್ಳು ಸಮುದಾಯ ತನ್ನದೇ ಆದ ವೈಶಿಷ್ಟ್ಯ ಪಡೆದಿದೆ. ಇವು ಇತರೆ ಸಮುದಾಯದ ಜೊತೆಗೆ ಬದುಕು ಸಾಗಿಸುತ್ತಿದ್ದರೂ ಇನ್ಯಾವುದೋ ಸಮುದಾಯದ ಗಾಡ ಪ್ರಭಾವಕ್ಕೆ ಒಳಗಾಗಿಲ್ಲ. ತಮ್ಮದೇ ಆದ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ. ಇವರ ಸಾಂಸ್ಕೃತಿಕ ಬದುಕಿಗೆ ಇವರಲ್ಲಿನ ಕಲೆ, ಸಾಹಿತ್ಯ, ಜನಪದ ವೈದ್ಯ ಸಾಕ್ಷಿಯಾಗಿವೆ. ಇವರ ಸಾಂಸ್ಕೃತಿಕ ನಾಯಕರೆಂದರೆ ಮುನಿಸ್ವಾಮಿ, ಪೋತರಾಜ, ಈರ ನಾಗಮ್ಮ, ಮೊದಲಾದವರು.

ಸಿಂಧೊಳ್ಳು ಸಮುದಾಯದವರು ಕರ್ನಾಟಕ ಉದ್ದಗಲಕ್ಕೂ ಧಾರ್ಮಿಕ ಭಿಕ್ಷೆ ಬೇಡಿಕೊಂಡು ಅಲೆಮಾರಿ ಜೀವನ ಸಾಗಿಸುವಂಥವರು. ಅನೇಕ ಬುಡಕಟ್ಟು ಮತ್ತು ಅಲೆಮಾರಿ ಜನಾಂಗದವರಲ್ಲಿ ಈ ಸಿಂಧೊಳ್ಳು ಸಮುದಾಯವೂ ಅತ್ಯಂತ ಮಹತ್ವದ್ದು. ಭಾರತೀಯ ಸಾಮಾಜಿಕ ಸಂರಚನಾ ವ್ಯವಸ್ಥೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಜೈನ ಹೀಗೆ ಮೇಲ್ಪಂಕ್ತಿಯ ಕೆಲವು ಸಮಾಜಗಳು ಪ್ರಧಾನ ಧಾರೆಯಲ್ಲಿದ್ದು, ಅಂತಹ ಶ್ರೀಮಂತ ಸಮುದಾಯಗಳೇ ಶ್ರೇಷ್ಠ ಎಂಬ ಭಾವನೆ ಮೊದಲಿತ್ತು. ಆದರೆ ಬದಲಾದ ಇಂದಿನ ದಿನಮಾನಗಳಲ್ಲಿ ಮಾನವ ಶಾಸ್ತ್ರ ಸಮಾಜ ಶಾಸ್ತ್ರ ಜಾನಪದ ಮತ್ತು ಅನೇಕ ಅಧ್ಯಯನಕಾರರ ಸೂಕ್ಷ್ಮ ದೃಷ್ಟಿಯ ತಳಸ್ಪರ್ಶಿ ಅಧ್ಯಯನದಿಂದಾಗಿ ಅನೇಕ ಅನಾಥ ಹಾಗೂ ಅಳಿವಿನ ಅಂಚಿನಲ್ಲಿರುವ ಬುಡಕಟ್ಟು ಸಮುದಾಯಗಳ, ಅಲೆಮಾರಿಗಳ ಬದುಕು ಕೂಡ ವಿಶಿಷ್ಟ, ಅನನ್ಯ ಮತ್ತು ಅವಶ್ಯಕ ಎಂಬುದು ಮನವರಿಕೆಯಾಗಿದೆ.

ಆತ್ಮೀಯ ಸಂಬಂಧ, ನಯ-ವಿನಯಗಳ ಗುಣ, ಧಾರ್ಮಿಕ ಭಿಕ್ಷಾವೃತ್ತಿಯ ಸಹಬಾಳ್ವೆ ರೂಢಿಸಿಕೊಂಡು ಕರ್ನಾಟಕದ ಸುತ್ತೆಲ್ಲ ಹರಡಿಕೊಂಡಿರುವ ಸಿಂಧೊಳ್ಳರ ಸಮುದಾಯದ ನಿಜ ಬದುಕಿನ ಸಮಗ್ರ ಅಧ್ಯಯನದ ಮೂಲಕ ಸಿಂಧೊಳ್ಳರ ಕುರಿತ ಮಾಹಿತಿಗಳನ್ನು ಸಂಗ್ರಹಿಸುವುದು ಇಂದು ಅವಶ್ಯಕವಾಗಿದೆ.

ಸಿಂಧೊಳ್ಳರ ಸಮುದಾಯದ ಕುರಿತು ತಮ್ಮ ಮಹತ್ವದ ಕೃತಿಗಳ ಮೂಲಕ ಕೆ.ಎಸ್. ಸಿಂಗ್, ಯಾದಗಿರಿ ಶರ್ಮಾ, ಗೀತಾ ನಾಗಭೂಷಣ, ಚಂದ್ರಶೇಖರ ಕಂಬಾರ, ಚೆನ್ನಣ್ಣ ವಾಲೀಕಾರ, ಕೆ.ಆರ್. ದುರ್ಗಾದಾಸ್, ಅರ್ಜುನ ಗೊಳಸಂಗಿ, ಡಾ. ಸಿ.ಕೆ. ನಾವಲಗಿ, ದೊಡ್ಡಮನಿ ಲೋಕರಾಜ, ಪ್ರೊ. ಮಂಜುನಾಥ ಬೇವಿನಕಟ್ಟಿ ಹೀಗೆ ಅನೇಕ ಜನ ವಿದ್ವಾಂಸರು, ಹಿರಿಯರು ಹಲವಾರು ಮಹತ್ವದ ವಿಷಯಗಳನ್ನು ಬೆಳಕಿಗೆ ತಂದಿದ್ದಾರೆ. ಇವರುಗಳ ಪುಸ್ತಕಗಳು ಈ ಬುಡಕಟ್ಟು ಸಮುದಾಯಗಳಲ್ಲಿ ಸಂಸ್ಕೃತಿ, ಪರಂಪರೆ, ಹಿನ್ನೆಲೆ, ಬದುಕು, ಇವರ ಸಾಹಿತ್ಯ, ಜಾನಪದ ವೈದ್ಯ ಹೀಗೆ ಹಲವು ಉಪಯುಕ್ತ ಮಾಹಿಗಳನ್ನು ತಿಳಿಸಿಕೊಡುತ್ತವೆ. ಇವರು ಅನಕ್ಷರಸ್ಥರಾದರೂ ಇವರ ಜನಪದ ಸಾಹಿತ್ಯ ಯಾವುದೇ ಶಿಷ್ಟ ಸಾಹಿತ್ಯಕ್ಕೂ ಕಡಿಮೆ ಇಲ್ಲದಂತಿದೆ ಎಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದು, ಇವರಲ್ಲಿನ ಸಾಹಿತ್ಯದ ಮಹತ್ವವನ್ನು ತಿಳಿಸಿಕೊಡುತ್ತದೆ. ಇವರ ಭಾಷೆಗೆ ಲಿಪಿಯಿಲ್ಲದಿದ್ದರೂ ಅದರಲ್ಲಿನ ಮೌಲ್ಯವನ್ನು ಲಿಪಿಯಿರುವ ಭಾಷೆಯಲ್ಲಿ ಬರೆದಿಟ್ಟುಕೊಳ್ಳಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಿನ್ನೆಲೆ :

ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಸಿಂಧೊಳ್ಳು ಸಮುದಾಯ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಇವರ ಸಮುದಾಯಗಳ ಜೊತೆಗೆ ಬದುಕುತ್ತಿದ್ದರೂ, ಅಷ್ಟಾಗಿ ಯಾವುದೇ ಸಮುದಾಯದ ಪ್ರಭಾವಕ್ಕೆ ಒಳಗಾಗಿಲ್ಲ. ಇವರು ತಮ್ಮ ಪಾರಂಪರಿಕ, ಸಾಂಸ್ಕೃತಿಕ ಚಹರೆಗಳನ್ನು ಈಗಲೂ ಉಳಿಸಿಕೊಂಡು ಬಂದಿದ್ದಾರೆ. ಗುಡಾರ, ಭಿಕ್ಷೆ ಬೇಡುವ ಬುಟ್ಟಿ, ಮೊರ, ಚಾಟಿ, ಪೆಟ್ಟಿಗೆ ದೈವ ಇವರ ಸಾಂಸ್ಕೃತಿಕ ಬದುಕಿಗೆ ಸಾಕ್ಷಿಯಾಗಿವೆ, ಭಿಕ್ಷಾಟನೆಗೆ ಬಳಸುವ ದೈವಗಳ ಕಥೆಗಳಲ್ಲಿ ತಮ್ಮ ಸಮುದಾಯದ ಮೂಲ ಹಾಗೂ ಚಾರಿತ್ರಿಕ ಹಿನ್ನೆಲೆ ಕುರಿತು ಹಲವಾರು ಮೌಖಿಕ ಕಥನಗಳು ಇವರಲ್ಲಿ ಕಾಣಬಹುದು. ಇವರು ತಿಳಿಸುವ ಎಷ್ಟೋ ವಿವರಗಳಲ್ಲಿ ಪ್ರಾದೇಶಿಕ ಭಿನ್ನತೆಗಳನ್ನು ಕಾಣಬಹುದಾಗಿದೆ. ಇವರ ಸಾಂಸ್ಕೃತಿಕ ವೀರರಾದ ಮುನಿಸ್ವಾಮಿ, ಪೋತರಾಜ, ಈರನಾಗಮ್ಮ ಮುಂತಾದವರ ಕುರಿತು ವಿಪುಲವಾದ ಕಥನಗಳಿವೆ.

ಸಿಂಧೊಳ್ಳು ಸಮುದಾಯದಲ್ಲಿಯೂ ಬೇರೆ ಬುಡಕಟ್ಟುಗಳಲ್ಲಿರುವಂತೆ ಜಾತಿ ಮೂಲ ತಿಳಿಸುವ ಹಲವಾರು ಪೌರಾಣಿ ಕತೆಗಳು ಪ್ರಚಲಿತದಲ್ಲಿವೆ. ಈ ಪೌರಾಣಿಕ ಕತೆಗಳು ಆ ಸಮುದಾಯದ ಪರೋಕ್ಷ ವಿವರಗಳನ್ನು ನೀಡಬಲ್ಲವು ಹಾಗೂ ಅವುಗಳು ಆಯಾ ಸಮುದಾಯಗಳು ತಳೆದಿರುವ ನಂಬಿಕೆ, ಆರಾಧನೆ, ವೃತ್ತಿ ಸಾಮಾಜಿಕ ಹಿನ್ನೆಲೆ, ಸಂಸ್ಕೃತಿ ಇತ್ಯಾದಿಗಳ ಕುರಿತು ವಿವರಗಳನ್ನು ನೀಡಬಲ್ಲವು ಹಾಗೂ ಅವುಗಳು ಆಯಾ ಸಮುದಾಯಗಳು ತಳೆದಿರುವ ನಂಬಿಕೆ, ಆರಾಧನೆ, ವೃತ್ತಿ ಸಾಮಾಜಿಕ ಹಿನ್ನೆಲೆ, ಸಂಸ್ಕೃತಿ ಇತ್ಯಾದಿಗಳ ಕುರಿತು ವಿವರಗಳನ್ನು ನೀಡಬಲ್ಲವು.

ಸ್ತರ ವ್ಯವಸ್ಥೆ ಸ್ವರೂಪ ಪಡೆದಿರುವ ಭಾರತದಲ್ಲಿ ಎಲ್ಲಾ ಜಾತಿ ಸಮುದಾಯಗಳಿಗೂ ತಮ್ಮ ಮೂಲ ಕುರಿತಾಗಿ ಒಂದೊಂದು ಮೌಖಿಕ ಕಥನಗಳು ಚಾಲ್ತಿಯಲ್ಲಿರುತ್ತವೆ. ಅಂತೆಯೆ ಸಿಂಧೊಳ್ಳು ಸಮುದಾಯದಲ್ಲಿಯೂ ಕೂಡ ಹಲವಾರು ಮೌಖಿಕ ಕಥನಗಳಿವೆ. ಈ ಮೌಖಿಕ ಕಥನಗಳು ಆ ಸಮುದಾಯಕ್ಕೆ ಪೂರಕ ಮಾಹಿತಿಯನ್ನು ಮತ್ತು ಸಂಬಂಧವನ್ನು ಕಟ್ಟಿಕೊಡುವ ಜೊತೆಗೆ ಸಮುದಾಯಗಳಲ್ಲಿ ಚಾಲ್ತಿಯಲ್ಲಿರಬಹುದಾದ ನಂಬಿಕೆ ಆರಾಧನಾ ದೈವಗಳ ಜೀವನ ಕ್ರಮ, ವೃತ್ತಿ ಪ್ರವೃತ್ತಿ ಸಾಮಾಜಿಕ ಸಾಂಸ್ಕೃತಿಕ ಇತ್ಯಾದಿ ಕುರಿತು ವಿವರ ನೀಡಬಲ್ಲವು.

''ಸಾಮಾಜಿಕವಾಗಿ ತುಂಬಾ ಕೆಳಸ್ತರದಲ್ಲಿರುವ ಸಿಂಧೊಳ್ಳರು ಭಿಕ್ಷಾಟನೆಯಿಂದಾಗಿಯೇ ಜೀವನ ಸಾಗಿಸುವಂಥವರು. ಊರ ಹೊರಭಾಗಗಳಲ್ಲಿ ಇವರು ತಾತ್ಕಾಲಿಕವಾಗಿ ಗುಡಾರಗಳನ್ನು ರಚಿಸಿಕೊಳ್ಳುತ್ತಾರೆ. ಅಲೆಮಾರಿ ಸಮುದಾಯದ ಸಿಂಧೊಳ್ಳರು ಸಾಮಾನ್ಯವಾಗಿ ತಮ್ಮ ದೇವರ ಪುಟ್ಟಿಗಳೊಂದಿಗೆ ಊರಿಂದೂರಿಗೆ ಅಲೆಯುತ್ತಾರೆ. ಭಿಕ್ಷಾಟನೆಯಿಂದ ಬಂದ ಸಿದ್ಧ ಪದಾರ್ಥಗಳನ್ನೇ ಆಹಾರವಾಗಿ ಬಳಸುತ್ತಾರೆ. ಭಿಕ್ಷೆಯಲ್ಲಿ ದೊರೆಯುವ ಅಕ್ಕಿ ಇತ್ಯಾದಿ ಧಾನ್ಯಗಳಿಂದ ಅಡುಗೆ ಮಾಡಿಕೊಳ್ಳುವುದುಂಟು. ಗುಡಾರದ ಹೊರಭಾಗದ ಬಯಲಿನಲ್ಲಿ ಕಲ್ಲುಗುಂಡುಗಳನ್ನು ಬಳಸಿ ಒಲೆ ರಚಿಸಿಕೊಳ್ಳುತ್ತಾರೆ. ಗುಡಾರದ ಹೊರತಾಗಿ ಧರ್ಮಛತ್ರಗಳಲ್ಲಿಯೂ ಇವರು ನೆಲೆಸುವುದುಂಟು. ಒಂದು ಊರಿನಲ್ಲಿ ಭಿಕ್ಷಾಟನೆ ಮಾಡುವುದು ಮುಗಿದ ನಂತರ ಮುಂದಿನ ಊರಿಗೆ ತೆರಳುತ್ತಾರೆ. ಹಾಗೆ ಸಂತೆ, ಜಾತ್ರೆಗಳಲ್ಲಿಯೂ ಭಿಕ್ಷಾಟನೆ ಮಾಡುವುದು ಕಂಡು ಬರುತ್ತದೆ''[೧೦].

ಪೂರ್ವದಲ್ಲಿ ಮೈಲಿ, ದಡಾರ, ಕಾಲರಾ, ಪ್ಲೇಗಿನಂತಹ ಸಾಂಕ್ರಾಮಿಕ ರೋಗಗಳನ್ನು ನಿವಾರಿಸುವ ಶಕ್ತಿ ವೈದ್ಯಲೋಕಕ್ಕೆ ಇರದಂತಹ ಸಂದರ್ಭದಲ್ಲಿ ಜನತೆ ಅನಿವಾರ್ಯವಾಗಿ ದುಷ್ಟಶಕ್ತಿಯನ್ನು ನಿವಾರಿಸುವ ದೇವತೆಗಳಿಗೆ ಮೊರೆ ಹೋಗುತ್ತಿದ್ದರು. ಇಂತಹ ಸಾಂಕ್ರಾಮಿಕ ರೋಗಗಳು ಗ್ರಾಮಕ್ಕೆ ಬಾರದಂತೆ ತಡೆಯುವ ಶಕ್ತಿ ಸಿಂಧೊಳ್ಳರು ಹೊತ್ತುತರುವ ದೇವತೆಗಲಿಗೆ ಇದೆ ಎನ್ನುವ ನಂಬಿಕೆ ಜನರಲ್ಲಿತ್ತು. ಹಿಂದೆ ಊರ ಗೌಡರ ಪರವಾನಿಗೆ ಪಡೆದು ಭಿಕ್ಷೆ ಬೇಡುವ ಪದ್ಧತಿಯಿತ್ತು. ಆದರೆ ಈಗ ಪರವಾನಿಗೆ ಇಲ್ಲದೇ ಭಿಕ್ಷೆ ಬೇಡಬಹುದಾಗಿದೆ. ಒಟ್ಟಾರೆಯಾಗಿ ಗ್ರಾಮಗಳಿಗೆ ಬರುವ ಅನಿಷ್ಟಗಳನ್ನು ತೊಲಗಿಸುವ ಕಾರ್ಯವನ್ನು ಅವರು ತಮ್ಮ ದೇವತೆಗಳ ಮೂಲಕ ಮಾಡುತ್ತಾರೆ ಎನ್ನುವ ನಂಬಿಕೆ ಜನಸಾಮಾನ್ಯರಲ್ಲಿ ಕಂಡು ಬರುತ್ತದೆ.

ಸಿಂಧೊಳ್ಳರ ಮೂಲ :

"ಯಾವುದೇ ಸಮುದಾಯದ ಮೂಲ ನಿರ್ದಿಷ್ಟವಾಗಿ ಇಂತಹದ್ದೇ ಎಂದು ಹೇಳುವುದು ಸಾಧ್ಯವಿಲ್ಲ. ಅಲೆಮಾರಿಗಳು ಎಲ್ಲಿ ಆಹಾರ, ಆಶ್ರಯ ಮತ್ತು ಬೇಟೆ ಸಿಗುವುದೋ ಅಲ್ಲಿ ತಮಗೆ ಬೇಕಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು ನೆಲೆಸಿರುವುದನ್ನು ಕಾಣಬಹುದಾಗಿದೆ. ಅದೇ ರೀತಿಯಲ್ಲಿ ಸಿಂಧೊಳ್ಳು ಸಮುದಾಯ ತಮಗೆ ಬೇಕಾದ ಪರಿಸರದಲ್ಲಿ ವಾಸಿಸುತ್ತಾ ಧಾರ್ಮಿಕ ಭಿಕ್ಷಾಟನೆ ಮತ್ತು ಬೇಟೆಯ ಮೂಲಕವೇ ಆಹಾರ ಸಂಪಾದಿಸಿಕೊಂಡು ಜೀವನ ಸಾಗಿಸುತ್ತಾ ಬಂದಿರುವರು. ಇಂದಿಗೂ ಸಹ ಕಾಡಿನ ಹೊರ ಭಾಗ, ಊರಿನ ಹೊರಗಿನ ಬಯಲು ಪ್ರದೇಶಗಳಲ್ಲಿ ಹಾಗೂ ನಗರಗಳ ಕೊಳಚೆ ಪ್ರದೇಶಗಳಲ್ಲಿ ಬೀಡುಬಿಟ್ಟು ಬದುಕು ಸಾಗಿಸುತ್ತಿರುವುದನ್ನು ಕಾಣಬಹುದಾಗಿದೆ"[೧೧].

ಸಿಂಧೊಳ್ಳರು ತೆಲುಗು ಮಾತೃಭಾಷಿಕರಾಗಿರುವದರಿಂದ ಇವರ ಬೆಡಗುಗಳಲ್ಲಿ ತೆಲುಗು ಎಡೆಗಳು ಕಾಣಸಿಗುವವರು. ಹೀಗಾಗಿ ಇವರನ್ನು ಆಂಧ್ರಮೂಲದವರೆಂದು ಹೇಳಬಹುದು. ಆಂಧ್ರಪ್ರದೇಶದ ಮೆಹಬೂಬನಗರ, ಹೈದರಾಬಾದ್, ಅನಂತಪುರ, ಅದೋನಿ, ಕಡಪ, ರಾಯದುರ್ಗ ಇತ್ಯಾದಿ ಸ್ಥಳಗಳಲ್ಲಿರುವ ಸಿಂಧೊಳ್ಳು ಸಮುದಾಯವು ಕರ್ನಾಟಕ ಗಡಿಭಾಗಗಳಲ್ಲಿಯೂ ಹೆಚ್ಚಾಗಿ ನೆಲೆಸಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಇವರನ್ನು ಸಿಂಧೊಳ್ಳು, ಚಿಂದೋಳ್ಳು ಎಂದು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಗುರುತಿಸಲಾಗುತ್ತದೆ. ಇವರು ಕರ್ನಾಟಕದ ಬಳ್ಳಾರಿ, ರಾಯಚೂರು, ಗುಲಬರ್ಗಾ, ಬೀದರ, ಕೊಪ್ಪಳ ಇತ್ಯಾದಿ ನೆಲಗಳಲ್ಲಿ ವಾಸವಾದ ಸಿಂಧೊಳ್ಳರೊಂದಿಗೆ ರಕ್ತ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಸಿಂಧ್ಯಾಲೋಳ್, ಸಿಂಧೊಳ್ಳು, ರಾವುಲೋಳ್, ಪೆದ್ದ ದ್ಯಾಮನೋರ್, ದ್ಯಾಮನೋರ್ ಕೋಟಲು ಮುಂತಾದ ಬೆಡಗುಗಳು ಇವೆ. ಇವೇ ಬೆಡಗುಗಳು ಆಂಧ್ರಪ್ರದೇಶದ ಸಿಂಧೊಳ್ಳುರಲ್ಲಿಯೂ ಕಾಣಬರುತ್ತವೆ. ಈ ಹಿನ್ನೆಲೆಯಲ್ಲಿ ಸಿಂಧೊಳ್ಳು ಮೂಲತಃ ಆಂಧ್ರದವರಾಗಿರಬೇಕು.

ಸಿಂಧೊಳ್ಳು ಸಮುದಾಯವು ಮೂಲತಃ ಆಂಧ್ರ ಪ್ರದೇಶದ ತೆಲಂಗಾಣವು ಮೂಲ ನೆಲೆಯಾಗಿರುವುದಾಗಿ ಅಧ್ಯಯನಕಾರರ ಅಭಿಪ್ರಾಯವಾಗಿದೆ. ಕಾಲಾನಂತರದಲ್ಲಿ ಕರ್ನಾಟಕ,

ಮಹಾರಾಷ್ಟ್ರ, ಒರಿಸ್ಸಾ ಮುಂತಾದ ಪ್ರದೇಶಗಳಿಗೆ ಗುಳೆ ಹೋಗಿರಬೇಕು. ಸಿಂಧೊಳ್ಳರ ಕುರಿತು ಹನ್ನೆರಡನೆಯ ಶತಮಾನದಲ್ಲಿನ ವಚನಗಳಲ್ಲಿಯೂ ಉಲ್ಲೇಖಗಳಿರುವುದರಿಂದ ಬಹಳಷ್ಟು ಹಿಂದಿನ ಕಾಲದಿಂದಲೇ ಸಿಂಧೊಳ್ಳರು ಕರ್ನಾಟಕದಲ್ಲಿ ವಾಸವಾಗಿದ್ದರು ಎಂಬ ಅಂಶ ತಿಳಿದು ಬರುತ್ತದೆ. ಇವರು ಮಂಗಳೂರು, ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಸಿಗುವುದಿಲ್ಲ. ಆಂಧ್ರ ಪ್ರದೇಶಕ್ಕೆ ತೀರಾ ಹತ್ತಿರವಿರುವ ಕರ್ನಾಟಕದ ಬೀದರ, ಗುಲಬರ್ಗಾ, ರಾಯಚೂರು, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈ ಸಮುದಾಯದವರು ಹೆಚ್ಚಾಗಿ ಕಂಡು ಬರುತ್ತಾರೆ.

'ಸಿಂಧೊಳ್ಳು' ಶಬ್ದದ ಅರ್ಥ, ಹೆಸರು, ಔಚಿತ್ಯ :

ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯಲಾಗುವ ಈ ಸಮುದಾಯವನ್ನು ಆ ಜನಾಂಗದವರು ಮಾತ್ರ ತಮ್ಮನ್ನು ಚಿಂದೋಳ್ಳು, ಸಿಂಧೊಳ್ಳು ಜಾತಿಗೆ ಸೇರಿದವರು ಎಂದು ಕರೆದುಕೊಳ್ಳುತ್ತಾರೆ. ಸಿಂಧೊಳ್ಳರು ಬಹುತೇಕ ವಿದ್ವಾಂಸರ ಪ್ರಕಾರ ಆಂಧ್ರ ಮೂಲದವರಾದ್ದರಿಂದ, ಸಿಂಧೊಳ್ಳು ಭಾಷೆಯು ಸಹ ತೆಲುಗು ಮೂಲದ ಭಾಷೆಯಾಗಿದೆ. ಮೂಲತಃ ಆಂಧ್ರ ಮೂಲದ ಸಿಂಧ್‌ಮಾದಿಗರಿಗೂ, ಸಿಂಧೊಳ್ಳರಿಗೂ ಕೆಲವೊಂದು ಸಾಮ್ಯತೆಗಳು ಕಂಡು ಬಂದಿರುವುದರಿಂದ, ಸಿಂಧೊಳ್ಳರು ಸಿಂಧ್ ಮಾದಿಗರಲ್ಲಿನ ಒಂದು ಭಾಗ ಅಥವಾ ಪಂಗಡವಾಗಿರಬಹುದಾದ ಸಾಧ್ಯತೆಯೂ ಇದೆ.

ಆಂಧ್ರದಲ್ಲಿ ಸಿಂಧೊಳ್ಳರನ್ನು ಸಿಂಧುವಾಳ್ಳು, ಚಿಂದುವಾಳ್ಳು, ಚಿಂದೋಲ್ಲು, ಸಿಂಧೊಳ್ಳು ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಚಿಂದಲು, ಚಿಂದರು, ಚಿಂದೊರು, ಚಿಂದೊಳ್ಳ, ಸಿಂಧೊಳ್ಳು ಆಗಿರಬೇಕು. ತೆಲುಗಿನ ಚಿಂದುವೇ ಕನ್ನಡದಲ್ಲಿ ಸಿಂಧು ಆಗಿರಬೇಕು. ಸಿಂಧೊಳ್ಳರು ಭಿಕ್ಷಾಟನೆಯ ಸಂದರ್ಭದಲ್ಲಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುವುದರಿಂದ ಇವರಿಗೆ ಆ ಹೆಸರು ಬಂದಿರಬೇಕು.

ಕನ್ನಡ ನಾಡಿನಲ್ಲಿ ನೆಲೆಸಿರುವ ಸಿಂಧೊಳ್ಳು ಎಂದು ಕರೆಯುವ ಸಾಧ್ಯತೆ ಇದೆ. ಸಾಮಾನ್ಯವಾಗಿ ತೆಲುಗು ಮೂಲದ ಭಾಷೆಯನ್ನು ಮಾತನಾಡುತ್ತಾರೆ. ಸಿಂಧೊಳ್ಳು ಸಮುದಾಯದವರು ಕರ್ನಾಟಕದ ಉದ್ದಗಲಕ್ಕೂ ಅಲೆಮಾರಿ ಜೀವನ ನಡೆಸಿಕೊಂಡು ಸಾಗಿದಂಥವರು. ಇವರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡು ಬರುತ್ತಿದ್ದರೂ, ಪ್ರಾದೇಶಿಕವಾರು ವಿವಿಧ ಹಾಗೂ ವಿಭಿನ್ನ ರೀತಿಯ ಹೆಸರುಗಳಿಂದ ಇವರನ್ನು ಕರೆಯಲಾಗುತ್ತದೆ.

ಇವರಿಗೆ ದುರಗಮುರಗಿ, ಬುರ್ರ ಬುರ್ರಚಾ, ಬುರ್ರ ಮಾರಿಯರ್, ಬುರ್ರ ಬುರ್ರ ಪೋಚಮ್ಮ, ಬುರ್ರ ಬುರ್ರ ಸುಂಕಲಮ್ಮ, ಊರಮಾರಿಯರ್ ಅಥವಾ ಉರುಮಿಯೋರು, ಬುಟ್ಟಿಕೂಗಮ್ಮ, ಕೂಗಮ್ಮನ ಆಡಿಸುವವರು, ಮರಗವ್ವನ ಆಡಿಸುವವರು, ದುರಗಮ್ಮನ ಆಡಿಸುವವರು, ಊರಮ್ಮನ ಆಡಿಸುವವರು, ಬಂಡಿಗಾಲಿನ ಪೋತರಾಜ, ಪೋತರಾಜ, ಪೋತಪ್ಪ, ಪೋತ್ಯಾ, ಪೋತರಾಜ್, ಪೆಟ್ಟಿಗೆ ಪೂಜಾರಿ, ಪೂಜಾರರು, ದ್ಯಾವರು ಪೂಜಾರರು, ಭಿಕ್ಷುಕರು ಹೀಗೆ ಹಲವಾರು ಹೆಸರುಗಳಿಂದ ಕರೆಯಲಾಗುತ್ತದೆ.

'ಸಿಂಧೊಳ್ಳು'ರ ಹೆಚ್ಚಾಗಿ ಕಂಡು ಬರುವ ಪ್ರದೇಶಗಳು :

ಸಿಂಧೊಳ್ಳು ಜನಾಂಗವು ಮೂಲತಃ ಆಂಧ್ರಪ್ರದೇಶದ ತೆಲಂಗಾಣದವರೆಂದು ಅಂದಾಜಿಸಲಾಗಿದೆ. ನಂತರದ ದಿನಗಳಲ್ಲಿ ಬದಲಾದ ಕಾಲಕ್ಕೆ ತಕ್ಕಂತೆ ಆಂಧ್ರಪ್ರದೇಶಕ್ಕೆ ಹತ್ತಿಕೊಂಡ ಇತರ ರಾಜ್ಯಗಳ ಗಡಿಪ್ರದೇಶಗಳಿಗೂ ಇವರು ವಲಸೆ ಹೋದರು ಎನ್ನುವ ತರ್ಕವಿದೆ. ಸಿಂಧೊಳ್ಳರ ಉಲ್ಲೇಖಗಳನ್ನು ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದ ವಚನಗಳಲ್ಲಿ ಕಾಣುವುದರಿಂದ ಇವರ ಕರ್ನಾಟಕದಲ್ಲಿನ ವಾಸದ ಬಗ್ಗೆ ೮೦೦ ವರ್ಷಗಳಷ್ಟು ಹಿಂದಕ್ಕೆ ಹೋಗಬೇಕಾಗುತ್ತದೆ. ಇವರು ಮೂಲತಃ ವಲಸಿಗರಾಗಿದ್ದರಿಂದ ಕರ್ನಾಟಕದಾದ್ಯಂತ ಭಿಕ್ಷಾಟನೆ ಮಾಡುತ್ತ ಹಲವು ಪ್ರದೇಶಗಳಲ್ಲಿ ಹರಿದು ಹಂಚಿ ಹೋದರು. ಆಂಧ್ರದ ಗಡಿಭಾಗದ ಕರ್ನಾಟಕ ಪ್ರದೇಶಗಳಲ್ಲಿ ಇವರ ಸಂಖ್ಯಾಬಲ ಬಹಳಷ್ಟಿದೆ. ಬೀದರ, ಗುಲಬರ್ಗಾ, ರಾಯಚೂರು, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈ ಸಮುದಾಯದ ಜನ ಹೆಚ್ಚಾಗಿ ಕಂಡು ಬರುತ್ತಾರೆ.

ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಇವರು ಪರಿಶಿಷ್ಟ ಜಾತಿಯಡಿಯಲ್ಲಿ ಬರುತ್ತಿದ್ದು, ೨೦೦೧ ರ ಜನಗಣತಿಯ ಪ್ರಕಾರ ಭಾರತದಲ್ಲಿ ಇವರ ಒಟ್ಟು ಜನಸಂಖ್ಯೆ ೨,೪೮೩ ಎಂದು ತಿಳಿದು ಬಂದಿದೆ. ಲಿಂಗವಾರು ಹಂಚಿಕೆ ಮಾಡಲಾಗಿ ಗಂಡಸರು ೧,೨೩೪ ಆದರೆ ಹೆಂಗಸರು ೧,೨೪೯ ಆಗಿದೆ. ಇನ್ನು ಕರ್ನಾಟಕದಲ್ಲಿ ಸಿಂಧೊಳ್ಳು ಸಮುದಾಯದ ಜನಸಂಖ್ಯೆ ಕೇವಲ ೧೬೩. ಇದರಲ್ಲಿ ಗಂಡಸರ ಸಂಖ್ಯೆ ೭೫ ಮತ್ತು ಹೆಂಗಸರ ಸಂಖ್ಯೆ ೮೮. ಸಿಂಧೊಳ್ಳು ಸಮುದಾಯವು ಗ್ರಾಮ ಪ್ರದೇಶಗಳಿಗಿಂತ ನಗರ ಪ್ರದೇಶದಲ್ಲಿ ವಾಸವಾಗಿರುವುದು ಕಂಡು ಬಂದಿದೆ.

ಜೀವನ ಪದ್ಧತಿ :

ಸಿಂಧೊಳ್ಳರ ಜೀವನ ಪದ್ಧತಿ ಮೇಲುನೋಟಕ್ಕೆ ಸಾಮಾನ್ಯವೆನಿಸಿದರೂ, ಹಲವು ವೈಶಿಷ್ಟ್ಯಗಳ ಆಗರವಾಗಿದೆ. ಮೂಲತಃ ಇವರು ವಲಸಿಗರಾಗಿದ್ದರಿಂದ ಇವರ ಜೀವನ ಪದ್ಧತಿಯು ವಲಸೆ ಜೀವನಕ್ಕೆ ಹೊಂದಿಕೊಂಡು ನಡೆಯುವಂತಹದ್ದು. ಇವರು ಯಾವ ಪ್ರದೇಶದಲ್ಲಿ ಬೀಡು ಬಿಟ್ಟಿರುವರೋ ಆಯಾ ಪ್ರದೇಶದ ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡು, ಅಲ್ಲಿನ ಆಹಾರ ಪದ್ಧತಿಗೆ ಒಗ್ಗಿಕೊಳ್ಳುತ್ತಾರೆ.

ಇವರ ಮೂಲ ವೃತ್ತಿ ಭಿಕ್ಷಾಟನೆ. ಇವರಿಗೆ ಕೃಷಿ ಭೂಮಿ ಇಲ್ಲವೆಂದೇ ಹೇಳಬೇಕು. ಇಷ್ಟು ದಿನ ಇವರು ಅಲೆಮಾರಿ ಬದುಕನ್ನು ಭಿಕ್ಷೆಯ ಮೂಲಕ, ಹಾಡು ಹಾಡಿ ರಂಜಿಸುವ ಮೂಲಕ, ದೇವ-ದೇವತೆಗಳ ಪೂಜೆಯ ಮೂಲಕ ನಡೆಸುತ್ತಿದ್ದರು. ಈಗಲೂ ಬಹುತೇಕರು ಭಿಕ್ಷಾಟನೆಯನ್ನೇ ಅವಲಂಬಿಸಿದ್ದರೂ, ಆಧುನಿಕ ಬದುಕಿಗೆ ಹೊಂದಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇತ್ತೀಚಿಗಷ್ಟೇ ಸಣ್ಣ ಪ್ರಮಾಣದಲ್ಲಿ ಕೆಲವು ಹಂದಿ ಮತ್ತು ಮೇಕೆಗಳನ್ನು ಸಾಕಣಿಕೆ ಮಾಡುತ್ತಿದ್ದಾರೆ. ನಾಟಿ ಕೋಳಿಗಳನ್ನು ತಮ್ಮ ಆಹಾರಕ್ಕಾಗಿ ಹಲವರು ಸಾಕುವುದುಂಟು. ಹೀಗೆ ಸಾಕಿದ ಕೋಳಿಗಳು ಹೆಚ್ಚಾದಾಗ ಸಂತೆಗಳಿಗೆ ಹೋಗಿ ಕೋಳಿಗಳನ್ನು ಮಾರಾಟ ಮಾಡಿ ತಮ್ಮ ಉಪಜೀವನ ಮಾಡುವರು.

ಈ ಸಿಂಧೊಳ್ಳು ಜನಾಂಗದ ಯುವ ಜನತೆ ಇತ್ತಿಚಿಗೆ ಬದಲಾವಣೆಯತ್ತ ಹೆಜ್ಜೆ ಇಟ್ಟಿದ್ದು, ಸ್ವಾವಲಂಬನೆಯ ಬದುಕಿನತ್ತ ದೃಷ್ಟಿ ಹರಿಸಿದ್ದಾರೆ. ಯುವಕ-ಯುವತಿಯರು ಪ್ಲಾಸ್ಟಿಕ್ ಕೊಡಗಳನ್ನು, ಅಲ್ಯೂಮಿನಿಯಂ ಪಾತ್ರೆಗಳನ್ನು ಅಂಗಡಿಗಳಿಂದ ಪಡೆದು ಹಳ್ಳಿಗಳಿಗೆ ಹೋಗಿ ಮಾರಾಟ ಮಾಡಿ ಅಲ್ಪ ಪ್ರಮಾಣದ ಲಾಭವನ್ನು ಪಡೆದುಕೊಂಡು ಹೊಟ್ಟೆ ಹೊರೆದುಕೊಳ್ಳುವ ಕಾಯಕದತ್ತ ಸಾಗಿದ್ದಾರೆ.

ಇವರು ಅಂಬಿಗ ಜಾತಿಗೆ ಸೇರಿದವರೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ವಾದವನ್ನು ಪುಷ್ಟೀಕರಿಸುವಂತೆ ಸಿಂಧೊಳ್ಳು ಜನಾಂಗದ ಗಂಡಸರು ಮೀನು ಹಿಡಿಯುವ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಈ ರೀತಿ ಕೂಲಿ ಕೆಲಸಕ್ಕೆ ಹೋದಾಗ ಕೂಲಿಯ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಮೀನು ಆಹಾರವಾಗಿ ಇವರಿಗೆ ದೊರಕುತ್ತದೆ. ಹೆಚ್ಚಾಗಿ ಇವರು ನೀರಾವರಿ ಪ್ರದೇಶಗಳಲ್ಲಿ ಕೃಷಿ ಮತ್ತು ಕೃಷಿಯೇತರ ಕೂಲಿಗಳಿಗಾಗಿ ಇತ್ತೀಚಿಗೆ ಹೋಗುತ್ತಿದ್ದಾರೆ.

ಭಿಕ್ಷಾಟನೆಯಂತೆ ಬೇಟೆಯಾಡುವುದೂ ಇವರ ಉದ್ಯೋಗ ಮತ್ತು ಹವ್ಯಾಸವಾಗಿದೆ. ಸಾಮಾನ್ಯವಾಗಿ ಇವರು ಮೊಲ, ಹಂದಿ, ಕಾಡುಕೋಳಿ, ಕೌಜಗ, ಕಾಡುಬೆಕ್ಕು, ಆಮೆ, ಮೀನು ಇತ್ಯಾದಿಗಳನ್ನು ಬೇಟೆಯಾಡುತ್ತಾರೆ. ಬೇಟೆಯಲ್ಲಿ ಚಿಕ್ಕ ಪ್ರಾಣಿಗಳು ಸಿಕ್ಕಿ ತಾವೇ ಆಹಾರವಾಗಿ ಬಳಸುತ್ತಾರೆ. ಬೇಟೆಗಾಗಿ ಇವರು ಈಟಿ, ಭರ್ಚಿ, ಗಂಡುಗೊಡಲಿ ಮುಂತಾದವುಗಳನ್ನು ಬಳಸುತ್ತಾರೆ. ಬೇಟೆಗೆ ತೆರಳುವ ಪೂರ್ವದಲ್ಲಿ ಒಳ್ಳೆಯ ಬೇಟೆ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡು, ಬೇಟೆಗೆ ಕೊಂಡೊಯ್ಯುವ ಆಯುಧ, ಸಾಧನಗಳನ್ನೆಲ್ಲ ಪೂಜೆ ಮಾಡುವರು. ಉಡದ ಬೇಟೆ, ಅಳಿಲು ಬೇಟೆ, ಇಲಿಗಳ ಬೇಟೆ ವಿಶಿಷ್ಟವಾದವುಗಳಾಗಿವೆ. ಹೀಗೆ ಈ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರೂ ಇವರು ಭಿಕ್ಷಾಟನೆಯನ್ನು ಬಿಡಲಾರರು. ಇದು ಅವರಿಗೆ ಒಂದು ಧಾರ್ಮಿಕ ಆಚರಣೆಯಾಗಿರುವೇ ಪ್ರಮುಖ ಕಾರಣವಾಗಿದೆ.

ಸಿಂಧೊಳ್ಳರು ಅಲೆಮಾರಿಗಳಾದುದರಿಂದ ಮೊದಲಿಗೆ ಊರಿಂದೂರಿಗೆ ತಮ್ಮ ಸರಕುಗಳನ್ನು ಸಾಗಿಸುವ ಉದ್ದೇಶದಿಂದ ಕತೆ, ದನಗಳನ್ನು ಸಾಕುತ್ತಿದ್ದರಂತೆ, ಆದರೆ ಇತ್ತೀಚಿಗೆ ಇವರಲ್ಲಿ ಕತ್ತೆ ಸಾಕಣಿಕೆ ಇಲ್ಲವಾಗಿದೆ. ಬಹುಪಾಲು ಸಿಂಧೊಳ್ಳು ಕುಟುಂಬಗಳು ಒಂದು ಕಡೆ ನೆಲೆ ನಿಂತಿವೆ. ಭಿಕ್ಷಾಟನೆ ಇತ್ಯಾದಿಗಳನ್ನು ನಡೆಸಿದರೂ ತಾವು ನೆಲೆ ನಿಂತ ಪ್ರದೇಶದ ಆಸುಪಾಸಿನಲ್ಲಿಯೇ ಪಶುಪಾಲನೆ ಮಾಡುತ್ತಾರೆ. ಹೀಗಾಗಿ ಇತ್ತೀಚಿಗೆ ಕುರಿ, ಮೇಕೆ, ಹಂದಿ ಇತ್ಯಾದಿಗಳನ್ನು ಕೆಲವರು ಸಾಕುತ್ತಿದ್ದಾರೆ. ಈ ಸಾಕಣಿಕೆ ದೊಡ್ಡ ಪ್ರಮಾಣದಲ್ಲಿರದೆ ತುಂಬಾ ಚಿಕ್ಕ ಪ್ರಮಾಣದಲ್ಲಿದೆ.

ಸಿಂಧೊಳ್ಳರ ಆಹಾರ ಪದ್ಧತಿ :

ಸಿಂಧೊಳ್ಳರು ಮಾಂಸಹಾರ ಮತ್ತು ಸಸ್ಯಹಾರ ಎರಡನ್ನೂ ಸೇವಿಸುತ್ತಾರೆ. ಕಾಡಿನಲ್ಲಿ ಸಿಗುವ ಪ್ರಾಣಿ-ಪಕ್ಷಿಗಳ ಮಾಂಸವನ್ನು ಆಹಾರವಾಗಿ ಒಂದು ಕಡೆ ಬಳಸಿಕೊಂಡರೆ, ಇನ್ನೊಂದೆಡೆ ಧಾರ್ಮಿಕ ಭಿಕ್ಷಾಟನೆಯಿಂದ ಬರುವ ಆಹಾರವನ್ನು ದಿನ ನಿತ್ಯ ಸೇವಿಸುವುದನ್ನು ಇವರಲ್ಲಿ ಕಾಣಬಹುದು.

ಮಾಂಸಾಹಾರ ಮಾಡುವಾಗ, ವಿಶೇಷ ದಿನಗಳಲ್ಲಿ ಮನೆಯಲ್ಲಿಯೇ ಆಹಾರ ತಯಾರಿಸಿಕೊಳ್ಳುತ್ತಾರೆ.

ಒಟ್ಟಿನಲ್ಲಿ ಸಿಂಧೊಳ್ಳರ ಆಹಾರದ ಮುಖ್ಯ ಮೂಲ ಭಿಕ್ಷಾಟನೆಯಾಗಿದೆ. ಮನೆಗಳ ಮುಂದೆ ಉರುಮೆ ಬಾರಿಸುತ್ತಾ ಭಿಕ್ಷಾಟನೆ ಮಾಡುವುದು ಹಾಗೂ ಜನಗಳು ನೀಡಿದ ತಂಗಳು ಆಹಾರವನ್ನು ಮನೆಗೆ ಮನೆಗೆ ಒಯ್ದು ಉಣ್ಣುವುದೇ ಹೆಚ್ಚು.

ಸಂತೆಯಲ್ಲಿ ಪ್ರತಿಯೊಂದು ಅಂಗಡಿಯ ಮುಂದೆ ಹೋಗಿ ಅವರಿಂದ ಭಿಕ್ಷೆ ಬೇಡುವುದು, ಬಂದ ಹಣ, ಧಾನ್ಯಗಳನ್ನು ಆಹಾರಕ್ಕಾಗಿ ವಿನಿಯೋಗಿಸುವುದು ಮಾಡುತ್ತಾರೆ.

ಹಬ್ಬ ಹರಿದಿನದಂತಹ ವಿಶೇಷ ಸಂದರ್ಭಗಳಲ್ಲಿ ಭಿಕ್ಷಾಟನೆ ಮಾಡುತ್ತಾರೆ. ಹೋಳಿಗೆ, ಕಡುಬುಗಳನ್ನು ಜನ ನೀಡಿದರೆ ಅವನ್ನು ಎಷ್ಟು ಸಾಧ್ಯವೋ ಅಷ್ಟು ಉಪಯೋಗಿಸಿ ಉಳಿದ ಸಿಹಿ ಪದಾರ್ಥಗಳನ್ನು ಬಿಸಿಲಿಗೆ ಒಣಗಿಸಿ ಬಾಳಕ ಮಾಡಿಕೊಂಡು ತುಂಬಾ ದಿನಗಳವರೆಗೂ ಅದನ್ನು ಊಟದಲ್ಲಿ ಬಳಸುವುದುಂಟು. ಹಾಗೇ ಮಾಂಸ ಹೆಚ್ಚಿನ ಪ್ರಮಾಣದಲ್ಲಿ ದೊರೆತರೆ ಅದನ್ನು ಸಹ ಬಿಸಿಲಿನಲ್ಲಿ ಒಣಗಿಸಿ ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಒಣ ಮಾಂಸವನ್ನು ಮುರಿಗೆ ಎಂದು ಕರೆಯುತ್ತಾರೆ. ಬೇಟೆಗೆ ಹೋಗದ ದಿನಗಳಲ್ಲಿ ಇಂತಹ ಮುರಿಗೆ ಮಾಡಿದ ಮಾಂಸವನ್ನು ಆಹಾರವಾಗಿ ಬಳಸುತ್ತಾರೆ.

ಕೃಷಿಕೂಲಿ ಮಾಡುವ ಸಿಂಧೊಳ್ಳರು ಸ್ವ ಆಹಾರ ತಯಾರಿಸಿಕೊಳ್ಳುವುದೇ ಹೆಚ್ಚು. ಅಕ್ಕಿ, ಜೋಳ, ರಾಗಿ, ಸಾಂಬರಿನ ಕಾಳುಗಳನ್ನು ಸಿಂಧೊಳ್ಳರು ಸಾಮಾನ್ಯವಾಗಿ ನಿತ್ಯ ಆಹಾರಕ್ಕಾಗಿ ಬಳಸುವುದುಂಟು. ಜೊತೆಗೆ ಮಾಂಸಹಾರಿಗಳಾದ ಕೋಳಿ, ಕುರಿ, ಮೇಕೆ, ಮುಂಗುಸಿ, ಕಾಡುಬೆಕ್ಕು, ಮೊಲ, ಉಡ, ಅಳಿಲು, ಗೊರವಂಕ, ಬಿಳಿಕೊಕ್ಕರೆ, ಕರಿಕೊಕ್ಕರೆ, ನೀರುಕೋಳಿ, ಕಾಡುಕೋಳಿ, ಬಾತುಕೋಳಿ, ಏಡಿ, ಮೀನು, ಕಾಡುಹಂದಿ, ಪುರ್ಲಕ್ಕಿ, ಆಮೆ, ಹಾವುಗುರ್ಲ, ಇಲಿ, ಪಾರಿವಾಳ ಮುಂತಾದವುಗಳನ್ನು ಆಹಾರವಾಗಿ ಬಳಸುತ್ತಾರೆ. ಜೋಳದ ಮುದ್ದೆ ಹೆಚ್ಚಾಗಿ ಉಪಯೋಗಿಸುತ್ತಾರೆ. ಊಟದ ಜೊತೆಯಲ್ಲಿ ನೆಂಜಿಕೊಳ್ಳಲು ಮಾಂಸದ ತುಣುಕುಗಳಾದ ಒಣಗಿದ ಮುರಗಿಯನ್ನು ಮಾಡಿಟ್ಟುಕೊಂಡಿರುತ್ತಾರೆ. ಬೆಂಕಿಯಲ್ಲಿ ಸುಟ್ಟಿರುವುದನ್ನು ಆಗಾಗ ಬಳಸುತ್ತಾರೆ. ತಮ್ಮ ರುಚಿಗೆ ತಕ್ಕಂತೆ ನಂಜಿಕೊಳ್ಳ ಪಲ್ಲೆಗಳನ್ನು ಸಹ ಬಳಸುವರು. ಕೆಲವು ಪ್ರದೇಶಗಳಲ್ಲಿ ತಮ್ಮ ಕುಲದೈವ ಪ್ರಭಾವದಿಂದ ಮಾಂಸಾಹಾರವನ್ನು ಕುಲದೇವತೆಯ ಪೂಜಾ ದಿನದಂದು ಉಪಯೋಗಿಸುವುದಿಲ್ಲ. ಉಳಿದ ದಿನಗಳಲ್ಲಿ ಮಾಂಸಾಹಾರವನ್ನು ಸ್ವೀಕರಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಬೆಲ್ಲದ ಅನ್ನ, ಹೋಳಿಗೆ, ಕಡುಗು, ಹುಗ್ಗಿ ಇತ್ಯಾದಿಗಳನ್ನು ತಾವೇ ಮಾಡಿಕೊಂಡು ಸೇವಿಸುತ್ತಾರೆ. ಈ ರೀತಿಯ ಆಹಾರ ಸೇವನೆಯು ಆರ್ಥಿಕವಾಗಿ ಮುಂದುವರೆದ ಸಿಂಧೊಳ್ಳುರಲ್ಲಿ ಮಾತ್ರ ಕಾಣಬಹುದಾಗಿದೆ.

ಸಿಂಧೊಳ್ಳುರು ಹೆಚ್ಚಾಗಿ ಭಿಕ್ಷೆಯನ್ನೇ ಅವಲಂಭಿಸಿದ್ದಾರೆ. ಭಿಕ್ಷೆ ಜೊತೆಯಲ್ಲಿ ತಮ್ಮ ಗುಡಾರಗಳ ಮುಂಭಾಗದಲ್ಲಿ ಅಡಿಗೆ ಮಾಡುವುದದನ್ನು ಇವರು ರೂಢಿಸಿಕೊಂಡಿದ್ದಾರೆ. ಅವರ ಆಹಾರ ಪದ್ಧತಿಯಲ್ಲಿ ಪ್ರಾದೇಶಿಕವಾಗಿ ವ್ಯತ್ಯಾಸಗಳಿವೆ. ಕುಟುಂಬದ ಸದಸ್ಯರೆಲ್ಲ ಒಟ್ಟಿಗೆ ಕುಳಿತು ಊಟ ಮಾಡಬೇಕೆಂಬ ನಿಯಮವಿದೆ. ಭಿಕ್ಷೆಯಿಂದ ಬಂದಿರುವಂತಹ ಆಹಾರವನ್ನು 'ಅಮ್ಮನ ಪ್ರಸಾದ' ವೆಂದು ಇಂದಿಗೂ ಸ್ವೀಕರಿಸುತ್ತಾರೆ. ಹೀಗಾಗಿ ಸಿಂಧೊಳ್ಳುರ ಆಹಾರ ಪದ್ಧತಿಯಲ್ಲಿ ಹೊಸತನವನ್ನು ಗುರುತಿಸಲಾಗುವುದಿಲ್ಲ.

ಉದ್ಯೋಗ :

ಸಿಂಧೊಳ್ಳು ಸಮುದಾಯದ ಜನರ ಮುಖ್ಯ ಹಾಗೂ ಕುಲ ಕಸುಬು ಭಿಕ್ಷಾಟನೆ. ಇವರು ಭಿಕ್ಷಾಟನೆಯನ್ನು ಯಾವುದೇ ಕಾರಣಕ್ಕೂ ಬಿಡಲಾರರು. ಇದೊಂದು ತಮ್ಮ ನಂಬಿಕೆಯ ಪವಿತ್ರ ಧಾರ್ಮಿಕ ಆಚರಣೆ ಎಂದು ಇವರು ನಂಬಿದ್ದಾರೆ. ಬದಲಾದ ಕಾಲಕ್ಕೆ ತಕ್ಕಂತೆ ಈ ಜನಾಂಗದ ಯುವ ಜನತೆ ಭಿಕ್ಷಾಟನೆಯ ಮೇಲೆಯೇ ಅವಲಂಬಿತರಾಗದೇ ಇತ್ತೀಚೆಗೆ ಪ್ಲಾಸ್ಟಿಕ್ ಕೊಡ, ಅಲ್ಯೂಮಿನಿಯಂ ಪಾತ್ರೆ ಮುಂತಾದ ಸ್ಟೇಷನರಿ ಸರಂಜಾಮುಗಳನ್ನು ಅಂಗಡಿಯಲ್ಲಿ ಕೊಂಡುಕೊಂಡು, ಹಳ್ಳಿಗಳಲ್ಲಿ ಮಾರಾಟ ಮಾಡಿ ಅಲ್ಪ ಪ್ರಮಾಣದ ಲಾಭವನ್ನು ಪಡೆದುಕೊಳ್ಳುತ್ತಾರೆ.

ಇತ್ತೀಚೆಗೆ ಈ ಜನಾಂಗದವರು ಒಂದೆಡೆ ನೆಲೆ ನಿಂತು ಬದುಕು ಕಂಡು ಕೊಳ್ಳಲು ಶುರುಮಾಡಿರುವುದರಿಂದ ಕೆಲವರು ಪಶು ಸಂಗೋಪನೆಯತ್ತಲೂ ಗಮನ ಹರಿಸಿದ್ದಾರೆ. ಆಡು, ಕುರಿ, ಮೇಕೆ, ಕೋಳಿಗಳನ್ನು ಸಾಕಣಿಕೆ ಮಾಡಿ ತಮ್ಮ ಆಹಾರಕ್ಕಾಗಿ ಮತ್ತು ಮಾರಾಟಕ್ಕಾಗಿ ಈ ಎಲ್ಲ ಪ್ರಾಣಿಗಳನ್ನು ಉಪಯೋಗಿಸುತ್ತಾರೆ.

ಈ ಜನಾಂಗದ ಪುರುಷರು ಬೇಟೆಯಾಡುತ್ತಾರೆ. ಮೀನುಗಳನ್ನು ಹಿಡಿಯಲು ಕೂಲಿ ಕೆಲಸಕ್ಕಾಗಿ ಹೋಗುವುದರಿಂದ ಇವರಿಗೆ ಕೂಲಿ ಮತ್ತು ಆಹಾರಕ್ಕಾಗಿ ಮೀನುಗಳು ಸಿಗುತ್ತವೆ. ಮಹಿಳೆಯರು ಭಿಕ್ಷಾಟನೆಯ ಮೂಲಕ ಆಹಾರವನ್ನು ಸಂಗ್ರಹಿಸುತ್ತಾರೆ. ಮಳೆಗಾಲದಲ್ಲಿ ಅನ್ನ, ಸಾರು ತಾವೇ ತಯಾರಿಸಿ ಊಟ ಮಾಡುತ್ತಾರೆ. ಮಹಿಳೆಯರು ಕೌದಿಯನ್ನು ಒಲೆಯುವುದು, ಕಸೂತಿ ಹಾಕುವುದು, ಜೋಳಿಗೆ ತಯಾರಿಸುವುದು, ವಿವಿಧ ಆಕಾರದ ಬಣ್ಣ ಬಣ್ಣದ ಹೆಣಿಗೆಗಳಿಂದ ಕೌದಿಯನ್ನು, ಬಟ್ಟೆಯನ್ನು ಅಲಂಕರಿಸುವುದು, ಸ್ಥಳೀಯವಾಗಿ ದೊರೆಯುವ ಮಣ್ಣಿನ ಮಡಕೆಗಳ ಮೇಲೆ ಕೆಮ್ಮಣ್ಣಿನಿಂದ ವಿಶಿಷ್ಟ ರೀತಿಯಲ್ಲಿ ಚಿತ್ರಗಳನ್ನು ಬರೆಯುತ್ತಾರೆ. ನಂತರ ಮಡಿಕೆಯ ಮೇಲೆ ಚಿತ್ರ ಬರೆದ ತರುವಾಯ ಅವುಗಳಿಗೆ ಅರಿಶಿಣ, ಕುಂಕುಮಗಳಿಂದ ಅಲಂಕರಿಸಿ ಮಡಕೆಗಳನ್ನು ಅಲಂಕಾರಿಕ ವಸ್ತುವನ್ನಾಗಿ ಮಾರ್ಪಡಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ.

ಈ ರೀತಿಯಾಗಿ ಸಿಂಧೊಳ್ಳು ಸಮುದಾಯದ ಜನ ಬದಲಾದ ಕಾಲಕ್ಕೆ ತಕ್ಕಂತೆ ಕೇವಲ ತಮ್ಮ ಮೂಲ ಕಸುಬಾದ ಭಿಕ್ಷಾಟನೆಯಲ್ಲದೇ ಇತ್ತೀಚೆಗೆ ಹಲವು ವಸ್ತುಗಳ ಮಾರಾಟ, ಕೌದಿ ಹೊಲೆಯುವುದು, ಕಸೂತಿ, ಹೆಣಿಗೆಯಂತಹ ಉದ್ಯೋಗಗಳನ್ನು ಮಾಡುತ್ತ, ಆಧುನಿಕ ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ಉದ್ಯೋಗ ಬದಲಾವಣೆಯತ್ತ ಸಾಗಿದ್ದಾರೆ.

ಉಡುಗೆ-ತೊಡುಗೆ :

ಸಿಂಧೊಳ್ಳು ಜನಾಂಗದ ಉಡುಗೆ-ತೊಡುಗೆಗಳೂ ಉಳಿದ ಬುಡಕಟ್ಟು ಜನಾಂಗಗಳ ಉಡುಗೆ-ತೊಡುಗೆಗಳಿಗಿಂತ ಭಿನ್ನವಾಗಿಲ್ಲ. ಸರಳವಾದ ಬಟ್ಟೆಗಳನ್ನು ತೊಡುತ್ತಾರೆ. ಆಭರಣಗಳನ್ನು ಮಹಿಳೆಯರು ಹೆಚ್ಚಾಗಿ ಧರಿಸುತ್ತಾರೆ. ಭಿಕ್ಷೆಯ ಸಮಯದಲ್ಲಿ ಸಿಂಧೊಳ್ಳುರು ಬಣ್ಣವನ್ನು ಮೈ, ಕೈ, ಮುಖಕ್ಕೆಲ್ಲ

ಬಳಿದುಕೊಂಡು, ಹಣೆಗೆ ದಪ್ಪನೆಯ ಕುಂಕುಮ, ಮೈ ತುಂಬಾ ವಿಭೂತಿ, ಬೂದಿಯನ್ನು ಹಚ್ಚಿಕೊಂಡು, ಕೆಂಪು ಧೋತರ, ಬಿಳಿ ಶಲ್ಯೆ, ಕೊರಳಿಗೆ ವಸ್ತ್ರಧರಿಸುತ್ತಾರೆ.

ಮಹಿಳೆಯರು ಭಿಕ್ಷೆಯ ಸಮಯದಲ್ಲಿ ಹೆಚ್ಚಾಗಿ ಹಸಿರು ಬಣ್ಣದ ಸೀರೆಯನ್ನು ಉಡುತ್ತಾರೆ. ತಲೆಯ ಮೇಲೆ ಬುಟ್ಟಿಯಲ್ಲಿ ದೇವಿಯ ಮೂರ್ತಿಯನ್ನು ಇಟ್ಟುಕೊಂಡು, ಕೈಯಲ್ಲಿ ಡೊಳ್ಳು ಹಿಡಿದುಕೊಂಡು ಜೋರಾಗಿ ಬಾರಿಸುತ್ತಾರೆ. ಆ ಸಮಯದಲ್ಲಿ ಪುರುಷರು ಮೈ ತುಂಬಾ ಬಾರುಕೋಲಿನಿಂದ ಬಾರಿಸಿಕೊಳ್ಳುತ್ತ ತಮ್ಮ ಕಲೆಯ ಮೂಲಕ ಭಿಕ್ಷಾಟನೆ ಮಾಡುತ್ತಾರೆ.

ಮಕ್ಕಳು ಸಾಮಾನ್ಯ ಬಟ್ಟೆಗಳನ್ನು ತೊಡುತ್ತಾರೆ. ಭಿಕ್ಷೆಯ ಸಮಯದಲ್ಲಿ ಬಂದ ಬಟ್ಟೆಗಳನ್ನು, ಸೀರೆಗಳನ್ನು ಈ ಸಮುದಾಯದ ಜನ ಹಾಕಿಕೊಳ್ಳುತ್ತಾರೆ. ಭಿಕ್ಷಾಟನೆಯ ಸಂದರ್ಭದಲ್ಲಿ ಮಾತ್ರ ಇವರು ಬಣ್ಣದ ವೇಷ ತೊಟ್ಟು ಗಮನ ಸೆಳೆಯುತ್ತಾರೆ. ಬಣ್ಣವನ್ನು ಹಚ್ಚಿಕೊಂಡ ಮೇಲೆ ಇವರು ಏನೂ ತಿನ್ನುವುದಿಲ್ಲ. ಮತ್ತೆ ತಿರುಗಿ ಬಣ್ಣವನ್ನು ಒರೆಸಿಕೊಂಡ ನಂತರವೇ ತಿನ್ನುತ್ತಾರೆ.

ಕಲೆ, ಸಾಹಿತ್ಯ ಮತ್ತು ಭಾಷೆ :

ಸಾಮಾನ್ಯವಾಗಿ ಎರಡು ರೀತಿ ಸಾಹಿತ್ಯಗಳಿವೆ. ಒಂದು ಶಿಷ್ಟ ಸಾಹಿತ್ಯ ಮತ್ತೊಂದು ಮೌಖಿಕ ಸಾಹಿತ್ಯ. ಮೌಖಿಕ ಸಾಹಿತ್ಯವು ಜನಸಾಮಾನ್ಯರಿಂದ ಮೂಡಿ ಬಂದಿದೆ. ಮೌಖಿಕ ಸಾಹಿತ್ಯದ ಮೂಲ ತಳಹಾಯವು ಅನಕ್ಷರಸ್ಥರ ಅನುಭವವಾಗಿದೆ. ಈ ಸಾಹಿತ್ಯ ಗ್ರಾಮೀಣರ, ಕೃಷಿಕರ, ಕೂಲಿ-ಕಾರ್ಮಿಕರಲ್ಲಿ ಸಹಜ ಸಾಹಿತ್ಯವಾಗಿರುತ್ತದೆ. ಯಾವುದೇ ಭಾಷೆಯಲ್ಲಿ ಶಿಷ್ಟ ಸಾಹಿತ್ಯಕ್ಕಿಂತ ಮೊದಲು ಜಾನಪದ ಸಾಹಿತ್ಯ ನಿರ್ಮಾಣವಾಗಿರುತ್ತದೆ.

ಬಡತನದ ಹಿನ್ನೆಲೆಯಲ್ಲಿ ಮನುಷ್ಯ ಹತ್ತು ಹಲವು ಸಮಸ್ಯೆ, ಒತ್ತಡಗಳಿಗೆ ಸಿಲುಕಿಕೊಂಡ ಸಂದರ್ಭದಲ್ಲಿ ವ್ಯಕ್ತಪಡಿಸುವ ಭಾವನೆಗಳು, ಪ್ರಾಯಶಃ ಆತನ ಅಂತರಾಳಗಳಲ್ಲಿ ಕಾವ್ಯದ ಸ್ಪರ್ಶ ಪಡೆದುಕೊಂಡೆ ಹೊರಬರುತ್ತವೆಯೇನೋ ಎನಿಸುತ್ತದೆ. ಅನಕ್ಷರಸ್ಥ ಸಾಮಾನ್ಯ ಜನರ ಅನುಭವವೇ ಮೌಖಿಕ ಸಾಹಿತ್ಯದ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

ಅನಕ್ಷರಸ್ಥರೇ ಅತ್ಯಧಿಕವಾಗಿರುವ ಸಮುದಾಯದಲ್ಲಿ ತಮ್ಮ ಬಾಳಿನ ಅನುಭವಗಳನ್ನು ಜಾನಪದ ಕಾವ್ಯ ಗೀತೆ, ಕಥೆ ಮೊದಲಾದವುಗಳನ್ನು ಸಾಹಿತ್ಯದ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಭಿಕ್ಷಾಟನೆಯನ್ನೇ ವೃತ್ತಿಯಾಗಿಸಿಕೊಂಡಿರುವ ಇವರು ಭಿಕ್ಷಾಟನೆಗೆ ಹೋದಾಗ ದೇವರನ್ನು ಕೊಂಡಾಡುವುದು, ಭಿಕ್ಷೆ ನೀಡುವವರನ್ನುಹೊಗಳುವುದು, ರೋಗ ರುಜಿನಗಳಿಂದ ಗ್ರಾಮವನ್ನು ಕಾಪಾಡುವಂತೆ ದೇವತೆಗಳಿಗೆ ಬೇಡುವುದು ಎಲ್ಲನ್ನು ತಮ್ಮದೇ ಆದ ವಿಶಿಷ್ಟ ಹಾಡುಗಾರಿಕೆಯ ಮೂಲಕ ವ್ಯಕ್ತಪಡಿಸುತ್ತಾರೆ.

ಈ ಎಲ್ಲ ಹಾಡುಗಾರಿಕೆ ಮೌಖಿಕ ಸಾಹಿತ್ಯವಾದರೂ ಇದರಲ್ಲಿನ ಶೈಲಿ, ರಾಗಬದ್ಧವಾಗಿ ಹಾಡಲು ಇರುವ ಸಾಲುಗಳು ಯಾವುದೇ ಶಿಷ್ಟ ಸಾಹಿತ್ಯಕ್ಕೂ ಕಡಿಮೆ ಇಲ್ಲದಂತಿದೆ. ಇವರ ಸಾಹಿತ್ಯದಲ್ಲಿ

ಸೃಜನಶೀಲತೆಯನ್ನು ಕಾಣಬಹುದು. ಇವರ ಸಾಹಿತ್ಯದಲ್ಲಿ ಒಂದು ವೈಶಿಷ್ಟ್ಯವಿದೆ. ಇವರು ಹೆಚ್ಚಾಗಿ ಭಿಕ್ಷಾಟನೆ ಹಾಗೂ ಮತ್ತುದೇವರ ಕಲ್ಪನೆ ಮೇಲೆ ಹಾಡುವುದುಂಟು. ಜಾತ್ರೆ, ಹಬ್ಬಮತ್ತುಕೂಲಿ ಕೆಲಸಕ್ಕಾಗಿ ಹೋದಾಗ ಹಾಡುವ ಹಾಡಿನ ಹಾಸ್ಯಲೇಪಿತ ಶೃಂಗಾರ ಗೀತೆಗಳು ಜನಪದ ಸಾಹಿತ್ಯದಲ್ಲಿಯೇ ವಿಶಿಷ್ಟವಾಗಿವೆ.

ಈರನಾಗಮ್ಮನ ಕಾವ್ಯ, ಎಳುಕೊಳ್ಳದ ದುರ್ಗಾದೇವಿ, ಕೃಷಿ ಕೆಲಸದಲ್ಲಿ ಶ್ರೀ ದುರ್ಗಾದೇವಿ ಪಾತ್ರ, ಮೈಲಮ್ಮ ಹೀಗೆ ಅನೇಕ ಕಾವ್ಯಗಳು ಕಥನ ಕಾವ್ಯಗಳಂತೆ ಬಹಳಷ್ಟು ದೊಡ್ಡದಾದ, ರಾಗಬದ್ಧವಾಗಿ ಹಾಡಲು ಬರುವಂತ ಹಾಡುಗಳಾಗಿವೆ. ಇನ್ನು ಕಥೆಗಳ ಪೈಕಿ ಮರಗವ್ವನ ಕಥೆ, ದ್ಯಾಮವ್ವನ ಕಥೆ, ಕೂಗಮ್ಮನ ಕಥೆಗಳು ಗಮನ ಸೆಳೆಯುತ್ತವೆ.

ಜೋಗುಳ ಹಾಡು, ಭಿಕ್ಷಾಟನೆಯ ಹಾಡು ಹೀಗೆ ಅನೇಕ ಸಂದರ್ಭದಲ್ಲಿ ಹಾಡಲಾಗುವ ಹಾಡು ಉತ್ತರ-ಕರ್ನಾಟಕದಲ್ಲಿ ಬಹಳಷ್ಟು ಪ್ರಚಲಿತವಿರುವ ಹಾಡಾಗಿದೆ.

ಇನ್ನು ಸಿಂಧೊಳ್ಳುರು ತೆಲುಗು ಮೂಲದ ಭಾಷೆಯನ್ನು ಮಾತನಾಡುತ್ತಾರೆ. ಈ ಭಾಷೆಯಲ್ಲಿ ಪ್ರಾದೇಶಿಕ ಪ್ರಭಾವದಿಂದಾಗಿ ಕನ್ನಡ ಪದಗಳು ಸೇರಿವೆ. ಮನೆಯಲ್ಲಿ ಸಿಂಧೊಳ್ಳು ಭಾಷೆಯನ್ನು ಬಳಸಿದರೆ, ಹೊರಗಡೆ ವ್ಯವಹರಿಸಲು ಕನ್ನಡ ಭಾಷೆಯನ್ನು ಬಳಸುವರು. ಆದರೆ ಇವರು ಮಾತನಾಡುವ ಕನ್ನಡ ಮಾತ್ರ ಸಿಂಧೊಳ್ಳ ಭಾಷೆಯ ಧಾಟಿಸ್ನು ಒಳಗೊಂಡಿರುತ್ತದೆ.

ಭಾಷಾ ವಿಜ್ಞಾನದ ದೃಷ್ಟಿಯಿಂದ ಸಿಂಧೊಳ್ಳ ಭಾಷೆಗೆ ಯಾವ ಸ್ಥಾನವಿದೆ, ಈ ಭಾಷೆಯ ವೈಶಿಷ್ಟ್ಯವೇನು, ಇದು ದ್ರಾವಿಡ ಭಾಷೆಯಲ್ಲಿಯೇ ಯಾವ ಗುಂಪಿಗೆ ಸೇರುವ ಭಾಷೆ ಇತ್ಯಾದಿಗಳನ್ನು ತಿಳಿಯಲು ಇನ್ನು ಹೆಚ್ಚಿನ ಅಧ್ಯಯನಗಳು ನಡೆಯುವುದು ಅಗತ್ಯವಾಗಿದೆ. ಬಹುಶಃ ಈ ಭಾಷೆಯ ಕುರಿತು ಇಲ್ಲಿಯವರೆಗೂ ಅಧ್ಯಯನಗಳು ನಡೆದಿಲ್ಲ ಎಂಬುದು ಅನೇಕ ವಿದ್ವಾಂಸರ ಅನಿಸಿಕೆಯಾಗಿದೆ. ಈ ಕೃತಿಯಲ್ಲಿ ನಾವು ಸಿಂಧೊಳ್ಳು ಭಾಷೆ, ತೆಲುಗಿಗೆ ಹತ್ತಿರವಿರುವುದರಿಂದ ತೆಲುಗಿನ ಮೂಲಕ ಭಾಷೆ ಇರಬೇಕು ಎಂದು ತಿಳಿಸಿದ್ದೇವೆ. ಈ ಭಾಷೆಯ ಕುರಿತು ಹೆಚ್ಚಿನ ಅಧ್ಯಯನಗಳು ನಡೆದರೆ ಮುಂದಿನ ಅಧ್ಯಯನಗಳಿಗೆ ಹೆಚ್ಚು ಸಹಾಯವಾಗಬಹುದು ಎನಿಸುತ್ತದೆ.

ಸಾಮಾಜಿಕ ಸ್ಥಿತಿ-ಗತಿ :

ಸ್ವತಂತ್ರ ಭಾರತದಲ್ಲಿ ಸಾಮಾಜಿಕ ಪರಿವರ್ತನೆಯ ಗಾಳಿ ಬಲವಾಗಿ ಬೀಸಿದ್ದರೂ ಇವರ ನ್ಯಾಯ ಪಂಚಾಯಿತಿ ಸಂಪೂರ್ಣ ಕುಸಿದಿಲ್ಲ. ಇವರು ಸ್ಮಶಾನದಲ್ಲಿ ನ್ಯಾಯ ಪಂಚಾಯಿತಿ ಮಾಡುತ್ತಿದ್ದು ಇಂದಿಗೂ ತಮ್ಮ ಸಮಸ್ಯೆಗಳನ್ನು ಪಂಚಾಯಿತಿ ಮೂಲಕವೇ ಬಗೆ ಹರಿಸಿಕೊಳ್ಳುತ್ತಾರೆ. ಕುಟುಂಬದ ಸದಸ್ಯರ ನಡುವಣ ಭಿನ್ನಾಭಿಪ್ರಾಯ, ಸಮಸ್ಯೆಗಳಿಗೆ ಕುಲದ ಮುಖ್ಯಸ್ಥನಾದ ಪೂಜಾರಿ ಪರಿಹಾರ ಕಂಡು ಕೊಳ್ಳುತ್ತಾನೆ. ನ್ಯಾಯಾಧೀಶನ ಸ್ಥಾನವನ್ನು ಇವರಲ್ಲಿ ಪೂಜಾರಿ ವಹಿಸಿರುತ್ತಾನೆ. ಅವನು ನೀಡುವ ನ್ಯಾಯ ತೀರ್ಮಾನವನ್ನು ಜನರು ದೈವ ಸಮಾನವೆಂದು ತಿಳಿಯುತ್ತಾರೆ. ಅವನ ಮಾತೇ ಕೊನೆಯ ಮಾತಾಗಿರುತ್ತದೆ.

ಪೂಜಾರಿಯೇ ಬುಡಕಟ್ಟು ಸಮಾಜದ ಹಿರಿಯ. ಈತನನ್ನು ಮುಖ್ಯಸ್ಥ ಅಥವಾ ಪೂಜಾರಿ ಎಂದು ಕರೆಯುತ್ತಾರೆ. ನ್ಯಾಯ ಪಂಚಾಯಿತಿಯಲ್ಲಿ ಪೂಜಾರಿ ಎಂದು ಕರೆಯುತ್ತಾರೆ. ಸ್ಥಳೀಯವಾದ ನಾಲ್ಕಾರು ಗ್ರಾಮದ ಸಿಂಧೊಳ್ಳುರು ಸೇರಿ ಒಬ್ಬ ಮುಖ್ಯಸ್ಥನನ್ನು ನೇಮಿಸಿಕೊಳ್ಳುತ್ತಾರೆ. ಅವನೇ ತಮ್ಮ ಪೋತ್ಸ್ ಅಥವಾ ಪೂಜಾರಿ.

"ಕಟ್ಟೆಮನೆ ಎಂದರೆ ನ್ಯಾಯದ ಮನೆ. ಸತ್ಯ ಶೋಧಿಸುವ ಮನೆ. ಕುಲದ ಕಟ್ಟಳೆಗಳನ್ನು ಮೀರಿ ನಡೆಯುವವರಿಗೆ ತಡೆಗೋಡೆ ಹಾಕಿ, ನ್ಯಾಯ ಮಾರ್ಗದಲ್ಲಿ ಪರಿಶುದ್ಧರಾಗಿ ನಡೆಯುವಂತೆ ತಿಳುವಳಿಕೆ ನೀಡುವ ತಾಣ. ಕುಲದ ಅಥವಾ ಕುಟುಂಬಗಳಲ್ಲಿ ನಡೆಯುವ ಜಗಳಗಳನ್ನು ತಮ್ಮ ತಮ್ಮೊಳಗೆ ಕಟ್ಟೆಮನೆಯಲ್ಲಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ"[೧೨].

ಕುಲದೇವತೆಗಳ ಪೂಜೆ ಮಾಡಲಾಗುತ್ತದೆ. ನಂತರ ನ್ಯಾಯ ಪಂಚಾಯಿತಿಗೆ ಸಾಮಾನ್ಯವಾಗಿ ಆರೋಪಿ, ಪ್ರತ್ಯಾರೋಪಿಗಳನ್ನು ಎದುರಿಗೆ ಕೂಡಿಸಿಕೊಳ್ಳುತ್ತಾರೆ. ಹಾಗೆ ನ್ಯಾಯ ಪಂಚಾಯ್ತಿ ದಿನ ಇಡೀ ದೈವದವರು ಸೇರಿರುತ್ತಾರೆ. ನ್ಯಾಯ ಪಂಚಾಯ್ತಿ ಮಾಡುವುದಕ್ಕೂ ಪೂರ್ವದಲ್ಲಿ ಇಂತಹ ವ್ಯಕ್ತಿ ಅಥವಾ ಇಂಥವಳು ಈ ರೀತಿಯ ತಪ್ಪು ಮಾಡಿದ್ದಾರೆಂದು ಕುಂಬಿದ ದೈವದ ಜನಗಳ ಮುಂದೆ ಮುಖ್ಯಸ್ಥ ಹೇಳುತ್ತಾನೆ. ಪೂಜಾರಿಯು ತಪ್ಪಿತಸ್ಥರನ್ನು ವಿಚಾರಿಸಿ, ತರುವಾಯ ತನ್ನ ತೀರ್ಮಾನವನ್ನು ಸಭೆಗೆ ತಿಳಿಸುತ್ತಾನೆ.

ನ್ಯಾಯ ತೀರ್ಮಾನದ ನಂತರ ಅಪರಾಧಿಯು ಮಾಡಿದ ತಪ್ಪಿನ ಆಧಾರದ ಮೇಲೆ ಶಿಕ್ಷೆಯ ಪ್ರಮಾಣ ನಿರ್ಧಾರವಾಗುತ್ತದೆ. ಕೆಲವೊಮ್ಮೆ ದಂಡದ ಮೂಲಕ, ಕೆಲವೊಮ್ಮೆ ದೈಹಿಕ ಶಿಕ್ಷೆಯ ಮೂಲಕ ಈ ಜನಾಂಗದಲ್ಲಿ ಶಿಕ್ಷೆಯು ಪ್ರಕಟವಾಗುತ್ತದೆ.

ತಪ್ಪಿತಸ್ಥನು ಕುಲ ಪಂಚಾಯಿತಿ ಮೂಲಕ ತನ್ನ ತಪ್ಪನ್ನೊಪ್ಪಿಕೊಳ್ಳದಿದ್ದಾಗ ಆತನ ಕುಲಶುದ್ಧಿ ಆಗುವವರೆಗೆ ಗುಡಾರದ ಅಂಗಳದಲ್ಲಿ, ಮದುವೆ ಕಾರ್ಯಕ್ರಮಗಳಲ್ಲಿ ಭಾಗವಹಿಸದಂತೆ ಕುಲದಿಂದ ಹೊರ ಹಾಕಲಾಗುತ್ತದೆಂದು ಎಚ್ಚರಿಕೆ ಕೊಡುತ್ತಾನೆ.

ಕುಟುಂಬದ ವ್ಯಾಜ್ಯಗಳು, ವ್ಯವಹಾರದ ವ್ಯಾಜ್ಯಗಳು ಹೀಗೆ ಅನೇಕ ರೀತಿಯ ವ್ಯಾಜ್ಯಗಳಿಗೆ ಪೂಜಾರಿ ಎಂದು ಕರೆಸಿಕೊಳ್ಳುವ ನ್ಯಾಯಾಧೀಶನು ತನ್ನ ಬುದ್ಧಿಶಕ್ತಿಯ ಮೂಲಕ ಎಲ್ಲ ರೀತಿಯ ವಾದ-ಪ್ರತಿವಾದಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ತೀರ್ಮಾನವನ್ನು ಕೊಡುತ್ತಾನೆ.

ಒಟ್ಟಿನಲ್ಲಿ ಇವರ ಪದ್ಧತಿಯಲ್ಲಿ ಸ್ಮಶಾನದಲ್ಲಿ ಸಾಂಪ್ರದಾಯಿಕ ಆಚರಣೆ ಮುಗಿದ ನಂತರ ತಪ್ಪಿತಸ್ಥರು ಯಾರು ಎಂಬುದು ಸಾಬೀತಾಗುವುದು. ನಂತರ ತಾವು ವಾಸಿಸುವ ಸ್ಥಳಕ್ಕೆ ಮರಳಿ ಮತ್ತೆ ನ್ಯಾಯ ಪಂಚಾಯಿತಿ ಮಾಡುತ್ತಾರೆ. ಇವೆಲ್ಲ ಸಿಂಧೊಳ್ಳುರ ಸಾಮಾಜಿಕ ಒಳಾಡಳಿತ ವ್ಯವಸ್ಥೆ.

ಪ್ರಸ್ತುತ ಸಿಂಧೊಳ್ಳುರ ಸ್ಥಿತಿ-ಗತಿ :

ಜಾಗತೀಕರಣ ಕಾಲದ ಇಂದಿನ ಜಗತ್ತಿನಲ್ಲಿ ಜನಪದ ಪರಂಪರೆಯ ಕೊಂಡಿಗಳಾಗಿರುವ, ಜನಪದ ವೈದ್ಯರಾಗಿರುವ ಸಿಂಧೊಳ್ಳುರ ಜ್ಞಾನ ಅವರ ಹಿಂದೆಯೇ ಮರೆಯಾಗಿ, ನಶಿಸಿ ಹೋಗುವ

ಸಂದರ್ಭಕ್ಕೆ ತಲುಪಿದ್ದು, ದಾರಿ ತಪ್ಪಿದ ಜನರಂತೆ ಹೊಟ್ಟೆಪಾಡಿಗಾಗಿ ಅನೇಕ ಬಗೆಯ ಹೋರಾಟ ಮಾಡುತ್ತಿದ್ದು, ಸದ್ಯ ಅವರ ಸ್ಥಿತಿ ಚಿಂತಾಜನಕವಾಗಿದೆ.

ಸಿಂಧೊಳ್ಳರ ಇಂದಿನ ಜೀವನ ಪದ್ಧತಿಯಲ್ಲಿ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ-ಗತಿಗಳಲ್ಲಿ ಅಂತಹ ಹೇಳಿಕೊಳ್ಳುವಷ್ಟು ಬದಲಾವಣೆಗಳು ಕಂಡು ಬಂದಿಲ್ಲ. ಅವರು ಬಹುತೇಕ ಹಿಂದಿನ ರೀತಿಯಲ್ಲಿಯೇ ಬದುಕುತ್ತಿದ್ದಾರೆ. ಹೊಟ್ಟೆಪಾಡಿಗಾಗಿ ಭಿಕ್ಷಾ ವೃತ್ತಿಯನ್ನೇ ಕೈಗೊಂಡಿದ್ದಾರೆ. ಅವರು ಯಾವ ಬಗೆಯ ಆಸ್ತಿ-ಪಾಸ್ತಿಗಳ ಸಂಪಾದನೆಯ ಕಡೆಗೆ ಗಮನ ಹರಿಸಿದಂತಿಲ್ಲ. ಊರುಗಳ ಹೊರ ಭಾಗದಲ್ಲಿ ನೀರು ದೊರಕುವ ಜಾಗದಲ್ಲಿ ಈಗಲೂ ಶೌದಿಯ ಗುಡಿಸಲುಗಳನ್ನು ಹಾಕಿಕೊಂಡು ಜೀವಿಸುತ್ತಿದ್ದಾರೆ.

ಸದಾ ಸಂಚಾರಿಗಳಾದ ಇವರಿಗೆ ತಮ್ಮ ಬದುಕಿನ, ಜೀವನದ, ಭವಿಷ್ಯದ ಬಗೆಗಿನ ಚಿಂತೆಯೇ ಇಲ್ಲ. ದಿನಕ್ಕಾಗುವಷ್ಟು ಭಿಕ್ಷೆ ಬೇಡಿ ಹೊಟ್ಟೆ ಹೊರೆದುಕೊಳ್ಳುವುದಕ್ಕಷ್ಟೇ ಇವರು ಸೀಮಿತವಾಗಿದ್ದಾರೆ. ಇತರರಂತೆ ಕಷ್ಟ ಪಟ್ಟು ದುಡಿದು ಸಂಪಾದಿಸಿಕೊಳ್ಳಬೇಕೆನ್ನುವ ಗೊಡವೆ ಅವರಿಗಿಲ್ಲ. ಹೀಗಾಗಿ ತುಂಬಾ ಶೋಚನೀಯವಾದ ಬದುಕನ್ನು ಸಾಗಿಸುತ್ತರೆ.

ಇವರಲ್ಲಿ ಜನ-ಜಾಗೃತಿಯ ಕೊರತೆ ಇದೆ. ಇವರಲ್ಲಿನ ಅನಕ್ಷರತೆ, ಅಂಧಕಾರ ಹೋಗಲಾಡಿಸಿ, ವಿದ್ಯಾಭ್ಯಾಸ ಅವಕಾಶ ಒದಗಿಸಿ, ಸಮಾಜದ ಮುಖ್ಯವಾಹಿನಿಗೆ ಕರೆತರುವ ಹೊಣೆಗಾರಿಕೆಯನ್ನು ಮಾಡಬೇಕಾಗಿದೆ.

ಹೀಗೆ ಅನೇಕ ರೀತಿಯಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಬದುಕು ಹೊಂದಿದ ಸಿಂಧೊಳ್ಳು ಸಮುದಾಯದ ಜನತೆ ಕುದರಿಮೋತಿ ಮೊಹರಂ ಹಬ್ಬದಲ್ಲಿ ಭಾಗಿಗಳಾಗಿ ತಮ್ಮ ಭಕ್ತಿಯ ಪರಾಕಾಷ್ಠೆ ಮೆರೆದು ಮತ್ತೆ ಅಲೆಮಾರಿ ಬದುಕಿಗೆ ಸಾಗುತ್ತಾರೆ.

ಡೊಂಬರು

ಪ್ರವೇಶ :

ಅಲೆಮಾರಿತನ ಪ್ರಾದಿಮ ಮಾನವನ ಸಹಜ ಗುಣಲಕ್ಷಣವಾಗಿದ್ದು, ನಂತರದ ದಿನಗಳಲ್ಲಿ ಬೇಟೆಗಾರಿಕೆ, ಗೆಡ್ಡೆ, ಗೆಣಸುಗಳ ಸಂಗ್ರಹದ ಹಂತ ಮುಗಿಯುತ್ತ, ಅಲ್ಲಲ್ಲಿ ಕೆಲ ವೃಂದ ಗೋದಿ ಇತ್ಯಾದಿ ದವಸ ಧಾನ್ಯ ಉತ್ತಿ ಬಿತ್ತಿ ಬೆಳೆಯುವ ಹಂತಕ್ಕೆ ಮಾನವ ತಲುಪಿದ. ಇಂತಹ ಒಂದು ಕಾಲಾವಧಿಯಲ್ಲಿ ಅನೇಕ ಸಮುದಾಯದವರು ತಮಗೆ ಅನುಕೂಲವಾಗುವಂತಹ ಗುಡಿಸಲುಗಳನ್ನು, ಗುಡಾರಗಳನ್ನು ಕಟ್ಟಿಕೊಂಡು ಒಂದೆಡೆ ನೆಲೆ ನಿಲ್ಲಲು ಆರಂಭಿಸಿದರು. ಆದರೆ ಇನ್ನೂ ಹಲವಾರು ಸಮುದಾಯಗಳು ಇತರ ಜನಾಂಗಗಳಂತೆ ಒಂದೆಡೆ ನಿಲ್ಲದೇ ಒಂದೂರಿಂದ ಮತ್ತೊಂದೂರಿಗೆ ಹೋಗುತ್ತ, ಅಲೆದಾಡುತ್ತ ಸಿಕ್ಕ ಸಿಕ್ಕಲ್ಲಿ ಟೆಂಟುಗಳನ್ನು ಹಾಕಿಕೊಂಡು, ಕಲ್ಲಿನ ಒಲೆಗಳ ಮೇಲೆ ಅಡುಗೆ ಮಾಡಿಕೊಂಡು, ಭಿಕ್ಷೆ ಎತ್ತಿಕೊಂಡು, ತಮ್ಮ ಅಲೆಮಾರಿ ಸಂಸ್ಕೃತಿಯ ಕಲೆಯನ್ನು ಊರ ಜನರ ಮುಂದೆ ಪ್ರದರ್ಶನ ಮಾಡುತ್ತಾ ಕೇವಲ ಆ ದಿನದ ಹೊಟ್ಟೆ ಬಟ್ಟೆಗೆ ಮಾತ್ರ ತಮ್ಮ ಬದುಕಿನ ವ್ಯಾಪ್ತಿಯನ್ನು ಕಂಡುಕೊಂಡರು.

ಅಲೆಮಾರಿಗಳು ಪರಿಸರೀಯ ಜಾಲದ, ಕ್ರೌರ್ಯ, ಭಯ-ಭೀತಿಗಳಿಗೆ ಜಗ್ಗದೆ, ಎಲ್ಲವನ್ನೂ ಶಕ್ತಿ ಜಾಣ್ಮೆಗಳಿಂದ ತಮ್ಮ ಉಪಜೀವನ-ವಿಧಾನಗಳಿಗೆ ಒಗ್ಗಿಸಿಕೊಂಡು, ಸಂದರ್ಭಾನುಸಾರ ತಾವೂ ಒಗ್ಗಿ, ಯಾವುದೇ ಪ್ರದೇಶದಲ್ಲಿ ಸ್ಥಿರವಾಗಿ ಕಾಲೂರದೇ ಅಲೆಮಾರಿಗಳಾಗಿ ಬದುಕುತ್ತ ಬಂದರು.

ಹೀಗೆ ಅಲೆಮಾರಿಗಳಾಗಿ ನಡೆದಾಡುತ್ತ ತಮ್ಮ ಜೀವನ ಆರಂಭಿಸಿದವರಲ್ಲಿ ಡೊಂಬರೂ ಒಬ್ಬರು. ಡೊಂಬರ ಇತಿಹಾಸ ಕೆದಕುತ್ತಾ ಹೋದರೆ ಎಲ್ಲಿ ನೋಡಿದಲ್ಲಿ, ಕಾಲಿಟ್ಟಲ್ಲಿ ಸಮೃದ್ಧವಾಗಿ ಬೆಳೆದ ಡಂಬಿನ ಮೆಳೆಗಳಿಂದ ತುಂಬಿದ ದಟ್ಟಡವಿಗಳ ಪರಿಸರವಿದ್ದ ಆ ಕಾಲದಿಂದಲೇ ಡೊಂಬರು, ಭೂಪ್ರದೇಶದ ವಿವಿಧ ಭೌಗೋಲಿಕ ಪಾತಳಿಗಳಲ್ಲಿ ಕಾಣಸಿಕೊಂಡದ್ದು ಕಂಡುಬರುತ್ತದೆ.

'ಡೊಂಬಗ ನೆಲಿ ಇಲ್ಲ, ಡಂಬಿಗೆ ಬೆಲಿ ಇಲ್ಲ' ಇದು ಡೊಂಬರಿಗೆ ಸಂಬಂಧಿಸಿದ ಒಂದು ಗಾದೆ. ಈ ಗಾದೆಯಲ್ಲಿ ಎರಡು ಅಂಶಗಳಿವೆ. ಒಂದನೆಯ ಅಂಶ ಡೊಂಬರಿಗೆ ಯಾವುದೇ ಒಂದು ಸ್ಥಿರವಾದ ನೆಲೆ ಇಲ್ಲವೆಂಬುದು ಮತ್ತು ಇನ್ನೊಂದು ಡಂಬನ್ನು ಹಣ ಕೊಟ್ಟು ಕೊಳ್ಳಬೇಕಾಗಿಲ್ಲ ಎಂಬುದು. ಈ ಗಾದೆ ಮಾತಿನಲ್ಲಿ ಡಂಬಿಗೂ ಮತ್ತು ಡಂಬಿನ ಕುಲಕಸುಬು ಮಾಡಿಕೊಂಡಿರುವ ಡೊಂಬರಿಗೂ ಈ ಗಾದೆ ಮಾತಿನಲ್ಲಿ ಸಂಬಂಧವನ್ನು ಕಲ್ಪಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಇದರಿಂದ ಗೊತ್ತಾಗುವ ಸ್ಪಷ್ಟವಾದ ವಿಚಾರವೆಂದರೆ ಡೊಂಬರ ಕಾಯಕ ಡಂಬಿನದ್ದು ಎಂಬುದು.

ಡೊಂಬರ ಹಿನ್ನೆಲೆ :

ಭಾರತ ಅನೇಕ ಜನಾಂಗಗಳ ತವರುಮನೆ. ಎಲ್ಲ ಜನಾಂಗಗಳಿಗೂ ಇಲ್ಲಿ ತನ್ನದೇ ಆದ ವಿಶೇಷತೆ ಇದೆ. ಪುರಾತನ ಕಾಲದಿಂದಲೂ ಅನೇಕ ಅಲೆಮಾರಿ ವೃಂದಗಳು ಕರ್ನಾಟಕದಲ್ಲಿ ಬಂದು ನೆಲೆಸುವುದು

ಮತ್ತೆ ಇಲ್ಲಿಂದ ಮರಳಿ ಹೋಗುವುದು ನಡೆದೇ ಇದೆ. ಡೊಂಬರಿಗೆ ಸಂಬಂಧಿಸಿದಂತಹ ಯಾವುದೇ ಒಂದು ಪ್ರದೇಶಕ್ಕೆ ಈ ವೃಂದವನ್ನು ಸೀಮಿತಗೊಳಿಸುವುದು ಸಾಧ್ಯವಾಗುವುದಿಲ್ಲವಾದರೂ ಕರ್ನಾಟಕ ಅವರಿಗೆ ಹೆಚ್ಚು ಅಪ್ಯಾಯನಕಾರಿಯಾಗುವಂತೆ ತೋರುತ್ತದೆ. ನೆರೆಯ ಆಂಧ್ರ ಪ್ರದೇಶವು ಡೊಂಬರ ಮೂಲ ಎಂಬ ಭಾವನೆ ಹಲವರಲ್ಲಿ ಇದ್ದರೂ, ಕರ್ನಾಟಕದ ಎಲ್ಲ ಪ್ರದೇಶಗಳಿಗೂ ಅವರ ವಿಸ್ತಾರ ವ್ಯಾಪಿಸಿಕೊಂಡಿದೆ.

ಆಂಧ್ರಪ್ರದೇಶ, ಕರ್ನಾಟಕ, ಮಧ್ಯಪ್ರದೇಶ, ತಮಿಳುನಾಡು ಹೀಗೆ ವಿವಿಧ ರಾಜ್ಯಗಳಲ್ಲೆಲ್ಲ ಹರಡಿರುವ ಡೊಂಬರ ಬದುಕಿನ ಕೆಲವು ವಸ್ತು, ಸಾಹಿತ್ಯ, ಸಂಗತಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶಿಷ್ಟ ಮತ್ತು ಪರಿಶಿಷ್ಟ ವಲಯದ ಸಮುದಾಯಗಳಲ್ಲಿ ತಮ್ಮದೇ ಆದ ವಿಭಿನ್ನ ಸಂಸ್ಕೃತಿಯ ಗುಣಲಕ್ಷಣಗಳೊಂದಿಗೆ ಬಾಳುತ್ತಿರುವ ಡೊಂಬರ ಸಂಸ್ಕೃತಿಯಲ್ಲಿ ಅವರ ಸಮುದಾಯದ ಪರಂಪರೆ, ಹಾಡು, ಕುಣಿತ, ಭಾಷೆ, ವೇಷಭೂಷಣ, ಆರಾಧನೆ, ಆಚರಣೆಗಳಂತಹ ಮೂಲ ರೂಪ, ಸ್ವರೂಪಗಳ ತೀವ್ರ ಅಭಾವ ಕಂಡು ಬರುತ್ತದೆ.

ಕರ್ನಾಟಕದಲ್ಲಿ ಡೊಂಬರ ಕುರಿತಾಗಿ ಇದುವರೆಗೆ ನಡೆದಿರುವ ಕಾರ್ಯ ಅವರು ಹೊಂದಿರುವ ಸಂಸ್ಕೃತಿ ದೃಷ್ಟಿಯಿಂದ, ಅವರ ಪಾರಂಪರಿಕ ವ್ಯಾಪ್ತಿಯ ದೃಷ್ಟಿಯಿಂದ ಬಹಳ ಕಡಿಮೆ ಎಂದು ಹೇಳಬಹುದು. ವಿಭಿನ್ನ ಪ್ರದೇಶಗಳಿಗೆ ವಲಸೆ ಮತ್ತು ಬೇರೆ ಬೇರೆ ಭಾಷಿಕ ಭಾಗಗಳಿಂದ ಇಲ್ಲಿಗೆ ವಲಸೆ ಬಂದ ಬಗ್ಗೆ ಕಾರಣಗಳನ್ನು ವಿಶ್ಲೇಷಿಸಲಾಗಿದೆ.

ಇವರ ಹಿನ್ನೆಲೆಯನ್ನು ಜನಪದ ಐತಿಹ್ಯಗಳ ಮೂಲಕ ನೋಡಿದರೆ ಇವರು ಕೊರವರಿಗೆ, ಲಂಬಾಣಿಗರಿಗೆ, ಡೊಮ್ಮರಿಗೆ ಮತ್ತು ಡೋಹಾರರಿಗೆ ವಿಶೇಷವಾದ ಸಾಮೀಪ್ಯವನ್ನು ಹೊಂದಿದವರೆಂದು ತಿಳಿದು ಬರುತ್ತದೆ.

ಇನ್ನು ಸಾಹಿತ್ಯಕ ದೃಷ್ಟಿಯಲ್ಲಿ ಇವರ ಹಿನ್ನೆಲೆಯನ್ನು ಗಮನಿಸಿದರೆ ತಕ್ಕಮಟ್ಟಿಗೆ ಡೊಂಬರ ಉಲ್ಲೇಖವಿರುವ ಕಥಾನಕಕ್ಕೆ ಸಂಬಂಧಿಸಿ - ಕೆಲವೆಡೆ ವಿವೇಚನೆ ನಡೆದಿದೆ. ಕಂಪಿಲರಾಜ,, ಹರಿಯಲದೇವಿ, ಜಟಂಗದೇವರ ಕಥೆ, ಡೊಂಬರ ರತ್ನಿ ಡೊಂಬರ ಚೆನ್ನಿ, ಕುಮಾರರಾಮ, ಚೆನ್ನಿಗರಾಮ ಮುಂತಾದ ಹೆಸರುಗಳು ಬೇರೆ ಬೇರೆ ಕಾವ್ಯಗಳಲ್ಲಿ ಬರುವುದನ್ನು ಗಮನಿಸಲಾಗಿದೆ. ಪಂಪನ ಕಾವ್ಯ, ವಚನ, ಸಾಂಗತ್ಯ, ಚೆನ್ನಬಸವಪುರಾಣ, ಬೈರವೇಶ್ವ ಕಥಾಮಣಿ, ಸೂತ್ರರತ್ನಾಕರ ಮುಂತಾದ ಶಿಷ್ಟದ ಕವಿ-ಕಾವ್ಯಗಳಲ್ಲಿ 'ಡೊಂಬ', 'ದೊಂಬ' ಜನ ಸಮುದಾಯದ ಉಲ್ಲೇಖ ಕಥಾನಕಗಳು ಕಾಣಸಿಗುತ್ತವೆ. ಡಾ. ಜಿ. ವರದರಾಜರಾವ್ ಅವರ 'ಕುಮಾರರಾಮ ಸಾಂಗತ್ಯಗಳು' ಮಹಾಪ್ರಬಂಧದಲ್ಲಿ ಡೊಂಬರ ಕಥೆಯ ಆನುಷಂಗಿಕ ಉಲ್ಲೇಖವಿದ್ದು, ಕುಮಾರರಾಮನ ಕಥಾನಕದ ತೌಲನಿಕ ಸಮೀಕ್ಷೆ ಅಲ್ಲಿಯ ಪ್ರಮುಖ ಗುರಿಯಾಗಿದೆ. ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಡೊಂಬರ ಬಗೆಬಗೆಯ ವಿಸ್ಮಯಕಾರಿ ಕಸರತ್ತುಗಳ ವರ್ಣನೆ ಬರುತ್ತದೆ.

ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ, ಜಾನಪದ ಅಧ್ಯಯನ, ಸಾಹಿತ್ಯ ವಿಮರ್ಶೆ ಮತ್ತು ಸಾಂಸ್ಕೃತಿಕ ಆಕರಗಳನ್ನು ಕುರಿತಂತೆ ವಿದ್ವಾಂಸರು, ಸಂಶೋಧಕರು ಮತ್ತು ಆಸಕ್ತರ ಧೋರಣೆಗಳಲ್ಲಿ ಉಂಟಾದ ಅನೇಕ ಪರಿವರ್ತನೆಗಳ ಫಲವಾಗಿ ಡೊಂಬ ವೃಂದಕ್ಕೆ ಸಂಬಂಧಿಸಿದ ನೇರ ಬರವಣಿಗೆಗಳಲ್ಲು ಕೆಲವಾದರೂ ದೊರೆಯುವಂತಾಗಿದೆ. ಕನ್ನಡ ವಿಶ್ವಕೋಶ, ಕನ್ನಡ ನಿಘಂಟು, ಕರ್ನಾಟಕ ವಿಶ್ವವಿದ್ಯಾಲಯ ಜಾನಪದ ಸಾಹಿತ್ಯ ದರ್ಶನ ಇತ್ಯಾದಿಗಳಲ್ಲಿ ಬರುವ ಕೆಲವು ಲೇಖನ ವಿವೇಚನೆಗಳು ಮಾತ್ರ ನೇರವಾಗಿ ಡೊಂಬರ ಸಂಸ್ಕೃತಿಯ ಸ್ಥೂಲ ಪರಿಚಯ ಮಾಡಿಕೊಡುತ್ತವೆ. ಹಾವನೂರರ ಹಿಂದುಳಿದ ವರ್ಗಗಳ ವರದಿ ಕೂಡ ಡೊಂಬರ ಬಗೆಗಿನ ಕೆಲವು ಅಂಕಿ ಸಂಖ್ಯೆಗಳನ್ನು ಮತ್ತು ಇವರ ಇತರ ವಿವರಗಳನ್ನು ಒಳಗೊಂಡಿದೆ.

'ಡೊಂಬರ ಮದಾಲ್ಸಿ ಪದಗಳು' ಎನ್ನುವ ಸಂಕಲನ ಮಾತ್ರ ನೇರವಾಗಿ ಡೊಂಬರಿಂದಲೇ ಸಂಗ್ರಹಿಸಲ್ಪಟ್ಟ ಹಾಡುಗಳ ಪ್ರಥಮ ದಾಖಲೆಯೆಂದು ತೋರುತ್ತದೆ. ಮಲೆನಾಡಿನ ವಿವಿಧ ಭಾಗಗಳಲ್ಲಿ ಹರಡಿರುವ ದೊಂಬ ಜನ ಸಮುದಾಯವನ್ನು, ಕೆಲ ವರ್ಷಗಳ ಮೂಲಕ ಮತ್ತೆ - ನೇರವಾದ ಆ ಜನರ ಮುಖಾಮುಖಿ ಸಂಪರ್ಕದ ಮೂಲಕ 'ತೆರೆದ ಅಥವಾ ಮುಕ್ತ ಕ್ಷೇತ್ರ ಕಾರ್ಯವಿಧಾನ'ವನ್ನು ಅನುಸರಿಸಿ, ಮದಾಲ್ಸಿ ಪದಗಳನ್ನು ಈ ಕೃತಿಯ ಲೇಖಕರು ಪ್ರಕಟಿಸಿದ್ದಾರೆ.

ಹೀಗೆ ವಿವಿಧ ರೀತಿಯ ಅಧ್ಯಯನ, ಸಮಗ್ರತೆಯನ್ನು ಪರಿಶೀಲಿಸಿದ ನಂತರ ಡೊಂಬರ ವಿವಿಧ ಪ್ರದೇಶ, ಐತಿಹ್ಯ, ಅವರ ಜಿಪ್ಸಿ ಮೂಲ, ಶಕ್ತಿ ಪ್ರದರ್ಶನ, ಈ ಪ್ರದರ್ಶನದ ವೈಶಿಷ್ಟ್ಯ ಮತ್ತೆ ದೊಂಬರ ಕುರಿತಾದ ಕೆಲವು ಐತಿಹಾಸಿಕ, ಸಾಮಾಜಿಕ ಸಂಗತಿಗಳು ಒಂದೇ ಕಡೆಗೆ ನಮೂದಾಗಿರುವುದರಿಂದ ಸಂಸ್ಕೃತಿ ಕುರಿತ ಅಧ್ಯಯನಕ್ಕೆ ಬಹಳಷ್ಟು ಸಹಕಾರಿಯಾಗಿದೆ.

'ಡೊಂಬ' ಪದದ ಶಬ್ದಾರ್ಥ, ಹೆಸರು, ಔಚಿತ್ಯ :

''ಡೊಂಬ ಪದಕ್ಕೆ ಪರ್ಯಾಯವಾಗಿ ಅನೇಕ ಪದಗಳು ಬಳಕೆಯಲ್ಲಿವೆ. ದೊಂಡ, ಡಂಬರ, ಡೋಮ, ಡುಮ್ಮರ, ಡೊಮ್ಮಾರ, ಕೊಲ್ಲಟಿಗ, ದೋಮ ಇತ್ಯಾದಿಗಳು. ಕನ್ನಡ ವಿದ್ವಾಂಸರು ದೊಂಡ, ಡೊಂಬ, ಡೊಮ್ಮರ ಎಂದು ಮೂರು ಪದಗಳನ್ನು ಸೂಚಿಸಿ ಗಳೆಯ ಮೇಲೆ ಲಾಗ ಹಾಕಿ ಕಸರತ್ತುಗಳನ್ನು ತೋರಿಸುತ್ತಾ ಜೀವನವನ್ನು ನಡೆಸುವವನು ಎಂದು ಅರ್ಥ ವಿವರಣೆ ನೀಡಿ 'ಕೊಲ್ಲಟಿಗ' ಪದವನ್ನೂ ಹೇಳಿದ್ದಾರೆ. 'ಶಬ್ದಮಣಿ ದರ್ಪಣ'ದಲ್ಲಿ 'ಕೊಲ್ಲಟಿಗ ನೆನೆ ಡೊಂಬನು' ಎಂದು ವಿವರಿಸಲಾಗಿದೆ. ತೆಲುಗಿನ ಸೂರ್ಯರಾಯಾಂಧ್ರ ನಿಘಂಟು, ತಮಿಳು, ಮಲೆಯಾಳ ಮತ್ತು ತುಳು ಭಾಷೆಗಳಲ್ಲಿರುವ ದೊಮ್ಮರ, ತೊಮ್ಮ, ದೋಮ್ಮರ್, ಡೋಂಬರ್, ಡೊಂಬೆ, ಡೊಂಬಾರೆ ಮುಂತಾದ ಪದಗಳಿಗೆ ಕನ್ನಡದಲ್ಲಿರುವ ದೊಂಬ ಎನ್ನುವ ಅರ್ಥವೇ ಇದೆ''[೧೩].

ಡೊಂಬರು ಅಥವಾ ದೊಂಬರು ಎನ್ನುವ ಒಂದು ಆದಿವಾಸಿ ಅಲೆಮಾರಿ ಗುಂಪು ಪ್ರಾಚೀನ ಎನ್ನುವುದು ಅದು ಒಂದು ಅಲೆಮಾರಿ ಜನಾಂಗವಾಗಿತ್ತು ಎನ್ನುವುದರಿಂದಲೇ ಗೊತ್ತಾಗುತ್ತದೆ. ಏಕೆಂದರೆ

ಅಲೆಮಾರಿತನ ಪ್ರಪಂಚದ ಮತ್ತು ಭಾರತದ ಪ್ರಥಮ ಜನ ಸಮುದಾಯದ ಪ್ರಮುಖ ಗುಣಲಕ್ಷಣ. ಅದೇ ರೀತಿ ಇದರ ಮೂಲ ಗುರುತಿಸುವುದು ಕೂಡ ಅಷ್ಟೇ ಸಂಕೀರ್ಣ. ಅದರಂತೆ ಡೊಂಬರ ಭಾಷೆ ಕೂಡ. ಇವರು ಯಾವ ಪ್ರದೇಶಕ್ಕೆ ಹೋದರೋ ಆ ಪ್ರದೇಶದ ಭಾಷೆ ಎಂದೇನೂ ಅಲ್ಲ, ಕೆಲವು ನುಡಿ ಮಾತುಗಳನ್ನಾದರೂ ಕಲಿಯುವುದು; ಮತ್ತೆ ಅಲ್ಲಿಂದ ತಮಗೆ ಅನುಕೂಲವಾದ ಬೇರೆ ಭಾಷಾ ಪ್ರರದೇಶದ ಮತ್ತೆ ಅಲ್ಲಿಂದ ಮತ್ತೊಂದು ಪ್ರದೇಶಕ್ಕೆ. ಹೀಗಾಗಿ ದೊಂಬರ ಜನ ನಾಗರಿಕತೆಯ ಆರಂಭದ ಕಾಲದಲ್ಲಿ ಯಾವುದೇ ಒಂದು ನಿರ್ದಿಷ್ಟ ಪ್ರದೇಶದಲ್ಲಿರದೆ ಎಲ್ಲ ಪ್ರದೇಶಗಳಿಗೆ ಪರಿಚಿತವಾದ 'ಬಹುಭಾಷಿಕ' ಸಮುದಾಯವಾಗಿತ್ತು. ಅಲ್ಲದೆ ಮನಮೋಹಕ ನರ್ತಕಿ, ಮಾಟಗಾತಿ, ಇಂದ್ರಜಾಲಿಕ ಕಸರತ್ತು ಮಾಡಿ ತೋರಿಸುವ ವಿವಿಧ ಸ್ತ್ರೀ ಪುರುಷರು ಗುಂಪು ಗುಂಪಾಗಿ ಚಲಿಸಿ ತಮ್ಮ ಕಲೆಗಳ ಪ್ರದರ್ಶನದಿಂದ ಬಂದ ಹಣ - ದವಸ ಧಾನ್ಯ - ಇತ್ಯಾದಿಗಳ ಮೂಲಕ ಉಪಜೀವ ಸಾಗಿಸುತ್ತಿದ್ದ ದೊಂಬರಿಗೆ, ಯಾವುದೇ ಭಾಷಾ ಪರಿಣಿತಿಯ ಅಗತ್ಯ ತೋರಿ ಬಂದಿರಲಾರದು. ಈ ಕಾರಣದಿಂದಾಗಿಯೇ ದೊಂಬರು ಭಾರತದ ದಕ್ಷಿಣೋತ್ತರ ಮತ್ತು ಪೂರ್ವ ಪಶ್ಚಿಮ ವಿವಿಧ ಪ್ರದೇಶಗಳಿಗೆ ದೂರ ದೂರದವರೆಗೂ ಚಲಿಸಿದರು.

ಕನ್ನಡದ ಕೆಲವು ಶಾಸನ ಮತ್ತು ಕಾವ್ಯಗಳಲ್ಲಿ 'ದೊಂಬ' ಅಥವಾ 'ಡೊಂಬ' ಪದ ಪ್ರಯೋಗವಾಗಿರುವ ಕೆಲವು ಯಾದೃಚ್ಛಿಕ ಉದಾಹರಣೆಗಳನ್ನು ನಾವು ಕಾಣಬಹುದು.

ದೊಂಬರ ಭೌಗೋಳಿಕ ವ್ಯಾಪ್ತಿ :

ಪ್ರಾಚೀನ ಕಾಲದಿಂದಲೇ ಕಾಡಿನ ಒಡೆಯರಾಗಿ, ಅಲೆಮಾರಿಗಳಾಗಿ ಬಾಳುತ್ತ ಬಂದ ದೊಂಬರು ವಿವಿಧ ಭೌಗೋಳಿಕ ಪರಿಸರದ ಶಿಶುಗಳಾಗಿಯೇ ಜೀವನವನ್ನು ರೂಪಿಸಿಕೊಂಡವರಲ್ಲಿ ಪ್ರಮುಖರು. ತಮ್ಮ ಸುತ್ತು ಮುತ್ತು ಇದ್ದ ಪಶು ಪ್ರಾಣಿಗಳಲ್ಲಿ ಕೆಲವನ್ನು, ದೊಂಬರು ತಮ್ಮ ಜೀವನ ವಿಧಾನಕ್ಕೆ ಪ್ರಯೋಜಕವಾಗುವ ರೀತಿಯಲ್ಲಿ ಪಳಗಿಸಿಕೊಂಡರು. ಅವುಗಳಲ್ಲಿ, ಮಂಗ, ಕತ್ತೆ, ನಾಯಿ ಮತ್ತು ಹಂದಿ ಮುಖ್ಯವಾದುವೆಂದು ತೋರುತ್ತದೆ. ಹೆಚ್ಚಾಗಿ, ದಟ್ಟ ಕಾಡಿನ ನಡುವೆ ಮತ್ತೆ ಆಗಾಗ ಗ್ರಾಮಗಳ ಹೊರಗೆ ಇದ್ದುಕೊಂಡೇ ತಮ್ಮ ಜೀವನ ನಿರ್ವಹಿಸುತ್ತಿದ್ದ ದೊಂಬರಿಗೆಲ್ಲ, ಒಳ್ಳೆ ಗಟ್ಟಿಮುಟ್ಟಾದ, ಎಷ್ಟು ಭಾರ ಹೇರಿದರೂ ಹೊತ್ತು ಮುನ್ನಡೆವ ಮತ್ತು ಪೋಷಣೆಯ ವಿಶೇಷ ಕಾಳಜಿ ಅಗತ್ಯವಿಲ್ಲದ 'ಸಾಧುಪ್ರಾಣಿ' ಕತ್ತೆ ಅಚ್ಚುಮೆಚ್ಚಿನ ಪ್ರಾಣಿ. ಅವರ ಪರಂಪರೆಗಳೇ ದೊಂಬರಿಗೂ ಕತ್ತೆಗೂ ಸಂಬಂಧ ಕಲ್ಪಿಸುತ್ತದೆ ಎನ್ನುವ ವಿದ್ವಾಂಸರ ಅಭಿಪ್ರಾಯಕ್ಕೆ ಕನ್ನಡದ ಗಾದೆ 'ಕತ್ತೆ ಬೆಲ್ಲಾ ಹೇತರೆ ದೊಂಬಗೆ ಯಾಕೆ ಭಿಕ್ಷೆ' ಸಮರ್ಥನೆ ಒದಗಿಸುತ್ತದೆ.

ವಿಶೇಷವಾಗಿ ಬೆಳೆದ ಡಂಬು ಬಿದಿರುಗಳ ಸೀಬುಗಳ ಹಿಂಡಿಲು, ಗಿಡ, ಕಂಟ ಮರಗಳ ಗುಂಪು, ಅಲ್ಲಲ್ಲಿ ಜವುಳುಗಟ್ಟಿದ, ಹರಿಯುವ ಹಳ್ಳ, ದಂಡೆಗುಂಟ ಬೆಳೆದ ಕೇದಗೆ ಪೊದೆಗಳು ರಕ್ಕಸಬಳ್ಳಿ ಮೆಳೆಗಳು ಈ ಬಗೆಯ ಜನವಸತಿಯಿರದ ಪ್ರದೇಶಗಳ ದಟ್ಟ ಕಾಡುಗಳ ಭೂಪ್ರದೇಶದಲ್ಲಿ ವಾಸವಾಗಿರುತ್ತಿದ್ದ ವಿವಿಧ

ಅಲೆಮಾರಿ ಜನಾಂಗಗಳಲ್ಲಿ ಒಂದು ಪ್ರಮುಖವಾದ ಡೊಂಬ ವೃಂದ ಪರಿಸರವನ್ನು ಎದುರಿಸುತ್ತಲೇ ಶೌರ್ಯ, ಧೈರ್ಯ, ಸಾಹಸಗಳನ್ನು ರಕ್ತಗತ ಮಾಡಿಕೊಂಡರು. ಕ್ರೂರ ಪಶು ಪ್ರಾಣಿಗಳ ಬೇಟೆಯಾಡಿ ಹೋರಾಟದ ಮನೋವೃತ್ತಿ, ವಿವಿಧ ಬಗೆಯ ಶಾರೀರಕ ಶಕ್ತಿ ಪ್ರಯೋಗ, ಕಸರತ್ತುಗಳ ಪ್ರದರ್ಶನಗಳನ್ನು ಪಾರಂಪರಿಕವಾಗಿ ತಮ್ಮ ಜನ ಸಮುದಾಯದಲ್ಲಿ ಪರಿಚಲನೆಗೊಳಿಸುತ್ತ ಬಂದರು. ರಕ್ಕಸಬಳ್ಳಿ, ಬಿದಿರು ಡಂಬುಗಳ ಮೆಳೆಗಳ ಮಧ್ಯದಲ್ಲಿ ಉಸಿರಾಡಿ ಸುತ್ತ ಬೆಳೆದ ಡೊಂಬರಿಗೆ ರಕ್ಕಸಬಳ್ಳಿಯಿಂದ ಪುಂಡಿನಾರು ಸಿದ್ಧಪಡಿಸಿಕೊಳ್ಳುವುದು, ನಾರಿನಿಂದ ಹಗ್ಗ ಹೊಸೆಯುವುದು, ಡಂಬು, ಸೀಬು ಬಿದಿರುಗಳನ್ನು ಕೊಚ್ಚಿ ಕೆತ್ತಿ ಸೀಳಿ ಗುಡಿಸಲು ಕಟ್ಟಿಕೊಳ್ಳುವುದು, ತಡಿಕೆ ಹೆಣೆದು ಕಟ್ಟಿಕೊಳ್ಳುವುದು, ಇತ್ಯಾದಿ ನಿರಾಯಾಸವಾಗಿ ಸಾಧಿಸಿತು.

ಕತ್ತೆ, ಕುದುರೆ, ಹಂದಿ, ನಾಯಿ ಇತ್ಯಾದಿ ಪ್ರಾಣಿಗಳ ಒಂದು ಗುಂಪೇ ಡೊಂಬರ ಜೊತೆಗೂಡಿ ಮುನ್ನಡೆಯುತ್ತದೆ. ಸಂಚಾರೀ ಗುಡಿಸಲು ಜೊತೆ ಡೊಂಬರು ತಮ್ಮ ಪ್ರದರ್ಶನಕ್ಕೆ ಮತ್ತು ದಿನನಿತ್ಯದ ಬದುಕಿಗೆ ಅಗತ್ಯವಾದ ತಾವೇ ಸಿದ್ಧಪಡಿಸಿದ ಅಥವಾ ಇತರರಿಂದ ಸಿದ್ಧಪಡಿಸಿಕೊಂಡ ಚಾಪೆ, ಕೆಲವು ಗುರಸಾಣಿ ಕಲ್ಲು, ಕರೀ ದುಂಡಗಲ್ಲು, ಸಿಬ್ಬಗಿಕೆ, ಕಬ್ಬಿಣ ಸಲಾಕೆ ಇತ್ಯಾದಿ ಸಾಮಾನುಗಳನ್ನೂ ತಮ್ಮ ಜೊತೆ ಸಾಗಿಸುತ್ತಾರೆ.

ಹೀಗೆ ಅವರ ಇರವು, ವಾಸ, ಜೀವನ ಪದ್ಧತಿ ಒಂದೂರಿಂದ ಇನ್ನೊಂದೂರಿಗೆ ನಿರಂತರವಾಗಿ ಬದಲಾಗುತ್ತ ಇರುತ್ತದೆಯಾದರೂ ಡೊಂಬರು ಮಾತ್ರ ಆರಿಸಿಕೊಳ್ಳುವುದು ಅರಣ್ಯದ ಸಮೀಪ ಇರುವ ಪ್ರದೇಶಗಳನ್ನು. ತಮ್ಮ ಮೂಲ ಕಸುಬಾದ ಡಂಬಿನ ಕೆಲಸಗಾರಿಕೆಗೆ ಸಿಗುವ ಡಂಬುಗಳು ದೊರೆಯುವ ಸ್ಥಳವೇ ಇವರ ಮುಖ್ಯ ಸ್ಥಳಗಳಾಗಿವೆ.

ಜೀವನ ಪದ್ಧತಿ :

"ಡೊಂಬರು ಸಾವಿರಾರು ವರ್ಷಗಳಿಂದ ಅಲೆಮಾರಿಗಳಾಗಿಯೇ ಬದುಕುತ್ತ ಬಂದುದರಿಂದ ಇವರದು ಒಂದು ಸುಸಂಘಟಿತ ಹೋಗಲಿ ಸಂಘಟಿತ ಅಥವಾ ವ್ಯವಸ್ಥಿತ ಸಮಾಜವಲ್ಲ ಎನ್ನುವುದು ಯಾವುದೇ ಪುರಾವೆಯನ್ನು ಬಯಸದ ಮೇಲುನೋಟಕ್ಕೆ ಎದ್ದು ಕಾಣುವ ವಾಸ್ತವ ಸತ್ಯವಾಗಿದೆ. ಆದರೆ ತಂಡ ತಂಡವಾಗಿಯೇ ಈ ವೃಂದ ಚಲಿಸಬೇಕಾಗಿ ಬಂದುದರಿಂದ ಇವರಿಗೆ ತಮ್ಮದೇ ಆದ ಒಳರಚನೆ ವೃತ್ತಿ ಗುಂಪಿಗಳಿಗನುಗುಣವಾದ ಜೀವನ ವಿಧಾನ ಒಂದು ಕಾಲಕ್ಕೆ ಇತ್ತು ಎನ್ನುವುದಕ್ಕೆ ಕೆಲವಾದರೂ ದಾಖಲೆಗಳು ದೊರೆಯುತ್ತವೆ."[೧೪]

ಗಂಡು ಹೆಣ್ಣು ಮಕ್ಕಳು ಕೂಡಿಯೇ ಗುಂಪು ಗುಂಪಾಗಿ ತಮ್ಮ ಎಲ್ಲ ಸಾಮಾನು ಸರಂಜಾಮುಗಳ ಜೊತೆಗೆ ಪ್ರಾಣಿ ಪಶುಗಳೊಡಗೂಡಿಯೇ ಅಲೆಯುವ ಡೊಂಬ ಸಮುದಾಯ ತಮ್ಮಲ್ಲಿಯೇ ಒಬ್ಬನ ಆಜ್ಞಾನುವರ್ತಿಗಳಾಗಿ ನಡೆದುಕೊಳ್ಳುತ್ತಾರೆ. ಇಂಥ ಒಬ್ಬ ಎಲ್ಲರಿಗಿಂತ ಹೆಚ್ಚು ವಯಸ್ಸಾಗಿರುವ ಮತ್ತು

ಬೇರೆ ಬೇರೆ ಡೊಂಬ ವಿದ್ಯೆಗಳಲ್ಲಿ ಪರಿಣತನಾಗಿರುವ ವ್ಯಕ್ತಿ ಆ ಸಮುದಾಯದ ಮುಖ್ಯಸ್ಥನಾಗಿರುತ್ತಾನೆ. ಈ ಮುಖ್ಯಸ್ಥನಿಗೆ ರೆಡ್ಡಿ, ನಾಯ್ಡು, ನಾಯಕ ಎಂದು ಮುಂತಾಗಿ ಕರೆಯಲಾಗುತ್ತದೆ.

ಒಟ್ಟಾರೆಯಾಗಿ ಡೊಂಬರ ಜೀವನ ಪದ್ಧತಿಯು ಆಧುನಿಕ ಜಗತ್ತಿಗೆ ಹೋಲಿಸಿದರೆ ಇನ್ನೂ ಬಹಳಷ್ಟು ಹಿಂದೆ ಇದೆ ಎನ್ನಬಹುದು. ಅಲೆಮಾರಿಗಳಾಗಿರುವುದರಿಂದ ಇವರ ಜೀವನ ಅತಂತ್ರದ ಬದುಕಾಗಿ ಪರಿಣಮಿಸಿದೆ.

ಆಹಾರ ಪದ್ಧತಿ :

ಡೊಂಬರದು ಎರಡು ಮುಖ್ಯ ವೃತ್ತಿಗಳು. ಒಂದು ಅಲೆದಾಡುತ್ತ ಗಡ್ಡೆ, ಗೆಣಸು, ಕಂದಮೂಲ, ಫಲ ಸಂಗ್ರಹಣೆ ಮಾಡುವುದು ಮತ್ತು ಇನ್ನೊಂದು ಬೇಟೆಯಾಡುವುದು. ಕಾಡಡೊಂಬರಿಗಂತೂ ಅವರು ಅಲೆದಾಡುವ ಕೊಳ್ಳ ಕಣವೆ ಅರಣ್ಯಗಳೇ ಆಧಾರ. ಸಿಕ್ಕ ಸಿಕ್ಕ ಹಣ್ಣು, ಕವಳಿ, ಕಾರಿ, ಬೋರಿ, ಸೀತಾಫಲ, ಹಲಸು ಮುಂತಾದವುಗಳನ್ನು ಸಂಗ್ರಹಿಸಿಟ್ಟು ಕೆಲವನ್ನು ಒಣಗಿಸಿ ಮೂಟೆ ಕಟ್ಟಿ ತಮ್ಮ ಜೊತೆಗೇ ಒಯ್ಯುವುದು. ತಾವು ಬೀಡು ಬಿಟ್ಟ ಹತ್ತಿರದ ಕೃಷಿ ವಸತಿಗಳಿಗೆ ಹೋಗಿ ತಮ್ಮ ಪ್ರದರ್ಶನ ನೀಡಿ ದವಸ ಧಾನ್ಯಗಳನ್ನು ಕೂಡಿಟ್ಟು ಬಳಸುವುದು. ಗೋಧಿ, ಕಡ್ಲಿ, ಹೆಸರು ಮುಂತಾದವುಗಳನ್ನು ನೆನೆಯಿಟ್ಟು ಎಲ್ಲರೂ ಹಂಚಿಕೊಂಡು ತಿನ್ನುವುದು. ಅನುಕೂಲವಾದಲ್ಲಿ ಜೋಳ, ಗೋಧಿ, ಸಜ್ಜೆ, ರಾಗಿ ಇತ್ಯಾದಿಗಳನ್ನು ಬೀಸಿ, ಹಿಟ್ಟು ಮಾಡಿಕೊಂಡು ಉಣ್ಣುವುದು. ಎಲ್ಲಾದರೂ ತೋಟಪಟ್ಟಿ ಕಂಡರೆ ಅವರನ್ನು ಕೇಳಿ, ಕಾಯಿಪಲ್ಲೆ ತಂದು ಬೇಯಿಸಿಯೋ ಹಸಿಹಸಿಯಾಗಿಯೋ ರೊಟ್ಟಿ ಮಾಡಿದರೆ ಅದರ ಜೊತೆಗೂ ತಿನ್ನುವುದು. ಇದು ಸಸ್ಯಾಹಾರಿಗಳ ಪದ್ಧತಿಯಾಯಿತು. ಊರ ಡೊಂಬರಲ್ಲಿ ಸಸ್ಯಾಹಾರಿಗಳಿಗೆ ಯಾವುದೇ ವಿಶೇಷ ಭಿನ್ನ ಕ್ರಮವಿಲ್ಲ. ಯಾವುದೇ ಊರಿನ ಒಂದು ಕೃಷಿಕ ಅಥವಾ ಅದಕ್ಕೆ ಹೊಂದಿಕೊಂಡು ನೆಲೆಸಿದ ಕುಂಬಾರ, ಗಾಣಿಗ, ಕಮ್ಮಾರ ಇತ್ಯಾದಿ ವೃಂದಗಳ ಆಹಾರ ಪದ್ಧತಿಯನ್ನೇ ಇವರೂ ಅನುಸರಿಸುತ್ತಾರೆ. ಆಹಾರ ಸಂಗ್ರಹಣೆ ಮತ್ತು ಪದ್ಧತಿಗಳಲ್ಲಿ ಎಲ್ಲ ಬಗೆಯ ಪೇಚು ಮತ್ತು ತೊಂದರೆಗಳಿರುವುದು ಮಾಂಸಾಹಾರಿಗಳಲ್ಲಿಯೇ; ಮತ್ತು ಡೊಂಬರಲ್ಲಿ ಹೆಚ್ಚು ಸಂಖ್ಯೆಯ ಜನ ಮಾಂಸಾಹಾರಿಗಳೇ. ಬೇಟೆಯಾಡುವುದು ಇವರಿಗೆ ಒಂದರ್ಥದಲ್ಲಿ ಕಡ್ಡಾಯದ ಕೆಲಸವೆಂದೇ ಹೇಳಬೇಕು.

ಉದ್ಯೋಗ :

ಡೊಂಬರಲ್ಲಿ ಎರಡು ರೀತಿಯ ವೃತ್ತಿಗಳಿವೆ. ಅದರಲ್ಲಿ ಮೊದಲನೆಯದು ಬೇಟೆಯಾಡುವುದು. ಡೊಂಬರು, ತಾವು ಬೀಡು ಬಿಟ್ಟ ಸ್ಥಳದಿಂದ ಹತ್ತಿರವೇ ಇರಲಿ ದೂರವೇ ಇರಲಿ ಕಾಡಿಗೆ ಬೇಟೆಯಾಡಲು ಹೊರಡುತ್ತಾರೆ. ಇಬ್ಬರು ಮೂವರು ಕೂಡಿ ಕೆಲವೊಮ್ಮೆ ಒಬ್ಬೊಬ್ಬರೇ ಬಲೆ, ಭರ್ಜಿ, ಕಿರುಗತ್ತಿ ಮುಂತಾದವು ಜೊತೆಗಿರಲೇಬೇಕು. ಮತ್ತೆ ನಾಯಿಗಳಂತೂ ಸದಾ ಇವರ ಬೆಂಬಳಿಯೇ. ಒಮ್ಮೆ ಬೇಟೆಗೆ ಹೊರಟರೆ ಅವರು ಬರಿಗೈಯಿಂದ ಮರಳುವುದಿಲ್ಲ. ಹಾಗೆ ಬರುವುದನ್ನು 'ಅವಮಾನ' ಎಂದು ಭಾವಿಸಲಾಗುತ್ತದೆ.

ಇವರು ಬೇಟೆಯಾಡುವ ಪ್ರಾಣಿ, ಪಕ್ಷಿಗಳೆಂದರೆ ಹಂದಿ, ನರಿ, ಮುಂಗಲಿ, ಉಡ, ಚಿಗರೆ, ಮೊಲ, ಪಾರಿವಾಳ, ಕಾಜಗ ಮುಂತಾದವು. ತಮ್ಮ ಜೊತೆ ಸಾಕಿಕೊಂಡಿರುವ ಆಡು, ಕುರಿ, ಕೋಳಿ ಮುಂತಾದವು ಕೆಲವು ಸಲ ಇವರಿಗೆ ಆಹಾರ. ಹೊಳೆ, ಹಳ್ಳ, ಕೆರೆ, ಕಟ್ಟೆಗಳಿಗೆ ತೆರಳಿ ಮೀನು, ಆಮೆ, ಏಡಿ ಇತ್ಯಾದಿಗಳನ್ನು ತರುವುದುಂಟು. ಇವರು ಆಕಳು, ಎಮ್ಮೆ, ಎತ್ತು, ಗಿಳಿ, ಇಲಿ, ಬೆಕ್ಕು, ಕೋತಿ, ಕಪ್ಪೆ, ಹಾವುಗಳನ್ನು ಮುಟ್ಟುವುದಿಲ್ಲ. ಇವುಗಳ ಮಾಂಸ ಡೊಂಬರಿಗೆ ನಿಷಿದ್ಧ.

ಇನ್ನೊಂದು ರೀತಿಯ ಉದ್ಯೋಗವೆಂದರೆ ಕಾಡು-ಮೇಡುಗಳನ್ನು ಅಲೆದಲೆದು ಹಣ್ಣು, ಫಲಗಳನ್ನು ಸಂಗ್ರಹಿಸುವುದು. ಭಿಕ್ಷಾಟನೆಯೂ ಇವರ ಕಸುಬುಗಳಲ್ಲೊಂದು. ಇದನ್ನು ಅವರು ಒಂದು ರೀತಿಯ ಧಾರ್ಮಿಕ ಆಚರಣೆ ಎಂದು ನಂಬಿದ್ದಾರೆ. ಡೊಂಬರ ಮತ್ತೊಂದು ಉದ್ಯೋಗ ತಮ್ಮ ಮೂಲ ಕಸುಬಾದ ದಂಬಿನ ಮೂಲಕ ಅನೇಕ ಸಲಕರಣೆಗಳನ್ನು ತಯಾರಿಸುವುದು. ಒಂದು ಕಾಲದಲ್ಲಿ ಡೊಂಬರು ಗರಡೀ ಸಾಧನೆ, ಜಟ್ಟಿಕಾಳಗ, ಮಲ್ಲಯುದ್ಧ, ದೊಣ್ಣೆ, ಕತ್ತಿವರಸೆ, ಶಕ್ತಿಪ್ರದರ್ಶನ ಮುಂತಾದವುಗಳಲ್ಲಿ ಪರಿಣಿತರಾಗಿದ್ದು, ಮಹಿಳೆಯರೂ ಕೆಲವೊಮ್ಮೆ ಜನಾಕರ್ಷಣೆಯ ದೃಷ್ಟಿಯಿಂದ ಈ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಇಂಥ ಹಿನ್ನೆಲೆಯ ಕೆಲವು ಸಲಕರಣೆಗಳನ್ನು ಡೊಂಬರೇ ತಯಾರಿಸುತ್ತಿದ್ದರು.

ವಿವಿಧ ಬಗೆಯ ಕಡ್ಡಿ ಹುಲ್ಲು, ಮಿದು ಹುಲ್ಲು, ಗರಿಗಳಿಂದ ಬಗೆ ಬಗೆಯ ಚಾಪೆ ಹೆಣೆಯುವುದು, ಬಿದಿರು ಸೀಳಿ ಸಂಯವಾಗಿ ಕಿತ್ತಿ ಕತ್ತರಿಸಿ ಮರ ಬುಟ್ಟಿ ತಯಾರಿಸುವುದು, ಹುಲ್ಲ ಪೊರಕೆ, ಮರದ ಹಣಿಗೆ ಹೀಗೆ ಹತ್ತಾರು ಬಗೆಯ ಕಸುಬುಗಳಲ್ಲಿ ತಮ್ಮ ಜಾಣ್ಮೆ, ಕುಶಲತೆ ಮೆರೆಯುತ್ತಿದ್ದರು.

ಉಡುಗೆ-ತೊಡುಗೆ :

ಕಾಡಿನಲ್ಲಿ ಬೇಟೆಯಾಡಿದ ಪ್ರಾಣಿಗಳ ಚರ್ಮ, ನಾರು, ಕಾಲಾನಂತರ ಉಣ್ಣೆ, ಹತ್ತಿ ಇತ್ಯಾದಿಗಳಿಂದ ತಮಗೆ ಅಗತ್ಯವಾದ ನಿಲುವಂಗಿ, ಮೈಗೆ ಸುತ್ತಿಕೊಳ್ಳಬಹುದಾದ ತುಂಡು ಸೀರೆ, ಪಂಚೆ, ತಲೆಗೆ ಟೊಪ್ಪಿಗೆ, ಕುಂಚಿಗೆ, ಕುಲಾಯಿ ಮುಂತಾದ ಉಡುಪುಗಳನ್ನು ಡೊಂಬ ಮಹಿಳೆಯರು ಸಿದ್ಧಪಡಿಸುತ್ತಿದ್ದರು. ಬೇರೆ ಬೇರೆ ತುಂಡು ತುಕಡಿಗಳನ್ನು ಜೋಡಿಸಿ ಹೊಲಿದು ದಪ್ಪನೆ ಹೊದಿಕೆಗಳನ್ನು ಮತ್ತು ನಾರು ಹುಲ್ಲುಗಳಿಂದ ಚಾಪೆ, ಹಾಸುಗೆಗಳನ್ನು ಸಿದ್ಧಗೊಳಿಸಿಕೊಳ್ಳುತಿದ್ದರು.

ಕಾಲ ಗತಿಸಿದಂತೆ ಡೊಂಬ ವೃಂದದ ಉಡುಗೆ - ತೊಡುಗೆಗಳಲ್ಲಿ ಹೆಚ್ಚಿನ ಬದಲಾವಣೆಗಳುಂಟಾಗಿ ಅವರ ಸ್ತ್ರೀ-ಪುರುಷರು ಮತ್ತು ಇತರ ಜನ ಸಮುದಾಯದವರ ವೇಷಭೂಷಣಗಳಲ್ಲಿದ್ದಿರಬಹುದಾದ ಅಂತರ ಮಾಯವಾಯಿತು. ಪಟಗ, ರುಮಾಲು, ಕೋಟು, ಉದ್ದನೆ ಕೋಟು, ಅಂಗಿ, ಕಚ್ಚೆ ಪಂಚೆ, ಸುತ್ತು ಪಂಚೆ, ಉತ್ತರೀಯ - ಹೀಗೆ ಎಲ್ಲ ಬಗೆಯ ಠಾಕು ಠೀಕಿನ ಉಡುಗೆ ತೊಡುಗೆ ರೂಢಿಯಾಯಿತು. ೧೯೩೦ ರ ಸುಮಾರು ತೆಗೆದು ಡೊಂಬ ಸ್ತ್ರೀ ಪುರುಷರ ಪ್ರತ್ಯೇಕ ಪ್ರತ್ಯೇಕವಾಗಿ ತೆಗೆದು ಮುದ್ರಿಸಲಾದ ಫೋಟೋಗಳಲ್ಲಿ ಈ ಸಂಗತಿ ಎದ್ದು ಕಾಣುತ್ತದೆ. ಈ ಎರಡೂ ಫೋಟೋಗಳ ಸ್ತ್ರೀ-ಪುರುಷರು ಫೋಟೋ ತೆಗೆಯಿಸಿಕೊಳ್ಳುವುದಕ್ಕಾಗಿ ಮುದ್ದಾಂ ಎಲ್ಲ ಶಿಸ್ತಿನ ಪೋಷಾಕು ಹಾಕಿ ನಿಂತಿರುವುದು ಸ್ಪಷ್ಟ. ಆದರೆ ತಮ್ಮ

ಶಕ್ತಿ ಕೌಶಲ, ಕುಣಿತ, ಹಾಡು, ನೆಗೆತ, ಜಿಗಿತಗಳನ್ನು ಪ್ರದರ್ಶಿಸುವ ಡೊಂಬರು ಈಗ ಸುಮಾರು ನಲವತ್ತು ವರ್ಷಗಳ ಮೊದಲು ಧರಿಸುತ್ತಿದ್ದ ಕೆಲವು ವೇಷಭೂಷಣ ಇತರರಿಗಿಂತ ಖಂಡಿತ ಭಿನ್ನವಾಗಿದ್ದವು.

ಮನೆ ಬಳಕೆಯ ವಸ್ತುಗಳು :

ಮೂಲತಃ ಇವರು ಅಲೆಮಾರಿಗಳಾಗಿದ್ದರಿಂದ ಒಂದೇ ಕಡೆ ನೆಲೆ ನಿಂತು ಬದುಕು ಸಾಗಿಸುವುದು ಇವರಿಗೆ ನಿಷಿದ್ಧವಾಗಿದೆ. ಆದ್ದರಿಂದ ಇವರು ತಮ್ಮ ವಲಸೆ ಜೀವನಕ್ಕೆ ತಕ್ಕಂತೆ ಸಹಾಯವಾಗಬಲ್ಲ ಹಗುರ ಹಾಗೂ ಕಡಿಮೆ ಬೆಲೆಗೆ ದೊರಕುವ ವಸ್ತುಗಳನ್ನು ಸಾಮಾನ್ಯವಾಗಿ ಬಳಸುತ್ತಾರೆ.

ಇವರು ಕಟ್ಟಿಗೆಯ ಮತ್ತು ಮಣ್ಣಿನಿಂದ ತಯಾರಿಸಿದ ಅಡುಗೆಯ ವಸ್ತುಗಳನ್ನು ಬಳಸುತ್ತಿದ್ದರೂ ಇತ್ತೀಚಿಗೆ ಆಧುನೀಕರಣದ ಪ್ರಭಾವದಿಂದ ಪ್ಲಾಸ್ಟಿಕ್, ಅಲ್ಯೂಮಿನಿಯಂ ಮತ್ತು ಇನ್ನಿತರ ವಸ್ತುಗಳನ್ನು ಬಳಸುತ್ತಿದ್ದಾರೆ.

ಕಲೆ, ಸಾಹಿತ್ಯ ಮತ್ತು ಭಾಷೆ :

''ಸುದೀರ್ಘ ಕಾಲದ ಅಲೆಮಾರಿತನ ಡೊಂಬ ವೃಂದದ ಸಂಕೀರ್ಣ ಸ್ವರೂಪಕ್ಕೆ ಕಾರಣವಾಗಿರುವುದರಿಂದ, ಡೊಂಬರು ಯಾವುದೇ ಪ್ರದೇಶ, ಸಂದರ್ಭ, ಜನ ಸಮುದಾಯಗಳ ಜೊತೆ ಸಹಜವಾಗಿ ಬೆರೆತು ಹೋಗುವ ಗುಣ ಸ್ವಭಾವ ಹೊಂದಿದ್ದರು. ಇದೇ ಕಾರಣದಿಂದಾಗಿ ಅವರು ವಿವಿಧ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಆದರೆ ಭಾಷಾಜ್ಞಾನ ಅಥವಾ ಸಾಮರ್ಥ್ಯ ಮೌಖಿಕ ಪರಂಪರೆಯ ಪರಿಸರದಲ್ಲಿ ಬದುಕಿದರು ರೂಢ ಅವರ ಬದುಕಿನ ಎಲ್ಲ ರೂಢಿ, ಸಲುಗೆ ಸಂಬಂಧ, ನಡವಳಿಕೆ ವಿಧಿ ವಿಧಾನ, ಆರಾಧನೆ, ಮದುವೆ, ಉತ್ಸವ, ನೃತ್ಯ ಸಂಗೀತ, ಶಕ್ತಿಪ್ರದರ್ಶನ ಮುಂತಾದ ಕ್ರಿಯೆಗಳಿಗೆ ಮೌಖಿಕ ಪರಂಪರೆಯೇ ಮುಖ್ಯ ಸಂವಹನ ಭಾಷೆ - ಮಾಧ್ಯಮ. ಡೊಂಬರ ಭಾಷೆ-ಸಾಹಿತ್ಯಗಳನ್ನು ಪ್ರತ್ಯೇಕವಾಗಿ ಗುರುತಿಸುವ ಮತ್ತು ಸಂಗ್ರಹಿಸುವ ಕಾರ್ಯ ವಿಶೇಷವಾಗಿ ನಡೆದಂತಿಲ್ಲ. ಥರ್ಸ್ಟನ್, ಎಚ್.ವಿ. ನಂಜುಂಡಯ್ಯ, ಅಯ್ಯರ್ ಅವರು ಸುಮಾರು ಆರೇಳು ದಶಕಗಳ ಹಿಂದೆ ತಮ್ಮ ಕೃತಿಯಲ್ಲಿ ಡೊಂಬರ ಭಾಷೆಯ ಕೆಲವು ನಾಮಪದ, ಕ್ರಿಯಾಪದ, ನುಡಿಗಟ್ಟು, ವಾಕ್ಯ ಮತ್ತು ಅವರದೇ ಆದ ರಹಸ್ಯ ಭಾಷೆಯ ಮಾತುಗಳನ್ನು ಗುರುತಿಸಿ ದಾಖಲಿಸಿದ್ದಾರೆ. ಅದು ನಿಜವಾಗಿ ಒಂದು ಮಹತ್ವದ ಕಾರ್ಯವೇ. ಡೊಂಬರ ಮದಾಲ್ಸಿ ಪದಗಳು ಈ ನಿಟ್ಟಿನಲ್ಲಿ ಬಹುಶಃ ಮೊದಲ ದಾಖಲೆ''[೧೫].

ಡೊಂಬ ವೃಂದದವರೇ ರಚಿಸಿದ ಸಾಹಿತ್ಯ ದುರ್ಲಭ. ಮೌಖಿಕ ಪರಂಪರೆಯಲ್ಲಿಯೇ ಬಂದ ಇವರ ಹಾಡು ಕಥೆ ದೊರೆಯುವುದು ಇಂದು ಇನ್ನೂ ದುರ್ಲಭ. ಆದರೆ ಡೊಂಬರ ನಡುವಳಿಕೆ, ಕಲೆ, ಶೌರ್ಯ, ಸಾಹಸ ಕಥೆಗಳು ಕನ್ನಡ ಕಾವ್ಯ ಕೃತಿಗಳಲ್ಲಿ ನಿರೂಪಿತವಾಗಿರುವುದರನ್ನು ಕಾಣುತ್ತೇವೆ. ಕುಮಾರರಾಮನ ಸಾಂಗತ್ಯ ಅಥವಾ ಕುಮಾರರಾಮ ಚರಿತೆ, ಚೆನ್ನರಾಮ ಸಾಂಗತ್ಯ, ಮಹಾಲಿಂಗಸ್ವಾಮಿಯ ಬಾಲರಾಮ ಈ ಮೂರೂ ಕಾವ್ಯಗಳಲ್ಲಿ ರತ್ನಾಜಿ, ಆರೇಯ ಚಾಮರಾಯನ

ಮಗಳು ಹರಿಯಲದೇವಿ, ಡೊಂಬರ ಚೆನ್ನಿ, ರತ್ನಿ ಮುಂತಾದವರ ಮನಮೋಹಕ ಬೆಡಗು, ಚೆಲುವು, ಇತ್ಯಾದಿಗಳ ಉಲ್ಲೇಖ ಬಂದಿದೆ. ಆದರೆ ನಂಜುಂಡಕವಿಯ ಕಾವ್ಯದಲ್ಲಿ ಮಾತ್ರ ರತ್ನಾಜಿ, ಡೊಂಬರ ವೃಂದಕ್ಕೆ ಸೇರಿದವಳು ಎನ್ನುವ ಮಾತೇ ಬರುವುದಿಲ್ಲ. ಚೆನ್ನರಾಮನ ಸಾಂಗತ್ಯದಲ್ಲಿ ಕಂಪಿಲ ಮದುವೆಯಾಗುವ ಹರಿಯಲದೇವಿ ಎನ್ನುವಾಕೆ ಆರೇಯ ಚಾಮರಾಯನ ಮಗಳು ಎಂದು ವಿವರಿಸಲಾಗಿದೆ.

ಡೊಂಬರಲ್ಲಿ ಮುಖ್ಯವಾಗಿ ಎರಡು ವಿಭಾಗಗಳು. ತೆಲುಗು ಡೊಂಬರು, ಆರೇಡೊಂಬರು. ತೆಲುಗು ಭಾಷೆ ಮಾತಾಡುವವರು ತೆಲುಗು ಡೊಂಬರು. ಮರಾಠಿಯಂತೆ ತೋರುವ 'ಆರೇ' ಮಾತಾಡುವ ಜನ ಆರೇ ಡೊಂಬರು. ಗುಜರಾತಿ ಮತ್ತು ಹಿಂದೀ ಅಥವಾ ಉರ್ದು 'ಹಿಂದಿ' 'ರಜಪೂತ' ಭಾಷಾ ಗುಂಪಿನ ಜನರೂ ಡೊಂಬರಲ್ಲಿದ್ದಾರೆ. ಕನ್ನಡ ನಾಡಿನಲ್ಲಿ ನೆಲೆಸಿರುವ ಇವರು ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುವಾಗ ತೆಲುಗು, ಆರೇ, ಗುಜರಿಬೋಲಿ, ಉರ್ದು, ಹಿಂದಿ ಇತ್ಯಾದಿ ಭಾಷೆ ಬಳಸುತ್ತಿದ್ದು ಕನ್ನಡವನ್ನೇ ತಮ್ಮ ಇತರರೆಡೆಯ, ಸಂವಹನ ಭಾಷೆಯಾಗಿ ಬಳಸುತ್ತಾರೆ. ಮತ್ತು ಕನ್ನಡಿಗರ ಬದುಕಿನ ಜೊತೆಗೆ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿದ್ದಾರೆ. ಗುರುತಿಸಿಕೊಂಡಿದ್ದಾರೆ. ಡೊಂಬ ಜನಾಂಗದ ಬಳಕೆಯಲ್ಲಿದ್ದ - ಇಂದಿಗೂ ಇರಬಹುದಾದ ತೆಲುಗು, ಸಂಸ್ಕೃತ, ಆರೇ, ಹಿಂದೀ ಮುಂತಾದ ಸಮ್ಮಿಶ್ರಣದ ಒಂದು ಉಪಭಾಷೆಯನ್ನು ಇಂದಿಗೂ ಕಾಣಬಹುದು.

ಡೊಂಬರು ಬಳಸುವ ಭಾಷೆಯಲ್ಲಿ ತೆಲುಗು ಭಾಷೆಯ ಪ್ರಭಾವ ಮೇಲುನೋಟಕ್ಕೇ ಎದ್ದು ಕಾಣುತ್ತದೆ. ಅದೇ ರೀತಿ ಸಂಸ್ಕೃತ, ಸಂಸ್ಕೃತ ಭಾಷೆಯಂತೆ ಕಾಣುವ ಪದ, ಪ್ರತ್ಯಯಗಳೂ ಹೇಗೆ ಡೊಂಬರ ಭಾಷೆಯಾಗಿದ್ದ ಈ ಉಪಭಾಷೆಯಲ್ಲಿ ಹಾಸು ಹೊಕ್ಕಾದವು ಎನ್ನುವುದು ಕುತೂಹಲಕಾರಿಯಾದ ಸಂಗತಿಯಾಗಿದೆ. ದಕ್ಷಿಣ ಭಾರತವನ್ನುಳಿದು ಭಾರತದ ಇತರ ಪ್ರದೇಶಗಳ ಡೊಂಬರ ಭಾಷೆಯು ವಿಭಿನ್ನವಾಗಿದೆ.

ಡೊಂಬರ ಸಾಮಾಜಿಕ ಸ್ಥಿತಿ-ಗತಿ :

ಡೊಂಬರು ಸಾವಿರಾರು ವರ್ಷಗಳಿಂದ ಅಲೆಮಾರಿಗಳಾಗಿಯೇ ಬದುಕುತ್ತ ಬಂದುದರಿಂದ ಇವರದು ಒಂದು ಸುಸಂಘಟಿತ ಹೋಗಲಿ ಸಂಘಟಿತ ಅಥವಾ ವ್ಯವಸ್ಥಿತ ಸಮಾಜವಲ್ಲ ಎನ್ನುವುದು ಯಾವುದೇ ಪುರಾವೆಯನ್ನು ಬಯಸದ ಮೇಲುನೋಟಕ್ಕೆ ಎದ್ದು ಕಾಣುವ ವಾಸ್ತವ ಸತ್ಯವಾಗಿದೆ. ಆದರೆ ತಂಡ ತಂಡವಾಗಿಯೇ ಈ ವೃಂದ ಚಲಿಸಬೇಕಾಗಿ ಬಂದುದರಿಂದ ಇವರಿಗೆ ತಮ್ಮದೇ ಆದ ಒಳರಚನೆ ವೃತ್ತಿ ಗುಂಪಿಗಳಿಗನುಗುಣವಾದ ಜೀವನ ವಿಧಾನ ಒಂದು ಕಾಲಕ್ಕೆ ಇತ್ತು ಎನ್ನುವುದಕ್ಕೆ ಕೆಲವಾದರೂ ದಾಖಲೆಗಳು ದೊರೆಯುತ್ತವೆ.

ಗತ ಹೈದರಾಬಾದ ರಾಜ್ಯದ ಮೂರು ಪ್ರದೇಶ - ಮಾರಾಠವಾಡ, ತೆಲಂಗಾಣ ಮತ್ತು ಕನ್ನಡಗಳಲ್ಲಿದ್ದ ಡೊಂಬರ ಬಗ್ಗೆ ಇರುವ ಮಾಹಿತಿಗಳ ಪ್ರಕಾರ ಡೊಂಬರಲ್ಲಿ ಆರು ಸಮುದಾಯಗಳಿವೆ.

ಅವುಗಳೆಂದರೆ

೧) ಕರಮಚವಾರು

೨) ಪದೇಕವಾರು

೩) ರಾಮಸಾನಿವಾರು

೪) ಜೋಪಳ್ಳಿವಾರು

೫) ರಾಜಕ

೬) ಗುಜೋಕುವಾರು

ಅಲೆಮಾರಿತನದ ವಿಲಕ್ಷಣ ಸ್ವಭಾವದಿಂದಾಗಿ ಡೊಂಬ ಜನಮುಗದಲ್ಲಿ ವಿವಿಧ ಪ್ರಾದೇಶಿಕ ಮತ್ತು ವೃತ್ತಿ ಮೂಲದ ವೈಶಿಷ್ಟ್ಯ ವಿಭಿನ್ನತೆಗಳು ತಲೆದೋರಿ, ಅವರು ಈ ಜನಾಂಗದ ಆಂತರಿಕ ರಚನೆಯಲ್ಲಿ ಪ್ರತ್ಯೇಕವಾಗಿ ರೂಪುಗೊಂಡುವೆಂದು ತೋರುತ್ತದೆ. ಈ ಪ್ರತ್ಯೇಕತೆ ಪ್ರದೇಶ, ವೃತ್ತಿ ಇತ್ಯಾದಿಗಳನ್ನು ಸೂಚಿಸುತ್ತವೆಯೇ ಹೊರತು ಜನಾಂಗದಿಂದಲೇ ಪ್ರತ್ಯೇಕ ಎಂದೇನೂ ಅಲ್ಲ. ನಾಡದೊಂಬರೇ ಇರಲಿ, ಕಾಡು ದೊಂಬರೇ ಇರಲಿ, ಡೊಂಬ ವೃಂದದಲ್ಲಿ ಒಟ್ಟು ೨೨ ಪಂಗಡಗಳನ್ನು ಗುರುತಿಸಲಾಗಿದೆ.

ಡೊಂಬರ ಒಳಪಂಗಡಗಳ ಕುರಿತು ವಿವರಿಸಬೇಕೆಂದರೆ ಡೊಂಬರು ತಮ್ಮ ತಮ್ಮ ಪಂಗಡದ ನಾಯಕ, ರಡ್ಡಿ, ರಾಯುಡು ಇತ್ಯಾದಿ ವಿಶೇಷ ಗೌರವಸೂಚಿ ಪದಗಳಿಂದ ಕರೆಯಲ್ಪಡುವ ಮುಖ್ಯಸ್ಥನಿಗೆ ಅಧೀನವಾಗಿ ಅಥವಾ ಆಜ್ಞಾನುವರ್ತಿಯಾಗಿ ನಡೆದುಕೊಳ್ಳುತ್ತಾರೆ. ಪ್ರತಿ ಒಳಪಂಗಡದ ನಾಯಕ ವ್ಯಕ್ತಿಗಳು ಯಾವುದೇ ಬಗೆಯ ಸಮಸ್ಯೆಗಳು ಬಂದಾಗಲೂ ಪರಸ್ಪರ ಒಂದುಗೂಡಿ ಚರ್ಚಿಸುತ್ತಾರೆ. ವರ್ಷಕ್ಕೆ ಒಂದು ಸಲವಾದರೂ ಎಲ್ಲ ಪಂಗಡಗಳ ಜನ ಒಂದೆಡೆ ಸೇರಿ, ತಮ್ಮ ತಮ್ಮ ಕುಂದುಕೊರತೆಗಳನ್ನು, ಸುಖ ದುಃಖಗಳನ್ನು ಹಂಚಿಕೊಳ್ಳುವ, ನಿವೇದಿಸಿಕೊಳ್ಳುವ ಮುಕ್ತ ಅಥವಾ ತೆರೆದ ಮನಸ್ಸು ಹೊಂದಿರುತ್ತಾರೆ. ಈ ಕಾರಣದಿಂದ ಡೊಂಬರ ವೃಂದ, ಯಾವುದೇ ಒಂದು ನಿರ್ದಿಷ್ಟ ಸೂತ್ರ ವ್ಯವಸ್ಥೆಯ ಸಂಘಟಿತ ಸಮಾಜವಲ್ಲವಾದರೂ, ಸಾಂಸ್ಕೃತಿಕವಾಗಿ ತನ್ನ ಕೆಲವು ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಬಂದ ಸಮುದಾಯವಾಗಿದೆ.

ಅಲೆಮಾರಿಯಾದ ಈ ಸಮುದಾಯದಲ್ಲಿ ಡೊಂಬರಲ್ಲದವರೂ ಸೇರಿ ತಾವೂ ಡೊಂಬರ ಕುಲದಲ್ಲಿ ಸೇರಿ ಒಂದಾಗುವ ವಿಶಿಷ್ಟ ಸಂಗತಿ ಗಮನಾರ್ಹವಾಗಿ ಕಾಣುತ್ತದೆ.

ಹೀಗೆ ವಿವಿಧ ರೀತಿಯಲ್ಲಿ ತನ್ನದೇ ಆದ ವೈಶಿಷ್ಟ್ಯ ಮತ್ತು ವಿಭಿನ್ನತೆಯನ್ನು ಹೊಂದಿದ ಡೊಂಬ ಸಮುದಾಯದ ಜನತೆ ಕುದುರಿಮೋತಿ ಮೊಹರಂ ಹಬ್ಬದಲ್ಲಿ ಭಾಗಿಗಳಾಗಿ ತಮ್ಮ ಭಕ್ತಿಯ ಪರಾಕಾಷ್ಠೆ ಮೆರೆದು ಮತ್ತೆ ಅಲೆಮಾರಿ ಬದುಕಿಗೆ ಸಾಗುತ್ತಾರೆ.

ಇತರರು

ಕುದರಿಮೋತಿ ಮೊಹರಂ ಆಚರಣೆಯಲ್ಲಿ ಅಲೆಮಾರಿ ಜನಾಂಗದವರಾದ ಹಗಲು ವೇಷಗಾರರು, ಸುಡುಗಾಡು ಸಿದ್ದರು, ಗೊಂಧಳಿಗರು, ಸಿಂಧೊಳ್ಳುರು (ದುರಮುರಗಿಯವರು), ಡೊಂಬರು ಇವರಲ್ಲದೇ ಹಾವಾಡಿಗರು, ಜಾತಿಗಾರರು, ಅಡವಿ ಚೆಂಚರು ಮೊದಲಾದ ಅಲೆಮಾರಿ ಜನಾಂಗದವರು ಹತ್ತು ದಿನಗಳವರೆಗೆ ನಡೆಯುವ ಭಕ್ತಿ ಭಾವದ ಕುದರಿಮೋತಿ ಮೊಹರಂ ಹಬ್ಬದಲ್ಲಿ ಭಾಗಿಯಾಗಿ ತಮ್ಮ ಸಂಸ್ಕೃತಿ, ಸಂಪ್ರದಾಯ, ನಂಬಿಕೆ, ಆಚರಣೆಗಳ ಪ್ರದರ್ಶನದೊಂದಿಗೆ, ಅಲೆಮಾರಿ ಜೀವನ ಪದ್ಧತಿಯೊಂದಿಗೆ ಇಲ್ಲಿ ಬಿಡಾರ ಹೂಡಿ ಹಬ್ಬದ ನಂತರ ಮತ್ತೆ ತಮ್ಮ ಅಲೆಮಾರಿ ಬದುಕಿಗೆ ಸಾಗುತ್ತಾರೆ. ನನ್ನ ಸಂಶೋಧನೆಯಿಂದ ತಿಳಿದು ಬರುವ ಸಂಗತಿ ಎಂದರೆ ಅಲೆಮಾರಿ ಜನಾಂಗದವರು ತಮ್ಮ ಎಲ್ಲ ರೀತಿಯ ಶಕ್ತಿಯ ಪುನರುಜ್ಜೀವಕ್ಕಾಗಿ ಈ ಮೊಹರಂ ಹಬ್ಬದಲ್ಲಿ ಭಾಗಿಯಾಗಿ ಹಜರತ್ ಹುಸೇನ್ ಅಲಿ ಅಲಂ ದೈವಕ್ಕೆ ತಲೆಬಾಗುತ್ತಾರೆ.

ಅಡಿಟಿಪ್ಪಣಿಗಳು :

೧. ಯಳನಾಡು ಅಂಜನಪ್ಪ - ಹಗಲುವೇಷದವರ ಸಂಸ್ಕೃತಿ- ಪುಟ ಸಂಖ್ಯೆ - ೫

೨. ಯಳನಾಡು ಅಂಜನಪ್ಪ - ಹಗಲುವೇಷದವರ ಸಂಸ್ಕೃತಿ- ಪುಟ ಸಂಖ್ಯೆ - ೭

೩. ಯಳನಾಡು ಅಂಜನಪ್ಪ - ಹಗಲುವೇಷದವರ ಸಂಸ್ಕೃತಿ- ಪುಟ ಸಂಖ್ಯೆ - ೧೪

೪. ಡಾ. ಪಿ.ಕೆ. ಖಂಡೋಬಾ - ಸುಡುಗಾಡು ಸಿದ್ದರ ಸಂಸ್ಕೃತಿ - ಪುಟ ಸಂಖ್ಯೆ - ೮

೫. ಡಾ. ಪಿ.ಕೆ. ಖಂಡೋಬಾ - ಸುಡುಗಾಡು ಸಿದ್ದರ ಸಂಸ್ಕೃತಿ - ಪುಟ ಸಂಖ್ಯೆ - ೧೦

೬. ಡಾ. ಪಿ.ಕೆ. ಖಂಡೋಬಾ - ಸುಡುಗಾಡು ಸಿದ್ದರ ಸಂಸ್ಕೃತಿ - ಪುಟ ಸಂಖ್ಯೆ - ೧೧

೭. ಶಿವಾನಂದ ಲ. ಪಾಚಂಗಿ - ಗೋಂಧಳಿ, ಪುಟ ಸಂಖ್ಯೆ - ೩

೮. ಶಿವಾನಂದ ಲ. ಪಾಚಂಗಿ - ಗೋಂಧಳಿ, ಪುಟ ಸಂಖ್ಯೆ - ೧೨

೯. ಶಿವಾನಂದ ಲ. ಪಾಚಂಗಿ - ಗೋಂಧಳಿ, ಪುಟ ಸಂಖ್ಯೆ - ೭೮

೧೦. ಡಾ. ದೊಡ್ಡಮನಿ ಲೋಕರಾಜ್ ಮತ್ತುಶ್ರೀನಿವಾಸ ಎಸ್. ರಾವುಲೋಳ್ - ಸಿಂಧೊಳ್ಳು - ಪುಟ ಸಂಖ್ಯೆ ೧೩

೧೧. ಡಾ. ದೊಡ್ಡಮನಿ ಲೋಕರಾಜ್ ಮತ್ತುಶ್ರೀನಿವಾಸ ಎಸ್. ರಾವುಲೋಳ್ - ಸಿಂಧೊಳ್ಳು - ಪುಟ ಸಂಖ್ಯೆ ೧೯

೧೨. ಡಾ. ದೊಡ್ಡಮನಿ ಲೋಕರಾಜ್ ಮತ್ತುಶ್ರೀನಿವಾಸ ಎಸ್. ರಾವುಲೋಳ್ - ಸಿಂಧೊಳ್ಳು - ಪುಟ ಸಂಖ್ಯೆ ೭೪

೧೩. ದೇವೇಂದ್ರ ಕುಮಾರ ಸಿ. ಹಕಾರಿ - ಡೊಂಬರ ಸಂಸ್ಕೃತಿ - ಪುಟ ಸಂಖ್ಯೆ ೨೦

೧೪. ದೇವೇಂದ್ರ ಕುಮಾರ ಸಿ. ಹಕಾರಿ - ಡೊಂಬರ ಸಂಸ್ಕೃತಿ - ಪುಟ ಸಂಖ್ಯೆ ೩೦

೧೫. ದೇವೇಂದ್ರ ಕುಮಾರ ಸಿ. ಹಕಾರಿ - ಡೊಂಬರ ಸಂಸ್ಕೃತಿ - ಪುಟ ಸಂಖ್ಯೆ ೪೭

ಅಧ್ಯಾಯ - ೫

ಅಲೆಮಾರಿಗಳ ಸಂಪ್ರದಾಯ, ನಂಬಿಕೆ, ಆಚರಣೆಗಳು

ಅಧ್ಯಾಯ - ೫ : ಅಲೆಮಾರಿಗಳ ಸಂಪ್ರದಾಯ, ನಂಬಿಕೆ, ಆಚರಣೆಗಳು

ಆಂತರಿಕ ಮತ್ತು ಬಾಹ್ಯ ಪ್ರೇರಣೆಗಳು ಒಂದು ಜನಾಂಗದ ಆಹಾರ ಪದ್ಧತಿ, ವೇಷಭೂಷಣಗಳನ್ನು ಬಹುಮಟ್ಟಿಗೆ ಶೀಘ್ರ ಬದಲಾವಣೆಗೆ ಒಳಗು ಮಾಡಬಹುದೆ ಹೊರತು ಆ ಜನಾಂಗದ ಹುಟ್ಟು, ಸಾವು, ವಿವಾಹಕ್ಕೆ ಸಂಬಂಧಿಸಿದ ವಿಧಿ ವಿಧಾನಗಳನ್ನಲ್ಲ. ಇವು ಬದುಕಿನ ಬಹು ಮುಖ್ಯ ತಿರುಳುಗಳಾಗಿರುವುದರಿಂದ ಸಣ್ಣ ಲೋಪ ಕೂಡ ದೀರ್ಘಕಾಲದ ಪರಿಣಾಮಗಳಿಗೆ ದಾರಿ ಮಾಡುತ್ತದೆ ಎಂಬ ಜಾಗರೂಕತೆ ಈ ಬದಲಾವಣೆಗೆ ಅಡ್ಡ ಗೋಡೆಯಾಗಿ ನಿಲ್ಲುತ್ತದೆ. ಈ ಅಡ್ಡಗೋಡೆಯನ್ನು ಭೇದಿಸಿಕೊಂಡು ಒಳನುಗ್ಗಬಲ್ಲ ಪ್ರಭಾವಗಳು ಕಾಲಕಾಲಕ್ಕೆ ಹುಟ್ಟಿಕೊಂಡರೂ ಬದಲಾವಣೆಯ ಪ್ರಮಾಣ ಅತ್ಯಲ್ಪ ಮತ್ತು ಅದಕ್ಕೆ ತಗಲುವ ಕಾಲಾವಧಿ ಅತಿ ದೀರ್ಘ.

ಆದ್ದರಿಂದಲೇ ಒಂದು ಜನಾಂಗದ ಸಂಸ್ಕೃತಿಯ ಮೂಲ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಆ ಜನಾಂಗದ ಹುಟ್ಟು, ಸಾವು, ಮದುವೆಗೆ ಸಂಬಂಧಿಸಿದ ಆಚರಣೆಗಳು ಹೆಚ್ಚು ಪ್ರಯೋಜನಕಾರಿ. ಈ ನಿಟ್ಟಿನಲ್ಲಿ ನಗರೀಕರಣದ ತೆಕ್ಕೆಗೆ ಸಿಕ್ಕಿ ಬೀಳದ ಅಲೆಮಾರಿಗಳ ಆಚರಣೆಗಳು ಆ ಸಂಸ್ಕೃತಿಯ ಮೂಲಾಂಶಗಳನ್ನು ಉಳಿಸಿಕೊಂಡಿರಬಹುದಾದ ಸಾಧ್ಯತೆಯನ್ನು ಶೋಧಿಸುವ ಅಗತ್ಯವಿದೆ.

ಭಾರತದಲ್ಲಿರುವ ಅಲೆಮಾರಿಗಳ ಸಂಖ್ಯೆಗೇನೂ ಕಡಿಮೆಯಿಲ್ಲ. ಆದರೆ ನನ್ನ ವ್ಯಾಪ್ತಿಗೆ ಬರುವ ಕುದರಿಮೋತಿ ಮೊಹರಂ ಆಚರಣೆಯಲ್ಲಿ ಪಾಲ್ಗೊಳ್ಳುವ ಪ್ರಮುಖ ಅಲೆಮಾರಿ ಜನಾಂಗಗಳ ಪೈಕಿ ದೊಂಬರು, ಹಗಲುವೇಷಗಾರರು, ಗೊಂಧಳಿಗರು, ಹಾವಾಡಿಗರು, ಜಾತಿಗಾರರು, ಸುಡುಗಾಡು ಸಿದ್ದರು ಹೀಗೆ ಕೆಲವು ಜನಾಂಗಗಳವರ ಸಂಪ್ರದಾಯ, ನಂಬಿಕೆ, ಆಚರಣೆಗಳ ಬಗ್ಗೆ ಸಂಶೋಧನಾತ್ಮಕ ವಿಶ್ಲೇಷಣೆ ಮಾಡಲಾಗಿದೆ.

ಹಗಲುವೇಷಗಾರರು :

ಜನನ, ನಾಮಕರಣ ಪದ್ಧತಿ :

ಈ ಹಗಲು ವೇಷದವರ ಸಂಸ್ಕೃತಿಯಲ್ಲಿ ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳಲ್ಲಿ ಕಲಾವಂತಿಕೆ ಪ್ರದರ್ಶನವನ್ನು ನಾವು ಕಾಣಬಹುದಾಗಿದೆ.

ಈ ಜನಾಂಗದ ಜನರಲ್ಲಿ ಮಗುವಿನ ಜನನ ಕಾಲದಲ್ಲಿ ಆಚರಿಸುವ ಆಚರಣೆಗಳು ಮತ್ತು ಸಂಪ್ರದಾಯಗಳು ತುಂಬಾ ಕಟ್ಟುನಿಟ್ಟಾಗಿವೆ. ಬಸುರಿಗೆ ಹೆರಿಗೆ ನೋವು ಕಾಣಿಸಿಕೊಂಡು ಕೂಡಲೇ ಇವರ ಗುಡಾರಗಳಲ್ಲಿರುವ ವಿವಾಹಿತ ಹೆಂಗಸರೆಲ್ಲ ಒಟ್ಟುಗೂಡಿ ಅವರಲ್ಲಿ ಹೆರಿಗೆ ಮಾಡಿಸಿ ಅನುಭವವಿರುವ ಒಬ್ಬ ಹೆಂಗಸು ಮಂತ್ರಸಾನಿಯಾಗುತ್ತಾರೆ. ಸೂಲಗಿತ್ತಿಯನ್ನು ಇವರು ಮಂತ್ರಸಾನಿ

ಎಂದು ಕರೆಯುತ್ತಾರೆ''[೧]. ಹೆರಿಗೆಗೆ ಇಂತಹದೇ ಸ್ಥಳವೆನ್ನುವ ನಿಯಮವೇನೂ ಇಲ್ಲ. ಮಂತ್ರಸಾನಿ ಜೊತೆಗೆ ಇವರ ಉಳಿದ ಹೆಂಗಸರೂ ಸೇರಿ ಸಹಾಯ ಮಾಡುತ್ತಾರೆ.

ಮಗುವಿನ ಜನನವಾದ ಕೂಡಲೇ ಕುಡುಗೋಲಿನಿಂದ ಹೊಕ್ಕಳು ಬಳ್ಳಿ ಕೊಯ್ದು ಕಟ್ಟಿ ಅದಕ್ಕೆ ಹರಳೆಣ್ಣೆಯಲ್ಲಿ ಕಲೆಸಿದ ಹರಿಶಿಣದ ಪುಡಿಯನ್ನು ಹಚ್ಚಿ ನಂತರ ಸೀಗೇಪುಡಿಯಿಂದ ಮಗುವಿನ ಮೈಯ್ಯನ್ನು ತೊಳೆಯುತ್ತಾಳೆ. ಹೆರಿಗೆ ಮೂರನೆಯ ದಿನ ಮಾಡುವ ಕಾರ್ಯವನ್ನು 'ಪುರುಡು' ಎನ್ನುತ್ತಾರೆ. ಆ ದಿನ ಹೆರಿಗೆಯಾದ ಜಾಗವನ್ನು ಸಗಣಿಯಿಂದ ಸಾರಿಸಿ ಗೋವಿನ ಗಂಜನ್ನು ಪ್ರೋಕ್ಷಿಸುತ್ತಾರೆ. ಪುರುಡುವಿನ ದಿನ ಬೇಟೆಯಾಡಿ ತಂದ ಪ್ರಾಣಿ ಅಥವಾ ಪಕ್ಷಿಗಳ ಮಾಂಸದ ಸಾರು ಮಾಡಿ ಜೊತೆಗೆ ಬೇಳೆ ಸಾರು ಮಾಡಿ ಅಲ್ಲಿರುವ ಎಲ್ಲ ಕುಲಸ್ತರಿಗೂ ರಾತ್ರಿ ಊಟದಲ್ಲಿ ಬಡಿಸುತ್ತಾರೆ. ರಾತ್ರಿ ಊಟದ ನಂತರ ಮಗುವಿಗೆ ಹೆಸರು ಇಡುತ್ತಾರೆ. ಅತ್ತೆ ತೊಟ್ಟಿಲು ತೂಗುತ್ತಾಳೆ. ಸಾಮಾನ್ಯವಾಗಿ ಇವರು ಹೆಣ್ಣುದೇವತೆ ಮತ್ತು ಗಂಡುದೇವತೆಗಳ ಹೆಸರುಗಳನ್ನೇ ತಮ್ಮ ಮಕ್ಕಳಿಗೆ ಇಡುತ್ತಾರೆ.

ಜನನವಾದ ಐದನೇ ದಿನ ಬಾಣಂತಿ ಗಂಗಾದೇವಿ ಪೂಜೆ ಮಾಡಿ ತಣ್ಣೀರನ್ನು ಮುಟ್ಟಿ ಗಡಿಗೆಯಲ್ಲಿ ಹೊತ್ತು ತರುತ್ತಾಳೆ. ಆರನೇ ದಿನದಿಂದ ಆಕೆ ಕುಟುಂಬದ ಎಲ್ಲ ಕೆಲಸಗಳಲ್ಲೂ ಭಾಗಿಯಾಗಿ ಭಿಕ್ಷೆ ಬೇಡಲೂ ಹೋಗುತ್ತಾಳೆ.

ಋತುಮತಿ ಸಂಪ್ರದಾಯ :

ಹುಡುಗಿ ಮೈನೆರೆದ ವಿಷಯ ತಿಳಿದ ತಕ್ಷಣ ಅಲ್ಲೇ ಇರುವ ಸೋದರ ಮಾವನಾಗಲೀ ಅಥವಾ ಮಾವನ ವರಸೆಯವರಾಗಲೀ ಅಥವಾ ಇವರಾರೂ ಇಲ್ಲದಿದ್ದ ಪಕ್ಷದಲ್ಲಿ ಹಿರಿಯರು ಹುಡುಗಿ ಮೈನೆರೆದ ಸ್ಥಳದಿಂದ ಇಪ್ಪತ್ತು, ಮೂವತ್ತು ಅಡಿ ದೂರದಲ್ಲಿ ಒಂದು ಸಣ್ಣ ಗುಡಾರವನ್ನು ಹಾಕುತ್ತಾರೆ. ಆಕೆ ಐದು ದಿನಗಳ ಕಾಲ ಆ ಗುಡಾರದಲ್ಲೇ ಒಂಟಿಯಾಗಿ ಕಾಲ ಕಳೆಯಬೇಕು. ಈ ಅವಧಿಯಲ್ಲಿ ಆಕೆ ತನ್ನ ತವರಿನವರನ್ನುಳಿದು ಯಾರನ್ನೂ ನೋಡುವಂತಿಲ್ಲ. ಐದನೇ ದಿನ ರಾತ್ರಿ ಆಕೆ ತಂದೆ-ತಾಯಿಗಳು ಕುಲಸ್ತರಿಗೆಲ್ಲ ಒಂದೊಂದು ಮಗಿ ಹೆಂಡ ಕೋಳಿ ಮಾಂಸ ಹಾಗೂ ಬೇಳೆ ಸಾರಿನ ಊಟ ಹಾಕಿಸುತ್ತಾರೆ. ಇವರಲ್ಲಿ ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿರುವುದರಿಂದ ಹುಡುಗಿಗೆ ಮೊದಲೇ ಮದುವೆಯಾಗಿದ್ದರೆ ಗಂಡನ ಮನೆಯವರೇ ಬಂದು ಐದನೇ ದಿನದ ಎಲ್ಲ ಖರ್ಚನ್ನು ಭರಿಸುತ್ತಾರೆ.

ಮದುವೆ :

ಹಗಲುವೇಷಗಾರರ ಜನಾಂಗದಲ್ಲಿ ಬಹಳ ಸರಳವಾದ ಮದುವೆ ಪದ್ಧತಿ ಕಂಡು ಬರುತ್ತದೆ. ಈ ಜನಾಂಗದ ಸಂಖ್ಯಾಪ್ರಮಾಣ ಬಹಳ ಕಡಿಮೆ ಇರುವುದರಿಂದ ಗಂಡು ಹಾಗೂ ಹೆಣ್ಣು ಹೆತ್ತ ಎರಡೂ ಕುಟುಂಬಗಳಲ್ಲಿ ಆತಂಕ ಕಾಡುತ್ತಿರುತ್ತದೆ. ಹೆಚ್ಚಾಗಿ ಈ ಆತಂಕ ಕಾಡುವುದು ಗಂಡಿನ ಕಡೆಯವರಿಗೆ. ಆದ್ದರಿಂದಲೇ ಇವರು ಬಾಲ್ಯವಿವಾಹ ಮಾಡಿಬಿಡುತ್ತಾರೆ.

ಗಂಡಿನ ತಂದೆ ಮಗನಿಗೆ ಹೆಣ್ಣನ್ನು ಅರಸಿ ಊರೂರು ಅಲೆದು ಅದೇ ಜನಾಂಗದ ಹೆಣ್ಣಿರುವ ಕುಟುಂಬವನ್ನು ಪತ್ತೆ ಹಚ್ಚುತ್ತಾನೆ. ಹೆಣ್ಣಿನ ತಂದೆಯನ್ನು ಭೇಟಿಯಾಗಲಿ ಕುಲ, ಗೋತ್ರಗಳನ್ನು ತಿಳಿಸಿ ತನ್ನ ಬೇಡಿಕೆಯನ್ನು ಮುಂದಿಡುತ್ತಾನೆ. ಸಂಬಂಧ ಹೊಸದಾಗಿದ್ದರೆ ಹೆಣ್ಣಿನ ತಂದೆ ಅಷ್ಟು ಬೇಗ ಗಂಡಿನ ತಂದೆಯನ್ನು ಒಪ್ಪುವುದಿಲ್ಲ. ಈ ಸಮಯದಲ್ಲಿ ಮಧ್ಯಸ್ಥಿಕೆಯನ್ನು ಯಾರಾದರೂ ವಹಿಸಬೇಕಾಗುತ್ತದೆ. ಗಂಡಿನ ತಂದೆ ಇವರಿಗೆ ಹೊಸಬನಾಗಿದ್ದರೆ 'ಕತಪ' ಕಟ್ಟಿ ಮಾತನಾಡಬೇಕಾಗುತ್ತದೆ. ಕತಪ ಎಂದರೆ ಬೆಳ್ಳಿ ಅಥವಾ ಬಂಗಾರದ ಉಂಗುರ ಅಥವಾ ಕಡ್ಡಿಯ ಅಥವಾ ಓಲೆ ಅಥವಾ ಕೊನೆಗೆ ಒಂದು ಕಡ್ಡಿಯನ್ನಾದರೂ ಸಾಕ್ಷಿ ಕಟ್ಟುವುದು.

ಎರಡೂ ಮನೆತನದ ಗೋತ್ರಗಳು ಸೆಂಟಸ್ತಿಕೆಗೆ ಹೊಂದಾಣಿಕೆಯಾದರೆ ಹುಡುಗ-ಹುಡುಗಿನ ತಂದೆಗಳು ಹೆಂಡದಂಗಡಿಗೆ ಹೋಗಿ ಜೊತೆಯಲ್ಲಿ ಕುಡಿದರೆಂದರೆ ಸಂಬಂಧ ಕುದುರಿದಂತೆಯೇ ಸರಿ. ಇವರು ತಮ್ಮ ಹಳೆ ಸಂಬಂಧಗಳಲ್ಲೇ ಹೆಣ್ಣು ತರುವುದು ಮತ್ತು ಕೊಡುವುದು ಹೆಚ್ಚು.

ಬೇರೆ ಜನಾಂಗದಲ್ಲಿರುವಂತೆ ಈ ಜನಾಂಗದಲ್ಲಿ ಸೀಮಂತದಂಥ ಯಾವುದೇ ರೀತಿಯ ಕಾರ್ಯಗಳು ಇಲ್ಲ. ಚೊಚ್ಚಲ ಬಸುರಿಗೆ ಮಾತ್ರ ಆಗಾಗ ಅಕ್ಕಿ ಬೆಲ್ಲದಿಂದ ಮಾಡಿದ ಉಗ್ಗಿಯನ್ನೋ ಅಥವಾ ಬೇಳೆ ಅಕ್ಕಿ ಸೇರಿಸಿ ಮಾಡಿದ ಕಿಚಡಿಯನ್ನೋ ಉಣಲು ಕೊಡುತ್ತಾರೆ. ಆದರೆ ವಾರದಲ್ಲಿ ನಾಲ್ಕು ದಿನ ರಾತ್ರಿ ಊಟದಲ್ಲಿ ತಪ್ಪದೇ ಬೇಟೆಯಾಡಿ ತಂದ ಮಾಂಸದ ಸಾರಿರುತ್ತದೆ. ಎಲ್ಲ ಹೆರಿಗೆಗಳ ಬಸುರಿನಲ್ಲೂ ಮಾಂಸದ ಊಟ ಸಾಮಾನ್ಯವಾಗಿರುತ್ತದೆ. ಇವರಲ್ಲಿ ಹೆರಿಗೆ ಸಾಮಾನ್ಯವಾಗಿ ಗಂಡನ ಮನೆಯಲ್ಲೇ ನಡೆಯುತ್ತದೆ. ಅಪರೂಪಕ್ಕೆ ಎಲ್ಲೋ ಒಬ್ಬರ ಹೆರಿಗೆ ತವರಿನಲ್ಲಿ ನಡೆಯುತ್ತದೆ.

ಮರಣ, ಸಂಸ್ಕಾರದ ಪದ್ಧತಿ :

''ಬುಡ್ಗ ಜಂಗಾಲು ಜನರಲ್ಲಿ ಯಾರಾದರೂ ಸತ್ತರೆ ಅವರು ಯಾವ ಊರಿನಲ್ಲಿ ಸತ್ತಿರುತ್ತಾರೋ ಅದೇ ಊರಿನಲ್ಲಿ ಎಲ್ಲಿಯಾದರೂ ಹೂಣುವುದೇ ರೂಢಿ. ಇವರಿಗೆ ಸ್ವಂತ ಊರು, ಮನೆ, ಆಸ್ತಿ ಯಾವುದೂ ಇಲ್ಲದಿರುವುದರಿಂದ ಈ ರೀತಿ ಹೂಣಲು ಒಂದು ಕಾರಣವಾದರೆ, ಸತ್ತ ಹೆಣವನ್ನು ಸಾಗಿಸಲು ಬೇಕಾಗುವ ಹಣದ ಕೊರತೆ ಇನ್ನೊಂದು ಕಾರಣ ಆಗಿರುತ್ತದೆ. ಇವರಲ್ಲಿ ಸತ್ತವರ ಆತ್ಮವನ್ನು ದೇವಲೋಕಕ್ಕೆ ಕಳುಸವ ಆಚರಣೆ ಇರುವುದರಿಂದ ಯಾವ ಊರಿನಿಂದ ಕಳಿಸಿದರೇನು ಎನ್ನುವ ನಂಬಿಕೆ ಮತ್ತೊಂದು ಕಾರಣವಿರುತ್ತದೆ. ಈ ಎಲ್ಲ ಕಾರಣಗಳಿಂದ ಎಲ್ಲಿ ಸತ್ತಿರುತ್ತಾರೋ ಅದೇ ಊರಿನಲ್ಲಿ ಹೂಳುವುದೇ ಹೆಚ್ಚು''[೨].

ಹೆಣಕ್ಕೆ ಸ್ನಾನ ಮಾಡಿಸಿ ಪದ್ಮಾಸನದಲ್ಲಿ ಕುಳ್ಳಿರಿಸಿ, ಪೂಜೆ ಮಾಡಿ ಕೌದಿಯ ಮೇಲಿನ ಕೆಳಗಿನ ಅಂಚುಗಳಿಗೆ ಕಟ್ಟಿರುವ ಗಳಗಳನ್ನು ಹಿಡಿದು ಹೆಣವನ್ನು ಕುಳಿತಿರುವಂತೆ ಹಿಡಿದು ಹೂಳುವ ಜಾಗಕ್ಕೆ ಕೊಂಡೊಯುತ್ತಾರೆ. ಸಿರಿಸ್ಯಾಲು ಗೋತ್ರದವನೊಬ್ಬ ಜಂಗಮನಂತೆ ವೇಷ ಹಾಕಿಕೊಂಡು ಹೆಣವನ್ನು

ಉತ್ತರಾಭಿಮುಖವಾಗಿ ಕುಳ್ಳಿರಿಸಿ ಹೂಳುತ್ತಾನೆ. ಸಂಸ್ಕಾರ ಮುಗಿದ ನಂತರ ಎಲ್ಲರೂ ನೇರವಾಗಿ ಹೆಂಡದಂಗಡಿಗೆ ಹೋಗುತ್ತಾರೆ. ಅಲ್ಲಿ ಎಲ್ಲರೂ ಜಂಗಮಯ್ಯನ ಕಾಲಿಗೆ ಬೀಳುತ್ತಾರೆ. ಆಗ ಜಂಗಮಯ್ಯ ಎಲ್ಲರಿಗೂ ಹೆಂಡದ ಪ್ರೋಕ್ಷಣೆ ಮಾಡಿ ಅವರನ್ನು ಶುದ್ಧಿ ಮಾಡುತ್ತಾನೆ. ನಂತರ ಎಲ್ಲರೂ ಹೆಂಡ ಕುಡಿದು ತಮ್ಮ ಗುಡಾರಗಳಿಗೆ ಮರಳುತ್ತಾರೆ.

ಮೂರನೆಯ ದಿನ ತಿಥಿ ಮಾಡಿಕೊಳ್ಳುತ್ತಾರೆ. ಅಂದು ಸಂಜೆ ಸತ್ತ ವ್ಯಕ್ತಿ ಏನೇನು ತಿನ್ನುತ್ತಿದ್ದನೋ, ಏನೇನು ಕುಡಿಯುತ್ತಿದ್ದನೋ ಆ ಎಲ್ಲ ಆಹಾರ ಮತ್ತು ಪಾನೀಯಗಳನ್ನು ಹೂಳಲ್ಪಟ್ಟ ವ್ಯಕ್ತಿ ತಲೆಯ ಹಿಂಭಾಗದಲ್ಲಿ ಒಂದು ಸಣ್ಣ ಗುಂಡಿ ಮಾಡಿ ಅದರಲ್ಲಿ ಇಸ್ತ್ರದ ಎಲೆಯನ್ನು ಹಾಸಿ ತಂದಿರುವ ಎಲ್ಲ ಆಹಾರ, ಪಾನೀಯಗಳನ್ನು ಅದರಲ್ಲಿ ಹಾಕಿ ಮೇಲೆ ಬಂಡೆ ಮುಚ್ಚಿ ಅದರ ಮೇಲೆ ಮಣ್ಣು ಎಳೆದು ಬರುತ್ತಾರೆ. ಐದನೇ ದಿನ ದೇವರ ಕಾರ್ಯ ಮಾಡಿಕೊಳ್ಳುತ್ತಾರೆ. ಶಂದುರ ಆತ್ರಿ ಸುಮಾರು ಒಂಭತ್ತು ಅಥವಾ ಹತ್ತು ಗಂಟೆಯ ಸಮಯದಲ್ಲಿ ಗುದ್ದೆ ನೇರದ ದಾರಿಯಲಿ ಒಂದು ಗೂಡು ಮಾಡಿ ಅದರಲ್ಲಿ ಎಣ್ಣೆ ದೀಪ ಹಚ್ಚಿಟ್ಟು ಹೊಂದು ಹೊಸ ಮೊರದಲ್ಲಿ ಸೇರು ಪಾವು ಅಕ್ಕಿ, ಸ್ವಲ್ಪ ಬೇಳೆ, ಒಂದು ಕೆಂಪು ವಸ್ತ್ರ ಇವನ್ನೆಲ್ಲ ಇಟ್ಟು ಎಡೆಹಾಕಿ ಪೂಜೆ ಮಾಡುತ್ತಾರೆ.

ಸಿಂಧೊಳ್ಳರು (ದುರಮುರಗಿಯವರು) :

ಜನನ, ನಾಮಕರಣ :

''ಮಹಿಳೆ ಗರ್ಭಿಣಿಯಾದ ಸುದ್ದಿಯನ್ನು ತವರು ಮನೆಯವರಿಗೆ ತಿಳಿಸುತ್ತಾರೆ. ಈ ಸಮುದಾಯದವರು ಎಲ್ಲಿ ವಾಸಿಸುತ್ತಾರೋ, ಅಲ್ಲಿ ಗರ್ಭಿಣಿಯಾದ ಮಹಿಳೆಯ ಹೆರಿಗೆಯಾಗುವುದು. ಇವರಲ್ಲಿ ಗರ್ಭಿಣಿ ಮಹಿಳೆಗೆ ಪ್ರತ್ಯೇಕ ಗುಡಾರ ಇರುವುದು. ಹೆರಿಗೆ ಸಮಯದಲ್ಲಿ ಹೆರಿಗೆ ಮಾಡಿಸಲು ಇಲ್ಲಿಯೂ ಸೂಲಗಿತ್ತಿಯ ಸಹಾಯ ಪಡೆದುಕೊಳ್ಳುವರು. ತಾಯಿಗರ್ಭದಿಂದ ಮಗು ಹೊರಬಂದ ತಕ್ಷಣ ಸೂಲಗಿತ್ತಿಯು ಮಗುವಿನ ಹೊಕ್ಕಳ ಬಳ್ಳಿಯನ್ನು ಕುಡುಗೋಲಿನಿಂದ ಕತ್ತರಿಸುತ್ತಾಳೆ. ನಂತರ ಮಗುವನ್ನು ಚಾಪೆಯ ಮೇಲೆ ಹಾಕಲಾಗುತ್ತದೆ''[೩].

ಮಗು ಹುಟ್ಟಿದ ಮೂರನೇ ದಿನಕ್ಕೆ ಮಾಸ ಹೂಳಿದ ಜಾಗಕ್ಕೆ ಅರಿಷಿಣ ಕುಂಕುಮ ಹಚ್ಚಲಾಗುತ್ತದೆ. ಹದಿನಾರು ದಿನಗಳವರೆಗೂ ಮಗು ಮತ್ತು ಬಾಣಂತಿಯ ಆರೈಕೆಯನ್ನು ಸೂಲಗಿತ್ತಿ ಮಾಡುತ್ತಾಳೆ. ಮಗು ಹುಟ್ಟಿದ ಮೊದಲ ದಿನ ಮಗುವಿಗೆ ಔಡಲೆಣ್ಣೆ ನೆಕ್ಕಿಸಲಾಗುತ್ತದೆ. ತರುವಾಯ ತಾಯಿಯು ಮೊಲೆ ಹಾಲನ್ನು ಕೊಡುತ್ತಾಳೆ.

ಮಗುವಿಗೆ ಜನ್ಮ ನೀಡಿದ ತರುವಾಯ ಬಾಣಂತಿಗೆ ಹೆಚ್ಚಾಗಿ ಬಿಸಿಮುದ್ದೆ, ಮಾಂಸದ ಸಾರು ಕೊಡಲಾಗುತ್ತದೆ. ಹದಿನಾರು ದಿನದ ನಂತರ ಬಾಣಂತಿಯು ಯಾವುದೇ ರೀತಿಯ ಆಹಾರವನ್ನು ಸ್ವೀಕರಿಸಬಹುದು.

ಒಂಬತ್ತು ದಿನದಲ್ಲಿ ನಾಮಕಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ತಾಯಿ ಮತ್ತು ಮಗುವಿಗೆ ಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ, ಶುದ್ಧೀಕರಿಸಿದ ತರುವಾಗ ದೇವರ ಗುಡಾರದಲ್ಲಿ ಹೆಸರಿಡುವ ಕಾರ್ಯಕ್ರಮ ಇರುತ್ತದೆ. ಇವರು ಹೆಚ್ಚಾಗಿ ಬೆಡಗಿಗೆ ಮತ್ತು ಕುಲದೇವತೆಗೆ ಸಂಬಂಧಿಸಿದ ಹೆಸರುಗಳನ್ನಿಡುತ್ತಾರೆ.

ಮಗುವಿಗೆ ಹೆಸರಿಡುವಾಗ ಮಗುವಿನ ತಾಯಿಯ ತಾಯಿ ಅಂದರೆ ಹೆಣ್ಣಜ್ಜ ಪಾತ್ರ ಮುಖ್ಯವಾಗಿರುತ್ತದೆ. ಹೀಗೆ ನಾಮಕರಣ ಮುಗಿದ ಮೇಲೆ ಸೂಲಗಿತ್ತಿಗೆ ೯ ಸೇರು ಅಕ್ಕಿ, ೧೦೦ ಗ್ರಾಂ ಅಡಿಕೆ, ೧೦೦ ಎಲೆ ಮತ್ತು ೫೦ ರೂಪಾಯಿಗಳನ್ನು ಕಾಣಿಕೆಯಾಗಿ ನೀಡಲಾಗುವುದು.ಸೂಲಗಿತ್ತಿಗೆ ಸಾಕೆನಿಸುವಷ್ಟು ಊಟ ಮತ್ತು ಸಾರಾಯಿ ಕುಡಿಸಿ ಸಂತೋಷಪಡಿಸುತ್ತಾರೆ. ಸಂಜೆ ಕುಲದೈವಕ್ಕೆ ಪಾಯಸ, ಅನ್ನ, ಸಾಂಬಾರು ಮಾಡಿಸಿ ಊಟ ಮಾಡಿಸುತ್ತಾರೆ. ಹಿರಿಯರಿಗೆ ಸಾಯಂಕಾಲ ಸಮಯದಲ್ಲಿ ಸಾರಾಯಿಯನ್ನು ಕುಡಿಸುತ್ತಾರೆ.

ನಾಮಕರಣದ ದಿನವೇ ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನು ಮಾಡುತ್ತಾರೆ. ಗುಡಾರದ ಒಳಗಡೆ ಪೂರ್ವ ದಿಕ್ಕಿಗೆ ತೊಟ್ಟಿಲು ಕಟ್ಟುತ್ತಾರೆ. ಹಸು ಕಂದಮ್ಮನನ್ನು ಹಾಗೆ ನೋಡಬಾರದೆಂಬ ಸಂಪ್ರದಾಯ ಇವರಲ್ಲಿ ಇರುವುದರಿಂದ ಬಂದವರೆಲ್ಲ ೫೦ ಪೈಸೆ, ೧-೫ ರೂಪಾಯಿ ಕೊಡುತ್ತಾರೆ.

ಋತುಮತಿ :

ಋತುಮತಿಯಾದ ಹೆಣ್ಣು ಯಾರ ಕಣ್ಣಿಗೂ ಬೀಳದಂತೆ ನೋಡಿಕೊಳ್ಳಲಾಗುತ್ತದೆ. ಆ ಹೆಣ್ಣಿಗಾಗಿ ತಾವು ವಾಸಿಸುವ ಗುಡಾರಕ್ಕೆ ಹತ್ತಿರದಲ್ಲಿಯೇ ಚಿಕ್ಕ ಗುಡಾರವನ್ನು ಹಾಕಿ ಅದರಲ್ಲಿ ಋತುಮತಿಯಾದವಳನ್ನು ಬಿಡಲಾಗುತ್ತದೆ. ಒಂಬತ್ತು ದಿನದವರೆಗೂ ಪ್ರತ್ಯೇಕವಾದ ಗುಡಿಸಲಿನಲ್ಲಿಯೇ ಇಡಲಾಗುತ್ತದೆ. ಒಂಬತ್ತನೇ ದಿನದಲ್ಲಿ ಹುಡುಗಿಗೆ ಸ್ನಾನ ಮಾಡಿಸಲಾಗುತ್ತದೆ. ಒಂಬತ್ತು ದಿನದ ನಂತರವೇ ಹುಡುಗಿ ವಾಸಿಸಲು ನಿರ್ಮಿಸಿದ್ದ ಗುಡಾರವನ್ನು ತಂದೆ-ತಾಯಿಗಳೇ ನಾಶಗೊಳಿಸುತ್ತಾರೆ.

ಮರಣ :

ವ್ಯಕ್ತಿ ಗುಡಾರದೊಳಗೆ ಸತ್ತರೆ, ಆ ಹೆಣವನ್ನು ಗುಡಾರದ ಮುಂಭಾಗದಲ್ಲಿ ಹಳೇ, ಚಾಪೆ, ಕೌದಿ ಹಾಸಿ ಮಲಗಿಸಲಾಗುತ್ತದೆ. ಸಿಂಧೊಳ್ಳರು ಅಲೆಮಾರಿಗಳಾದುದರಿಂದ ಎಷ್ಟೋ ಸಾರಿ ಇವರ ಬಂಧುಗಳು ಯಾವ ಊರಿನಲ್ಲಿ ಇದ್ದಾರೆ ಎಂಬುದೇ ತಿಳಿಯುವುದಿಲ್ಲ. ಅಂತಹ ಸಂದರ್ಭದಲ್ಲಿ ವಿಷಯ ತಿಳಿಸಲುಹೋದವರು ಅಸಹಾಯಕರಾಗಿ ಹಿಂದಿರುಗುತ್ತಾರೆ. ಹೆಣದ ಮೇಲೆ ಹಳೆಯ ಬಟ್ಟೆಯನ್ನು ಹೊದಿಸುತ್ತಾರೆ. ತರುವಾಯ ಕಳ್ಳಿಯ ಉದ್ದನೆಯ ಕೋಲನ್ನು ಕಡಿದು ತಂದು ಅದರಿಂದ ಆರು ಅಡಿ ಉದ್ದದ, ಮೂರು ಅಡಿ ಅಗಲದ ಸಿದಿಗೆ ಓಣಿಯ ಆಕಾರದಲ್ಲಿ ಕಟ್ಟುತ್ತಾರೆ. ಕುಲದ ಮುಖ್ಯಸ್ಥರು ಪಕ್ಕದ ಪಟ್ಟಣಕ್ಕೆ ಸಂಸ್ಕಾರಕ್ಕೆ ಬೇಕಾದ ಎಲ್ಲ ವಸ್ತುಗಳನ್ನು ತರುತ್ತಾರೆ. ಮಹಿಳೆ ಮರಣ ಹೊಂದಿದ್ದರೆ, ಒಂದು

ಕೆಂಪು ಸೀರೆ ಉಡಿಸಿ, ಎದೆಗೆ ಸೆರಗು ಹೊದಿಸುತ್ತಾರೆ. ಇಂತಹ ಕಾರ್ಯದಲ್ಲಿ ಕುಲದ ಮುಖ್ಯಸ್ಥನು ಮುಂದೆ ನಿಂತು ಎಲ್ಲಾ ಕಾರ್ಯಗಳನ್ನು ನಡೆಸಿಕೊಡುವನು.

ವ್ಯಕ್ತಿ ಯಾವ ಊರಿನಲ್ಲಿ ಸತ್ತಿರುತ್ತಾನೋ ಆ ಊರಿನ ಸ್ಮಶಾನದಲ್ಲಿ ಯುವರಕು ಕುಣಿ ತೆಗೆದು ಬರುತ್ತಾರೆ. ಹೆಣವನ್ನು ಕುಣಿಯೊಳಗೆ ಮಲಗಿಸಲಾಗುತ್ತದೆ. ಅನಂತರ ಮೈಮೇಲೆ ಹೊದಿಸಲಾದ ಬಟ್ಟೆಗಳನ್ನೆಲ್ಲಾ ತೆಗೆದುಹಾಕಲಾಗುತ್ತದೆ. ಹಿರಿಯ ಮಗನು ಅಂತ್ಯ ಸಂಸ್ಕಾರದ ವಿಧಿ ವಿಧಾನಗಳನ್ನೆಲ್ಲ ನೆರವೇರಿಸುವನು. ಅಂತ್ಯ ಸಂಸ್ಕಾರದ ನಂತರ ಸಮುದಾಯದವರು ಸ್ಮಶಾನವನ್ನು ಹಿಂತಿರುಗಿ ನೋಡದೇ ಮರಳಿ ಊರಿನ ಕಡೆ ತೆರಳುತ್ತಾರೆ. ನೇರವಾಗಿ ಗುಡಾರ ಪ್ರವೇಶಿಸದೆ, ಗುಡಾರದ ಹೊರಭಾಗದಲ್ಲಿ ಸ್ನಾನ ಮಾಡಿಕೊಳ್ಳುತ್ತಾರೆ. ತರುವಾಯ ದೇವರ ಗುಡಾರಕ್ಕೆ ತೆರಳಿ ದೇವರಿಗೆ ನಮಸ್ಕರಿಸಿ ತಮ್ಮ ಗುಡಾರಗಳಿಗೆ ತೆರಳುತ್ತಾರೆ. ಸ್ನಾನ ಮಾಡದೇ ಹಾಗೇ ಗುಡಾರದೊಳಗೆ ಹೋದರೆ ಅಪಶಕುನ ಉಂಟಾಗುತ್ತದೆಮಬ ನಂಬುಗೆ ಇವರಲ್ಲಿದೆ.

ಮೂರು ದಿನಗಳ ನಂತರದ ಕಾರ್ಯವನ್ನು ಮತ್ತು ಒಂಬತ್ತು ದಿನದ ನಂತರ ತಿಥಿಯ ಕಾರ್ಯವನ್ನು ಮಾಡಿ, ಸತ್ತವ್ಯಕ್ತಿಯ ಇಷ್ಟದ ಪದಾರ್ಥಗಳನ್ನು ಇಟ್ಟು ನೈವೇದ್ಯ ಮಾಡಿ ಜೋರಾಗಿ 'ಹೋ' ಎಂದು ಕೂಗುತ್ತಾರೆ. ಈ ಕೂಗು ಸತ್ತ ವ್ಯಕ್ತಿಗೆ ಕೇಳುತ್ತದೆ ಎಂಬ ಭಾವನೆ ಅವರಲ್ಲಿದೆ.

ಸಿಂಧೊಳ್ಳುರ ಧಾರ್ಮಿಕ ವಿಧಿ-ವಿಧಾನಗಳು, ದೇವರು ಮತ್ತು ಧಾರ್ಮಿಕ ಕೇಂದ್ರಗಳು :

"ಶಕ್ತಿ ದೇವತೆಗಳಾದ ದುರ್ಗಮ್ಮ, ಮರಗಮ್ಮ, ಮಾರಮ್ಮ, ಸುಂಕಲಮ್ಮ, ಗಾಳೆಮ್ಮ, ಜಂಬಲಮ್ಮ, ಕೊಗಮ್ಮ, ಎಲ್ಲಮ್ಮ, ರೇಣುಕಾ ಎಲ್ಲಮ್ಮ, ಕರಿಯಮ್ಮ, ಅಂಕ್ಲಮ್ಮ, ಪಿಲೇಯಮ್ಮ, ಪಳಾಕವಮ್ಮ, ಹುಲಿಗೆಮ್ಮ ಮುಂತಾದ ಸ್ತ್ರೀ ಶಕ್ತಿ ದೇವತೆಗಳನ್ನು ಪೂಜಿಸುತ್ತಾರೆ. ತಮ್ಮ ಪೂರ್ವಜರೆಂದು ನಂಬಲಾದ ಈರನಾಗಮ್ಮ, ಪೋತರಾಜ, ಮುನಿಸ್ವಾಮಿಗಳನ್ನು ಸಹ ಪೂಜಿಸುತ್ತಾರೆ. ಇವುಗಳಲ್ಲದೆ ಶಿವ, ಮಂಜುನಾಥ, ರಾಘವೇಂದ್ರ ಮೊದಲಾದ ಪುರುಷದೈವಗಳನ್ನು ಆರಾಧಿಸುತ್ತಾರೆ"[೪].

ಭಿಕ್ಷೆ ಬೇಡಿ ಜೀವನ ಸಾಗಿಸುವ ಇವರು ಸ್ವಂತ ನೆಲೆಯನ್ನು ಕಾಣದೇ ಇದ್ದರೂ, ತಮ್ಮ ಪೂರ್ವಜರಿಂದ ಬಂದ ಕುಲದೇವತೆಗಳನ್ನು ಆರಾಧಿಸುತ್ತಾರೆ. ಆಧುನಿಕ ದೇವತೆಗಳ ಕುರಿತು ಒಲವನ್ನು ತೋರಿಸುವುದು ಅತೀ ಕಡಿಮೆ. ತಮ್ಮ ಕುಲದೇವತೆಗಳೇ ತಮಗೆ ಅನ್ನದಾತರು ಎನ್ನುವ ನಂಬಿಕೆ ಇವರಲ್ಲಿದೆ.

ಗೊಂಧಳಿಗರು :

ಸಂಪ್ರದಾಯಗಳು :

ಗೋಂಧಳಿ ಸಮುದಾಯಕ್ಕೆ ಸಂಬಂಧಿಸಿರುವಂತೆ ಯಾವುದೇ ಪ್ರಕ್ರಿಯೆಗಳು, ಕುಲ ಪಂಚಾಯಿತಿ ದೈವಿ ಆಚರಣೆಗಳು, ನಾಯಕತ್ವ, ಜನನ, ಮರಣ ಅಥವಾ ಮೂಢನಂಬಿಕೆಗಳು ಈ ಎಲ್ಲ ಕಾರ್ಯಗಳನ್ನು ಮಾಡಬೇಕಾದಲ್ಲಿ ಸಮುದಾಯದ ಹಿಂದಿನ ಹಿರಿಯರು ಮಾಡಿರುವ ಪದ್ಧತಿಯಂತೆ ಅದನ್ನು ಆಚರಣೆ

ಮಾಡುವ ಪದ್ಧತಿ ಈಗಲೂ ಇದೆ. ಹಾಗೆಯೇ ಇಲ್ಲಿ ಬೆಡಗುಗಳ/ಕುಲಗಳ ಹೆಸರಗಳು ಸಹ ಅತೀ ಮುಖ್ಯವಾಗಿದೆ. ಏಕೆಂದರೆ ಕೆಲವು ಬೆಡಗುಗಳು ತಮ್ಮ ಸಂಪ್ರದಾಯದಂತೆ ರೇಣುಕಾ ಎಲ್ಲಮ್ಮ ದೇವಿಯ ಆಚರಣೆ ಮತ್ತು ಆರಾಧನೆಯನ್ನು ಮಾಡುತ್ತಾರೆ. ಕೆಲಬೆಡಗಿನವರು ವೀರನಾಗಮ್ಮ ತಮ್ಮ ಮನೆ ದೇವರೆಂದು ಆಚರಣೆ, ಆರಾಧನೆ ಮಾಡುತ್ತಾರೆ. ಅಲ್ಲದೆ ಅದೇ ದೇವಿಯ ಮುಂದೆಯೇ ತಮ್ಮ ಮಕ್ಕಳ 'ಜವಳ' ತೆಗೆಯಿಸುತ್ತಾರೆ. ಮಧುಮಕ್ಕಳ ಕಂಕಣವನ್ನು ಸಹ ಅದೇ ದೇವಿಗೆ ಹೋಗಿ ಬಿಚ್ಚುತ್ತಾರೆ. ಹೀಗೆ ಅವರವರ ಬೆಡಗಿನಲ್ಲಿ ಹಿಂದಿನಿಂದಲೂ ಬಂದ ಸಂಪ್ರದಾಯದಂತೆ ಮಾಡಿಕೊಂಡು ಹೋಗುತ್ತಾರೆ.

ಜನನ ಮತ್ತು ನಾಮಕರಣ :

ಗರ್ಭಿಣಿ ಮಹಿಳೆಯ ಹೆರಿಗೆ ಆದ ನಂತರ ಮಾಸವನ್ನು ಮಣ್ಣಿನ ಮಡಿಕೆಯಲ್ಲಿ ಹಾಕಿ ಮನೆಯ ಮುಂಭಾಗ ಅಥವಾ ಹಿಂಭಾಗದಲ್ಲಿ ತಗ್ಗು ತೆಗೆದು ಅದಕ್ಕೆ ಪೂಜೆ ಮಾಡಿ ಮಡಕೆಯನ್ನು ಮಣ್ಣಲ್ಲಿ ಮುಚ್ಚುತ್ತಾರೆ. ಬಾಣಂತಿ ಹಾಗೂ ಮಗುವನ್ನು ಐದು ದಿನಗಳವರೆಗೂ ಅಲ್ಲಿಯೇ ಸ್ನಾನ ಮಾಡಿಸುತ್ತಾರೆ. ಹೊಕ್ಕಳ ಹುರಿಯನ್ನು ಬೆಳ್ಳಿಯ ತಾಯತದಲ್ಲಿ ಹಾಕಿ ಮಗುವಿನಕೊರಳಲ್ಲಿ ಕಟ್ಟುತ್ತಾರೆ. ೧೧ಅಥವಾ ೧೩ ನೇ ದಿನಕ್ಕೆ ಹಾಸಿಗೆ ಬಟ್ಟೆಗಳನ್ನು ತೊಳೆದು ಮನೆಯನ್ನು ಸಾರಿಸಿ ಸ್ವಚ್ಛ ಮಾಡಿ, ಬಾಣಂತಿಯು ಗಂಗಾ ಪೂಜೆ ಮಾಡಿದ ನಂತರವೇ ಸೂತಕ ಕಳೆದಂತೆ ಎಂಬ ನಂಬಿಕೆ. ತರುವಾಯ ದೇವರಿಗೆ ದೀಪ ಹಚ್ಚಿ ಮಗುವಿನ ನಾಮಕರಣ ಮಾಡುತ್ತಾರೆ. ಮಗುವು ಹುಟ್ಟಿದ ೫ ನೇ ದಿನಕ್ಕೆ 'ಪಾಚವಿ' ಎಂದು ಮಾಡುತ್ತಾರೆ. ಅಂದರೆ ಮಗುವು ಹುಟ್ಟಿದ ಐದನೇ ದಿನಕ್ಕೆ 'ಶಟವಿ'ಯು ಮಗುವಿನ ಹಣೆಯ ಬರಹ ಬರೆಯುತ್ತಾಳೆಂಬ ನಂಬಿಕೆ ಇವರಲ್ಲಿದೆ.

''ಕೂಸು ಹುಟ್ಟಿದ ಐದನೆಯ ದಿನಕ್ಕೆ ಪಾಚವಿ ಅಥವಾ ಐದೇಶಿ ಎಂದು ಮಾಡುತ್ತಾರೆ. ಹಸಮರದ ಹಿಂಬಂದಿಯಲ್ಲಿ ಶಿಟಗೆವ್ವನ ಚಿತ್ರವನ್ನು ಕರೆ ಇದ್ದಲಿ, ಭಂಡಾರ ಹಾಗೂ ಕುಂಕುಮದಿಂದ ಬಿಡಿಸುತ್ತಾರೆ. ಅದರ ಮುಂದೆ ಒಂದು ಚಿಕ್ಕ ಪದಕ ಇಟ್ಟು ಪೂಜೆ ಮಾಡುತ್ತಾರೆ. ಮನೆಯವರು ತಮ್ಮ ಸಂಪ್ರದಾಯದಂತೆ ಮಾಂಸ, ಮೀನು, ಅಡುಗೆ ಮಾಡಿ ಎಲ್ಲರೂ ಊಟ ಮಾಡುತ್ತಾರೆ''[೫೫].

ಹನ್ನೊಂದನೇ ಅಥವಾ ಹದಿಮೂರನೇ ದಿನಕ್ಕೆ ಮಗುವಿನ ನಾಮಕರಣ ಮಾಡುವ ಪದ್ಧತಿ ಇದೆ. ಆಗ ಸಮುದಾಯದ ಮುತ್ತೈದೆಯರೆಲ್ಲರೂ ಸೇರುತ್ತಾರೆ. ಸೀರೆಯಿಂದ ಜೋಳಿಗೆ ತೊಟ್ಟಿಲು ಕಟ್ಟುತ್ತಾರೆ. ಅದನ್ನು ಹೂಗಳಿಂದ ಅಲಂಕರಿಸುತ್ತಾರೆ. ಬಾಣಂತಿ ಹಾಗೂ ಮಗುವನ್ನು ಹೊಸ ಬಟ್ಟೆಗಳಿಂದ ಶೃಂಗರಿಸಿರುತ್ತಾರೆ. ಆಗ ಎಲ್ಲ ಮುತ್ತೈದೆಯರು ಮಗುವಿನ ಸೋದರತ್ತೆಯಿಂದ ನಾಮಕರಣ ಮಾಡಿಸುತ್ತಾರೆ. ನಾಮಕರಣ ಮಾಡುವ ಮುನ್ನ ಕುಲದೇವರ ಹೆಸರು ಹಿರಿಯರ ಹೆಸರುಗಳಿಂದ ಕರೆದು ನಾಮಕರಣ ಮಾಡುತ್ತಾರೆ. ಆಮೇಲೆ ಪ್ರೀತಿಯಿಂದ ಕರೆಯುವ ಹೆಸರನ್ನು ಕಿವಿಯಲ್ಲಿ ಊದಿ ಹೇಳುತ್ತಿರುವಾಗ ಮುತ್ತೈದೆಯರೆಲ್ಲರೂ ಆಕೆಯ ಬೆನ್ನಿಗೆ ಪಟ ಪಟನೆ ಬಡಿಯುತ್ತಾರೆ. ಮಗುವಿನ ನಾಮಕರಣದ ನಂತರ ಎಲ್ಲರೂ ಗುಗ್ಗರಿ ತಿಂದು ಊಟ ಮಾಡುತ್ತಾರೆ. ಮಗುವಿಗೆ ಕಾಣಿಕೆ ಕೊಟ್ಟು

ಮುತ್ತೈದೆಯರು ನಾಮಕರಣ ಮಾಡಿ ಹೋಗುವಾಗ ಅವರಿಗೆ ವೀಳ್ಯೆದೆಲೆ ಕೊಟ್ಟು ಕಳಹಿಸುತ್ತಾರೆ.

ಋತುಮತಿ :

ಋತುಮತಿಯಾದ ಹೆಣ್ಣುಮಗಳಿಗೆ ಐದು ದಿನಗಳವರೆಗೂ ಮನೆಯ ಒಳಗಡೆಯೇ ಪ್ರತಿದಿನ ಸ್ನಾನ ಮಾಡಿಸಿ ಇಟ್ಟಿರುತ್ತಾರೆ. ಯಾವ ಬಟ್ಟೆಯು ಆಕೆಯ ಮೈಯಲ್ಲಿರುತ್ತವೆ ಆ ಬಟ್ಟೆಗಳನ್ನು ಋತುಮತಿಯಾಗಿದ್ದ ಕೂಡಲೇ ತೆಗೆದು ಒಗೆಯುತ್ತಾರೆ. ಐದು ದಿನಗಳ ನಂತರ ಸಮುದಾಯದ ಮುತ್ತೈದೆಯರೆಲ್ಲರೂ ಸೇರಿ ಆ ಹೆಣ್ಣು ಮಗಳಿಗೆ ಆರತಿ ಮಾಡಿ ಸೋಬಾನ ಪದಗಳನ್ನು ಹಾಡುತ್ತಾರೆ. ನಂತರ ಹದಿಮೂರು ಅಥವಾ ಹದಿನಾರನೆಯ ದಿನಕ್ಕೆ ಮನೆಯನ್ನು ಸ್ವಚ್ಛಗೊಳಿಸಿ ಹೊಲಿಯನ್ನು ಅಂದರೆ ಸೂತಕವನ್ನು ತೆಗೆಯುತ್ತಾರೆ. ಮನೆಯಲ್ಲಿ ಆ ಋತುಮತಿಯನ್ನು ಹೂವಿನ ದಂಡಿಯನ್ನು ಹಾಕಿ ಶೃಂಗರಿಸಿ ಕುಳ್ಳಿರಿಸುತ್ತಾರೆ. ಆಗ ಸ್ಥಳೀಯ, ಪರ ಊರಿನ ಎಲ್ಲ ಸಂಬಂಧಿಕರನ್ನು ಕರೆಯಿಸಿರುತ್ತಾರೆ. ಎಲ್ಲ ಮುತ್ತೈದೆಯರೂ ಸೇರಿ ಸೋಬಾನ ಪದಗಳನ್ನುಹಾಡಿದ ನಂತರ ಆಕೆಗೆ ಉಡಿಯನ್ನು ತುಂಬಿ ಆರತಿ ಮಾಡುತ್ತಾರೆ. ಕೊನೆಗೆ ಕಾಣಿಕೆ ಕೊಟ್ಟು ಊಟ ಮಾಡಿಕೊಂಡು ಹೋಗುತ್ತಾರೆ.

ಸೀಮಂತ :

ಈ ಗೊಂಧಳಿ ಸಮುದಾಯದಲ್ಲಿ ಹೆಣ್ಣು ಗರ್ಭಿಣಿ ಇದ್ದಾಗ ಹಿಂದಿನ ಕಾಲದಲ್ಲಿ ಸೀಮಂತ ಕಾರ್ಯ ಮಾಡುವ ಪದ್ಧತಿ ಇದ್ದಿರಲಿಲ್ಲ. ಆದರೆ, ಇಗ ಕೆಲವೊಂದು ಕುಟುಂಬಗಳಲ್ಲಿ ಈ ಸೀಮಂತ ಕಾರ್ಯವನ್ನು ಮಾಡಲಾಗುತ್ತಿದೆ. ಈ ಕಾರ್ಯಕ್ಕೆ 'ಚೋಳಿ' ಎಂದು ಕರೆಯುತ್ತಾರೆ. ಗರ್ಭಿಣಿಯರನ್ನು ಶೃಂಗರಿಸಿ ಹೊಸ ಸೀರೆ, ಕುಪ್ಪಸ, ಹೂವು ಮುಡಿಸಿ ಆರತಿ ಬೆಳಗಿಸುತ್ತಾರೆ.

ಮರಣ ಮತ್ತು ಸಂಸ್ಕಾರ :

ಯಾರಾದರೂ ಮರಣ ಹೊಂದಿದಲ್ಲಿ ಬೇರೆ ಬೆಡಗಿನವರು ಬಂದು ಹೆಣಕ್ಕೆ ಸ್ನಾನ ಮಾಡಿಸಿ ಬಟ್ಟೆ ಹಾಕಿಸಿ ತಲೆಯ ಮೇಲೆ ರುಮಾಲು ಹಾಕುತ್ತಾರೆ. ಪರ ಊರಿನವರಿಗೂ ಸುದ್ದಿಯನ್ನು ಮುಟ್ಟಿಸುತ್ತಾರೆ. ಹೆಣದ ಕುತ್ತಿಗೆಗೆ ಬಿಗಿದು ಕಟ್ಟಿ ಕೂಡಿಸುತ್ತಾರೆ. ಹೆಣಕ್ಕೆ ಕುಂಕುಮ ಅಥವಾ ಬುಕ್ಕಿಟು ಹಚ್ಚಿ ಪೂಜೆ ಮಾಡುತ್ತಾರೆ. ಪರ ಊರಿನವರೆಲ್ಲರೂ ಹಾಗೂ ಸತ್ತ ವ್ಯಕ್ತಿಯ ಹತ್ತಿರದ ಸಂಬಂಧಿಕರು ಬಂದ ನಂತರವೆ ಕಟ್ಟಿಗೆ ಬದಿರಿನಿಂದ ಸಿದಗಿಯನ್ನು ಕಟ್ಟುತ್ತಾರೆ. ಮನೆಯ ಹೊರಗಡೆಯ ಒಲೆಯನ್ನು ಮಾಡಿ ಕುಂಬಾರರ ಮನೆಯಿಂದ ತಂದಿರುವ ಮಣ್ಣಿನ ಗಡಿಗೆಯನ್ನು ನೀರನ್ನು ಹಾಕಿ ಅದರಲ್ಲಿ ಆಕಿ ಕಾಳುಗಳನ್ನು ಹಾಕಿ ಕುದಿಸುತ್ತಾರೆ. ಹೆಣವನ್ನು ಸಿದಗಿಯ ಮೇಲೆ ಮಲಗಿಸಿ ಬಿಗಿದು ಕಟ್ಟುತ್ತಾರೆ.

ಸತ್ತವ್ಯಕ್ತಿಯ ಮಗ ಅಥವಾ ಅಣ್ಣನ ಮಗ ನೀರು ತುಂಬಿದ ಗಡಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಶವದ ಶೋಭಾಯಾತ್ರೆಯಲ್ಲಿ ಶವದ ಮುಂದೆ ಸ್ಮಶಾನಕ್ಕೆ ಹೋಗುತ್ತಾನೆ. ಈ ಗೊಂಧಳಿಗರ

ಸಂಪ್ರದಾಯದಲ್ಲಿ ಹೆಣವನ್ನು ಹೂಳುವ ಬದಲು ಸುಡುವ ಪದ್ಧತಿಯಿದೆ. ಮಗನಾದವನು ಚಿತೆಗೆ ಅಗ್ನಿಸ್ಪರ್ಶ ಮಾಡುತ್ತಾನೆ. ನಂತರ ಹಿಂದೆ ತಿರುಗಿ ನೋಡದೇ ಸ್ಮಶಾನದಿಂದ ಮನೆಗೆ ಹೋಗುತ್ತಾನೆ.

ಮೂರನೆಯ ದಿವಸ ಸತ್ತ ವ್ಯಕ್ತಿಯ ಇಷ್ಟದ ಪದಾರ್ಥಗಳನ್ನು ನೈವೇದ್ಯ ಮಾಡಿ, ಎರಡು ಬುತ್ತಿಯನ್ನು ಸ್ಮಶಾನದಲ್ಲಿ ಇಟ್ಟು ಬರಲಾಗುತ್ತದೆ. ಇಟ್ಟ ಬುತ್ತಿಯನ್ನು ಸ್ಮಶಾನದಲ್ಲಿ ಕಾಗೆಯೇನಾದರೂ ಬಂದು ಒಯ್ದರೆ ಸತ್ತವ್ಯಕ್ತಿ ಯಾವುದೇ ಆಸೆ ಇಟ್ಟುಕೊಂಡಿಲ್ಲವೆಂದು ತಿಳಿಯುತ್ತಾರೆ. ಬಹುಹೊತ್ತಿನವರೆಗೂ ಕಾಗೆ ಬಂದು ಬುತ್ತಿಯನ್ನು ತೆಗೆದುಕೊಂಡು ಹೋಗದಿದ್ದರೆ ಸತ್ತವ್ಯಕ್ತಿ ಇನ್ನೂ ಆಸೆ ಇಟ್ಟಿದ್ದಾನೆಂದು ನಂಬುತ್ತಾರೆ.

ನಂತರ ಸತ್ತ ವ್ಯಕ್ತಿಯ ಮಹೂರ್ತವನ್ನು ತಿಳಿದುಕೊಂಡು ೯ ದಿನಕ್ಕಾಗಲಿ ಅಥವಾ ೧೩ ದಿನಕ್ಕಾಗಲೀ ದೇವರಲ್ಲಿ ತೆಗೆದುಕೊಳ್ಳುತ್ತಾರೆ. ಅದಕ್ಕಿಂತ ಮುಂಚೆ, ಮನೆಯಲ್ಲಿ, ಮನೆಯಲ್ಲಿಯ ಎಲ್ಲ ಬಟ್ಟೆಗಳನ್ನು ತೊಳೆದು ಮನೆ ಸಾರಿಸಿ ಗೋಮೂತ್ರವನ್ನು ಸಿಂಪಡಿಸಿದಾಗ ಸೂತಕು ಹೋಯಿತು ಅಥವಾ ಕಳೆಯಿತೆಂದು ತಿಳಿಯುತ್ತಾರೆ.

ಗೊಂಧಳಿಗರ ಧಾರ್ಮಿಕ ವಿಧಿ-ವಿಧಾನಗಳು :

ಈ ಗೊಂಧಳಿ ಸಮುದಾಯದಲ್ಲಿ ಧಾರ್ಮಿಕ ವಿಧಿ ವಿಧಾನಗಳಿಗೆ ಅತ್ಯಂತ ಮಹತ್ವವಿದೆ. ಈ ಸಮುದಾಯದ ಹಿರಿಯರು ಹಿಂದಿನ ತಲೆಮಾರಿನಿಂದ ಮಾಡುತ್ತಿದ್ದ ಎಲ್ಲ ಧಾರ್ಮಿಕ ಆಚರಣೆಗಳನ್ನು ಇವರು ಮಾಡುತ್ತಲೇ ಬಂದಿದ್ದಾರೆ. ಸಮುದಾಯದ ಎಲ್ಲ ಹಿರಿಯರು ವರ್ಷಕ್ಕೊಮ್ಮೆ ಅಥವಾ ಮೂರು ವರ್ಷಕ್ಕೊಮ್ಮೆ ದೇವಿಯ ಜಾತ್ರೆ, ಮತ್ತು ಬಲಿಕೊಡುವ ಪದ್ಧತಿಯನ್ನು ಇಟ್ಟುಕೊಂಡಿರುತ್ತಾರೆ. ಅಂತಹ ನಿರ್ದಿಷ್ಟಪಡಿಸಿರುವ ಸಮಯದಲ್ಲಿ ಓಣಿಯ ಎಲ್ಲ ಹಿರಿ ಕಿರಿಯರು ಒಂದೇ ಸ್ಥಳದಲ್ಲಿ ಸೇರಿ ದೇವಿಯ ಪೂಜೆ ಮಾಡಿ ಗೊಂಧಳ ಅಥವಾ ಗೊಂದಲವನ್ನು ಹಾಕಿಸಿ ರಾತ್ರಿಯಿಂದ ಬೆಳಗಿನವರೆಗೂ ಸಮುದಾಯದವರೆಲ್ಲರೂ ಶ್ರದ್ಧೆ ಮನೋಭಾವದಿಂದ ಧಾರ್ಮಿಕ ಕಾರ್ಯವನ್ನು ಮಾಡುತ್ತಾರೆ. ಕುರಿ ಬಲಿಕೊಟ್ಟು ಅಲ್ಲಿಯೇ ಅಡುಗೆ ಮಾಡಿ ಊಟ ಮಾಡಿಕೊಂಡು ಬರಿಗೈಯಿಂದ ಮನೆಗೆ ಬರುತ್ತಾರೆ. ವಿಶೇಷವಾಗಿ ಧಾರ್ಮಿಕ ವಿಧಿ-ವಿಧಾನಗಳನ್ನು ದೇವಿಯ ಆರಾಧನೆ ಕಾರ್ಯಗಳ ಆಚರಣೆಯಲ್ಲಿಯೇ ಮಾಡುತ್ತಾರೆ.

ದೇವರು :

"ದೇವರೆಂದರೆ ಅತ್ಯಂತ ಭಯ, ಭಕ್ತಿಯುಳ್ಳವರಾಗಿದ್ದಾರೆ. ನಮ್ಮ ಕಷ್ಟಗಳು, ಸಮಸ್ಯೆಗಳನ್ನು ದೂರಮಾಡಿ ನಾವು ಬೇಡಿಕೊಂಡಂತೆ ದೇವಿಯ ದೇವರು ನಮ್ಮ ಬೇಡಿಕೆಗಳನ್ನು ಈಡೇರಿಸಿದಲ್ಲಿ ವರ್ಷಕ್ಕೊಮ್ಮೆ ದೇವಿಗೆ ಕುರಿ ಬಲಿ ಕೊಡುತ್ತೇವೆಂದು ಬೇಡಿಕೊಂಡಿರುತ್ತಾರೆ. ಅದರಂತೆ ತಪ್ಪದೆ ಪ್ರತಿವರ್ಷ ದೇವರಿಗೆ ಕುರಿಬಲಿಕೊಡುತ್ತಾರೆ. ಇದಕ್ಕೆ ತಪ್ಪಿದಲ್ಲಿ ದೇವರು ಶಾಪ ಕೊಡುತ್ತಾನೆಂದು ನಂಬುತ್ತಾರೆ. ಆದ್ದರಿಂದ ಇವರು ದೇವರ ಬಗ್ಗೆ ಅತ್ಯಂತ ಶ್ರದ್ಧೆ ಭಾವನೆಯುಳ್ಳವರಾಗಿದ್ದಾರೆ"[೬]. ಇವರು ಮುಖ್ಯವಾಗಿ ಹೆಣ್ಣು ದೇವರ ಉಪಾಸಕರು.

ಘಟಸ್ಥಾಪನೆ ಮತ್ತು ಹಬ್ಬಗಳು :

ಘಟಸ್ಥಾಪನೆಯ ಸಂದರ್ಭದಲ್ಲಿಯೂ ಊರ ಹಬ್ಬನೆಂಬಂತೆ ಎಲ್ಲ ಸಮುದಾಯದ ಜನರು ಮೆರವಣಿಗೆಯಲ್ಲಿ ಕುಣಿತದಲ್ಲಿ ಕೆಲಸ ಕಾರ್ಯಗಳಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗುತ್ತಾರೆ. ಇವರು ಆಚರಿಸುವ ಹಬ್ಬಗಳಲ್ಲಿ ಯುಗಾದಿ ವಿಶೇಷವಾದುದು. 'ಗುಡಿಪಡವಾ' ಎಂದು ಈ ಹಬ್ಬವು ಈ ಗೊಂಧಳಿಗರ ಸಮಾಜದಲ್ಲಿ ಹೆಸರಾಗಿದೆ. ಈ ಸಮುದಾಯದಲ್ಲಿ ಹಿರಿಯರ ಪೂಜೆಯನ್ನು ಸಹ ಮಾಡಲಾಗುತ್ತದೆ. ಮರಣಾನಂತರ ಮನೆಯ ಹಿರಿಯರನ್ನು ನೆನೆಯುವುದು ಇದರ ಮುಖ್ಯ ಉದ್ದೇಶವಾಗಿದೆ. ವಾರಕಾರಿಗಳು ಎಂದು ಕರೆಯಲಾಗುವ ದೀಕ್ಷೆಯನ್ನು ಈ ಸಮುದಾಯದವರು ಪಡೆಯುವ, ಭಕ್ತರಾಗುವ ಒಂದು ಧಾರ್ಮಿಕ ಕಾರ್ಯ ಗೊಂಧಳಿಗರ ಸಮುದಾಯದಲ್ಲಿದೆ.

ಗೊಂಧಳ ಹಾಕುವ ಕ್ರಮ :

ಗೊಂದಲಿಗರು ದೇವಿ ಅಂಬಾಭವಾನಿಯ ಜಗದಂಬೆಯ ಪರಮಭಕ್ತರು. ದೇವಿಯ ಗೊಂದಲ ಹಾಕುವುದೇ ಇವರ ಬದುಕಿನ ಮುಖ್ಯ ಸಾಧನೆ. ಕ್ಷತ್ರಿಯರು, ಮರಾಠರು, ಬ್ರಾಹ್ಮಣರು ಅಲ್ಲದೆ ಇತರೆಲ್ಲ ಸಮಾಜದಲ್ಲಿರುವವರು ತಮ್ಮ ಮನೆ ದೇವರು ಅಂಬಾಭವಾನಿ ತುಳಜಾಪುರ ಅಂಬಾಭವಾನಿ, ರೇಣುಕಾದೇವಿ ಇದ್ದಲ್ಲಿ ಅಂಥವರ ಮನೆಯಲ್ಲಿ ಮದುವೆ, ಮುಂಜಿ, ಉಪನಯನ ಕಾಯಕ್ರಮಗಳಲಲ್ಲಿ ಗೊಂದಲ ಅಥವಾ ಗೊಂಧಳ ಕಾರ್ಯವನ್ನು ಅವಶ್ಯವಾಗಿ ಮಾಡಿಸುತ್ತಾರೆ.

ಮಾಟಮಂತ್ರ :

ಗೋಂಧಳಿ ಸಮುದಾಯದ ಜನ ಮಾಟಮಂತ್ರದ ಬಗ್ಗೆ ನಂಬಿಕೆಯುಳ್ಳವರಾಗಿದ್ದಾರೆ. ಕುಟುಂಬದಲ್ಲಿ ಸಮಸ್ಯೆಗಳು, ತೊಂದರೆಗಳು ಹೆಚ್ಚಾದರೆ ಯಾರೋ ಮಾಡಿಸಿದ್ದಾರೆಂಬ ಅನುಮಾನಪಟ್ಟುಕೊಳ್ಳುತ್ತಾರೆ. ಅವುಗಳ ನಿವಾರಣೆಗಾಗಿ ಮಂತ್ರಿಕನ ಹತ್ತಿರ ಅಥವಾ ದೇವರ ಹೇಳಿಕೆ ಹೇಳುವವರ ಹತ್ತಿರ ಹೋಗಿ ಕೇಳಿಸಿಕೊಂಡು ಬರುತ್ತಾರೆ.

ಗೊಂಧಳಿಗರ ಜನಪದ ನಂಬಿಕೆಗಳು :

ಗೊಂದಳಿಗರಲ್ಲಿ ಧಾರ್ಮಿಕ ನಂಬಿಕೆಗಳು, ಮೂಢನಂಬಿಕೆಗಳು, ಶುಭ ನಂಬಿಕೆಗಳು ಮತ್ತು ಸಾಂಸ್ಕೃತಿಕ ನಂಬಿಕೆಗಳು ಇವೆ. ತಮ್ಮ ತಮ್ಮ ಸಂಸ್ಕೃತಿಯ ಸಂಪ್ರದಾಯಗಳ ಆಚರಣೆಗೆ ತಕ್ಕಂತೆ, ನಂಬಿಕೆಗೆ ತಕ್ಕಂತೆ ಈ ನಂಬಿಕೆಗಳಿಗೆ ಅವರು ವಿವಿಧ ಸಂದರ್ಭಗಳಲ್ಲಿ ಒಳಗಾಗುವರು.

ಸುಡುಗಾಡು ಸಿದ್ಧರು :

ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳಲ್ಲಿ ಕಲಾವಂತಿಕೆ :

''ಪ್ರತಿಯೊಂದು ಜನಾಂಗದ ಜನಜೀವನದ ಸಂಸ್ಕೃತಿಯು ಜನಪದ ಕಲೆಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಇವುಗಳು ಶ್ರೀಸಾಮಾನ್ಯನ ಜೀವನದ ವಿವಿಧ ಘಟ್ಟಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಅವರ ದೈನಂದಿನ ಆಗು ಹೋಗುಗಳಲ್ಲಿ, ಮದುವೆ-ಮುಂಜಿಗಳಲ್ಲಿ, ಹಬ್ಬ-ಹರಿದಿನಗಳಲ್ಲಿ, ಹುಟ್ಟು-ಸಾವುಗಳಲ್ಲಿ, ಸ್ತ್ರೀ ಪುರುಷರೆಲ್ಲರಲ್ಲಿಯೂ ಈ ಕಲೆಗಳು ಹೊರಹೊಮ್ಮುತ್ತವೆ. ಮನಸ್ಸಿನ ನೆಮ್ಮದಿ ಇಲ್ಲವೆ ಸಂತೋಷವೇ ಇವುಗಳ ಪ್ರಮುಖ ಉದ್ದೇಶವಾಗಿರುತ್ತವೆ. ಪ್ರತಿಯೊಂದು ಜಾತಿ-ಜನಾಂಗ ಹಾಗೂ ಪಂಗಡಗಳು ಈ ಜನಪದ ಕಲೆಗಳನ್ನು ತಮ್ಮದೇ ಆದ ರೀತಿಯಲ್ಲಿ ಉಳಿಸಿಕೊಂಡು, ಬೆಳೆಸಿಕೊಂಡು ಬಂದಿವೆ. ಕೆಲವರು ಧಾರ್ಮಿಕ ಹಿನ್ನೆಲೆಯಲ್ಲಿ ಅವುಗಳನ್ನು ಪೋಷಿಸಿಕೊಂಡು ಬಂದಿದ್ದರೆ, ಮತ್ತೆ ಕೆಲವರು ಕೇವಲ ಮನರಂಜನಾ ಮಾಧ್ಯಮವನ್ನಾಗಿ ಉಳಿಸಿಕೊಂಡು ಬಂದಿದ್ದಾರೆ. ಇನ್ನೂ ಕೆಲವರು ಅದನ್ನು ವೃತ್ತಿ ಅಥವಾ ಉಪಜೀವನದ ಮಾಧ್ಯಮವನ್ನಾಗಿ ಬೆಳೆಸಿಕೊಂಡು ಬಂದಿದ್ದಾರೆ''[೬].

ಜನನ ಮತ್ತು ನಾಮಕರಣ :

ಸುಡುಗಾಡು ಸಿದ್ದರಲ್ಲಿ ಮಗುವಿನ ಜನನದ ಸಂದರ್ಭವು ಕೇವಲ ತಂದೆ-ತಾಯಿಗಳಿಗಲ್ಲದೇ ಜನರಿಗೆಲ್ಲ ಸಂತೋಷದ ಸಂಗತಿಯಾಗಿದೆ. ಮಗು ಹೆಣ್ಣಾಗಲೀ, ಗಂಡಾಗಲೀ ಯಾವುದೇ ರೀತಿಯ ತಾರತಮ್ಯಗಳನ್ನು ಮಾಡದೇ ಆ ಕ್ಷಣಗಳನ್ನು ಸಂತಸದಿಂದ ಅನುಭವಿಸುತ್ತಾರೆ. ಮಗು ಹುಟ್ಟಿದ ೩.ನೇ ದಿನಕ್ಕೆ ಶೆಟವಿ ಪೂಜೆಯನ್ನು ಮಾಡುವುದರ ಮೂಲಕ ಮಗುವಿಗೆ ಹೆಸರಿಡುತ್ತಾರೆ. ಅಂದು ಹಟ್ಟಿಯ ಜನರಿಗೆಲ್ಲ ಬೇಟೆಯಾಡಿ ತಂದ ಮಾಂಸದ ಊಟವನ್ನು ಮತ್ತು ಸಾರಾಯಿಯನ್ನು ಕೊಡುತ್ತಾರೆ. ಆ ಮೂಲಕ ಮಗು ಹುಟ್ಟಿದ ಹಬ್ಬವನ್ನು, ನಾಮಕರಣದ ಆಚರಣೆಯನ್ನು ಸಂಭ್ರಮ, ಸಡಗರದಿಂದ ಆಚರಿಸುತ್ತಾರೆ.

ಮಗು ಹುಟ್ಟಿದ ಮೂರು ದಿವಸಕ್ಕೆ ಇಲ್ಲವೆ ಹನ್ನೊಂದನೆ ದಿವಸಕ್ಕೆ ನಾಮಕರಣ ಮಾಡುವ ಪದ್ಧತಿ ಈ ಸುಡುಗಾಡು ಸಿದ್ದರಲ್ಲಿ ಇದೆ. ಮಗುವಿನ ನಕ್ಷತ್ರ, ಬಲೆ, ಹೆಸರು ಇತ್ಯಾದಿಗಳನ್ನು ಪುರೋಹಿತರಿಂದ ಕೇಳಿ ತೊಟ್ಟಿಲು ಪೂಜೆ ಮಾಡಿ, ದೇವರ ಹೆಸರನ್ನೋ, ತಮ್ಮ ಪೂರ್ವಜರ ಹೆಸರುಗಳನ್ನೋ, ಪ್ರಿಯವಾದ ಹೆಸರುಗಳನ್ನೋ ಇಟ್ಟು ಕರೆಯುವುದು ಅವರ ವಾಡಿಕೆ. ಸಾಮಾನ್ಯವಾಗಿ ಇವರು ಹೆಚ್ಚಾಗಿ ದೇವ-ದೇವತೆಯ ಹೆಸರುಗಳನ್ನೇ ತಮ್ಮ ಮಕ್ಕಳಿಗೆ ಇಡುತ್ತಾರೆ.

ಮಗು ಹುಟ್ಟಿದ ಒಂಬತ್ತನೆಯ ದಿನಕ್ಕೆ ಗಂಗೆ ಪೂಜೆ ಮಾಡಲಾಗುತ್ತದೆ. ಹಳ್ಳದ ದಂಡೆಗೆ ಬಂದು ಹದವಾದ ಮಣ್ಣಿನಿಂದ ಗಂಗೆಯ ಮೂರ್ತಿಯನ್ನು ತಯಾರಿಸಿ ಮಗುವಿನ ತಂದೆಯಿಂದ ಎಡೆ ಇಡಿಸಿ

ಪೂಜೆ ಮಾಡಿಸುವರು. ನಂತರದಲ್ಲಿ ನೈವೇದ್ಯವನ್ನು ಹರಿಯುವ ನೀರಿನಲ್ಲಿ ತೇಲಿ ಬಿಡುತ್ತಾರೆ. ಮಗುವಿನ ತಾಯಿಗೆ ಉಡಿ ತುಂಬಿ ಮನೆಗೆ ಕರೆದುಕೊಂಡು ಬರುತ್ತಾರೆ.

ಜವಳ ತೆಗೆಸುವುದು :

ಕರ್ನಾಟಕದ ಸುಡುಗಾಡು ಸಿದ್ಧರು ಹೆಚ್ಚಾಗಿ ಚಂದ್ರಗಿರಿಯಲ್ಲಿರುವ ನಿಜಲಿಂಗಪ್ಪನಿಗೆ ತಮ್ಮ ಮಕ್ಕಳ ತಲೆಯ ಕೂದಲುಗಳನ್ನು ಮೀಸಲು ಅರ್ಪಿಸುತ್ತಾರೆ. ಮಗು ಹುಟ್ಟಿದ ಒಂದು ವರ್ಷ ಎರಡು ತಿಂಗಳಿಗೆ ಈ ಜವಳ ತೆಗೆಸುವ ಕಾರ್ಯ ನಡೆಯುತ್ತದೆ. ಕೆಲವೆಡೆ ಮಗುವಿನ ಜವಳವನ್ನು ದ್ಯಾಮವ್ವ, ದುರ್ಗಮ್ಮ, ಮರಿಯಮ್ಮ ಮೊದಲಾದ ದೇವತೆಗಳಿಗೆ ಮೀಸಲು ಬಿಡುತ್ತಾರೆ.

ಋತುಮತಿ :

ವಾಡಿಕೆಯಂತೆ ಹೆಣ್ಣು ಋತುಮತಿಯಾದ ವಿಷಯವನ್ನು ಓಣಿ ಹೆಂಗಸರನ್ನು ಕರೆದು ತಿಳಿಸುತ್ತಾರೆ. ಹೆಣ್ಣು ರಜಸ್ವಲೆಯಾದ ಸಮಯದಲ್ಲಿ ಇತರರಂತೆ ಸುಡುಗಾಡು ಸಿದ್ಧರೂ ಐದು ಇಲ್ಲವೆ ಹದಿನಾರು ದಿವಸ ಕೂಡಿಸುತ್ತಾರೆ. ರಜಸ್ವಲೆಯಾದ ಹೆಣ್ಣಿನ ಮಾವನಾಗುವವನು ಅವಳಿಗಾಗಿ ಬೇವಿನ ಸೊಪ್ಪಿನಿಂದ ಮನೆಯ ಹೊರಗೆ ಗುಡಿಸಲು ಹಾಕಿಕೊಡುತ್ತಾನೆ. ಐದರಿಂದ ಹದಿನಾರು ದಿವಸಗಳವರೆಗೆ ಹೆಣ್ಣು ಬೇವಿನ ಸೊಪ್ಪಿನಿಂದ ಹಾಕಿದ ಗುಡಿಸಲಿನಲ್ಲಿಯೇ ಇರಬೇಕು. ಈ ಸಮಯದಲ್ಲಿ ಸೋದರತ್ತೆಯಾದವಳು ಅವಳಿಗೆ ಸ್ನಾನಕ್ಕೆ ಹಾಕಬೇಕು. ಐದನೆ ಇಲ್ಲವೆ ಹದಿನಾರನೆ ದಿನಕ್ಕೆ ಹೆಣ್ಣಿಗೆ ಹೊಸಬಟ್ಟೆ ಹಾಕಿ ಮನೆಯಲ್ಲಿ ಕರೆದುಕೊಳ್ಳುತ್ತಾರೆ. ಐದನೆ ದಿನ ಇಲ್ಲವೆ ಹದಿನಾರನೆ ದಿನ ಬೇವಿನ ಸೊಪ್ಪಿನ ಗುಡಿಸಲು ಎದುರು ಮಾವನಾದವನು ಒಂದು ಕೋಳಿ ಬಲಿ ಕೊಟ್ಟು ದೈವಕ್ಕೆ ಊಟ ಹಾಕಿಸಬೇಕು. ಋತುಮತಿಯಾದ ಈ ಸಮಯದಲ್ಲಿ ಹೆಣ್ಣಿಗೆ ತಿನ್ನಲು ಕೊಬ್ಬರಿ, ಕಡಲೆ, ಹಾಲು, ತುಪ್ಪ, ಮಾಂಸವನ್ನು ಹೆಚ್ಚಾಗಿ ಕೊಡುತ್ತಾರೆ.

ಮದುವೆ :

"ಮದುವೆಗೆ ಸಂಬಂಧಿಸಿದ ಸುಡುಗಾಡು ಸಿದ್ಧರ ಕ್ರಿಯಾಚರಣೆಗಳು ಇತರರಿಗಿಂತ ಭಿನ್ನವಾಗಿವೆ. ಅವರಲ್ಲಿ ಸ್ವಗೋತ್ರ ವಿವಾಹ ನಿಷಿದ್ಧವಾಗಿದೆ. ಹೆಣ್ಣಿಗೆ 'ತೆರು' ಕೊಟ್ಟು ಮದುವೆ ಮಾಡಿಕೊಳ್ಳುತ್ತಾರೆ. ಈ ತೇರು ಅವಾ ಕನ್ಯಾ ಶುಲ್ಕ ೯ ರೂಪಾಯಿಯಿಂದ ಹಿಡಿದು ೩೦೦ ರೂಪಾಯಿಗಳ ವರೆಗೆ ಇರುತ್ತದೆ. ವರದಕ್ಷಿಣೆಯ ಪಿಡುಗು ಅವರಲ್ಲಿ ಇದುವರೆಗೆ ಇಲ್ಲ. ಹಟ್ಟಿಯ ಹಿರಿಯರ ಮೂಲಕವೇ ಸಾಲಾವಳಿ ನೋಡುತ್ತಾರೆ"[೮].

ಸುಡುಗಾಡು ಸಿದ್ಧರಲ್ಲಿ ಕನ್ಯಾಪರೀಕ್ಷೆಯಿಂದ ವರ ಪರೀಕ್ಷೆ ಬಹುಮುಖ್ಯವಾಗಿದೆ. ಜೀವನ ಸಂಗಾತಿಗಳಆಯ್ಕೆಯಲ್ಲಿ ಅವರು ಅನುಸರಿಸುವ ಪದ್ಧತಿ ಇತರರಿಗಿಂತ ತೀರ ಭಿನ್ನ ಹಾಗೂ ವಿಚಿತ್ರವಾಗಿದೆ. ಸಾಮಾನ್ಯವಾಗಿ ಗಂಡು ಹೆಣ್ಣಿನ ಒಪ್ಪಿಗೆಯನ್ನು ಅವರು ಕೇಳುವುದಿಲ್ಲ. ಸಿದ್ಧರಲ್ಲಿ ಹೆಣ್ಣು ಬೇಕೆನಿಸಿದಾಗ

ಗಂಡು ಅತ್ತೆ ಮಾವಂದಿರೊಂದಿಗೆ ಕನಿಷ್ಟ ಒಂದು ವರ್ಷದವರೆಗೆ ವಾಸ ಮಾಡಬೇಕು. ಈ ಅವಧಿಯಲ್ಲಿ ಅತ್ತೆ ಮಾವಂದಿರು ಗಂಡಿನ ಗುಣ ಪರೀಕ್ಷೆ ಮಾಡುತ್ತಾರೆ. ಗಂಡು ಅತ್ತೆ ಮಾವಂದಿರ ಜೊತೆಯಲ್ಲಿ ಅವರು ಹೋದ ಕಡೆಗೆಲ್ಲ ಸಂಚರಿಸಬೇಕು. ಇದಕ್ಕೆ ತೆಲುಗಿನಲ್ಲಿ 'ಮೇರ ತಿರುಗುವುದು' ಎನ್ನುತ್ತಾರೆ.

ಒಂದು ವೇಳೆ ಗಂಡು ಮನಸ್ಸಿಗೆ ಬರದಿದ್ದರೆ ಅವರು ಗಂಡನ್ನು ಅವರ ಮನೆಗೆ ವಾಪಸ್ಸು ಕಳಿಸಿಕೊಡುತ್ತಾರೆ. ಒಂದು ವರ್ಷದವರೆಗೆ ಅವರೊಂದಿಗಿದ್ದು ಸಂಪಾದಿಸಿದ್ದರಲ್ಲಿ ಅರ್ಧದಷ್ಟನ್ನು ಅವರ ತಂದೆ ತಾಯಿಗೆ ಮುಟ್ಟಿಸುತ್ತಾರೆ. ಒಂದು ವೇಳೆ ಹೆಣ್ಣಿನ ಕಡೆಯವರಿಗೆ ಗಂಡು ಒಪ್ಪಿಗೆಯಾದರೆ, ಗಂಡಿನ ತಂದೆ ತಾಯಿಗಳು ಹೆಣ್ಣಿನ ಮನೆಯವರ ಮುಂದೆ ಚಾಪೆ ಹಾಕುತ್ತಾರೆ. ಹೀಗೆ ಚಾಪೆ ಹಾಕುವುದೆಂದರೆ ಸಿದ್ದರಲ್ಲಿ ನಿಶ್ಚಯ ಕಾರ್ಯವೆಂದು ಅರ್ಥ. ದೈವಸ್ಥರನ್ನು ಕರೆದು ಹೆಣ್ಣನ್ನು ನಿಶ್ಚಯಿಸುತ್ತಾರೆ. ಈ ನಿಶ್ಚಯ ಕಾರ್ಯ ನಿಶ್ಚಯವಾದಂದಿನಿಂದ ಮದುವೆಯಾಗುವವರೆಗೆ ಗಂಡು ಹೆಣ್ಣಿಗೆ ಬೇಕಾಗುವ ಬಟ್ಟೆ ಬರೆಗಳನ್ನು ಕೊಡಿಸಬೇಕು.

ಮೊದಲು ಸುಡುಗಾಡು ಸಿದ್ದರ ಮದುವೆ ೫ ದಿನಗಳ ಕಾಲ ನಡೆಯುತ್ತಿತ್ತು, ಈಗ ಕಾಲ ಬದಲಾಗಿದೆ. ಇತರರಂತೆ ಅವರೂ ಒಂದೇ ದಿನದಲ್ಲಿ ಮದುವೆ ನೆರವೇರಿಸುತ್ತಾರೆ. ಮೊದಲು ರುದ್ರಾಕ್ಷಿಯನ್ನು ಕಟ್ಟಲಾಗುತ್ತಿತ್ತು, ಆದರೆ ಈಗ ತಾಳಿಯನ್ನು ಗಂಡು ಹೆಣ್ಣಿಗೆ ಕಟ್ಟುತ್ತಾನೆ. ಮದುವೆ ಹೆಣ್ಣಿನವರೇ ನಡೆಸಿಕೊಡುತ್ತಾರೆ. ಮದುವೆ ಮುಗಿಯುವವರೆಗೆ ಸೇಂದಿ, ಸಾರಾಯಿ, ಮಾಂಸದ ಊಟದ ಮೊದಲಾದ ಖರ್ಚನ್ನು ಗಂಡಿನವರೇ ನೋಡಿಕೊಳ್ಳಬೇಕು.

ಸುಡುಗಾಡು ಸಿದ್ದರಲ್ಲಿಯೂ ಸಹ ಕೂಡಾವಳಿ ಮದುವೆ, ಬಾಲ್ಯವಿವಾಹ, ವಿಧವಾ ವಿವಾಹ ಮೊದಲಾದ ವಿವಾಹ ಪದ್ಧತಿಗಳು ಜಾರಿಯಲ್ಲಿವೆ.

ಸೀಮಂತ :

ಸುಡುಗಾಡು ಸಿದ್ದರು ಇತರರಂತೆ ಹೆಣ್ಣು ಮೊದಲಸಲ ಗರ್ಭಿಣಿಯಾದಾಗ ಸಾಮಾನ್ಯವಾಗಿ ಐದು ಇಲ್ಲವೇ ಏಳು ತಿಂಗಳಲ್ಲಿ ಸೀಮಂತ ಕಾರ್ಯವನ್ನು ಮಾಡುತ್ತಾರೆ. ಹೆಣ್ಣಿನ ತವರಿನವರು ಗಂಡನ ಮನೆಗೆ ಬಂದು ಈ ಶಾಸ್ತ್ರವನ್ನು ಮಾಡುತ್ತಾರೆ. ಹಟ್ಟಿ ಜನರಿಗೆಲ್ಲ ಆ ದಿನ ಸಿಹಿ ಊಟ ಹಾಕಿಸುತ್ತಾರೆ. ತವರಿನವರು ಈ ಶಾಸ್ತ್ರಕ್ಕಾಗಿ ಬರುವಾಗ ಒಂದು ಹಸಿರು ಸೀರೆ, ಕುಪ್ಪಸ, ಬಳೆ, ಅಕ್ಕಿ, ಗೋಧಿ, ಬೆಲ್ಲ ಕೊಬ್ಬರಿ, ಉತ್ತತ್ತಿ, ತೆಂಗು, ಬಾಳೆಹಣ್ಣು, ಅರಿಷಿಣ ಕುಂಕುಮ, ಹೂವು ಇತ್ಯಾದಿ ಸಾಮಾನುಗಳನ್ನು ತರುತ್ತಾರೆ. ಮುತ್ತೈದೆಯರು ಸೇರಿ ಗರ್ಭಿಣಿಗೆ ಹೊಸ ಸೀರೆ, ಕುಪ್ಪಸ ತೊಡಿಸಿ ಹೂ ಮುಡಿಸಿ ಉಡಿ ತುಂಬುತ್ತಾರೆ. ಈ ಶಾಸ್ತ್ರವಾದ ಮೇಲೆ ಅವರಿವರು ಹೆಣ್ಣನ್ನು ತವರಿಗೆ ಕರೆದುಕೊಂಡು ಹೋಗುತ್ತಾರೆ.

ಮರಣ ಮತ್ತು ಸಂಸ್ಕಾರ :

ಪ್ರತಿಯೊಂದು ಸಮಾಜದಲ್ಲಿ ಹುಟ್ಟಿದ ವ್ಯಕ್ತಿಗೆ ಕೆಲವು ಆಚರಣೆ, ವಿಧಿ-ವಿಧಾನಗಳನ್ನು

ಮಾಡುವಂತೆ, ಸಾಯುವಾಗಲೂ ಕೆಲವು ವಿಧಿ-ವಿಧಾನಗಳನ್ನು ಮಾಡುತ್ತಾರೆ. ಸತ್ತ ಮೇಲೆ ಸತ್ತವನ ತಿಥಿ ಮಾಡುವ ಸಂಪ್ರದಾಯ ಪ್ರತಿಯೊಂದು ಸಮಾಜದಲ್ಲಿಯೂ ಕಂಡು ಬರುತ್ತದೆ.

ಸುಡುಗಾಡು ಸಿದ್ಧರಲ್ಲಿ ಹೂಳುವ ಮತ್ತು ಸುಡುವ ಎರಡೂ ಪದ್ಧತಿಯ ಶವಸಂಸ್ಕಾರದ ಪದ್ಧತಿಗಳಿವೆ. ಗರ್ಭಿಣಿ, ಬಾಣಂತಿ, ತೊನ್ನು ಇದ್ದವರನ್ನು ಮತ್ತು ಅನುಮಾನಾಸ್ಪದ ಸಾವುಗಳು ಸಂಭವಿಸಿದ್ದಲ್ಲಿ ಶವಗಳನ್ನು ಸುಡುತ್ತಾರೆ. ಉಳಿದಂತೆ ಎಲ್ಲ ಹೆಣಗಳನ್ನು ಹೂಳುತ್ತಾರೆ.

ಸತ್ತ ಮೂರು ದಿನಕ್ಕೆ ತಿಥಿ ಮಾಡುವ ಕಾರ್ಯವಿರುತ್ತದೆ. ಒಂಭತ್ತನೆಯ ದಿನದಲ್ಲಿ ಮೃತನ ಮನೆಯನ್ನು ಸಾರಣೆ ಮಾಡಿ, ಆ ದಿನ ಸಿಹಿ ನೈವೇದ್ಯ ಮಾಡಿ ಮನೆಯ ಹೊರಗಿಟ್ಟು ಸತ್ತ ವ್ಯಕ್ತಿಯನ್ನು ಕೂಗುತ್ತಾರೆ. ನಂತರ ಬಳಗದವರಿಗೆಲ್ಲ ಸಿಹಿ ಊಟ ಹಾಕಿ ಕಳಿಸುತ್ತಾರೆ. ಹದಿನಾರನೆಯ ದಿನ ಮನೆಯ ಅಂಗಳದಲ್ಲಿ ಸಾರಣೆ ಮಾಡಿ ಸೆಗಣಿಯಿಂದ ಕಟ್ಟೆ ಕಟ್ಟಿ ನೀರು ನಿಲ್ಲುವಂತೆ ಮಾಡಿ ಅದರಲ್ಲಿ ಕಾಲಿಟ್ಟು ಹಿಂದು ಮುಂದಕ್ಕೆ ನಡೆದು ಮನೆ ಪ್ರವೇಶ ಆಮಡುತ್ತಾರೆ. ಕುರಿ ಕೊಯ್ದು ಎಲ್ಲರಿಗೂ ಊಟ ಹಾಕಿಸುತ್ತಾರೆ. ಪ್ರತಿಯೊಬ್ಬರೂ ಈ ಸಂದರ್ಭದಲ್ಲಿ ಹೆಂಡ ಕುಡಿಯಲೇಬೇಕು. ಕುಡಿಯದವರು ಹೆಂಡವನ್ನು ಮೈ ಮೇಲೆ ಸ್ವಲ್ಪ ಸಿಂಪಡಿಸಿಕೊಳ್ಳುತ್ತಾರೆ.

ಸುಡುಗಾಡು ಸಿದ್ಧರ ಧಾರ್ಮಿಕ ಆಚರಣೆ :

ಸುಡುಗಾಡು ಸಿದ್ಧರು ಮೂಲತಃ ಶೈವರಾದರೂ ವಿಷ್ಣು ಪೂಜಕರು. ವೀರಭದ್ರ ಅವರ ವಿಶೇಷ ದೇವರು. ಗಂಗಮ್ಮ ಸ್ತ್ರೀಯರಿಂದ ಪೂಜಿಸಲ್ಪಡುವ ದೇವತೆಯಾಗಿದ್ದು, ಅವಳಿಗೆ ಕುರಿ ಬಲಿಯನ್ನು ಅರ್ಪಿಸುತ್ತಾರೆ. ಸಿದ್ಧರು ನಡೆದುಕೊಳ್ಳುವ ದೇವರೆಂದರೆ ತಿರುಪತಿ ತಿಮ್ಮಪ್ಪ ಅಂತರ್‌ಗಟ್ಟೆಮ್ಮ, ಮಂಜುನಾಥ ಸ್ವಾಮಿ, ಅಲ್ಲದೇ ರೇವಣಸಿದ್ಧಸ್ವಾಮಿಗೂ ಮತ್ತು ತಮ್ಮ ಸುತ್ತಲಿನ ಚೌಡಿ ಭೂತಗಳಿಗೂ ನಡೆದುಕೊಳ್ಳುತ್ತಾರೆ.

ಹಬ್ಬಗಳು :

ಸುಡುಗಾಡು ಸಿದ್ಧರು ವರ್ಷಕ್ಕೊಮ್ಮೆ ದಸರಾ ಹಬ್ಬದಲ್ಲಿ ಹಿರೇರ ಹಬ್ಬವನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಘಟಸ್ಥಾಪನೆ ಮಾಡಿ ಪೂರ್ವಿಕರ ಇಷ್ಟಾರ್ಥ ಪದಾರ್ಥಗಳನ್ನು ಇಟ್ಟು, ಎಡೆಕೊಟ್ಟು ಪೂಜಿಸುತ್ತಾರೆ. ಪೂರ್ವಿಕರ ಮೂರ್ತಿಗಳನ್ನು ಬೆಳ್ಳಿಯಿಂದ ಮಾಡಿಸಿ ಮನೆದೇವರುಗಳ ಜೊತೆಗೆ ಪೂಜಿಸುತ್ತಾರೆ. ಭಾದ್ರಪದ ಇಲ್ಲವೆ ಕಾರ್ತಿಕ ಮಾಸಗಳಲ್ಲಿ ವರ್ಷಕ್ಕೊಮ್ಮೆ ಸತ್ತವರ ದಿನಗಳನ್ನು ಆಚರಿಸುತ್ತಾರೆ.

ಸುಡುಗಾಡು ಸಿದ್ಧರು ಹಿಂದೂ ಹಾಗೂ ಮುಸ್ಲಿಂರ ಎಲ್ಲ ಪ್ರಮುಖ ಹಬ್ಬ ಹರಿದಿನಗಳನ್ನು ಬಿಡದೆ ಆಚರಿಸುತ್ತಾರೆ. ಅವರದೇ ಆದ ವಿಶಿಷ್ಟ ಹಬ್ಬ ಆಚರಣೆಗಳು ಕಂಡು ಬರುವುದಿಲ್ಲ. ಪ್ರಾದೇಶಿಕವಾಗಿ ಅಲ್ಲಲ್ಲಿಯ ಹಬ್ಬ ಹರಿದಿನಗಳನ್ನೇ ತಮ್ಮದನ್ನಾಗಿಸಿಕೊಂಡಿದ್ದಾರೆ.

ಶಾಂತಿ ಪೂಜೆ :

ನಾಡಿನ ಬರಗಾಲ, ಊರಿಗೆ ಮಾರಕ, ಪಿಡುಗು, ಕಾಲರ, ದ್ಯಾಮವ್ವ ದುರಗವ್ವನ ಕಾಟ ಹೆಚ್ಚಾದಾಗ ಮತ್ತು ಚಿಕ್ಕ ಮಕ್ಕಳು, ದನ ಕರುಗಳಿಗೆ ಬಲವಿಲ್ಲದಾಗ ಹಳ್ಳಿಯ ಪ್ರಮುಖರು ಸೇರಿ ಊರಿನಲ್ಲಿ ಶಾಂತಿ ನೆಲೆಸುವುದಕ್ಕೆಂದು ಸುಡುಗಾಡು ಸಿದ್ದರನ್ನು ಕರೆಯಿಸಿ ಮೂರು ದಿನಗಳವರೆಗೆ ಪೂಜೆ ಮಾಡಿಸುತ್ತಾರೆ. ಇದರಿಂದ ಊರಿಗೆ ಒಳ್ಳೆಯದಾಗುತ್ತದೆಂಬ ನಂಬಿಕೆ ಇದೆ.

ಸುಡುಗಾಡು ಸಿದ್ದರು ಮಾಡುವ ದೀರ್ಘವಾದ ಭಯಾನಕ ಪೂಜೆಗಳಿಂದ ಮಾರಿ, ಮಸಣಿ, ಭೂತ, ಪಿಶಾಚಿಗಳೆಲ್ಲ ದೂರವಾಗುತ್ತವೆಂದು ಜನಪದರು ಇಂದಿಗೂ ನಂಬುತ್ತಾರೆ. 'ಮಲ್ಲಾಡ ಚೌಡಿ' ಸಿದ್ದರು ಪೂಜಿಸುವ ವಿಶೇಷ ದೇವತೆ. ಈ ದೇವತೆಗಳಿಗೆ ಪ್ರತಿ ಅಮವಾಸ್ಯೆ ದಿವಸ ಒಂದು ಕೋಳಿ, ಒಂಭತ್ತು ಲಿಂಬೆಹಣ್ಣು, ಒಂದು ತೆಂಗು ಇತ್ಯಾದಿಗಳನ್ನು ಅರ್ಪಿಸಿ ಶಾಂತಿ ಮಾಡಿದಲ್ಲಿ ಎಲ್ಲ ಸಂಕಷ್ಟಗಲು ಪರಿಹಾರವಾಗುತ್ತವೆಂದು ನಂಬಿದ್ದಾರೆ.

ದೊಂಬರು :

ದೊಂಬರ ಸಮುದಾಯಿಕ ಜೀವನ :

"ಬದುಕು ಮತ್ತು ಸಾವು ದೊಂಬ ಸಮುದಾಯದ ಮಟ್ಟಿಗೆ ಅನೇಕ ಕಾಲದವರೆಗೆ ತೆರೆದಿಟ್ಟು ಬೀದಿಯ ಬಟ್ಟೆಯಾಗಿತ್ತೆಂದು ತೋರುತ್ತದೆ. ನಾಗರಿಕ ಸಂಪರ್ಕ ಬಂದ ಬಳಿಕ ಈ ಜನ ವಿವಿಧ ಹಂತದ ಆಚರಣೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಂತೆ ತೋರುತ್ತದೆ"[೯].

ಜನನ ಮತ್ತು ನಾಮಕರಣ :

ತಂದೆ ತಾಯಿಗಳಿರುವಲ್ಲಿಯೇ ದೊಂಬತಿಯ ಹೆರಿಗೆ. ಹೆರಿಗೆಯಾದ ನಂತರ ಬಾಣಂತಿಗೆ, ಇತರ ಸಮುದಾಯದ ಬಾಣಂತಿಯರಿಗೆ ಕೊಡುವ ಹಾಗೆ ಪೌಷ್ಟಿಕ ಆಹಾರ ಕೊಡಲಾಗುತ್ತದೆ. ವಿಶೇಷವೆಂದರೆ ದೊಂಬರ ಬಾಣಂತಿಗೆ ಕುಡಿಯಲು 'ಸೆರೆ' ಕೊಡುವುದು. ೯ ನೆಯ ದಿನ ಮಗುವಿಗೆ 'ಗುಗ್ಗರಿ' ಕುಂಚಿಗೆ ಕುಲಾಯಿ ಕೊಡುವುದು - ನಾಮಕರಣ ಶಕುನ ಇತ್ಯಾದಿ ಜರುಗುತ್ತವೆ. ಮಗುವಿನ ಮೊದಲ ಅಥವಾ ಮೂರನೇ ವರ್ಷ ಕುಲದವರಿಗೆ 'ಜವಳ' ಕೊಡುವ ಕಾರ್ಯ ನಡೆಯುತ್ತದೆ.

ಋತುಮತಿ :

ದೊಂಬರ ಬಾಲೆ ಮೈನೆರೆದಾಗ ಇತರ ಕೊರವ, ಲಮಾಣಿ, ಹೆಳವ ಇತ್ಯಾದಿ ಸಮುದಾಯದಲ್ಲಿ ಕಾಣುವ ಕೆಲವು ಆಚರಣೆಗಳನ್ನೇ ಇವರೂ ಅನುಸರಿಸುತ್ತಾರೆ. ತಮ್ಮ ಬಿಡಾರದ ಹತ್ತಿರ ಮೈನೆರೆದ ಹುಡುಗಿಗಾಗಿ ಒಂದು ಪ್ರತ್ಯೇಕ ಗುಡಾರ ಹಾಕಲಾಗುತ್ತವೆ. ಏಳು ದಿನ ಆ ಗುಡಿಸಲಲ್ಲಿ ವಾಸವಾಗಿರಬೇಕು.

ಒಂದು ಚಾಪೆ ಮಾತ್ರ ಅವಳ ಹಾಸಿಗೆ. ಗುಡಿಸಲ ಬಾಗಿಲ ಬಳಿ ಒಬ್ಬ ಮುದುಕಿ ಮಲಗಿರುತ್ತಾಳೆ. ಒಂಭತ್ತನೆಯ ದಿನ ಮುತ್ತೈದೆಯರು ಅವಳನ್ನು ಹನುಮಂತ ದೇವರ ಗುಡಿಗೆ ಕರೆದುಕೊಂಡು ಹೋಗುತ್ತಾರೆ. ಮರಳಿ ಮನೆಗೆ ಬಂದ ಬಳಿಕ ಮನೆಯ-ಗುಡಿಸಲಿನ ಒಳ-ಹೊರಗೆ 'ಗೋಮೂತ್ರ' ಚಿಮುಕಿಸುತ್ತಾರೆ. ಆ ದಿನ ಎಲ್ಲರಿಗೂ ಹೆಂಡ ಅಥವಾ ಸೆರೆಯ ಸರಬರಾಜು - ಊಟ ಹಾಕಿಸುತ್ತಾರೆ. ಆಗ ದೋಷ ಪರಿಹಾರವಾಗಿ ಕನ್ಯೆ 'ಶುದ್ಧ' ಎಂದು ಸ್ವೀಕರಿಸಲಾಗುತ್ತದೆ.

ಮದುವೆ :

ಡೊಂಬರ ಸಮುದಾಯದಲ್ಲಿ 'ಮದುವೆ'ಯ ಆಚರಣೆ ವಿಚಿತ್ರವಾಗಿದೆ. ಪುರುಷನಿಗೆ ಬಹುಪತ್ನಿತ್ವದ ಅವಕಾಶವಿತ್ತು. ನಿರಂತರ ಅಲೆದಾಟವೇ ಇದಕ್ಕೆ ಕಾರಣವಾಗಿರಬೇಕು. ಡೊಂಬರ ಸಮುದಾಯದ ಹುಡುಗಿಯರಿಗೆ ಮದುವೆ ಕನಸಿನ ಗಂಟೆಂದು ಭಾವಿಸುವ ಕಾಲವೊಂದಿತ್ತು. ಏಕೆಂದರೆ ಡೊಂಬ ಸಮುದಾಯದ ಕಡಿಮೆ ಪ್ರಮಾಣದ ಜನಸಂಖ್ಯೆಯೇ ಇದಕ್ಕೆ ಕಾರಣವಾಗಿತ್ತು.

ಯಾವುದೇ ಮನೆಯ ಕನ್ಯೆಯನ್ನು ತಮ್ಮ ವರನಿಗೆ ತಂದು ಕೊಳ್ಳಬೇಕಾದರೆ ವರನ ಕಡೆಯುವರು ಒಬ್ಬ 'ಯಜಮಾನ' ನಾಯಕನ ಹಿರಿತನದಲ್ಲಿ ಕನ್ಯೆಯ ಮನೆಗೆ ಹೋಗಬೇಕು. ಕನ್ಯೆಯ ತಂದೆ ಒಪ್ಪಿಗೆ ಸೂಚಿಸಿದಾಗ 'ಇಂಥವನಿಗೆ ಇಂಥ ಕನ್ಯೆ ತೆಗೆದುಕೊಳ್ಳಲಾಯಿತು' ಎಂದು ಸಾರುತ್ತಿದ್ದಂತೆ ಒಂದು ತಮಟೆ ಬಾರಿಸಲಾಗುತ್ತದೆ.

''ಆಗ ವರನ ಕಡೆಯುವರು ಹೆಂಡ-ಸಾರಾಯಿ ಕೊಡಿಸಬೇಕು. ಪರಸ್ಪರ ತಾಂಬೂಲ ಹಂಚಿಕೊಳ್ಳಬೇಕು. ಇದಕ್ಕೆ 'ನಿಶ್ಚಯದ ವಿಳ್ಯೆ' ಎಂದು ಹೆಸರು. ಆಗ ಕನ್ಯೆಗಾಗಿ ಗೊತ್ತುಪಡಿಸಿದ 'ತೆರವು' ಹಣದ ಅರ್ಧ ಮೊತ್ತವನ್ನಾದರೂ ವರನ ಕಡೆಯವರು ಕನ್ಯಾಪಿತೃವಿಗೆ ಕೊಡಬೇಕು''[೧೦].

ಮದುವೆಯ ಸಂದರ್ಭದಲ್ಲಿ ಹಂದರ ಹಾಕುವುದು, ಕಂಬ ನೆಡುವುದು, ಮದುಮಕ್ಕಳ ಕಾಲು ತೊಳೆಯುವ ಕಾರಣ, ಮದುವೆಯ ಕಾರಣಗಳು ಎಲ್ಲ ಮುಗಿದ ಮೇಲೆ ಊಟ ಮತ್ತು ಸುರಾಪಾನ.

ಹಬ್ಬಗಳು :

ಡೊಂಬರು ಆಚರಿಸುವ ಹಬ್ಬಗಳು ವಿಶಿಷ್ಟ ಬಗೆಯಿಂದ ಕೂಡಿದವುಗಳಾಗಿವೆ. ಕುಮಾರರಾಮನ ಹೆಸರಿನಲ್ಲಿ ನಡೆಯುವ ಒಂದು ಧಾರ್ಮಿಕ ವಿಧಿ 'ದೊಳ್ಳು ಪ್ರಸ್ಥ', ಸವದತ್ತಿ ಎಲ್ಲಮ್ಮನ ಎದುರು ಜರುಗುವ 'ಮುತ್ತು ಕಟ್ಟುವ' ಆಚರಣೆ ಪದ್ಧತಿಗಳು ಅವರ ಸಂಪ್ರದಾಯದ ಆಚರಣೆಗಳನ್ನು ಒಳಗೊಂಡಿವೆ. 'ಗ್ರಾಮಶಾಂತಿ' ಎಂದು ಕರೆಯಲ್ಪಡುವ ಉತ್ಸವ ಒಂದು ಅರ್ಥದಲ್ಲಿ 'ಡೊಂಬ'ರ ಹಬ್ಬವೇ ಆಗಿದೆ.

ಧರ್ಮ-ದೇವತೆಗಳು :

ಡೊಂಬರು ವಿವಿಧ ಪ್ರದೇಶಗಳ ಪ್ರಾದೇಶಿಕತೆಗೆ ತಕ್ಕಂತೆ ಉತ್ಸವ ಆಚರಿಸುತ್ತಿದ್ದಾರೆ. ತಾವು

ತಾವೇ ಕೂಡಿ ತೀರ್ಮಾನಿಸಿಕೊಂಡು ಒಂದು ಗುಡಿಯಲ್ಲಿ ತಮ್ಮ ಸಂಪ್ರದಾಯಗಳ ಆಚರಣೆಗಳನ್ನು, ಹಬ್ಬ ಹರಿದಿನಗಳನ್ನು ತಮ್ಮ ಧರ್ಮದ - ದೇವತೆಗಳ ಆರಾಧನೆಯ ಸಂದರ್ಭದಲ್ಲಿ ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ.

ಗೂಡಮಾಸಮ್ಮ ಉತ್ಸವ ಶ್ರಾವಣ ಮಾಸದಲ್ಲಿ ಡೊಂಬರು ಆಚರಿಸುವ ವೈಭವದ ಉತ್ಸವ. ಇದೇ ಶ್ರಾವಣ ಮಾಸದಲ್ಲಿ ಡೊಂಬರು ಆರಾಧಿಸುವ ಇತರ ದೇವತೆಯರೆಂದರೆ ಯಲ್ಲಮ್ಮ, ಪೋಚಮ್ಮ, ಮುತ್ಯಾಲಮ್ಮ ಮತ್ತು ಕನಕಮ್ಮ. ಡೊಂಬರ ಸಮುದಾಯದ ಕೆಲವು ಮನೆದೇವರು ಅಥವಾ ಕುಲದೇವರುಗಳೆಂದರೆ ಕಾಟಯ್ಯ, ಮಹೇಶ್ವರ ಮುಂತಾದವು.

ಡೊಂಬರ ನಂಬಿಕೆ-ಮೂಢ ನಂಬಿಕೆಗಳು :

ಡೊಂಬರು ಅನೇಕ ನಂಬಿಕೆಗಳನ್ನು, ಮೂಢನಂಬಿಕೆಗಳನ್ನು ನಂಬುವ ಜನರಾಗಿದ್ದರಿಂದ ಅವರಲ್ಲಿ ಸಹಜವಾಗಿಯೇ ಭೂತ, ಪ್ರೇತ, ಪಿಶಾಚಿ, ಗಾಳಿ ಹೀಗೆ ಒಂದು ಕೆಟ್ಟ ಶಕ್ತಿ ಇದೆ ಎಂದು ಬಲವಾಗಿ ನಂಬಿಕೆ ಇರುವ ಡೊಂಬರು, ಮುಸಲ್ಮಾನ ಪೀರರನ್ನು ಆರಾಧಿಸುವುದುಂಟು. ಗಾಳಿ ನಿವಾರಣೆಗೆ ಮಂತ್ರ, ತಂತ್ರದ ಮತ್ತು ಕಟ್ಟು ಮಾಡಿಸಿದ ತಾಯಿತ ಮುಂತಾದ ವಿವಿಧ ಕ್ರಮಗಳನ್ನು ಪಾಲಿಸುವುದೂ ಇದೆ.

ಮರಣ ಮತ್ತು ಸಂಸ್ಕಾರ :

ಡೊಂಬರು ಸಾಮಾನ್ಯವಾಗಿ ಹೆಣ ಹುಗಿಯುತ್ತಾರೆ. ಮೊದ ಮೊದಲು ಹೆಣವನ್ನು ದಕ್ಷಿಣಕ್ಕೆ ತಲೆಮಾಡಿ ದಬ್ಬು ಮಲಗಿಸಿ ಹುಗಿಯಲಾಗುತ್ತಿತ್ತು, ಕೆಲವೆಡೆ ಶವದ ತಲೆಯನ್ನು ಉತ್ತರದ ಕಡೆ ಮಾಡಲಾಗುತ್ತಿತ್ತು, ಆದರೆ ಕಾಲಾನಂತರ ಆಳ ಕುಣಿ ತೆಗೆದು ಒಂದು ಕಡೆ ಶವವನ್ನು ಕುಳ್ಳಿರಿಸಿ ಹೂಳುವುದು ರೂಢಿಯಾಯಿತು. ಕೆಲವೆಡೆ ಶವದ ಸ್ನಾನ ಮಾಡಿಸಲಾಗುತ್ತದೆ.

ಮನೆಯ ಮುಖ್ಯಸ್ಥನು ಶವದ ಹಿಂದೆ ಅಥವಾ ಮುಂದೆ ನಡೆಯುತ್ತಾ ಹೋಗುತ್ತಾನೆ. ಇವರ ಸಂಸ್ಕೃತಿಯಲ್ಲಿನ ವಿಶೇಷವೆಂದರೆ ಹೆಣ್ಣುಮಕ್ಕಳು ಸ್ಮಶಾನಕ್ಕೆ ಸಂಸ್ಕಾರಕ್ಕೆ ಹೋಗದಿರುವುದು. ಕೇವಲ ಪುರುಷರಷ್ಟೇ ಮಣ್ಣಿಗೆ ಹೋಗುವ ಪದ್ಧತಿ ಇವರಲ್ಲಿ ಇದೆ.

ಸಂಸ್ಕಾರದ ನಂತರ ಅವರವರ ಅನುಕೂಲಕ್ಕೆ ತಕ್ಕಂತೆ ಐದು, ಏಳು, ಒಂಭತ್ತು ಹೀಗೆ ಬೆಸದಿನದಲ್ಲಿ ಮೃತನ ಆತ್ಮಶಾಂತಿಗಾಗಿ ಸಮಾರಾಧನೆ ಮಾಡಿಸಲಾಗುತ್ತದೆ.

ಇತರ ಅಲೆಮಾರಿ ಜನಾಂಗದವರು :

ಇವರಲ್ಲದೇ ಹಾವಾಡಿಗರು, ಜಾತಿಗಾರರರು, ಕಪ್ಪು ಹೊಲೆಯರು, ಅಡವಿ ಚೊಂಚರು ಮೊದಲಾದ ಅಲೆಮಾರಿ ಜನಾಂಗದವರೂ ಸಹ ತಮ್ಮದೇ ಆದ ಸಂಪ್ರದಾಯ, ಆಚರಣೆ, ನಂಬಿಕೆಗಳನ್ನು ತಮ್ಮ ಪೂರ್ವಜರ ಕಾಲದಿಂದಲೂ ಆಚರಿಸುತ್ತಾ ಬಂದಿದ್ದಾರೆ. ನನ್ನ ಅಧ್ಯಯನದ ಸೀಮಿತ ಉದ್ದೇಶದಿಂದ ಮೇಲಿನ ಐವರು ಪ್ರಮುಖ ಅಲೆಮಾರಿಗಳ ಜನಾಂಗದವರ ಕುರಿತು ಸಂಪ್ರದಾಯ, ನಂಬಿಕೆ, ಆಚರಣೆಗಳನ್ನು ಸಂಶೋಧನಾ ಮಹಾಪ್ರಬಂಧದಲ್ಲಿ ದಾಖಲಿಸಿದೆ.

ಅಡಿಟಿಪ್ಪಣಿಗಳು :

೧. ಯಳನಾಡು ಅಂಜನಪ್ಪ - ಹಗಲುವೇಷದವರ ಸಂಸ್ಕೃತಿ- ಪುಟ ಸಂಖ್ಯೆ - ೫೭

೨. ಯಳನಾಡು ಅಂಜನಪ್ಪ - ಹಗಲುವೇಷದವರ ಸಂಸ್ಕೃತಿ- ಪುಟ ಸಂಖ್ಯೆ - ೬೮

೩. ಡಾ. ದೊಡ್ಡಮನಿ ಲೋಕರಾಜ್ ಮತ್ತು ಶ್ರೀನಿವಾಸ ಎಸ್. ರಾವುಲೊಳ್ - ಸಿಂಧೊಳ್ಳು - ಪುಟ ಸಂಖ್ಯೆ ೪೧

೪. ಡಾ. ದೊಡ್ಡಮನಿ ಲೋಕರಾಜ್ ಮತ್ತು ಶ್ರೀನಿವಾಸ ಎಸ್. ರಾವುಲೊಳ್ - ಸಿಂಧೊಳ್ಳು - ಪುಟ ಸಂಖ್ಯೆ ೪೯

೫. ಶಿವಾನಂದ ಲ. ಪಾಚಂಗಿ - ಗೋಂಧಳಿ, ಪುಟ ಸಂಖ್ಯೆ - ೩೪

೬. ಶಿವಾನಂದ ಲ. ಪಾಚಂಗಿ - ಗೋಂಧಳಿ, ಪುಟ ಸಂಖ್ಯೆ - ೩೭

೭. ಡಾ. ಪಿ.ಕೆ. ಖಂಡೋಬಾ - ಸುಡುಗಾಡು ಸಿದ್ದರ ಸಂಸ್ಕೃತಿ - ಪುಟ ಸಂಖ್ಯೆ - ೪೩

೮. ಡಾ. ಪಿ.ಕೆ. ಖಂಡೋಬಾ - ಸುಡುಗಾಡು ಸಿದ್ದರ ಸಂಸ್ಕೃತಿ - ಪುಟ ಸಂಖ್ಯೆ - ೪೭

೯. ದೇವೇಂದ್ರ ಕುಮಾರ ಪಿ. ಹಕಾರಿ - ದೊಂಬರ ಸಂಸ್ಕೃತಿ - ಪುಟ ಸಂಖ್ಯೆ ೧೦೬

೧೦. ದೇವೇಂದ್ರ ಕುಮಾರ ಪಿ. ಹಕಾರಿ - ದೊಂಬರ ಸಂಸ್ಕೃತಿ - ಪುಟ ಸಂಖ್ಯೆ ೧೦೯

ಅಧ್ಯಾಯ - ೬

ಅಲೆಮಾರಿಗಳ ಸಮಸ್ಯೆಗಳು ಮತ್ತು ದೈವ ಸನ್ನಿಧಿಯಲ್ಲಿ ಕಂಡುಕೊಳ್ಳುವ ಪರಿಹಾರಗಳು

ಅಧ್ಯಾಯ - ೬ : ಅಲೆಮಾರಿಗಳ ಸಮಸ್ಯೆಗಳು ಮತ್ತು ದೈವ ಸನ್ನಿಧಿಯಲ್ಲಿ ಕಂಡುಕೊಳ್ಳುವ ಪರಿಹಾರಗಳು

ಪ್ರವೇಶ :

''ವಿಶ್ವದ ಮೂಲಿಗರೇ ಆದಿವಾಸಿಗಳು. ಇವರಲ್ಲಿ ಹಲವು ವಿಧ. ಪ್ರಕೃತಿ ಮಡಿಲಿನ ಪಾರಂಪರಿಕ ಪಶುಪಾಲಕ ಅಲೆಮಾರಿ ಆದಿವಾಸಿಗಳು, ಪಾರಂಪರಿಕ ಧಾರ್ಮಿಕ ಭಿಕ್ಷಾವೃತ್ತಿಯ ಅಲೆಮಾರಿ ಆದಿವಾಸಿಗಳು. ಮತ್ತು ಆಧುನಿಕ ವೈಪರಿತ್ಯಗಳ ಹಿನ್ನೆಲೆಯಲ್ಲಿ ಉಗಮಗೊಂಡ ಅಲೆಮಾರಿ ಜನಸಮೂಹಗಳು''[೬].

ಭಾರತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ೬ ದಶಕಗಳೇ ಆಗಿದ್ದರೂ ಅಲೆಮಾರಿಗಳಿಗೆ ಈವರೆಗೂ ಸ್ವಾತಂತ್ರ್ಯ ಸಿಕ್ಕಿಲ್ಲ. ಯಾವುದೇ ಶಾಶ್ವತವಾದ ನೆಲೆಯಿಲ್ಲ. ಕೇವಲ ಬದುಕಿಗಾಗಿ ಮಕ್ಕಳು, ಮರಿ, ಸಂಸಾರ ಕಟ್ಟಿಕೊಂಡು ಊರಿಂದೂರಿಗೆ ಅಲೆಮಾರಿಗಳಾಗಿ ಸಂಚಾರಿ ಜೀವನ ನಡೆಸುತ್ತಿರುವ ಇವರಿಗೆ ವಾಸಿಸಲು ಮನೆಯಿಲ್ಲ. ಆರ್ಥಿಕ ಸಂಪನ್ಮೂಲಗಳಿಲ್ಲ. ಕೇವಲ ತಮ್ಮ ಕಸುಬಿನ ಆಧಾರದಿಂದಲೇ ಬದುಕುತ್ತಿದ್ದಾರೆ. ಇವರು ತಲೆ ತಲಾಂತರವಾಗಿ ನಂಬಿಕೊಂಡು ಬಂದಿರುವ ವೃತ್ತಿ ಕುಲಕಸುಬುಗಳಿಗೆ ಬೆಲೆಯಿಲ್ಲದಂತಾಗಿದೆ. ಸಾಕ್ಷರರ ಕೊರತೆಯಿಂದಾಗಿ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕುಂಠಿತಗೊಂಡಿದೆ. ಆರ್ಥಿಕ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಅತೀ ಹಿಂದುಳಿದಿರುವಂತಹ ಈ ಸಮುದಾಯಕ್ಕೆ ಅಭಿವೃದ್ಧಿ ಹೊಂದುವುದೇ ಒಂದು ಜ್ವಲಂತ ಸಮಸ್ಯೆಯಾಗಿದೆ. ಮಕ್ಕಳು ಶಿಕ್ಷಣವಿಲ್ಲದೇ, ಕುಲಕಸುಬನ್ನೇ ಮುಂದುವರೆಸಿಕೊಂಡು ಕುಟುಂಬ ನಿರ್ವಹಣೆಗೆ ಸಹಾಯ ಮಾಡುತ್ತಿದ್ದಾರೆ. ಶಿಕ್ಷಣ ಪಡೆಯಬೇಕಾದರೆ ಶಾಲಾ ಕಾಲೇಜುಗಳಲ್ಲಿ ಶುಲ್ಕ ಕೇಳುತ್ತಿರುವದರಿಂದ ಶಿಕ್ಷಣವೂ ಇಲ್ಲದಂತಾಗಿದೆ. ಕೆಲವೊಂದು ಪ್ರಸಂಗಗಳಲ್ಲಿ ಸಾರ್ವಜನಿಕವಾಗಿಯೂ ಸಮಸ್ಯೆಗಳನ್ನು ಎದುರಿಸಿರುವ ಸಂದರ್ಭಗಳೂ ಇವೆ.

ಹೀಗೆ ಮನುಷ್ಯರಾಗಿದ್ದರೂ ಪ್ರಾಣಿಗಳಂತೆ ಬದುಕುತ್ತಿರುವ ಅಲೆಮಾರಿ ಜನಾಂಗದವರ ಸಮಸ್ಯೆಗಳ ಬಗ್ಗೆ ಕಾರ್ಯಕ್ಷೇತ್ರದ ಸಮಯದಲ್ಲಿ ಕೂಲಂಕುಷ ಅಧ್ಯಯನ ಮಾಡಿ, ವಿವಿಧ ಕ್ಷೇತ್ರಗಳಲ್ಲಿ ಅವರ ಹಿಂದುಳಿದಿರುವಿಕೆಯ ಕಾರಣಗಳನ್ನು ಕುರಿತು ಸಂಶೋಧನಾ ವಿಶ್ಲೇಷಣೆ ಮಾಡಿದ್ದೇನೆ.

ಅಲೆಮಾರಿಗಳ ಆರ್ಥಿಕ ಸಮಸ್ಯೆಗಳು :

ಅಲೆಮಾರಿಗಳು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಹೀಗಾಗಿ ಇವರು ಆಧುನಿಕ

ಉದ್ಯೋಗಗಳಿಂದ ವಂಚಿತರಾಗಿದ್ದಾರೆ. ಮೂಲವೃತ್ತಿ ಧಾರ್ಮಿಕ ಭಿಕ್ಷಾಟನೆಗೆ ಬೆನ್ನು ಹತ್ತಿ ತಾತ್ಕಾಲಿಕ ಸುಖವನ್ನು ಕಾಣುತ್ತಾ ಮಕ್ಕಳ ಭವಿಷ್ಯದ ಬಗೆಗೆ ಚಿಂತನೆ ಇಲ್ಲದಿರುವುದು ಶಾಪವಾಗಿದೆ. ಹೀಗಾಗಿ ಅಲೆಮಾರಿಗಳು ಹಳ್ಳಿ ಹಾಗೂ ನಗರಗಳಲ್ಲಿ ಸಣ್ಣ ಗುಡಿಸಲು ಹಾಕಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇವರ ಆರ್ಥಿಕತೆ ಸುಧಾರಿಸಲು ಸಾಧ್ಯವಿಲ್ಲದ್ದಾಗಿದೆ. ಕೇಂದ್ರ ಸರಕಾರವಾಗಲೀ, ರಾಜ್ಯ ಸರಕಾರವಾಗಲೀ, ಇವರ ಅಭಿವೃದ್ಧಿಗೆ ಗಮನ ನೀಡಿದೇ ಇರುವುದೂ ಸಹ ಇವರ ಹಿಂದುಳಿಯುವಿಕೆಗೆ ಮುಖ್ಯ ಕಾರಣವಾಗಿದೆ.

ಇವರಲ್ಲಿ ದುಡಿದು ತಿನ್ನುವ ಛಲವಿಲ್ಲದೇ ಇರುವುದರಿಂದ ಕೇವಲ ಭಿಕ್ಷೆಯನ್ನು ಅವಲಂಬಿಸಿರುವುದರಿಂದ ಮತ್ತು ಮೇಲಾಗಿ ಒಂದೇ ಕಡೆ ನೆಲೆ ನಿಲ್ಲದೇ ಅಲೆದಾಡುತ್ತಿರುವದರಿಂದ ಇವರು ಆರ್ಥಿಕ ಸದೃಢತೆಯನ್ನು ಹೊಂದಿಲ್ಲ. ಅಪ್ಪ ಹಾಕಿದ ಆಲದ ಮರ ಎನ್ನುವ ನಂಬಿಕೆಗೆ ಜೋತು ಬಿದ್ದಿರುವ ಈ ಅಲೆಮಾರಿ ಜನಾಂಗದವರು ಅದೇ ಹಳೆಯ ಕಾಲದ ಲಾಭರಹಿತ ಮತ್ತು ಸಮಯ ಪೋಲಾಗುವ ಉದ್ಯೋಗಕ್ಕೆ ಗಂಟು ಬಿದ್ದಿರುವುದರಿಂದ ಒಂದು ಹೊತ್ತಿನ ಊಟಕ್ಕೂ ಪರದಾಡಬೇಕಾಗಿದೆ. ಕೌದಿ ಹೊಲೆಯುವುದು, ಪೊರಕೆ, ದಾರ, ಪಿನ್ನು ಮಾರಾಟ ಮಾಡುವುದು ಇವರ ಕಸುಬುಗಳಾಗಿರುವುದರಿಂದ ಇವರು ಆರ್ಥಿಕ ಸುಭದ್ರತೆ ಹೊಂದಲು ಸಾಧ್ಯವಿಲ್ಲ. ಇವರಿಗೆ ವ್ಯವಸಾಯದ ಭೂಮಿಯಿಲ್ಲ. ಮೈತುಂಬಾ ಬಟ್ಟೆಯಿಲ್ಲ. ಭಿಕ್ಷೆಗೆ ಬಂದಿರುವ ಹಳೆಯ ಬಟ್ಟೆಗಳನ್ನೇ ಉಪಯೋಗಿಸುತ್ತಾರೆ. ಏನಾದರೂ ಸಣ್ಣ ಪ್ರಮಾಣದಲ್ಲಿ ವ್ಯಾಪಾರ ಮಾಡಬೇಕೆಂದರೆ ಅವರ ಕೈಯಲ್ಲಿ ಹಣವಿರುವುದಿಲ್ಲ. ಹೀಗಾಗಿ ಅವರ ಆರ್ಥಿಕ ಸ್ಥಿತಿ ತೀರಾ ದುರ್ಬಲ ಹಾಗೂ ಕೆಳಮಟ್ಟದಲ್ಲಿದೆ.

ಈಗಲೂ ಬಹುತೇಕ ಅಲೆಮಾರಿಗಳು ಯಾವ ವಿಧವಾದ ವಾಣಿಜ್ಯ ವ್ಯವಹಾರಗಳನ್ನಾಗಲೀ, ಕೈ ಕಸುಬುಗಳನ್ನಾಗಲೀ ಮಾಡುವುದು ಕಂಡು ಬಂದಿಲ್ಲ. ಇನ್ನು ವ್ಯವಸಾಯ, ಪಶುಪಾಲನೆ ಇವರಿಂದ ದೂರವಾಗಿಯೇ ಉಳಿದಿವೆ. ಭೂಮಿ ಇರುವ ಇವರಲ್ಲಿನ ಒಬ್ಬಿಬ್ಬರು ಬಿತ್ತನೆ ಹಾಗೂ ಕೊಯ್ಲು ಸಮಯದಲ್ಲಿ ಇದ್ದು ಉಳಿದ ಕಾಲದಲ್ಲಿ ತಮ್ಮ ಮೂಲ ಕಸುಬಾದ ಭಿಕ್ಷಾಟನೆ ಮತ್ತು ವೇಷ ಧರಿಸುವ ಕಾಯಕದಲ್ಲೇ ನಿರತರಾಗಿರುತ್ತಾರೆ.

ಮೊದಲೇ ಅಲೆಮಾರಿಗಳ ಆರ್ಥಿಕ ಸ್ಥಿತಿಗತಿ ಅಷ್ಟಕಷ್ಟೇ. ಹಣ ಹೊನ್ನುಗಳು ಮೊದಲಿನಿಂದಲೂ ಇವರಿಗೆ ದೂರ. ಆದರೆ ಈ ಹಿಂದೆ ಇವರ ಹೊಟ್ಟೆಗೆ-ಬಟ್ಟೆಗೆ ಬೇಕಾದಷ್ಟು ದವಸಧಾನ್ಯ ಸಿಗುತ್ತಿತ್ತು. ಆಗ ಇವರ ಕಲೆಗೆ ಪ್ರೋತ್ಸಾಹವಿತ್ತು. ದೇವಿಗೆ ಅಂದಿನ ಜನ ಹೊಸ ಹೊಸ ಸೀರೆ, ಕುಪ್ಪಸಗಳನ್ನು ಕೊಡುತ್ತಿದ್ದರು. ಹರಕೆ ಹೊತ್ತವು ತಾಯಿಗೆ (ದೇವಿ) ಬೆಳ್ಳಿಯ ತೊಟ್ಟಿಲು, ಬಟ್ಟಲು, ಬೆಳ್ಳಿ ಕಣ್ಣು ಬಟ್ಟಲು, ಬೆಳ್ಳಿ ಡಾಬು,

ಬೆಳ್ಳಿ ಪಾದ, ಕಾಲುಂಗುರು, ಮುತ್ತಿನನ ನತ್ತು, ಮುತ್ತಿನ ಉಡಿಯಕ್ಕಿ ಮೊದಲಾದವುಗಳನ್ನು ಹಾಕುತ್ತಿದ್ದರು. ಪೋತ್ರಾನಿಗೆ ಟೊಂಕಕ್ಕೆ ಗಂಟೆ ಸರ, ಪೋಚಮ್ಮನಿಗೆ ತಮ್ಮ ಹಳೆಯ ಸೀರೆಗಳನ್ನು ದಾನ ಮಾಡುತ್ತಿದ್ದರು. ಹೀಗಾಗಿ ಈ ಮಂದಿ ದುಡ್ಡು ಕೊಟ್ಟು ಏನನ್ನೂ ಕೊಂಡುಕೊಳ್ಳುವ ಪ್ರಶ್ನೆಯೇ ಬರುತ್ತಿರಲಿಲ್ಲ. ಒಂದು ರೀತಿಯಿಂದ ಇವರು ಅಂದು ಅರಾಮವಾಗಿದ್ದರು. ನಿಶ್ಚಿಂತೆಯಿಂದ ದಿನಗಳನ್ನು ಯಾವುದೇ ಕಷ್ಟ ಪಡದ ಕೆಲಸವಿಲ್ಲದೆ ಕಳೆಯುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಜನರಲ್ಲಿ ಭಕ್ತಿ ಭಾವ, ದಾನ, ಧರ್ಮದಂತಹ ಮನೋಭಾವನೆಗಳು ಕಾಣೆಯಾಗಿವೆ. ಅಲೆಮಾರಿಗಳನ್ನು ಕೇವಲ ಭಿಕ್ಷುಕರಂತೆ ಕಾಣುತ್ತಿರುವ ಜನಸಮುದಾಯಕ್ಕೆ ಅವರ ಬಗ್ಗೆ ಒಂದಿನಿತೂ ಕಾಳಜಿ, ಕರುಣೆ ಇಲ್ಲ. ಅವರ ಕಲೆಗೆ ಪ್ರೋತ್ಸಾಹ ನೀಡುವ ಮಾತಂತೂ ದೂರ ಉಳಿಯಿತು. ಅವರಿಗೆ ಭಿಕ್ಷೆಯಾಗಲೀ, ಆಹಾರವಾಗಲೀ ಹಾಕುವುದೇ ಇಲ್ಲ. ಅವರು ಬಂದಾರೆಂದರೆ ಬಾಗಿಲನ್ನು ಹಾಕಿಕೊಂಡು ಹೋಗುವ ಜನರೂ ಇಂದು ಇದ್ದಾರೆ. ಅಂದಿನ ಪೂಜ್ಯ ಭಕ್ತಿ ಭಾವದ ನಂಬಿಕೆಗಳು ಜನರಲ್ಲಿ ಇಲ್ಲವಾದ್ದರಿಂದ, ಕೇವಲ ಭಿಕ್ಷಾಟನೆಯನ್ನೇ ಪ್ರಮುಖ ವೃತ್ತಿಯಾಗಿಸಿಕೊಂಡ ಅಲೆಮಾರಿಗಳ ಸ್ಥಿತಿ ಅತ್ಯಂತ ದಯನೀಯವಾಗಿದೆ.

ಅಲೆಮಾರಿಗಳ ಸಾಮಾಜಿಕ ಸಮಸ್ಯೆಗಳು :

ಅಲೆಮಾರಿಗಳು ಇಂದಿನವರೆಗೂ ಅನೇಕ ಮಾನಸಿಕ ನೋವನ್ನು ಅನುಭವಿಸುತ್ತಿದ್ದಾರೆ. ಇವರಿಗೆ ಇತರೆ ಸಮಾಜದವರಂತೆ ಮುಕ್ತವಾಗಿ ಬದುಕು ಸಾಗಿಸಲು ಸಾಧ್ಯವಾಗುತ್ತಿಲ್ಲ. ನಮ್ಮ ಸಮಾಜದ ಜಾತಿ ವ್ಯವಸ್ಥೆಯು ಇವರು ಸಮಾಜಮುಖಿಯಾದಿರಲು ಕಾರಣವಾಗಿದೆ. ಇವರು ಇಂದಿಗೂ ಅಸಮಾನತೆ, ಅಸ್ಪೃಶ್ಯತೆಯ ನೋವುಗಳನ್ನು ಅನುಭವಿಸುತ್ತಿದ್ದಾರೆ. ಒಳಗೊಳಗೆ ಸಾಮಾಜಿಕ ಹಿಂದುಳಿವಿಕೆ ಅವರಿಗೆ ಬಹಳಷ್ಟು ನೋವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಅನ್ಯ ಸಮಾಜದ ಜನರು ಇಂತಹ ಅಲೆಮಾರಿ ಜನಾಂಗದವರಿಂದ ಕೇವಲ ಮನರಂಜನೆಯನ್ನು ಪಡೆಯುತ್ತಾರೆಯೇ ಹೊರತು ಅವರನ್ನು ಮನುಷ್ಯರೆಂಬ ಮನೋಭಾವನೆಯನ್ನು ಇಟ್ಟುಕೊಂಡು ಗಮನಿಸುವುದಿಲ್ಲ.

ಅಲೆಮಾರಿಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿರಲು ಅವರ ಅಲೆಮಾರಿ ಜೀವನವೂ ಒಂದು ಕಾರಣವಾಗಿದೆ ಎನ್ನಬಹುದು. ಇವರು ಸಮಾಜದ, ಊರಿನ ಮಧ್ಯೆದಲ್ಲಿರದೇ, ಊರಾಚೆ ಪ್ರಾಣಿಗಳಂತೆ ಕೇವಲ ಸಣ್ಣ ಸಣ್ಣ ಗುಡಿಸಲುಗಳಲ್ಲಿ, ಗುಡಾರಗಳಲ್ಲಿ ವಾಸ ಮಾಡುತ್ತಾರೆ. ಇವರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ನಾವು ಕಾಣುವುದಿಲ್ಲ. ಸದಾಕಾಲ ಅಲೆದಾಡುತ್ತ ಬದುಕು ಸಾಗಿಸುತ್ತಿರುವ ಇವರಿಗೆ ಜನಜಾಗೃತಿ ಮತ್ತು ಆಕಾಂಕ್ಷೆಗಳೇ ಇಲ್ಲ. ಆದ್ದರಿಂದ ಇವರು ಸಾಮಾಜಿಕವಾಗಿ ಹಿನ್ನಡೆ

ಅನುಭವಿಸುತ್ತಿದ್ದಾರೆ.

ಅಲೆಮಾರಿ ಜನಾಂಗದವರದು ಮುಖ್ಯವಾಗಿ ಊಳಿಗಮಾನ್ಯ ಪದ್ಧತಿ. ಇವರ ಬಡಿದಾಟ ಏನಿದ್ದರೂ ಒಡೆಯನ ಸುಖಕ್ಕಾಗಿ. ಮಾಲೀಕನ ಹಿತಕ್ಕಾಗಿ. ಒಡೆಯನಿಗಾಗಿಯೇ ಇವರ ಬದುಕು. ಇವರಿಗೆ ಸ್ವಂತ ಆಸೆಗಳು, ಬಯಕೆಗಳು ಇಲ್ಲದೇ ಸ್ವಂತ ಸುಖದ ಕಲ್ಪನೆಯೂ ಇಲ್ಲದೇ, ಸ್ವಂತ ಕನಸುಗಳೂ ಇಲ್ಲದೇ, ಇನ್ನೊಬ್ಬರ ಹಿತಕ್ಕಾಗಿ ಬದುಕಿದವರಂತೆ ಜೀವಿಸುತ್ತಿದ್ದಾರೆ. ಇವರ ಶ್ರಮ, ಕುಣಿತ, ದುಡಿತವೆಲ್ಲವೂ ಯಜಮಾನನಿಗೇ ಮೀಸಲು. ಅವರು ಹೇಳಿದ್ದಷ್ಟೇ ಹೇಳಿದ ಹಾಗೆ ಮಾಡುವರು. ಸ್ವಂತ ಬುದ್ಧಿ ಜ್ಞಾನ ಉಪಯೋಗಿಸುವುದಿಲ್ಲ. ತಾನು ಅತ್ತು ತನ್ನ ಮೈತುಂಬಾ ರಕ್ತ ಹರಿಸಿಕೊಂಡು ಇನ್ನೊಬ್ಬರನ್ನು ನಗಿಸುವುದೇ, ಇನ್ನೊಬ್ಬರಿಗೆ ಮನರಂಜನೆ ನೀಡುವುದೇ ಅಲೆಮಾರಿಗಳ ಬದುಕಾಗಿದೆ.

ಅಂದು ಇವರ ಕಲೆಗೆ ಸಮಾಜದಲ್ಲಿ ಬಹಳಷ್ಟು ಪ್ರೋತ್ಸಾಹವಿತ್ತು, ಅಲೆಮಾರಿಗಳ ಕಲೆಗೆ, ಭಾಷೆಗೆ, ಸಾಹಿತ್ಯಕ್ಕೆ, ಅವರ ಪ್ರದರ್ಶನಕ್ಕೆ ಎಲ್ಲಿಲ್ಲದ ಉತ್ಸಾಹವನ್ನು ಜನತೆ ತೋರಿಸುತ್ತಿದ್ದರು. ಆದರೆ ಇಂದು ಆಧುನಿಕ ಜಗತ್ತಿನ ದೂರದರ್ಶನ, ರೇಡಿಯೋ, ಕಂಪ್ಯೂಟರ್, ಸಿನಿಮಾಗಳ ಹಾವಳಿಯಲ್ಲಿ ಇವರ ಕಲೆಯನ್ನು, ಪ್ರದರ್ಶನವನ್ನು ನೋಡುವವರಿಲ್ಲ, ಕೇಳುವವರೂ ಇಲ್ಲದಂತಾಗಿದೆ. ಹೀಗಾಗಿ ಇವರ ಸಾಮಾಜಿಕ ಕುಸಿತಕ್ಕೆ ಕಾರಣವಾಗಿದೆ.

ಅಲೆಮಾರಿಗಳು ಸಾಮಾನ್ಯವಾಗಿ ಹಿಂದುಳಿದವರು. ಆಧುನಿಕತೆ ಸೆರಗಿನಿಂದ ಬಹಳ ದೂರ ಉಳಿದಿರುವ ಇವರು ಹೊಸದನ್ನು ಮೈಗೂಡಿಸಿಕೊಳ್ಳದ, ಹೊಸತಕ್ಕೆ ಒಗ್ಗದ ಹಿಂಜರಿಕೆಯ ಹಾಗೂ ಹಿಂದುಳಿದ ಜನರು. ಆಧುನಿಕತೆಯ ಗಾಳಿಯೇ ಇವರಿಗೆ ಸೋಂಕಿದಂತಿಲ್ಲ. ಹೀಗಾಗಿ ಅಲೆಮಾರಿಗಳು ಸರ್ವರಂಗದಲ್ಲಿಯೂ, ಸರ್ವ ವಿಧದಲ್ಲಿಯೂ ಬಹಳಷ್ಟು ಹಿಂದುಳಿದಿದ್ದಾರೆ.

ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ :

ಅಲೆಮಾರಿ ಜನಾಂಗದವರಲ್ಲಿ ಶಿಕ್ಷಣ ಪಡೆಯಲು ಯೋಗ್ಯರಾದವ ಸಂಖ್ಯೆ ಶೇಕಡಾ ೮೦ ಇದ್ದರೂ ಸಾಕ್ಷರರ ಪ್ರಮಾಣ ಇವರಲ್ಲಿ ಬಹಳಷ್ಟು ಕಡಿಮೆ ಇದೆ. ಮಹಿಳೆಯರ ಸಾಕ್ಷರತೆಯ ಪ್ರಮಾಣ ಅಲೆಮಾರಿ ಜನಾಂಗದವರಲ್ಲಿ ಬಹಳಷ್ಟು ಕಡಿಮೆ ಇರುವುದೂ ಸಹ ಇವರ ಹಿಂದುಳಿದಿರುವಿಕೆಗೆ ಪ್ರಮುಖ ಕಾರಣವೆನ್ನಬಹುದು. ಏಕೆಂದರೆ ಸುಶಿಕ್ಷಿತ ಮಹಿಳೆಯು ಕುಟುಂಬವನ್ನು ಉನ್ನತ ನೆಲೆಯ ಕಡೆಗೆ ಒಯ್ಯಬಹುದು. ಆದರೆ ಈ ಅಲೆಮಾರಿಗಳಲ್ಲಿ ಸುಶಿಕ್ಷತೆಯೂ ಇಲ್ಲ, ಜಾಗೃತಿಯೂ ಇಲ್ಲ, ಬರೀ ಅಲೆಮಾರಿ ಬದುಕು ಮತ್ತು ಭಿಕ್ಷೆ ಎರಡಕ್ಕೇ ತಮ್ಮ ಜೀವನವನ್ನು ಮೀಸಲಾಗಿರಿಸಿದ್ದಾರೆ.

ಶಿಕ್ಷಣ ಎಂಬುದರ ಪರಿಕಲ್ಪನೆಯೂ ಇಲ್ಲದ ಅಲೆಮಾರಿ ಜನಾಂಗದವರು ಇಂದಿಗೂ ಇದ್ದಾರೆ. ಬರೀ ಕಾಡು, ಮೇಡುಗಳಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ ತಿರುಗಿ ತಮ್ಮ ಬದುಕು ಕಳೆಯುತ್ತಿರುವ ಇವರಿಗೆ ಶಿಕ್ಷಣ ಇಲ್ಲದ ಕಾರಣ ಸ್ವಂತ ನಿಲುವು, ಬುದ್ಧಿ, ಜ್ಞಾನ, ಜಾಗೃತಿಗಳಾವುವೂ ಇಲ್ಲದೇ ಪ್ರಾಣಿಗಳಂತೆ ಬದುಕುತ್ತಿದ್ದಾರೆ.

ಅಲೆಮಾರಿಗಳಲ್ಲಿ ಒಬ್ಬರಾಗಿರುವ ಹಗಲುವೇಷಗಾರರ ಸಮುದಾಯದಲ್ಲಿ ಇದುವರೆಗೂ ಒಬ್ಬನೇ ಒಬ್ಬ ಪದವೀಧರನೂ ಸಿಕ್ಕಿಲ್ಲವಂತೆ. ಪಿ.ಯು.ಸಿ. ಮಾಡಿಕೊಂಡು ವೈರ್‌ಲೆಸ್ ಆಪರೇಟರ್ ಆಗಿ ಕೆಲಸ ಮಾಡುತ್ತಿರುವ ಒಬ್ಬನೇ ಒಬ್ಬ ವಿದ್ಯಾವಂತ ಕರ್ನಾಟಕ ರಾಜ್ಯದಲ್ಲಿ ಕಂಡು ಬಂದಿದ್ದಾನಂತೆ. ಈಗಲೂ ಇವರ ಚಿಕ್ಕ ಮಕ್ಕಳು ಶಾಲೆಗೆ ಹೋಗುತ್ತಿಲ್ಲ.

ಕರ್ನಾಟಕ ಸರಕಾರದ ಸೇವೆಗಳಲ್ಲಿ ಅಲೆಮಾರಿಗಳ ಪ್ರಾತಿನಿಧ್ಯ ಅತ್ಯಂತ ಕಡಿಮೆ. ಏಕೆಂದರೆ ಸರಕಾರಿ ಕೆಲಸಗಳಲ್ಲಿ ಸೇವೆ ಮಾಡಲು ಬೇಕಾದ ಅರ್ಹತೆ ಶಿಕ್ಷಣ. ಆ ಶಿಕ್ಷಣವೇ ಅಲೆಮಾರಿಗಳ ಪಾಲಿಗೆ ಕಬ್ಬಿಣದ ಕಡಲೆಯಾಗಿರುವದರಿಂದ ಅವರಿಗೆ ನೌಕರಿಯ ಮಾತು ಬಹಳಷ್ಟು ದೂರವಾಗಿ ಉಳಿದಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಅಲೆಮಾರಿಗಳ ರಾಜಕೀಯ ಸ್ಥಿತಿಗತಿ :

ಅಲೆಮಾರಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬದಲಾಗುತ್ತ ಹೋಗುತ್ತರಾದ್ದರಿಂದ, ಭಿಕ್ಷಾಟನೆಯೇ ಇವರ ಮೂಲ ಉದ್ಯೋಗವಾಗಿರುವುದರಿಂದ, ನೆಲೆ ಕಾಣದೇ ಚಿಕ್ಕ ಚಿಕ್ಕ ನೆಲೆಗಳಲ್ಲೆಲ್ಲ ಸಂಚರಿಸುತ್ತಾರಾದ್ದರಿಂದ ಇವರಲ್ಲಿ ಎಷ್ಟೋ ಜನ ಇನ್ನೂ ಮತಚಲಾವಣೆಯ ಮಾಡಲು ಸಾಧ್ಯವೇ ಆಗಿಲ್ಲ. ಏಕೆಂದರೆ ಮತದಾರರ ಪಟ್ಟಿಯಲ್ಲಿಯೇ ಇವರ ಹೆಸರುಗಳು ಇರುವುದಿಲ್ಲ. ಅಲೆಮಾರಿಗಳಿಗೆ ದೇಶ, ಪ್ರಜೆ, ಕಾನೂನು, ಸಂವಿಧಾನ, ರಾಜಕೀಯ ವ್ಯವಸ್ಥೆ, ರಾಜ್ಯ-ರಾಷ್ಟ್ರ ಒಕ್ಕೂಟ, ಪ್ರಜಾಪ್ರಭುತ್ವ ಹೀಗೆ ಯಾವುದೊಂದರ ಪರಿವೆಯೂ ಇಲ್ಲದೇ ತಮ್ಮದೇ ಆದ ಕಾನೂನು ಮತ್ತು ಅಲೆಮಾರಿ ಬದುಕಿನ ಸಂವಿಧಾನದಲ್ಲಿಯೇ ಮುಳುಗಿದ್ದಾರೆ.

ಸರಕಾರಿ ಸೌಲಭ್ಯಗಳ ಕೊರತೆ:

ಅಲೆಮಾರಿಗಳ ಬದುಕು ಕೇವಲ ಭಿಕ್ಷೆಯಿಂದ ಹೊಟ್ಟೆಗೆ ಮತ್ತು ಹರಕು ಬಟ್ಟೆಗೆ ಮಾತ್ರ ಸೀಮಿತವಾಗಿರುವುದರಿಂದ ಅವರಲ್ಲಿ ಆಧುನಿಕತೆಯ ಸೆರಗೇ ಇಲ್ಲದಿರುವುದರಿಂದ ಸರಕಾರದ ಸೌಲಭ್ಯಗಳ

ಬಗ್ಗೆ ಅವರಿಗೆ ಅರಿವು ಇಲ್ಲವೇ ಇಲ್ಲ. ಮೊದಲನೆಯದಾಗಿ ಸರಕಾರ ಅಂದರೇನೇ ಅವರಿಗೆ ಗೊತ್ತಿಲ್ಲ. ಆದ್ದರಿಂದ ಇವರಿಗೆ ಸರಕಾರ, ಸರಕಾರದ ಯೋಜನೆಗಳು, ಸರಕಾರದ ಸೌಲಭ್ಯಗಳು ಹೆಚ್ಚಾಗಿ ದೊರಕುವುದೇ ಇಲ್ಲ. ಯಾರೂ ಈ ಬಗ್ಗೆ ಅಲೆಮಾರಿ ಜನಾಂಗದವರಿಗೆ ತಿಳುವಳಿಕೆ ನೀಡುವ ಗೋಜಿಗೂ ಹೋಗಿಲ್ಲ.

ವಸತಿ ಸಮಸ್ಯೆ ಮತ್ತು ಇನ್ನಿತರ ಮೂಲಭೂತ ವಸ್ತುಗಳ ಕೊರತೆ :

ಮನುಷ್ಯನಾದವನು ಕನಿಷ್ಟ ಮೂಲಭೂತ ಸೌಕರ್ಯಗಳನ್ನಾದೂ ತನ್ನ ಬದುಕಿನಲ್ಲಿ ಹೊಂದಿರಬೇಕು. ವಸತಿ, ಆಹಾರ ಮತ್ತು ಒಂದು ವ್ಯವಸ್ಥಿತವಾದ ಚೌಕಟ್ಟಿನಲ್ಲಿ ಜೀವನ ಸಾಗಿಸುತ್ತಿರಬೇಕು. ಅಂದಾಗ ಮಾತ್ರ ವ್ಯಕ್ತಿ ಅಥವಾ ಸಮುದಾಯ ಸಮಾಜಮುಖಿಯಾಗಬಲ್ಲದು. ಆದರೆ ಅಲೆಮಾರಿಗಳಲ್ಲಿ ಅದ್ಯಾವುದರ ಪರಿವೆಯೇ ಇಲ್ಲ. ತನ್ನದೆಂದು ಹೇಳಿಕೊಳ್ಳುವ ಒಂದು ಸಣ್ಣ ಮನೆಯೂ ಇವರಿಗಿಲ್ಲ, ಅದ್ಯಾರದೋ ಜಾಗೆಯಲ್ಲಿ, ಅದೆಲ್ಲಿಯೋ ಊರ ಹೊರಗೋ, ಊರಿಂದ ಎಷ್ಟೋ ದೂರದವರೆಗೋ, ಜನ ಬದುಕಿಗೆ ದೂರವಾದ ಸ್ಥಳದಲ್ಲಿ ತಾತ್ಕಾಲಿಕವಾದ ಗುಡಾರಗಳನ್ನು ಹಾಕಿಕೊಂಡಿರುತ್ತಾರೆ.

ಇಂತಹ ಗುಡಾರಗಳು ಜನರ ವಸತಿಗೆ ಯೋಗ್ಯವಾದುವಲ್ಲ. ಇನ್ನೆಷ್ಟು ದಿನ ಅಲೆಮಾರಿಗಳು ಈ ರೀತಿ ಅಲೆದು, ಅಲೆದು ಬದುಕಬೇಕು ಎಂಬ ಪ್ರಶ್ನೆ ಮೂಡುತ್ತದೆ. ಅಲೆಮಾರಿಗಳ ಬದುಕು ನಿಂತ ನೀರಲ್ಲ, ಇವರದು ಸದಾಕಾಲ ಚಲಿಸುವ ಬದುಕಾಗಿರುವುದರಿಂದ ಅದೆಷ್ಟು ದಿನ ಮತ್ತೆ ಅವರು ತಿರುಗಬೇಕೆಂಬ ಜಾಗೃತಿ ಅವರಲ್ಲಿ ಬಂದರೆ ಆಗಲಾದರೂ ಒಂದು ಕಡೆ ನೆಲೆಯೂರಿ, ನೆಲವೂರಿ ಬದುಕಲು ಸಾಧ್ಯವಾಗಬಹುದು.

ಪಡಿತರ ಚೀಟಿ :

ಸರಕಾರದ ಸವಲತ್ತುಗಳಲ್ಲಿ ಆಹಾರ ಭದ್ರತೆಗೆ ಸಂಬಂಧಿಸಿದಂತೆ ಕಡು ಬಡವರಿಗೆ ಪಡಿತರ ಚೀಟಿ ನೀಡುವುದು ಒಂದು. ಇಂದಿನವರೆಗೂ ಅಲೆಮಾರಿ ಜನಾಂಗದವರಲ್ಲಿ ಈ ಚೀಟಿ ಪಡೆಯದೇ ಇರುವ ಕುಟುಂಬಗಳು ಶೇಕಡಾ ೮೦ ರಷ್ಟಿವೆ. ಬಹುಶಃ ಅಲೆಮಾರಿತನ ಮತ್ತು ಭಿಕ್ಷಾಟನೆಯನ್ನೇ ನೆಚ್ಚಿಕೊಂಡಿದ್ದ ಅಲೆಮಾರಿಗಳಿಗೆ ಪಡಿತರ ಚೀಟಿ ತಮಗೆ ಅವಶ್ಯವಿಲ್ಲವೆಂದೇ ಭಾವಿಸಿದರೋ ಅತವಾ ಆ ಕುರಿತಾದ ತಿಳುವಳಿಕೆ ಅವರಿಗೆ ಇಲ್ಲವೋ, ಒಟ್ಟಾರೆಯಾಗಿ ಪಡಿತರ ಚೀಟಿಗಳನ್ನು ಅಲೆಮಾರಿ ಜನಾಂಗದವರು ಇತ್ತೀಚಿನವರೆಗೂ ಹೊಂದಿರಲಿಲ್ಲವೆಂಬ ಅಂಶವು ತಿಳಿದು ಬರುತ್ತದೆ.

ಸಂಘಟನಾ ಸಮಸ್ಯೆ :

ಅಲೆಮಾರಿಗಳು ಎದುರಿಸುತ್ತಿರುವ ಜ್ವಲಂತ ಹಾಗೂ ಮತ್ತೊಂದು ಸಾಮಾನ್ಯ ಸಮಸ್ಯೆ ಎಂದರೆ ಉತ್ತಮ ಸಂಘಟನೆ ಇಲ್ಲದಿರುವುದು. ಒಂದು ಸಮುದಾಯದ ಪ್ರಗತಿಯು ಆ ಸಂಘಟನೆಯ ಆಧಾರದ ಮೇಲೆ ನಿಂತಿರುತ್ತದೆ. ಇದು ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಹುಡುಕು ಪ್ರಯತ್ನಿಸುವದು. ಅನೇಕ ಸಮುದಾಯಗಳು ಕೊಳಚೆ ಪ್ರದೇಶಗಳಲ್ಲಿ, ಯಾವುದೇ ಸೌಲಭ್ಯಗಳಿಲ್ಲದ ಸ್ಥಳಗಳಲ್ಲಿ, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ.

ಭಾರತೀಯ ಪ್ರಜಾತಂತ್ರದ ೬ ನೇ ದಶಕದಲ್ಲಿಯೂ ಅಲೆಮಾರಿ ಜನಾಂಗದ ಬಹುತೇಕರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸಾಧಿಸಿರುವುದು ಶೂನ್ಯ ಸಮಾನ ಎಂದರೆ ಆಚ್ಚರಿ ಪಡಬೇಕಾಗಿಲ್ಲ. ಇದು ವಾಸ್ತವದ ಕಟು ಸತ್ಯ. ಇಂದಿಗೂ ಬದುಕಿಗಾಗಿ ಅಲೆಮಾರಿಯ ಜೀವನ ಇವರಿಗೆ ತಪ್ಪಿಲ್ಲ. ಬಹು ಸಂಖ್ಯಾತರು ಗುಡಾರಗಳಲ್ಲಿ ವಾಸಿಸುತ್ತಿದ್ದಾರೆ. ಭಿಕ್ಷಾವೃತ್ತಿಯಿಂದ ಅವಮಾನ ಮತ್ತು ಅತಂತ್ರದ ಬದುಕು ನಡೆಸುತ್ತಿದ್ದಾರೆ. ಭಾರತದ ಮೂಲ ನಿವಾಸಿಗಳಾದರೂ ಭಾರತದ ಎರಡನೆಯ ದರ್ಜೆಯ ಪ್ರಜೆಗಳಂತೆ ಕಡೆಗಣಿಸಲ್ಪಟ್ಟಿದ್ದಾರೆ. ಇದಿ ಬದುಕು, ಜೀವನವನ್ನು ಧಾರ್ಮಿಕ ಭಿಕ್ಷಾವೃತ್ತಿಯಿಂದ ಕಾಲ ಕಳೆಯುತ್ತಿದ್ದಾರೆ. ಇಂದು ಇತರ ಸಮಾಜಗಳಿಗೆ ಮತ್ತು ಸರಕಾರಕ್ಕೆ ಅಲೆಮಾರಿ ಜನಾಂಗದ ಧಾರ್ಮಿಕ ಭಿಕ್ಷಾವೃತ್ತಿ, ಕುಲ ಕಸುಬುಗಳು ಬೇಡವಾಗಿವೆ. ಇದರಿಂದ ಸಂಪ್ರದಾಯ, ಆಚರಣೆಗಳು ಮಾಯವಾದರೆ ಸಂದೇಹವಿಲ್ಲ.

ಒಟ್ಟಾರೆಯಾಗಿ ಅಲೆಮಾರಿ ಜನಾಂಗದವರು ತಮ್ಮ ಜೀವನೋಪಾಯಕ್ಕಾಗಿ ಒಂದು ಉದ್ಯೋಗ, ಒಂದು ನೆಲೆ ಕಂಡುಕೊಳ್ಳುವವರೆಗೂ ಅವರಿಗೆ ಈ ಎಲ್ಲ ಸ್ತರಗಳ ಸಮಸ್ಯೆಗಳು ಕಾಡುತ್ತಿರುತ್ತವೆ. ಅವರಿಗೆ ಮೊದಲು ಅಕ್ಷರ ಜ್ಞಾನದ ಅವಶ್ಯಕತೆ ಇದೆ. ಇದರಿಂದ ಜಾಗೃತಿ ಮೂಡಿ, ತಾವೂ ಇತರರಂತೆ ಒಂದು ಸ್ವಷ್ಟವಾದ, ಸುಂದರವಾದ ಬದುಕನ್ನು ಕಟ್ಟಿಕೊಳ್ಳಬೇಕೆಂಬ ಮನಸ್ಸು ಬರುತ್ತದೆ. ಆಗ ಅವರು ಉಳಿದ ಜನರಂತೆ, ಜನಾಂಗದವರಂತೆ ಸಮಾಜದಲ್ಲಿ ಮುಂದುವರೆಯಬಹುದು.

ಅಲೆಮಾರಿಗಳ ಸಮಸ್ಯೆಗಳಿಗೆ ಪರಿಹಾರೋಪಾಯಗಳು :

ಊರಿಂದೂರಿಗೆ ಸದಾಕಾಲ ಚಲಿಸುತ್ತ ಅನಿರ್ದಿಷ್ಟ ಹಾಗೂ ಗುರಿ ಇಲ್ಲದ ಜೀವನ ನಡೆಸುತ್ತಿರುವ ಎಲ್ಲ ಅಲೆಮಾರಿ ಜನಾಂಗದವರಿಗೆ ಮೂಲವಾಗಿ ಬೇಕಾದದ್ದು ತಿಳುವಳಿಕೆ, ಜಾಗೃತಿ ಮತ್ತು ಜ್ಞಾನ. ಈ ಎಲ್ಲ ಅಲೆಮಾರಿ ಜನಾಂಗದವರಿಗೆ ಮೊದಲು ದೊರಕಿಸಿಕೊಡಬೇಕಾದ್ದು ಶಿಕ್ಷಣ. ಶಿಕ್ಷಣದಿಂದ ಜಾಗೃತಿ

ಮತ್ತು ಸ್ವಂತಿಕೆ ಎನ್ನುವುದು ಬೆಳೆಯುತ್ತಾದ್ದರಿಂದ ಅಲೆಮಾರಿಗಳಿಗೆ ಶಿಕ್ಷಣದ ವ್ಯವಸ್ಥೆಯನ್ನು ಜರೂರು ಮಾಡಬೇಕಾಗಿದೆ.

ಅಲೆಮಾರಿಗಳ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಹಾಸ್ಟಲ್, ಧನಸಹಾಯದ ಸೌಲಭ್ಯವನ್ನು ನೀಡಬೇಕಾಗಿದೆ.

ಭಿಕ್ಷೆಯಿಂದ ಆಹಾರ ಸೇವನೆ ಮಾಡುತ್ತಿರುವ ಈ ಸಮುದಾಯಕ್ಕೆ ಅಂತ್ಯೋದಯ ಪಡಿತರ ಚೀಟಿಯನ್ನು ಪ್ರತಿಯೊಂದು ಕುಟುಂಬಗಳಿಗೆ ನೀಡಬೇಕಾಗಿದೆ.

ಕರ್ನಾಟಕದಲ್ಲಿ ಇರುವ ಅಲೆಮಾರಿಗಳ ಜನಾಂಗಗಳು ಬಹಳಷ್ಟಿವೆ. ಅವುಗಳ ಅಧ್ಯಯನಕ್ಕಾಗಿ ಒಂದು ಸಮಿತಿ ರಚಿಸಿ, ಅವರನ್ನು ಸಮಾಜಮುಖಿಯನ್ನಾಗಿ ಮಾಡುವ ಪ್ರಯತ್ನ ನಡೆಯಬೇಕಾಗಿದೆ. ಅಲೆಮಾರಿ ಜನಾಂಗದವರ ಎಲ್ಲ ಕುಟುಂಬಗಳಿಗೆ ತಲೆಯ ಮೇಲೊಂದು ಸೂರು ನೀಡಬೇಕಾಗಿದೆ.

ಇವರು ವಾಸಿಸುವ ಪ್ರದೇಶಗಳು ಕತ್ತಲಿನಿಂದ ಕೂಡಿರುತ್ತದೆ ಹಾಗೂ ಆಶ್ರಯ ಮನೆ ಹೊಂದಿದವರಿಗೆ ದೀಪದ ವ್ಯವಸ್ಥೆ ಇರುವುದಿಲ್ಲ. ಭಾಗ್ಯಜ್ಯೋತಿ ದೀಪದ ವ್ಯವಸ್ಥೆ ಕಲ್ಪಿಸಬೇಕಾಗಿದೆ.

ವಸತಿ, ನೀರು, ವಿದ್ಯುತ್, ಶೌಚಾಲಯ, ಸಮುದಾಯ ಭವನ, ಅಂಗನವಾಡಿ ಕೇಂದ್ರ, ಗುಡಾರ ಶಾಲೆ, ಗುಡಾರ ಗ್ರಂಥಾಲಯ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಅಲೆಮಾರಿ ಜನಾಂಗದವರಿಗೆ ಕಲ್ಪಿಸಬೇಕಾದ ಅವಶ್ಯಕತೆ ಇದೆ.

ಇವರನ್ನು ಒಕ್ಕಲೆಬ್ಬಿಸುವ ಸರ್ವ ಪ್ರಯತ್ನಗಳು ಭೂಮಾಲೀಕರಿಂದ ಮತ್ತು ಸರಕಾರದಿಂದ ಸತತ ನಡೆಯುತ್ತಿವೆ. ಇದರಿಂದ ಅಲೆಮಾರಿಗಳಿಗೆ ತುಂಬ ಮಾನಸಿಕ ಹಿಂಸೆಯಾಗುತ್ತಿದೆ. ಇದನ್ನು ತಕ್ಷಣ ನಿಲ್ಲಿಸಬೇಕಾಗಿದೆ ಮತ್ತು ಇವರಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ.

ಅಲೆಮಾರಿಗಳ ಜನಾಂಗಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲದ ಸೌಲಭ್ಯ ದೊರೆಯಬೇಕು. ಅಂದಾಗ ಮಾತ್ರ ಅವರು ಸ್ವಾವಲಂಬನೆಯ ಬದುಕನ್ನು ನಡೆಸಲು ಸಾಧ್ಯ. ಮತ್ತು ಸಾಲದ ಬಡ್ಡಿಯು ಅತ್ಯಂತ ಕಡಿಮೆ ಪ್ರಮಾಣದಲ್ಲಿರಬೇಕು.

ಅಲೆಮಾರಿ ಜನಾಂಗದ ಮಹಿಳೆಯರಿಗೆ ಪ್ರತ್ಯೇಕ ಸ್ವಸಹಾಯ ಗುಂಪುಗಳನ್ನು ರಚಿಸಿಕೊಟ್ಟು, ಅವರಿಗೆ ಎಲ್ಲಾ ರೀತಿಯ ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು.

ಎಲ್ಲ ಅಲೆಮಾರಿಗಳ ಭಾಷೆ, ಸಾಹಿತ್ಯ, ಜನಪದ ವೈದ್ಯ, ಕುಣಿತ, ಪ್ರದರ್ಶನಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರೋತ್ಸಾಹ ದೊರೆಯುಂತಾಗಬೇಕು.

ಅಲೆಮಾರಿ ಜನಾಂಗದ ನಿರ್ಲಕ್ಷಿತ ವೃದ್ಧರು, ಅಂಗವಿಕಲರು ಹಾಗೂ ವಿಧವೆಯರಿಗೆ ಮಾಸಿಕ

ವೇತನ ಕಲ್ಪಿಸಬೇಕಾಗಿದೆ.

ಒಟ್ಟಿನಲ್ಲಿ ಈ ಎಲ್ಲಾ ಪರಿಹಾರಗಳನ್ನು ಸರಕಾರ, ಸಂಘ-ಸಂಸ್ಥೆಗಳು ಮತ್ತು ನಾಯಕರು ಗಂಭೀರವಾಗಿ ಪರಿಗಣಿಸಿ, ಎಲ್ಲ ಅಲೆಮಾರಿಗಳ ಜನಾಂಗಗಳಿಗೆ, ಅವರ ಪ್ರಾಚೀನ ಸಂಸ್ಕೃತಿಗೆ ಪ್ರೋತ್ಸಾಹವನ್ನು ನೀಡಬೇಕಾಗಿದೆ.

ಅಲೆಮಾರಿಗಳ ಆರ್ಥಿಕಾಭಿವೃದ್ಧಿಗಾಗಿ ಸಂಪನ್ಮೂಗಳ ಕೊರತೆ ಎದ್ದು ಕಾಣುತ್ತದೆ. ಆದ್ದರಿಂದ ಅಲೆಮಾರಿಗೆ ಕುಲಕಸುಬುಗಳನ್ನು ಪುನರುಜ್ಜೀವನಗೊಳಿಸಬೇಕು. ಇದಕ್ಕಾಗಿ ಪ್ರತ್ಯೇಕ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು.

ಎಲ್ಲ ಅಲೆಮಾರಿಗಳ ಜಾನಪದ ಕಲೆಯು ಮೌಖಿಕ ರೂಪದಲ್ಲಿದ್ದು, ಅದನ್ನು ಬರವಣಿಗೆಯ ರೂಪದಲ್ಲಿ ಶಾಶ್ವತವಾಗಿ ಇಡುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಚ್ಚರಿಕೆ ವಹಿಸಬೇಕು.

ಅಲೆಮಾರಿಗಳಿಗಾಗಿ ಅಲೆಮಾರಿ ಕಲಾ ಅಕಾಡೆಮಿಯನ್ನು ಪ್ರತ್ಯೇಕವಾಗಿ ಸ್ಥಾಪಿಸಿ, ಅದರ ಮೂಲಕ ಅವರ ಕಲೆ, ಭಾಷೆ, ಸಾಹಿತ್ಯಕ್ಕೆ ಗೌರವ ಕೊಡಬೇಕು.

ಅಲೆಮಾರಿಗಳು ರಾಜಕೀಯವಾಗಿ ಅತೀ ಹಿಂದುಳಿದವರಾದುದರಿಂದ ಅವರಿಗೆ ವಿಶೇಷ ರಾಜಕೀಯ ಮೀಸಲಾತಿಯನ್ನು ಜಾರಿಗೊಳಿಸಬೇಕು.

ಈ ರೀತಿಯ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದರ ಮೂಲಕ ಅಲೆಮಾರಿಗಳು ಎದುರಿಸುತ್ತಿರುವ ಜ್ವಲಂತ ಹಾಗೂ ಸಾಮಾನ್ಯ ಸಮಸ್ಯೆಗಳಿಗೆ ಕೊನೆ ಹಾಡಿ ಅವರ ಅಭಿವೃದ್ಧಿಯತ್ತ ಗಮನ ಕೊಡಬೇಕು. ಇವೆಲ್ಲವು ಅಲೆಮಾರಿಗಳು ಮೊದಲಿನಿಂದ ಎದುರಿಸುತ್ತ ಬಂದಿರುವ ಸಮಸ್ಯೆಗಳು. ಇವುಗಳಿಗೆ ಸೂಕ್ತ ಪರಿಹಾರಗಳನ್ನು ಒದಗಿಸಬೇಕು.

ಅಲೆಮಾರಿಗಳು ತಮ್ಮ ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ದೈವಸನ್ನಿಧಿಯಲ್ಲಿ ಕೈಗೊಳ್ಳುವ ಪರಿಹಾರಗಳು :

ಕೇವಲ ಬದುಕಿಗಾಗಿ ಇಲ್ಲಿನ ಕುದರಿಮೋತಿ ಗ್ರಾಮದ ಮೊಹರಂ ಆಚರಣೆಯಲ್ಲಿ ಆಗಮಿಸುವ ಅಲೆಮಾರಿ ಜನಾಂಗದವರು ಹಜರತ್ ಹುಸೇನಿ ಆಲಂ ದೈವಕ್ಕೆ ಶರಣಾಗುವುದರ ಮೂಲಕ ಭಕ್ತಿ ಭಾವವನ್ನು ಅರ್ಪಿಸಿ ಧಾರ್ಮಿಕ ಪ್ರಜ್ಞೆಯನ್ನು ಮೆರೆಯುತ್ತಾರೆ. ತಮ್ಮ ತಮ್ಮ ಸಾಂಸ್ಕೃತಿಕ ದೇವತೆಗಳ ಆರಾಧನೆಯ ಮಧ್ಯೆ ಈ ದೈವವನ್ನು ಆರಾಧಿಸುತ್ತಾರೆ. ನಾನು ತಿಳಿದ ಪ್ರಕಾರ ಈ ಎಲ್ಲ ಅಲೆಮಾರಿ ಜನಾಂಗದವರು ತಮ್ಮ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮತ್ತು ಪುನರುಜ್ಜೀವನಗೊಳಿಸಲು ಈ ದೈವಕ್ಕೆ

ತಲೆಬಾಗುತ್ತಾರೆ. ಇದರಿಂದ ಅಲೆಮಾರಿ ಜನಾಂಗದವರಿಗೆ ತಮ್ಮ ಸಂಸ್ಕೃತಿಯನ್ನು, ಸಂಸ್ಕಾರವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲಿಕ್ಕೆ ಕಾರಣವಾಗುತ್ತದೆ.

ಕುದರಿಮೋತಿ ಗ್ರಾಮದ ಜನತೆಯೂ ಈ ದೈವಾರಾಧನೆಗೆ ಹೊರತಾಗಿಲ್ಲ. ನನ್ನಕ್ಷೇತ್ರಕಾರ್ಯದ ಸಮಯದಲ್ಲಿ ಫಕೀರಪ್ಪ ಚೌಡಿಕಿ ಎಂಬ ವಿದ್ಯಾರ್ಥಿಯನ್ನು ಸಂಪರ್ಕಿಸಿದಾಗ ಆತ ತಿಳಿಸಿದ ವಿಷಯವೇನೆಂದರೆ ಆತ ಬಾಲಕನಾಗಿದ್ದಾಗಿನಿಂದಲೂ ಕಾಲುಗಳು ಸೊಟ್ಟವಾಗಿದ್ದವಂತೆ ಮತ್ತು ಭವಿಷ್ಯದಲ್ಲಿ ನಡೆಯಲಿಕ್ಕೆ ತೊಂದರೆಯಾಗಬಹುದಾದ ಸಾಧ್ಯತೆಗಳಿದ್ದವು. ಆಗ ಆತನ ತಂದೆ-ತಾಯಿಗಳು ಹಜರತ್ ಹುಸೇನಿ ಆಲಂ ದೇವರಿಗೆ ಹರಕೆಯನ್ನು ಹೊತ್ತು ಈ ಸಮಸ್ಯೆಯನ್ನು ಪರಿಹರಿಸಲು ಬೇಡಿದ್ದರಂತೆ. ಇದರ ಫಲವಾಗಿ ಕೆಲ ವರ್ಷಗಳಲ್ಲಿ ಫಕೀರಪ್ಪನ ಸಮಸ್ಯೆ ಇತ್ಯರ್ಥಗೊಂಡಿದೆ. ಈಗ ತಾನು ಎಲ್ಲರಂತೆ ಚೆನ್ನಾಗಿ ನಡೆಯುತ್ತಿದ್ದೇನೆ ಎಂದು ಆತ ಹೇಳುತ್ತಾನೆ.

ಕೊಪ್ಪಳದ ಮಹೋತ್ರ್ವ ಉಪನ್ಯಾಸಕ ಇಬ್ರಾಹಿಂ ಕುದರಿಮೋತಿ ಪ್ರತಿ ಅಮವಾಸ್ಯೆ ಮತ್ತು ಇನ್ನಿತರ ಇಸ್ಲಾಮೀ ಹಬ್ಬ ಹರಿದಿನಗಳಲ್ಲಿ ತಮ್ಮ ಮನೆ ದೇವರಾದ ಹಜರತ್ ಹುಸೇನಿ ಆಲಂ ದರ್ಗಾಕ್ಕೆ ಹೋಗಿ ತಮ್ಮ ಭಕ್ತಿ ಭಾವವನ್ನು ಮೆರೆಯುವದಾಗಿ, ಇದರಿಂದ ಮನೆಯಲ್ಲಿ ಸುಖ, ಶಾಂತಿ, ಎಲ್ಲ ರೀತಿಯ ಭದ್ರತೆ ನೆಲೆಸಿರುತ್ತದೆ ಎಂದು ಮನಬಿಚ್ಚಿ ಹೇಳುತ್ತಾರೆ.

ಇದೇ ರೀತಿ ಜಿಲ್ಲೆಯಾದ್ಯಂತ ಹಿಂದೂ-ಮುಸ್ಲಿಂ ಎನ್ನದೇ ಸರ್ವ ಸಮುದಾಯದವರು ಹಜರತ್ ಹುಸೇನ್ ಆಲಂ ದರ್ಗಾಕ್ಕೆ ಭೇಟಿ ಕೊಟ್ಟು, ಭಕ್ತಿ ಭಾವವನ್ನು ಮೆರೆಯುತ್ತಾರೆ. ಈ ಮೂಲಕ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುತ್ತಾರೆ.

ಅಕ್ಷರಸ್ಥ ಜನತೆಯೇ ಇಂಥ ನಂಬಿಕೆಗಳನ್ನು ದಿನನಿತ್ಯದ ಜೀವನದಲ್ಲಿ ಹೊಂದಿರುವಾಗ, ಇನ್ನು ಅನಕ್ಷರಸ್ಥ ಮತ್ತು ಊರಿಂದೂರಿಗೆ ಅಲೆದಾಡುವ ಅಲೆಮಾರಿಗಳ ಭಕ್ತಿಯ ಪರಾಕಾಷ್ಠೆ ಬಹಳಷ್ಟು ಎಂತಹ ಪ್ರಮಾಣದಲ್ಲಿರುತ್ತದೆ ಎನ್ನುವುದನ್ನು ಕುದರಿಮೋತಿ ಮೊಹರಂ ಆಚರಣೆಯ ಸಂದರ್ಭದಲ್ಲಿ ಇಲ್ಲಿಗೆ ಬರುವ ಅಲೆಮಾರಿ ಜನಾಂಗದವರ ಆಚರಣೆ, ಸಮಸ್ಯೆಗಳು, ದೈವ ಸನ್ನಿಧಿಯಲ್ಲಿ ಕಂಡುಕೊಳ್ಳುವ ಪರಿಹಾರಗಳ ಪದ್ಧತಿಗಳಿಂದ ಗೊತ್ತಾಗುತ್ತದೆ.

ಭೂತ, ಪ್ರೇತ, ಪಿಶಾಚಿ, ಗಾಳಿ ಹೀಗೆ ಒಂದು ಕೆಟ್ಟ ಶಕ್ತಿ ಇದೆ ಎಂದು ಬಲವಾಗಿ ನಂಬಿಕೆ ಇರುವ ಅಲೆಮಾರಿಗಳು ಮುಸಲ್ಮಾನರ ಅನೇಕ ಪೀರರನ್ನು ಆರಾಧಿಸುವುದುಂಟು. ಇದೇ ರೀತಿ ಕುದರಿಮೋತಿಯ ಹಜರತ್ ಹುಸೇನ್ ಅಲಿ ಅವರಲ್ಲಿ ಆರಾಧಿಸುವುದೂ ಉಂಟು. ಗಾಳಿ ನಿವಾರಣೆಗೆ ಮಂತ್ರ-ತಂತ್ರದ ಮತ್ತು ತಾಯತ ಮುಂತಾ ವಿವಿಧ ಕ್ರಮಗಳನ್ನು ಪರಿಪಾಲಿಸುತ್ತಾರೆ. ಹಜರತ್ ಹುಸೇನ್ ಅಲಿ ಅವರನ್ನು

ಆರಾಧಿಸುವುದರ ಮೂಲಕ ಈ ಎಲ್ಲ ದುಷ್ಟ ಶಕ್ತಿಗಳ ವಿರುದ್ಧ ತಮ್ಮ ರಕ್ಷಣೆಯನ್ನು ಮಾಡುವಂತೆ ದೇವರಲ್ಲಿ ಮೊರೆ ಇಡುತ್ತಾರೆ.

ಕುದರಿಮೋತಿಯ ಮೊಹರಂ ಆಚರಣೆಯ ಪ್ರಮುಖ ಅಂಶವಾದ ದೇಶದ ನಾನಾ ಮೂಲೆಗಳ ಅಲೆಮಾರಿ ಜನಾಂಗದ, ಸುಡುಗಾಡು ಸಿದ್ಧರು, ವೇಷಗಾರರು, ಹಾವಾಡಿಗರು, ಜಾತಿಗಾರರು, ಗೊಂದಲಿಗರು, ಸಿಂಧೊಳ್ಳರು ಮುಂತಾದ ಜನರು ಪರಸ್ಪರ ಮುಖಾ-ಮುಖಿಯಾಗಿ ಒಂದೆಡೆ ಕೂಡುತ್ತಾರೆ. ಹಬ್ಬದ ಮೂರು ದಿನ ರಾತ್ರಿ ಹೊತ್ತು ಮನೆಯ ಬಾಗಿಲು ಹಾಕದಿರುವ ಸಂಪ್ರದಾಯವೂ ಕುದರಿಮೋತಿಯಲಿಲ ಇದೆ. ಸಕ್ಕರೆ ಮಾದಲಿ, ಬೆಲ್ಲದ ಮಾದಲಿ, ಚೊಂಗೆಯಂತಹ ಸಿಹಿ ತಿಂಡಿಗಳು ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ತಯಾರಾಗಿರುತ್ತದೆ.

ಹುಲಿವೇಷ ತೊಡುತ್ತಾರೆ :

ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಹರಕೆ ಹೊತ್ತುಕೊಂಡಂತಹ ಭಕ್ತರು, ಎಲ್ಲೆಲ್ಲೋ ವಲಸೆ ಹೋದವರು ಮೊಹರಂ ಹಬ್ಬಕ್ಕಾಗಿ ಬರುತ್ತಾರೆ. ತಮ್ಮ ತಮ್ಮ ನಂಬಿಕೆಯಂತೆ ಹುಲಿಯ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಕರ್ನಾಟಕದ ವಿವಿಧ ಭಾಗಗಳಿಂದಲ್ಲದೇ ದೆಹಲಿ, ಬಿಹಾರ, ಗುಜರಾತ್‌ಗಳಿಂದಲೂ ಜನ ತಮ್ಮ ಹರಕೆ ತೀರಿಸಲು ಹುಲಿ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಈ ಹಗಲು ವೇಷಗಾರರು ತಮ್ಮ ಕೈಯಲ್ಲಿನ ಚಾಟಿಯಿಂದ ಜನರಿಗೆ ಮೃದುವಾಗಿ ಏಟು ಹೊಡೆದು ಗಮನ ಸೆಳೆಯುತ್ತಾರೆ. ತಮ್ಮ ತಮ್ಮ ಹರಕೆಗಳಿಗೆ, ಬೇಡಿಕೊಂಡ ವರಗಳಿಗೆ ಪ್ರತಿಯಾಗಿ ಅಲೆಮಾರಿ ಜನಾಂಗದವರು ಈ ರೀತಿ ಹಗಲು ವೇಷದ, ಹುಲಿ ವೇಷವನ್ನು ತೊಟ್ಟು ಭಿಕ್ಷೆ ಬೇಡಿ ಹರಕೆ ತೀರಿಸುತ್ತಾರೆ. ಭಿಕ್ಷೆ ಬೇಡುವುದು ಒಂದು ರೀತಿಯ ಹರಕೆ. ಮೊಹರಂ ಮುಗಿಯುವವರೆಗೂ ಕೊರಳಲ್ಲಿ ಮತ್ತು ಕೈಯಲ್ಲಿ ಕರಿದಾರ ಕಟ್ಟಿಕೊಂಡಿರುತ್ತಾರೆ. ಚಪ್ಪಲಿ ಹಾಕುವುದಿಲ್ಲ. ಯಾವುದೇ ಕಾರಣಕ್ಕೂ ಸುಳ್ಳು ಹೇಳುವುದಿಲ್ಲ. ಮೊಹರಂ ಹಬ್ಬದ ಮುಕ್ತಾಯದವರೆಗೂ ವಿವಿಧ ತರಹದ ವೇಷಗಳನ್ನು ಧರಿಸಿ ಕುಟುಂಬದವರು ತಮ್ಮ ಹರಕೆಯನ್ನು ತೀರಿಸುತ್ತಾರೆ. ಇದು ಅಲೆಮಾರಿಗಳು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮೊಹರಂ ಹಬ್ಬದ ಸಮಯದಲ್ಲಿ ಕಂಡುಕೊಂಡ ಸಂಪ್ರದಾಯ ಮತ್ತು ಆಚರಣೆ.

ಹುಲಿಯ ವೇಷ ತೊಡುವುದೂ ಸಹ ಒಂದು ರೀತಿಯಲ್ಲಿ ಕಳ್ಳಳ್ಳಿ ಅಥವಾ ಫಕೀರರಾಗುವ ಪದ್ಧತಿ ಇದ್ದಂತೆ. ಜನರು ತಮ್ಮ ಇಷ್ಟಾರ್ಥಗಳ ಪೂರೈಕೆಗಾಗಿ ತಮ್ಮ ಮಕ್ಕಳನ್ನೋ ಅಥವಾ ಮನೆಯ ಸದಸ್ಯರನ್ನೋ ಹುಲಿಯ ವೇಷ ತೊಡಿಸಿ ಆ ಮೂಲಕ ಭಕ್ತಿಯನ್ನು ಮೆರೆಯುತ್ತಾರೆ. ಹರಕೆಯನ್ನು

ತೀರಿಸುತ್ತಾರೆ. ಹುಲಿಯ ವೇಷ ತೊಟ್ಟವರು ಊರಿನ ಪ್ರಮುಖ ರಸ್ತೆಗಳಲ್ಲಿ, ಓಣಿಗಳಲ್ಲಿ ಹುಲಿಯ ನೆಗೆತದಿಂದ ಭಿಕ್ಷೆ ಬೇಡುತ್ತಾ ಸಾಗುತ್ತಾರೆ. ಮೊಹರಂ ಹಬ್ಬದ ವಿಶಿಷ್ಟ ಆಚರಣಾ ಪದ್ಧತಿಗಳಲ್ಲಿ ಹುಲಿವೇಷಗಾರರ ಪದ್ಧತಿಯೂ ಒಂದಾಗಿದೆ.

ಕಳ್ಳಳ್ಳಿಯಾಗುತ್ತಾರೆ :

ಕೆಲವೊಂದು ಕಡೆಗಳಲ್ಲಿ ಕಳ್ಳಳ್ಳಿ ಎಂದೂ, ಇನ್ನು ಕೆಲವೆಡೆ ಅಚ್ಚಳ್ಳಿ, ಪಿಚ್ಚಳ್ಳಿ ಎಂದೂ ಕರೆಯಲಾಗುವ ಈ ವೇಷ ತೊಡುವ ಪದ್ಧತಿ ಮೊಹರಂ ಹಬ್ಬದ ಒಂದು ವಿಶಿಷ್ಟ ಆಚರಣಾ ಪದ್ಧತಿಗಳಲ್ಲೊಂದು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಈ ಪದ್ಧತಿ ಕಂಡು ಬಂದರೂ, ಪಟ್ಟಣ, ನಗರ ಪ್ರದೇಶಗಳಲ್ಲಿಯೂ ಈ ಆಚರಣೆಯು ಜನರಿಂದ ಕಾಣೆಯಾಗಿಲ್ಲ. ಮನೆಯಲ್ಲಿನ ಆಂತರಿಕ ಸಮಸ್ಯೆಗಳ ಪರಿಹಾರಕ್ಕಾಗಿ, ಮಕ್ಕಳ ಆರೋಗ್ಯದ ಬೇಡಿಕೆಯಲ್ಲಿ, ಸಂಕಷ್ಟ ಸ್ಥಿತಿಯಿಂದ ಪಾರಾಗುವ ಹರಕೆ ಹೊತ್ತುಕೊಂಡಂತಹ ಜನತೆ ಹೊತ್ತುಕೊಂಡ ಹರಕೆಯನ್ನು ತೀರಿಸಲು ಮೊಹರಂ ತಿಂಗಳಲ್ಲಿ ಅಂದರೆ ಮೊಹರಂ ಹಬ್ಬದ ಸಮಯದಲ್ಲಿ ಮನೆಯ ಸದಸ್ಯರನ್ನು ಕಳ್ಳಳ್ಳಿ ಮಾಡುತ್ತಾರೆ. ಅಂದರೆ ಹರಕೆ ತೀರಿಸುವ ಸಲುವಾಗಿ ಈಚಲ ಮರದ ಬರಲನ್ನು ತೆಗೆದುಕೊಂಡು, ತಮ್ಮ ತಲೆಯ ಅಳತೆಯಷ್ಟು ಒಂದು ಸಿಂಬೆಯನ್ನು ಎಣೆದು, ಅದಕ್ಕೆ ಕೆಲವು ಈಚಲ ಬರಲುಗಳನ್ನು ಚುಚ್ಚಿಕೊಂಡು, ಕಿರೀಟದಂತೆ ಮಾಡಿ, ಬಣ್ಣದ ಹಾಳೆಗಳಿಂದ ಟೋಪಿಯನ್ನು ಸಿದ್ಧಪಡಿಸಿ ಹಾಕಿಕೊಳ್ಳುತ್ತಾರೆ. ಮೈ ತುಂಬಾ ಬಣ್ಣಗಳನ್ನು ಬಳಿದುಕೊಂಡು, ಕೈಯಲ್ಲೊಂದು ವಸ್ತ್ರದ ಸುರುಳಿ ಹಿಡಿದುಕೊಂಡು, ಕುಣಿಯುತ್ತಾ ಭಿಕ್ಷೆಗೆ ಬರುತ್ತಾರೆ. ಆ ಮೂಲಕ ತಾವು ಅಂದುಕೊಂಡಂತೆ ಹರಕೆಯನ್ನು ತೀರಿಸಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ.

ಫಕೀರರಾಗುತ್ತಾರೆ :

ಫಕೀರನಾಗುವದು ಸಹ ಮೊಹರಂ ಹಬ್ಬದ ಸಮಯದಲ್ಲಿ ನಡೆದುಕೊಂಡು ಬರುವಂತಹ ಒಂದು ವಿಶಿಷ್ಟ ಸಂಪ್ರದಾಯ. ಈ ಸಂಪ್ರದಾಯದಲ್ಲಿಯೂ ಹಿಂದೂ - ಮುಸ್ಲಿಂರೆಂಬ ಭೇದ - ಭಾವವಿಲ್ಲದೇ, ಹರಕೆ ಹೊತ್ತುಕೊಂಡವರು ಫಕೀರರಾಗುತ್ತಾರೆ. ಆ ಮೂಲಕ ತಾವು ಅಂದುಕೊಂಡ ಇಷ್ಟಾರ್ಥ ಪೂರೈಕೆಗಾಗಿ ದೇವರಿಗೆ ಸೇವೆ ಸಲ್ಲಿಸುತ್ತಾರೆ. ಫಕೀರರಾಗುವವರಲ್ಲಿ ಕೆಲವರು ಐದು ದಿನಗಳವರೆಗೆ, ಇನ್ನು ಕೆಲವರು ಮೂರು ದಿನಗಳವರೆಗೆ ಫಕೀರರಾಗುವ ವಾಡಿಕೆ ಇದೆ. ಸಾಮಾನ್ಯವಾಗಿ ಮುಸ್ಲಿಮರು ಹಿರಿಯ ದೇವರು ಪ್ರತಿಷ್ಠಾಪನೆಯ ದಿನವೇ ಫಕೀರರಾದರೆ, ಹಿಂದೂ ಭಕ್ತರು ಫಕೀರರಾಗುವುದು ಸಂದಲ್

ರಾತ್ರಿಯಂದು. ಗ್ರಾಮಾಂತರ ಭಾಷೆಯ ಈ ಸಂದಾಲ್ ರಾತ್ರಿ ಅಥವಾ ಸಂದಲ್ ರಾತ್ರಿಗೆ ಉರ್ದು ಅಥವಾ ಹಿಂದಿಯಲ್ಲಿ ಸಂದಲ್ ಕೀ ರಾತ್ ಎಂದು ಕರೆಯುತ್ತಾರೆ. ಅಂದರೆ ಮೊಹರಂ ತಿಂಗಳ ಏಳನೆಯ ದಿನವನ್ನು ಸಂದಲ್ ರಾತ್ರಿ (ಗಂಧದ ರಾತ್ರಿ) ಎಂದು ಕರೆಯುವ ವಾಡಿಕೆ ಇದೆ. ಹಿಂದೂ ಭಕ್ತರು ಸಾಮಾನ್ಯವಾಗಿ ಮೊಹರಂ ಹಬ್ಬದ ದಿನವೇ ಹೊಸ ಬಟ್ಟೆ ಧರಿಸಿದರೆ, ಮುಸ್ಲಿಮರು ಸಾಮಾನ್ಯವಾಗಿ ಮೊಹರಂ ಹಬ್ಬದ ಇಪ್ಪತ್ತು ದಿನದ ಮೊದಲು ಆಚರಿಸುವ ಗ್ಯಾರವಿ ಹಬ್ಬದ ದಿನವೇ ಹೊಸ ಬಟ್ಟೆ ಧರಿಸುವ ಪದ್ಧತಿಯಿದೆ. ಸಾಮಾನ್ಯವಾಗಿ ಫಕೀರರಾಗುವುದು ಎಂದರೆ ಭಕ್ತರು ದೇವರಿಗೆ ಸಕ್ಕರೆ, ಕಾಣಿಕೆಯನ್ನು ಸಲ್ಲಿಸಿ, ದೇವರ ಸಮ್ಮುಖದಲ್ಲಿ ಕೈ ಲಾಡಿ (ಕೈ ಕಟ್ಟಿಕೊಳ್ಳುವ ಕೆಂಪು ಅಥವಾ ಕಪ್ಪು ಬಣ್ಣದ ಲಾಡಿ), ಕೊಳ್ಲಾಡಿ (ಕೊರಳಿಗೆ ಹಾಕಿಕೊಳ್ಳುವ ಲಾಡಿ) ಧರಿಸಿ ಅಂದುಕೊಂಡಷ್ಟು ದಿನ ಫಕೀರರಾಗಿ ಸೇವೆ ಸಲ್ಲಿಸುತ್ತಾರೆ. ಫಕೀರರಾದವರು ಆ ಸಮಯದಲ್ಲಿ ಸುಳ್ಳು ಹೇಳಬಾರದು, ಬರಿಗಾಲಿನಲ್ಲಿಯೇ ಅಡ್ಡಾಡಬೇಕು, ಅಶ್ಲೀಲ ಪದಗಳನ್ನು ಬಳಸಬಾರದು ಎಂಬ ಕರಾರುಗಳನ್ನು ಪಾಲಿಸಬೇಕಾಗುತ್ತದೆ.

ಕಟ್ಟೆಮನೆಯಾಗಿ ಕುದರಿಮೋಟಿ :

ಅಲೆಮಾರಿಗಳು ತಮ್ಮಲ್ಲಿಯೇ ನ್ಯಾಯ ಪದ್ಧತಿ ವ್ಯವಸ್ಥೆ ಹೊಂದಿದ್ದಾರೆ. ತಪ್ಪು ದಂಡದ, ದೈಹಿಕ ಶಿಕ್ಷೆಯ ಮೂಲಕ ತಪ್ಪಿತಸ್ಥನಿಗೆ ಶಿಕ್ಷೆ ವಿಧಿಸಲಾಗುತ್ತದೆ. ಸಾಮಾಜಿಕ ಬಂಧ ಮೀರಿದವರಿಗೆ ಉಗ್ರಕ್ರಮ ಕೈಗೊಳ್ಳಲಾಗುತ್ತದೆ. ಸಮಾಜದ ಎಲ್ಲ ವ್ಯವಹಾರಗಳು ಪಟ್ಟಿಯ ಮುಖಂಡ ಅಥವಾ ನಾಯಕನ ಮೂಲಕ ನಡೆಯುತ್ತವೆ. ಪ್ರತಿಯೊಬ್ಬರಿಗೂ ನ್ಯಾಯವನ್ನು ದೊರಕಿಸಿಕೊಡಲು ಜಾತಿ ಪಂಚಾಯಿತಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಪಂಚಾಯಿತಿ ರಚನೆಯಲ್ಲಿ ವಿವಿಧ ಮುಖಂಡರುಗಳನ್ನು, ನಾಯಕರನ್ನು ನೇಮಿಸಿಕೊಂಡಿರುತ್ತಾರೆ.

ಕಟ್ಟೆಮನೆ ಎಂದರೆ ನ್ಯಾಯದ ಮನೆ. ಸತ್ಯ ಶೋಧಿಸುವ ಮನೆ. ಕುಲದ ಕಟ್ಟಳೆಗಳನ್ನು ಮೀರಿ ನಡೆಯುವವರಿಗೆ ತಡೆಗೋಡೆ ಹಾಕಿ, ನ್ಯಾಯ ಮಾರ್ಗದಲ್ಲಿ ಪರಿಶುದ್ಧರಾಗಿ ನಡೆಯುವಂತೆ ತಿಳುವಳಿಕೆ ನೀಡುವ ತಾಣ. ಕುಲದ ಅಥವಾ ಕುಟುಂಬಗಳಲ್ಲಿ ನಡೆಯುವ ಜಗಳಗಳನ್ನು ತಮ್ಮ ತಮ್ಮೊಳಗೆ ಕಟ್ಟೆಮನೆಯಲ್ಲಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ.

ಅಲೆಮಾರಿಗಳು ಮುಖಂಡರ ನಾಯಕತ್ವದಲ್ಲಿ ಮತ್ತು ಮಧ್ಯಸ್ಥಿಕೆಯಲ್ಲಿ ಸಾಮಾನ್ಯವಾಗಿ ಎಲ್ಲ ರೀತಿಯ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಆದರೆ ಕೆಲವು ಜಟಿಲ ಹಾಗೂ ಸಮಸ್ಯಾತ್ಮಕ ತೀರ್ಮಾನಗಳು ಅಂತಿಮವಾಗಿ ಕಟ್ಟೆಮನೆಯಲ್ಲಿ ಪರಿಹಾರ ಕಂಡುಕೊಳ್ಳುತ್ತವೆ. ಕಟ್ಟೆಮನೆ ತೀರ್ಮಾನವೇ

ಅವರಿಗೆ ಹೈಕೋರ್ಟು, ಸುಪ್ರೀಮ್ ಕೋರ್ಟು ತೀರ್ಮಾನಗಳಿದ್ದಂತೆ. ಕಟ್ಟೆಮನೆ ತೀರ್ಮಾನವೆಂದರೆ ಅಲೆಮಾರಿಗಳು ತಾವು ನಂಬಿರುವ ದೇವ-ದೇವತಾರಾಧನೆಯ ಸ್ಥಳಗಳು. ಅವರ ನಂಬಿಕೆಯ ಧಾರ್ಮಿಕ ಸ್ಥಳಗಳಲ್ಲಿ ಪ್ರಮಾಣೀಕರಿಸುವುದರ ಮೂಲಕ ವಾದಿ-ಪ್ರತಿವಾದಿಗಳಲ್ಲಿ ಯಾರು ತಪ್ಪಿತಸ್ಥ ಎಂದು ಮುಖಂಡರು ತೀರ್ಮಾನಿಸುತ್ತಾರೆ. ಅಂತಹ ಕಟ್ಟೆಮನೆಗಳು ಕರ್ನಾಟಕದಲ್ಲಿಯೂ ಬಹಳಷ್ಟು ಇದ್ದು, ಅವುಗಳಲ್ಲಿ ಕುದರಿಮೋತಿಯೂ ಒಂದಾಗಿದೆ. ಕುದರಿಮೋತಿಯ ಮೊಹರಂ ಸಂದರ್ಭದಲ್ಲಿ ಅಲೆಮಾರಿಗಳ ಮುಖಂಡರು ವಾದಿ-ಪ್ರತಿವಾದಿಗಳನ್ನು ಕರೆಸಿ, ಹಜರತ್ ಆಲಂ ಹುಸೇನ್ ದೇವರ ಸಮ್ಮುಖದಲ್ಲಿ ಪ್ರಮಾಣ ಮಾಡಿಸಿದಾಗ, ದೇವರಿಗೆ ಹೆದರಿ ವಾದಿ-ಪ್ರತಿವಾದಿಗಳು ಸತ್ಯವನ್ನು ನುಡಿಯುತ್ತಾರೆ. ಆಗ ಸತ್ಯ ತಂತಾನೇ ಹೊರಬಂದು ತಪ್ಪಿತಸ್ಥನಿಗೆ ಶಿಕ್ಷೆಯಾಗುತ್ತದೆ. ಇಂತಹ ಎಷ್ಟೋ ಸಮಸ್ಯೆಗಳಿಗೆ ಅಲೆಮಾರಿಗಳು ಕುದರಿಮೋತಿ ಮೊಹರಂ ಸಂದರ್ಭದಲ್ಲಿಯೇ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ಇದು ಅವರ ಕುದರಿಮೋತಿ ದೈವದ ಆರಾಧಾನೆಯ ಪರಾಕಾಷ್ಠೆ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ತಿಳಿಸಿಕೊಡುತ್ತದೆ.

ಒಟ್ಟಿನಲ್ಲಿ ಕುದರಿಮೋತಿಯಲ್ಲಿ ನಡೆಯುವ ಭಾವೈಕ್ಯತೆ ಸಂಕೇತವಾಗಿರುವ ಮೊಹರಂ ಹಬ್ಬವನ್ನು ಕಣ್ಣಿಂದ ನೋಡುವುದೇ ಒಂದು ಹಬ್ಬ. ಒಂದು ರೀತಿಯಲ್ಲಿ ಅದ್ಭುತದಂತೆಯೂ ಕಂಡು ಬರುವ ಈ ಸಮಯದಲ್ಲಿನ ಜಗಳಗಳು, ವ್ಯಾಜ್ಯಗಳು, ವೈವಾಹಿಕ ಸಂಬಂಧಗಳು, ವ್ಯವಹಾರ ಮೊದಲಾದವುಗಳನ್ನು ಗಮನಿಸಿದರೆ ಜನರು ಮೊಹರಂ ಹಬ್ಬವನ್ನು ಕುದರಿಮೋತಿ ನೆಲದಲ್ಲಿ ಆಚರಿಸುವದನ್ನು ಎಷ್ಟರ ಮಟ್ಟಿಗೆ ಪವಿತ್ರ ಎಂದು ತಿಳಿದುಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅಲ್ಲಮಪ್ರಭುವಿನ ವಚನದಂತೆ ಎತ್ತಣಿಂದೆತ್ತ ಸಂಬಂಧವಯ್ಯ ಎನ್ನುವ ಹಾಗೆ ಕುದರಿಮೋತಿಯಲ್ಲಿ ನಡೆಯುವ ಮೊಹರಂ ಹಬ್ಬಕ್ಕೂ ಅಲೆಮಾರಿ ಜನಾಂಗದ ವ್ಯಾಜ್ಯ, ಜಗಳ, ವ್ಯವಹಾರ, ಮದುವೆ, ಸಂಪ್ರದಾಯಗಳ ಆಚರಣೆಗೂ ಎತ್ತಣಿಂದೆತ್ತ ಸಂಬಂಧ ಎನ್ನುವದು ಒಂದು ಪ್ರಶ್ನೆಯಾಗುತ್ತದೆಯಲ್ಲದೇ ಇವರ ಸಂಪ್ರದಾಯಗಳ ಆಚರಣೆಯ ಬಗ್ಗೆ ಕುತೂಹಲ, ಆಸಕ್ತಿ ಉಂಟಾಗುತ್ತದೆ.

ಮೊಹರಂ ಹಬ್ಬವನ್ನು ಊರ ಹಬ್ಬವೆಂದು ಆಚರಿಸಲಾಗುತ್ತದೆ. ಇಲ್ಲಿನ ಜನರು ಅತಿಥಿಗಳಿಗೆ ಸ್ವಂತ ಮನೆಯವರಂತೆ ಕಾಣುತ್ತಾರೆ. ಇದು ಮೊದಲಿಂದಲೂ ಬಂದ ಸಂಪ್ರದಾಯವಾಗಿದ್ದು, ಮನೆಗೆ ಬಂದವರನ್ನು ಎಣಿಸುವ ಈ ಕಾಲದಲ್ಲಿಯೂ ಇಂತಹ ಅತಿಥಿ ದೇವೋಭವ ಎನ್ನುವ ಸತ್ಸಂಪ್ರದಾಯ ಹೊಂದಿರುವ ಕುದರಿಮೋತಿಯ ಜನ ನಿಜಕ್ಕೂ ಅಭಿನಂದನಾರ್ಹರು. ಮನೆಯ ಬಾಗಿಲುಗಳನ್ನು ಹಗಲು - ರಾತ್ರಿಯಿಡೀ ತೆಗೆದು ಅತಿಥಿ ಸತ್ಕಾರ ಕೈಗೊಳ್ಳುವ ಇಲ್ಲಿನ ಜನತೆಯ ಆತ್ಮೀಯತೆ ಅನಂತವಾದುದು.

ಅಂತೆಯೇ ಮೊಹರಂ ಹಬ್ಬದ ವಾತಾವರಣ ಒಂದು ರೀತಿಯಲ್ಲಿ ಮನೆಯವರೆಲ್ಲರೂ ಸೇರಿ ಆಚರಿಸುವಂತೆ ಕಾಣುತ್ತದೆ. ಇಲ್ಲಿ ಯಾವುದೇ ಭೇದ -ಭಾವದ, ಕುಲ - ಗೋತ್ರ, ಜಾತಿ - ವಿಜಾತಿ, ಮತ -ಭ್ರಾಂತಿಗಳ ಯಾವುದೇ ವಿಚಾರಕ್ಕೂ ಆಸ್ಪದವಿರುವುದಿಲ್ಲ.

ಕೊಪ್ಪಳ, ಯಲಬುರ್ಗಾ, ಕುಷ್ಟಗಿ, ಗಂಗಾವತಿ ಹೀಗೆ ಕೊಪ್ಪಳ ಜಿಲ್ಲೆಯ ಬಹುತೇಕ ಎಲ್ಲ ತಾಲೂಕಿನ ಎಲ್ಲ ಗ್ರಾಮ, ಪಟ್ಟಣ, ನಗರಗಳಲ್ಲಿಯೂ ಮೊಹರಂ ಹಬ್ಬವನ್ನು ವಿಶಿಷ್ಟವಾಗಿ, ಭಾವೈಕ್ಯತೆಯ ಉತ್ಸವವಾಗಿ ಆಚರಿಸಲಾಗುತ್ತಿದೆ. ಅದರಲ್ಲೂ ಕೊಪ್ಪಳ ಜಿಲ್ಲೆಯಲ್ಲಿ ಕುದರಿಮೋತಿಯ ಮೊಹರಂ ಆಚರಣೆ ಸುಪ್ರಸಿದ್ಧವಾಗಿದೆ. ಕುದರಿಮೋತಿಯ ಮೊಹರಂ ಹಬ್ಬದ ಆಚರಣೆಗೆ ಬಹಳಷ್ಟು ಹಳೆಯ ಇತಿಹಾಸವಿದೆ. ಇಲ್ಲಿನ ಮೊಹರಂ ಆಚರಣೆ ದೇಶಪ್ರಸಿದ್ಧತೆಯನ್ನು ಪಡೆದಿದೆ. ಮೊಹರಂ ಹಬ್ಬದ ನಿಮಿತ್ಯಕ್ಕೆಂದೇ ದೇಶದ ಮೂಲೆ - ಮೂಲೆಗಳ ಜನರು ಇಲ್ಲಿಗೆ ಬರುತ್ತಾರೆ. ಅದರಲ್ಲೂ ಪ್ರತಿ ಎರಡು ವರ್ಷಗಳಿಗೊಮ್ಮೆ ಬರುವ ಅಲೆಮಾರಿ ಜನಾಂಗದ ಜನತೆ ಇಲ್ಲಿ ಒಂದು ಊರನ್ನೇ ಸೃಷ್ಟಿ ಮಾಡುವಷ್ಟು ಜನಸಾಗರದಿಂದ ಬರುತ್ತದೆ. ಇಲ್ಲಿ ತಮ್ಮದೇ ಆದ ವಿಶಿಷ್ಟ ಪರಂಪರೆ, ಸಂಪ್ರದಾಯ, ಆಚರಣೆಗಳನ್ನು ಮುಗಿಸಿಕೊಂಡು ಎಂದಿನಂತೆ ತಮ್ಮ ಮುಂದಿನ ಅಲೆಮಾರಿ ಜೀವನಕ್ಕೆ ಸಾಗ ಹಾಕುತ್ತಾರೆ.

ಹೀಗೆ ಅಲೆಮಾರಿಗಳು ತಮ್ಮ ನಂಬಿಕೆ, ಆಚರಣೆ, ಸಂಪ್ರದಾಯಗಳ ಪ್ರಕಾರ ತಮಗೆ ಅತ್ಯಂತ ಪವಿತ್ರ ಸ್ಥಳವಾಗಿರುವ ಕುದರಿಮೋತಿಯನ್ನು ಭಕ್ತಿ ಭಾವದ, ಪವಿತ್ರ ಸ್ಥಳವನ್ನಾಗಿ ಒಪ್ಪಿಕೊಂಡಿದ್ದು, ಅದರ ಪ್ರಕಾರ ತಮ್ಮ ಎಲ್ಲ ಸಮಸ್ಯೆಗಳಿಗೂ ಪರಿಹಾರಗಳನ್ನು ಕುದರಿಮೋತಿಯಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ಕೈಗೊಳ್ಳುತ್ತಾರೆ. ಹೀಗೆ ಕುದರಿಮೋತಿ ಮೊಹರಂ ಹಬ್ಬವು ಕೇವಲ ದೇವರ ಆರಾಧನೆಯ ಸ್ಥಳ ಮತ್ತು ಹಬ್ಬವಾಗಿರದೇ ಅಲೆಮಾರಿಗಳ ಸಂಸ್ಕೃತಿ, ಜೀವನ ಪದ್ಧತಿ, ಬದುಕಿನ ವಿವಿಧ ಮಜಲುಗಳನ್ನು ಹೊರ ಜಗತ್ತಿಗೆ ತಿಳಿಸಿಕೊಡುವ ವಿಶಿಷ್ಟ ಹಬ್ಬವಾಗಿದೆ.

ಅಡಿಟಿಪ್ಪಣಿಗಳು :

೧. ಡಾ. ದೊಡ್ಡಮನಿ ಲೋಕರಾಜ್ ಮತ್ತು ಶ್ರೀನಿವಾಸ ಎಸ್. ರಾವುಲೊಳ್ - ಸಿಂಧೊಳ್ಳು - ಪ್ರಸ್ತಾವನೆಯ ಪುಟ ಸಂಖ್ಯೆ ೯

ಅಧ್ಯಾಯ - ೭

ಸಮಾರೋಪ

ಅಧ್ಯಾಯ - ೭ : ಸಮಾರೋಪ

ಭಾರತ ದೇಶದಲ್ಲಿ ಹಬ್ಬಗಳಿಗೆ ಕೊರತೆಯಿಲ್ಲ. ಹಬ್ಬಗಳು, ದೈವಾರಾಧನೆ, ನಂಬಿಕೆ ಮತ್ತು ಸಂಪ್ರದಾಯಗಳ ಮುಂದುವರಿದ ಭಾಗಗಳು. ಅವುಗಳ ಬೇರು ಮಾಟಗಳಲ್ಲಿ ಅವಿತಿದೆ. ನಿಸರ್ಗಾರಾಧನೆಯಲ್ಲಿ ಪಸರಿಸಿದೆ. ಅವು ಕೃಷಿ ಸಂಸ್ಕೃತಿಯಲ್ಲಿ ಸ್ಪಷ್ಟರೂಪವನ್ನು ಪಡೆದು, ಕಾಲಾನಂತರದಲ್ಲಿ ವಿಕಾಸಗೊಳ್ಳುತ್ತ ಜಟಿಲವಾದದ್ದುಂಟು. ಪ್ರತಿಯೊಂದು ಯುಗದ ಜನರೂ ಆ ಕಾಲದ ಅಭಿರುಚಿ, ಮನೋಧರ್ಮಗಳಿಗನುಗುಣವಾಗಿ, ತಂತಮ್ಮ ಕಲ್ಪನೆಗಳಿಗನುಸಾರವಾಗಿ ಅವುಗಳ ರೂಪ ಸ್ವರೂಪಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡದ್ದುಂಟು. ಅಲ್ಲದೇ ವಿವಿಧ ಬಗೆಯ ಆಚರಣೆಯ ವಿಧಾನಗಳಿಂದ ತಮ್ಮ ತಮ್ಮ ಸಂಪ್ರದಾಯಗಳಿಗನುಗುಣವಾಗಿ ಹಬ್ಬದ ಸಡಗರ, ಸಂಭ್ರಮ ಕಂಡವರು. ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟು ಪಡೆದುವು ಎಂದು ಹೇಳಬಹುದು.

ಹಬ್ಬಗಳನ್ನು ನಾಲ್ಕು ಪ್ರಕಾರಗಳಾಗಿ ವಿಂಗಡಿಸಬಹುದು. ಮತೀಯ ಹಬ್ಬ, ಸಾಮಾಜಿಕ ಹಬ್ಬ ರಾಷ್ಟ್ರೀಯ ಹಬ್ಬ ಮತ್ತು ವೈಯಕ್ತಿಕ ಹಬ್ಬಗಳು. ಆಯಾ ಧರ್ಮಗಳಿಗೆ ಸೇರಿದವರು, ತಮ್ಮ ಇಷ್ಟ ದೇವತೆಗಳ ಉತ್ಸವವನ್ನು ಪ್ರತಿವರ್ಷ ಸಾರ್ವತ್ರಿಕವಾಗಿ ಆಚರಿಸುತ್ತಾರೆ. ದೀಪಾವಳಿ, ಗೌರಿ ಗಣೇಶ ಉತ್ಸವ, ವಿಜಯ ದಶಮಿ, ಪಂಚಮಿ, ಶಿವರಾತ್ರಿ, ಕೃಷ್ಣ ಜನ್ಮಾಷ್ಟಮಿ, ರಾಮನವಮಿ, ಕಾಮನ ಹಬ್ಬ ರಂಜಾನ್, ಮೊಹರಂ, ಕ್ರಿಸ್‌ಮಸ್, ಬುದ್ಧ ಜಯಂತಿ, ಮಹಾವೀರ ಜಯಂತಿ, ಬಕ್ರೀದ್ ಮೊದಲಾದವುಗಳು ಮತೀಯ ಗುಂಪಿಗೆ ಸೇರಿದವುಗಳಾಗಿವೆ.

ಕೆಲವು ಮನೆತನಗಳಿಗೆ ಅಥವಾ ಊರಿಗಷ್ಟೇ ಮೀಸಲಾದ ಆಚರಣೆಗಳನ್ನು ಸಾಮಾಜಿಕ ಹಬ್ಬಗಳೆಂದು ಕರೆಯುತ್ತಾರೆ. ಸಂಕ್ರಾಂತಿ, ಓಣಂ, ಹುತ್ತರಿ ಹಬ್ಬ, ಪಿಳ್ಳೆ ಪೂಜೆ, ಸುಗ್ಗಿಯ ಉತ್ಸವ ಮೊದಲಾದ ಕೃಷಿ ಉತ್ಸವಗಳಿಗೆ ಸಂಬಂಧಿಸಿದ ಉತ್ಸವಗಳನ್ನು ಸಾಮಾಜಿಕ ಹಬ್ಬಗಳಲ್ಲಿ ಸೇರಿಸುತ್ತಾರೆ. ಜಾತಿ, ಕುಲ, ಗೋತ್ರ, ಲಿಂಗ, ವರ್ಣ, ಬೇಧಗಳಿಲ್ಲದೇ ಒಂದು ರಾಷ್ಟ್ರದ ಎಲ್ಲ ಜನರು ಒಂದಾಗಿ ಆಚರಿಸುವ ಉತ್ಸವಗಳನ್ನು ರಾಷ್ಟ್ರೀಯ ಹಬ್ಬಗಳೆಂದು ಹೆಸರಿಸಬಹುದು. ಸರ್ವ ತ್ಯಾಗದ ಮೂಲಕ ರಾಷ್ಟ್ರಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ ಬಸವ, ನಾನಕ್, ಅಂಬೇಡ್ಕರ್, ಗಾಂಧೀಜಿ, ಡಾ. ರಾಧಾಕೃಷ್ಣನ್, ಜವಾಹರಲಾಲ್ ನೆಹರೂ, ಸುಭಾಸ್‌ಚಂದ್ರ ಭೋಸ್, ರಾಮಕೃಷ್ಣ ಪರಮಹಂಸ, ಅರವಿಂದ, ಸ್ವಾಮಿ ವಿವೇಕಾನಂದ ಮೊದಲಾದವರ ಜನ್ಮೋತ್ಸವಗಳನ್ನು ವೈಯಕ್ತಿಕ ಹಬ್ಬಗಳೆಂದು ಪರಿಗಣಿಸಬಹುದು.

ಇಂತಹ ನಾಲ್ಕು ಪ್ರಕಾರಗಳಲ್ಲಿನ ಮತೀಯ ಹಬ್ಬಗಳಲ್ಲೊಂದಾದ ಭಾವೈಕ್ಯತೆಯನ್ನು ಸಾರುವ ಮೊಹರಂ ಹಬ್ಬ ಒಂದಾಗಿದೆ. ಮೊಹರಂ ಹಬ್ಬ ಕರ್ನಾಟಕದಾದ್ಯಂತ ಎಲ್ಲ ಹಳ್ಳಿಗಳಲ್ಲಿ ಆಚರಿಸಲಾಗುತ್ತಿದೆ. ಯಾವುದೇ ಊರಿನಲ್ಲಿ ಮುಸ್ಲಿಂ ಸಮುದಾಯದವರಿಲ್ಲದಿದ್ದರೂ ಬೇರೆ ಊರಿನಿಂದ ಮುಸ್ಲಿಮರನ್ನು ಕರೆಯಿಸಿ ಪೀರಲ ಹಬ್ಬ, ಪೀರಾನ ಹಬ್ಬ, ಅಲಾವಿ ಹಬ್ಬವನ್ನು ಆಚರಿಸಲಾಗುತ್ತಿದೆ.

ಸಾಮಾನ್ಯವಾಗಿ ಇದನ್ನು ಮೊಹರಂ ಹಬ್ಬವೆಂದು ಕರೆಯುತ್ತಾರೆ. ಮೊಹರಂ ಪದಗಳು ಕನ್ನಡ ಜನಪದಗಳಲ್ಲಿ ನಾಡಿನಾದ್ಯಂತ ಕಂಡು ಬರುತ್ತವೆ. ಭಕ್ತಿಯಿಂದ ಕೂಡಿ ಕನ್ನಡ, ಉರ್ದು ಶೋಕಗೀತೆಗಳನ್ನು ಹಾಡುತ್ತಾರೆ. ಇದಕ್ಕೆ ಮೊಹರಂ ಪದ ಇಲ್ಲವೆ ರಿವಾಯತ್ ಪದಗಳೆನ್ನುವರು. ಭಾವೈಕ್ಯತೆಯ ಪ್ರತೀಕವಾದ ಮೊಹರಂ ಹಬ್ಬದ ಆಚರಣೆ ಕೊಪ್ಪಳ ಜಿಲ್ಲೆಯಲ್ಲಿ ಬಹಳ ವಿಶಿಷ್ಟವಾದುದು. ಹಿಂದೂ - ಮುಸ್ಲಿಮ್ ಎನ್ನುವ ಬೇಧ-ಭಾವಗಳಿಲ್ಲದೇ ಬಹು ಸಂಸ್ಕೃತಿಯ ಜನ ಸೇರಿ ಆಚರಿಸುವ ಹಬ್ಬವಾಗಿದೆ.

ಸಂಸ್ಕೃತದ ಪರ್ವ ಶಬ್ದದ ತದ್ಭವ ಹಬ್ಬ, ಸಂಸ್ಕೃತದಲ್ಲಿ ಪರ್ವನ್ ಅಂದರೆ ಉತ್ಸವ ಎಂಬ ಅರ್ಥ. ನಿತ್ಯ ಜೀವನದ ಏಕತಾನತೆಗಿಂತ ಭಿನ್ನ ರೀತಿಯಲ್ಲಿ ಸಂಭ್ರಮ, ಸಂತೋಷವನ್ನು ತರುವ ಹಬ್ಬಗಳು ಮನಸ್ಸಿನ ಶುದ್ಧಿಗೆ ಪೂರಕವೂ ಆಗಿವೆ. ಇಹದ ಸೌಖ್ಯ, ಪರ ಸಾಧನೆಯ ಜೊತೆಗೆ ಸೋದರತ್ವದ ಉದಾತ್ತ ಧ್ಯೇಯ, ಮುಸ್ಲಿಂ ಹಬ್ಬಗಳ ಆಚರಣೆಯ ಉದ್ದೇಶ.

ಎಲ್ಲ ದೈವಾರಾಧನೆಗಳು ಆ ಜನಾಂಗದ ನಂಬಿಕೆ ಮತ್ತು ದೈವ ಭಕ್ತಿಗೆ ಸಂಬಂಧಿಸಿದ್ದವಾಗಿವೆ. ಇದು ಸಮುದಾಯದ ಒಗ್ಗಟ್ಟು ಹಾಗೂ ಕಲ್ಯಾಣದ ಮಹತ್ವವೂ ಇದೆ. ಅದರಂತೆ ಮೊಹರಂ ಹಬ್ಬವು ಕೂಡ ಈ ಪ್ರದೇಶದ ಮುಸ್ಲಿಮ್ ಹಾಗೂ ಹಿಂದೂ ಸಮುದಾಯದ ಜನಾಂಗದ ಭಕ್ತಿ ನಂಬಿಕೆಯ ಮೇಲೆ ನಿಂತಿದೆ.

ಮೊಹರಂ ಹಬ್ಬವು ಇಸ್ಲಾಮಿ ವರ್ಷದ ಮೊದಲ ತಿಂಗಳಾಗಿದೆ. ಹಜರತ ಮಹಮ್ಮದ ಪೈಗಂಬರರು ಇದೇ ಮೊಹರಂ ತಿಂಗಳ ಹತ್ತರಂದು ಹುತಾತ್ಮರಾದ ಸ್ಮರಣಾರ್ಥ ಬಳಕೆಗೆ ಬಂದ ಶೋಕಮೂಲವಾದ ಈ ಹಬ್ಬವೇ ಮೊಹರಂ. ಕರ್ಬಲಾ ಕಾಳಗದ ವೃತ್ತಾಂತವೇ ಮೊಹರಂ ಹಬ್ಬಕ್ಕೆ ಮೂಲ ಕಾರಣ.

ಮೊಹರಂ ಹಬ್ಬ ಅನೇಕ ಜನಪದ ಕಲೆಗಳನ್ನು ಪೋಷಿಸಿಕೊಂಡು ಬಂದಿದೆ. ರಂಗು ರಂಗಿನ ಕಾಗದಗಳಿಂದ ತಾಜಿಯಾ ತಯಾರಿಕೆ, ಹುಲಿವೇಷ, ಅಳ್ಳಿ-ಪಿಳ್ಳಿ, ಕೋಲಾಟ, ಹಲಿಗೆ, ಹೆಜ್ಜೆ ಮೇಳಗಳ ಪ್ರದರ್ಶನ, ಮೊಹರಂ ಹಾಡುಗಳ ಪ್ರದರ್ಶನ, ಸವಾಲ್-ಜವಾಬ್ ಹಾಡುಗಾರಿಕೆ ಜಾನಪದ ಸಾಹಿತ್ಯದ ಚಿತ್ರಣ, ಜಾನಪದ ಸಾಹಿತ್ಯದ ಪ್ರದರ್ಶನದ ಕಲೆಗಳಿಗೆ ಪ್ರೋತ್ಸಾಹ ಕೊಡುತ್ತ ಬಂದಿದೆ. ಮೊಹರಂ ಪದಗಳು ಅನೇಕ ಹೊಸ ವಿಚಾರಗಳನ್ನು, ಆಧುನಿಕ ಸಮಾಜಕ್ಕೆ ಹೊಂದಿಕೆಯಾಗುವ ಅನುಭವಧಾರೆಯನ್ನು ಸರಳ, ಸಹಜ, ಜಾನಪದದ ಭಾಷೆಯಲ್ಲಿ ತಿಳಿಸಿಕೊಡುತ್ತವೆ.

ಮೊಹರಂ ಹಬ್ಬ ಮೂಲತಃ ಇಸ್ಲಾಂ ಧರ್ಮದ ಹಬ್ಬವಾಗಿದ್ದರೂ ಇದೊಂದು ಹಿಂದೂ-ಮುಸ್ಲಿಂ ಜನಾಂಗದವರು ಕೂಡಿ ಭಾವೈಕ್ಯತೆಯಿಂದ ಆಚರಿಸಲಾಗುತ್ತಿರುವ ಉತ್ಸವವಾಗಿ ಪರಿಣಮಿಸಿದೆ. ದರ್ಗಾ ಸಂಸ್ಕೃತಿಯ ಉರುಸು, ಜಾತ್ರೆಗಳಲ್ಲಿ ಹಿಂದೂಗಳ ಬಹುಸಂಖ್ಯೆಯಲ್ಲಿ ಭಾಗವಹಿಸುವುದು ಮೊದಲಿನಿಂದಲೂ ಸಾಮಾನ್ಯವಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಉರುಸು, ಜಾತ್ರೆಗಳ ಮೂಲ ಉದ್ದೇಶ ಅಷ್ಟಾಗಿ ಈಡೇರುತ್ತಿಲ್ಲ, ಜೊತೆಗೆ ಮಾಧ್ಯಮಗಳ ಆಕರ್ಷಣೆ, ಜನರ ಆಸಕ್ತಿಯ ಕೊರತೆಯಿಂದಾಗಿ ಜಾನಪದ ಸಾಹಿತ್ಯದ ಪ್ರಕಾರವಾಗಿರುವ ಮೊಹರಂ ಪದಗಳ ಪ್ರದರ್ಶನದ ಕಾರ್ಯಕ್ರಮಗಳೂ

ಕಡಿಮೆಯಾಗುತ್ತ ಬಂದಿರುವುದು ವಿಷಾದನೀಯ. ಅಲ್ಲಿಯೂ ಈಗೀಗ ಪುರೋಹಿತಶಾಹಿ ಪ್ರಾಬಲ್ಯ ಹೆಚ್ಚುತ್ತಿರುವಂತೆ ಭಾಸವಾಗುತ್ತಿದೆ. ದೆವ್ವ ಭೂತ ಬಿಡಿಸುವ ನೆಪದಲ್ಲಿ ಭಕ್ತರಿಗೆ ದೈಹಿಕ, ಮಾನಸಿಕ ಹಿಂಸೆ ನೀಡುವುದರ ಮೂಲಕ ಭಕ್ತರ ಶೋಷಣೆ ನಡೆಯುತ್ತಿದೆಯಾದರೂ ಪ್ರಸ್ತುತ ಆಧುನಿಕ ಕಂಪ್ಯೂಟರ್ ಯುಗದಲ್ಲಿಯೂ, ಅದೂ ಹೆಚ್ಚುತ್ತಿರುವ ಕೋಮುಗಲಭೆ, ಮತೀಯ ಭಾವನೆಗಳು, ಮತಾಂಧತೆಯ ಗಲಾಟೆಗಳ ಮಧ್ಯೆಯೂ ಇಂತಹ ಉರುಸು, ಜಾತ್ರೆ, ಹಬ್ಬಗಳು ಕೋಮು ಸೌಹಾರ್ದತೆಯನ್ನು ಉಂಟು ಮಾಡುವ, ಜನರಲ್ಲಿ ಭಾವೈಕ್ಯತೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿವೆ.

ಮೊಹರಂ ಹಬ್ಬದ ಸಂದರ್ಭದಲ್ಲಿನ ಹಾಡುಗಳು ಕೇವಲ ಧರ್ಮಕ್ಕೆ, ಆಚರಣೆಗೆ ಸೀಮಿತವಾದ ಹಾಡುಗಳಾಗಿರದೇ ಸಾರ್ವಕಾಲಿಕ ಸತ್ಯವನ್ನು ತಿಳಿಸುವ ಹಾಡುಗಳೂ ಆಗಿವೆ. ವರದಕ್ಷಿಣೆ, ಬಾಲ್ಯವಿವಾಹದಂತಹ ಸಮಾಜದ ದುಷ್ಟ ಅನಿಷ್ಟ ಪದ್ಧತಿಗಳನ್ನು ವಿರೋಧಿಸುವ ಹಾಡುಗಳು, ನೈತಿಕ ಮೌಲ್ಯಗಳನ್ನು ಸಾರುವ ಹಾಡುಗಳು, ಮತೀಯ ಸಾಮರಸ್ಯವನ್ನು ಹೆಚ್ಚಿಸುವ ಹಾಡುಗಳು, ಆಧುನಿಕ ಸಮಾಜದಲ್ಲಿ ಮಾಯವಾದ ತ್ಯಾಗ, ನಿಸ್ವಾರ್ಥತೆ ಹಾಗೂ ಪರೋಪಕಾರಿ ಭಾವನೆಯಂತಹ ನೈಜ ಮೌಲ್ಯಗಳ ಬಗ್ಗೆ ಹೀಗೆ ಸಾಮಾಜಿಕ ಉಪಯುಕ್ತ ಹಾಡುಗಳನ್ನು ಸುಂದರವಾಗಿ ಪ್ರಸ್ತುತ ಸಮಾಜಕ್ಕೆ ಹೊಂದಿಕೆಯಾಗುವಂತೆ ಹೆಣೆಯಲಾಗಿದೆ.

ಇತಿಹಾಸದ ಕಾಲಚಕ್ರದಲ್ಲಿ ಬದಲಾವಣೆ ಹೊಂದುತ್ತಲೇ ಬಂದಿರುವ ಭಾರತ ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ಅವರ ಧರ್ಮದ ಹಬ್ಬ, ಹರಿದಿನ, ಸಂಸ್ಕೃತಿ, ಸಂಪ್ರದಾಯ, ಪದ್ಧತಿಗಳಲ್ಲಿಯ ಭಾಗವಾಗಿ ಅವರ ಸಂಸ್ಕೃತಿಯ ಆಚರಣೆಗಳನ್ನೂ ಅನುಸರಿಸಿಕೊಂಡು ಬಂದಿದ್ದು ಅದರಂತೆ ಮುಸಲ್ಮಾನರ ಪ್ರವೇಶದ ನಂತರ ಅವರ ಸಂಸ್ಕೃತಿಯನ್ನೂ ಮೇಳೈಸಿಕೊಂಡು ಬಂದಿದೆ. ಅದರಲ್ಲಿಯೂ ನಾಲ್ಕೈದು ಶತಮಾನಗಳಿಂದಲೇ ಅವರ ಆಡಳಿತದ ಅಡಿಯಲ್ಲಿ ಬಂದ ಕೊಪ್ಪಳ ಜಿಲ್ಲೆಯೂ ಸಹ ಅವರ ಸಂಪ್ರದಾಯದ ಮೊಹರಂ ಹಬ್ಬದ ಆಚರಣೆಯನ್ನು ತನ್ನ ಸಂಸ್ಕೃತಿಯಲ್ಲಿ ಮೇಳೈಸಿಕೊಂಡಿದೆ. ಮೊಹರಂ ಹಬ್ಬ ಎಂದರೆ ಇಲ್ಲಿಯವರಿಗೆ ಒಂದು ರೀತಿಯ ಭಾವೈಕ್ಯತೆಯ ಹಬ್ಬ, ಇದು ಒಂದು ಜಾತಿಗೆ ಸೀಮಿತವಾದ ಹಬ್ಬ ಎನ್ನುವ ಭಾವನೆಯಿಲ್ಲ. ಕೋಮು ಸೌಹಾರ್ದತೆಯಿಂದ, ಭಾವೈಕ್ಯತೆಯಿಂದ ಆಚರಿಸಲಾಗುವ ಈ ಹಬ್ಬ ಉತ್ತರ - ಕರ್ನಾಟಕ ಮತ್ತು ಹೈದರಾಬಾದ - ಕರ್ನಾಟಕ ಪ್ರದೇಶಗಳಲ್ಲಿ ತನ್ನದೇ ಆದ ವಿಶಿಷ್ಟ ರೀತಿ, ಪದ್ಧತಿಯಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ.

ಹೈದರಾಬಾದ್ - ಕರ್ನಾಟಕ ಹಲವು ವರ್ಷಗಳವರೆಗೆ ಮುಸಲ್ಮಾನರ ಆಳ್ವಿಕೆಗೆ, ಸಂಸ್ಕೃತಿಗೆ ಒಳಗಾಗಿದ್ದ ಈ ಪ್ರದೇಶದಲ್ಲಿ ಸಹಜವಾಗಿಯೇ ಆ ಸಂಸ್ಕೃತಿಯ ಛಾಯೆ ಮೂಡಿದೆ ಎನ್ನಬಹುದು. ಇಲ್ಲಿ ಬಹುಸಂಖ್ಯಾತರ ಸಂಸ್ಕೃತಿ ಎಷ್ಟೋ ಅಂಶಗಳನ್ನು ಮುಸ್ಲಿಮರಿಂದ ಸ್ವೀಕರಿಸಿದೆ.

ಮುಸಲ್ಮಾನರ ಪ್ರಸಿದ್ಧ 'ಮೊಹರಂ' ಹಬ್ಬವನ್ನು ಇಲ್ಲಿ ಬಹುತೇಕ ಎಲ್ಲರೂ ಆಚರಿಸುತ್ತಾರೆ. ಹಿಂದೂ - ಮುಸಲ್ಮಾನರೆಂಬ ಭೇದ-ಭಾವವಿಲ್ಲದೆ ಕೋಮುಸೌಹಾರ್ದತೆಯಿಂದ ಆಚರಿಸಲಾಗುತ್ತಿರುವ

ಮೊಹರಂ ಹಬ್ಬವನ್ನು ನಾವು ಮುಸಲ್ಮಾನರ ಸಂಸ್ಕೃತಿಯಿಂದ ಸ್ವೀಕರಿಸಲಾಗಿದೆ. ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಹೈದರಾಬಾದ್ - ಕರ್ನಾಟಕ ಪ್ರದೇಶದಲ್ಲಿ ಮೊಹರಂ ಹಬ್ಬದ ಆಚರಣೆಯು ಕೇವಲ ಏಕ ಸಂಸ್ಕೃತಿ, ಏಕ ಜಾತಿಗೆ ಮೀಸಲಾಗಿರದೆ ಬಹುಸಂಖ್ಯಾತರು ಕೂಡ ಈ ಹಬ್ಬದಲ್ಲಿ ಅತ್ಯಂತ ಶ್ರದ್ಧೆ, ಭಕ್ತಿಯಿಂದ ಪಾಲ್ಗೊಳ್ಳುತ್ತಾರೆ. ಮೊಹರಂ ಹಬ್ಬವನ್ನು ವಿಜೃಂಭಣೆಯಿಂದ ಬಹುಸಂಖ್ಯಾತರೂ, ಮುಸ್ಲಿಂರ ಜೊತೆಗೂಡಿ ಆಚರಿಸುವ ಸ್ಥಳಗಳಿಂದ ಕೊಪ್ಪಳ ಜಿಲ್ಲೆಯೂ ಹೊರತಾಗಿಲ್ಲ. ಅದರಲ್ಲೂ ಕೊಪ್ಪಳ ಜಿಲ್ಲೆಯ ಕುದರಿಮೋತಿ ಗ್ರಾಮದ ಮೊಹರಂ ಆಚರಣೆ ಕರ್ನಾಟಕದಲ್ಲಿಯೇ ಅತ್ಯಂತ ಹೆಸರುವಾಸಿಯಾಗಿರುವ ಮೊಹರಂ ಹಬ್ಬದ ತಾಣ.

ಕುದರಿಮೋತಿಯಲ್ಲಿ ನಡೆಯುವ ಭಾವೈಕ್ಯತೆ ಸಂಕೇತವಾಗಿರುವ ಮೊಹರಂ ಹಬ್ಬವನ್ನು ಕಣ್ಣಿಂದ ನೋಡುವುದೇ ಒಂದು ಹಬ್ಬ ಒಂದು ರೀತಿಯಲ್ಲಿ ಅದ್ಭುತದಂತೆಯೂ ಕಂಡು ಬರುವ ಈ ಸಮಯದಲ್ಲಿನ ಜಗಳಗಳು, ವ್ಯಾಜ್ಯಗಳು, ವೈವಾಹಿಕ ಸಂಬಂಧಗಳು, ವ್ಯವಹಾರ ಮೊದಲಾದವುಗಳನ್ನು ಗಮನಿಸಿದರೆ ಜನರು ಮೊಹರಂ ಹಬ್ಬವನ್ನು ಕುದರಿಮೋತಿ ನೆಲದಲ್ಲಿ ಆಚರಿಸುವದನ್ನು ಎಷ್ಟರ ಮಟ್ಟಿಗೆ ಪವಿತ್ರ ಎಂದು ತಿಳಿದುಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅಲ್ಲಮಪ್ರಭುವಿನ ವಚನದಂತೆ ಎತ್ತಣಿಂದೆತ್ತ ಸಂಬಂಧವಯ್ಯ ಎನ್ನುವ ಹಾಗೆ ಕುದರಿಮೋತಿಯಲ್ಲಿ ನಡೆಯುವ ಮೊಹರಂ ಹಬ್ಬಕ್ಕೂ ಅಲೆಮಾರಿ ಜನಾಂಗದ ವ್ಯಾಜ್ಯ, ಜಗಳ, ವ್ಯವಹಾರ, ಮದುವೆ, ಸಂಪ್ರದಾಯಗಳ ಆಚರಣೆಗೂ ಎತ್ತಣಿಂದೆತ್ತ ಸಂಬಂಧ ಎನ್ನುವದು ಒಂದು ಪ್ರಶ್ನೆಯಾಗುತ್ತದೆಯಲ್ಲದೇ ಇವರ ಸಂಪ್ರದಾಯಗಳ ಆಚರಣೆಯ ಬಗ್ಗೆ ಕುತೂಹಲ, ಆಸಕ್ತಿ ಉಂಟಾಗುತ್ತದೆ.

ಮೊಹರಂ ಹಬ್ಬವನ್ನು ಊರ ಹಬ್ಬವೆಂದು ಆಚರಿಸಲಾಗುತ್ತದೆ. ಇಲ್ಲಿನ ಜನರು ಅತಿಥಿಗಳಿಗೆ ಸ್ವಂತ ಮನೆಯವರಂತೆ ಕಾಣುತ್ತಾರೆ. ಇದು ಮೊದಲಿಂದಲೂ ಬಂದ ಸಂಪ್ರದಾಯವಾಗಿದ್ದು, ಮನೆಗೆ ಬಂದವರನ್ನು ಎಣಿಸುವ ಈ ಕಾಲದಲ್ಲಿಯೂ ಇಂತಹ ಅತಿಥಿ ದೇವೋಭವ ಎನ್ನುವ ಸತ್ಸಂಪ್ರದಾಯ ಹೊಂದಿರುವ ಕುದರಿಮೋತಿಯ ಜನ ನಿಜಕ್ಕೂ ಅಭಿನಂದನಾರ್ಹರು. ಮನೆಯ ಬಾಗಿಲುಗಳನ್ನು ಹಗಲು - ರಾತ್ರಿಯಿಡೀ ತೆಗೆದು ಅತಿಥಿ ಸತ್ಕಾರ ಕೈಗೊಳ್ಳುವ ಇಲ್ಲಿನ ಜನತೆಯ ಆತ್ಮೀಯತೆ ಅನಂತವಾದುದು. ಅಂತೆಯೇ ಮೊಹರಂ ಹಬ್ಬದ ವಾತಾವರಣ ಒಂದು ರೀತಿಯಲ್ಲಿ ಮನೆಯವರೆಲ್ಲರೂ ಸೇರಿ ಆಚರಿಸುವಂತೆ ಕಾಣುತ್ತದೆ. ಇಲ್ಲಿ ಯಾವುದೇ ಭೇದ -ಭಾವದ, ಕುಲ - ಗೋತ್ರ, ಜಾತಿ - ವಿಜಾತಿ, ಮತ -ಭ್ರಾಂತಿಗಳ ಯಾವುದೇ ವಿಚಾರಕ್ಕೂ ಆಸ್ಪದವಿರುವುದಿಲ್ಲ.

ಕುದರಿಮೋತಿ ಎಂದರೆ ಮೊಹರಂ ಹಬ್ಬದ ಆಚರಣೆಗೆ ಹೆಸರುವಾಸಿಯಾದ ಕೊಪ್ಪಳ ಜಿಲ್ಲೆಯ ಭಾವೈಕ್ಯತೆಯ ಸ್ಥಳ. ಶತಮಾನಗಳಿಂದಲೂ ತನ್ನ ವೈಶಿಷ್ಟ್ಯ ಮತ್ತು ಗುರುತರವಾದ ಪರಂಪರೆಯನ್ನು ಕನ್ನಡ ನಾಡಿನಲ್ಲಿ ಸಾರುತ್ತ ಅಸಂಖ್ಯಾತ ಭಕ್ತಾದಿಗಳ ಅಭಿಮಾನ, ಭಕ್ತಿಯ ದ್ಯೋತಕವಾಗಿದೆ. ಗ್ರಾಮದ ಎಲ್ಲ ಕೋಮಿನವರೂ ಐಕ್ಯತೆಯಿಂದ, ಅನನ್ಯ ಭಕ್ತಿಯಿಂದ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಾ ಬಂದಿದ್ದು

ಮೊಹರಂ ಆಚರಣೆಯ ಮೂಲಕ ಗತಿಸಿ ಹೋದ ದಂತಕಥೆಯ ಇತಿಹಾಸವನ್ನು ಸಾರುತ್ತಿದೆ.

ಇಲ್ಲಿ ಜಾತಿ, ಬೇಧಗಳಿಲ್ಲದೇ ಸುಮಾರು ಎರಡು ಶತಮಾನಗಳಿಂದಲೂ ಮೊಹರಂ ಹಬ್ಬದಾಚರಣೆ ಮಾಡಲಾಗುತ್ತಿದೆ. ಮೊಹರಂ ಹಬ್ಬವು ಊರಿನ ಜನರೆಲ್ಲರಿಗೂ ಒಂದು ರೀತಿಯ ಉತ್ಸವವಾಗಿದೆ. ಇಲ್ಲಿನ ಜನರು ಮೂರು ದಿನಗಳ ಕಾಲ ಊರಿಗೆ ಬಂದವರನ್ನು ಉಪಚರಿಸುತ್ತಾರೆ. ಜೊತೆಗೆ ಈ ಮೂರು ದಿನ ರಾತ್ರಿ ಹೊತ್ತು ಮನೆಯ ಬಾಗಿಲು ಹಾಕದಿರುವ ಸಂಪ್ರದಾಯವೂ ಇದೆ. ಸಕ್ಕರೆ ಮಾದಲಿ, ಬೆಲ್ಲದ ಮಾದಲಿ, ಚೊಂಗೆಯಂತಹ ಸಿಹಿ ತಿಂಡಿಗಳು ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ತಯಾರಾಗಿರುತ್ತದೆ.

ಕೊಪ್ಪಳ ಜಿಲ್ಲೆಯ ಮೊಹರಂ ಹಬ್ಬದ ಅನೇಕ ತಾಣಗಳಿಗೆ ಹೋಲಿಸಿದರೆ ಕುದರಿಮೋತಿ ಅಗ್ರಗಣ್ಯ ಸ್ಥಾನದಲ್ಲಿ ನಿಲುತ್ತದೆ. ಇಲ್ಲಿನ ಮೊಹರಂ ಇತಿಹಾಸ, ಆಚರಣೆ ದೇಶದಲ್ಲಿ ಹೆಸರು ಪಡೆದಿದೆ.

ಕೊಪ್ಪಳ, ಯಲಬುರ್ಗಾ, ಕುಷ್ಟಗಿ, ಗಂಗಾವತಿ ಹೀಗೆ ಕೊಪ್ಪಳ ಜಿಲ್ಲೆಯ ಬಹುತೇಕ ಎಲ್ಲ ತಾಲೂಕಿನ ಎಲ್ಲ ಗ್ರಾಮ, ಪಟ್ಟಣ, ನಗರಗಳಲ್ಲಿಯೂ ಮೊಹರಂ ಹಬ್ಬವನ್ನು ವಿಶಿಷ್ಟವಾಗಿ, ಭಾವೈಕ್ಯತೆಯ ಉತ್ಸವವಾಗಿ ಆಚರಿಸಲಾಗುತ್ತಿದೆ. ಅದರಲ್ಲೂ ಕೊಪ್ಪಳ ಜಿಲ್ಲೆಯಲ್ಲಿ ಕುದರಿಮೋತಿಯ ಮೊಹರಂ ಆಚರಣೆ ಸುಪ್ರಸಿದ್ಧವಾಗಿದೆ. ಕುದರಿಮೋತಿಯ ಮೊಹರಂ ಹಬ್ಬದ ಆಚರಣೆಗೆ ಬಹಳಷ್ಟು ಹಳೆಯ ಇತಿಹಾಸವಿದೆ. ಇಲ್ಲಿನ ಮೊಹರಂ ಆಚರಣೆ ದೇಶಪ್ರಸಿದ್ಧತೆಯನ್ನು ಪಡೆದಿದೆ. ಮೊಹರಂ ಹಬ್ಬದ ನಿಮಿತ್ತಕ್ಕೆಂದೇ ದೇಶದ ಮೂಲೆ - ಮೂಲೆಗಳ ಜನರು ಇಲ್ಲಿಗೆ ಬರುತ್ತಾರೆ. ಅದರಲ್ಲೂ ಪ್ರತಿ ಎರಡು ವರ್ಷಗಳಿಗೊಮ್ಮೆ ಬರುವ ಅಲೆಮಾರಿ ಜನಾಂಗದ ಜನತೆ ಇಲ್ಲಿ ಒಂದು ಊರನ್ನೇ ಸೃಷ್ಟಿ ಮಾಡುವಷ್ಟು ಜನಸಾಗರದಿಂದ ಬರುತ್ತದೆ. ಇಲ್ಲಿ ತಮ್ಮದೇ ಆದ ವಿಶಿಷ್ಟ ಪರಂಪರೆ, ಸಂಪ್ರದಾಯ, ಆಚರಣೆಗಳನ್ನು ಮುಗಿಸಿಕೊಂಡು ಎಂದಿನಂತೆ ತಮ್ಮ ಮುಂದಿನ ಅಲೆಮಾರಿ ಜೀವನಕ್ಕೆ ಸಾಗ ಹಾಕುತ್ತಾರೆ.

ಕುದರಿಮೋತಿಯ ಮೊಹರಂ ಆಚರಣೆಯ ಇನ್ನೊಂದು ಪ್ರಮುಖ ಅಂಶವೆಂದರೆ ದೇಶದ ನಾನಾ ಮೂಲೆಗಳಿಂದ ಅಲೆಮಾರಿ ಜನಾಂಗದ, ಸುಡುಗಾಡು ಸಿದ್ಧರು, ವೇಷಗಾರರು, ಹಾವಾಡಿಗರು, ಜಾತಿಗಾರರು, ಗೊಂದಲಿಗರು, ಶಿಂಧೂಳ ಇನ್ನೂ ಮುಂತಾದ ಜನರು ಪರಸ್ಪರ ಮುಖಾ-ಮುಖಿಯಾಗಿ ಒಂದೆಡೆ ಕೂಡುತ್ತಾರೆ.

ಪ್ರತಿ ಎರಡು ವರ್ಷಗಳಿಗೊಮ್ಮೆ ದೇಶದ ಮೂಲೆ ಮೂಲೆಗಳಿಂದ ಬರುವ ಇವರು ಅಲೆಮಾರಿ ಜನಾಂಗದರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಈ ಜನಾಂಗದ ಅಲೆದಾಟ, ತಿರುಗಾಟ ಇರುತ್ತದೆ. ಸಾಮಾನ್ಯವಾಗಿ ಇವರೆಲ್ಲರೂ ಹಿಂದೂಗಳಾಗಿದ್ದು, ಭಾವೈಕ್ಯತೆಯಿಂದ ಒಂದೆಡೆ ಸೇರಿ ಮೊಹರಂ ಆಚರಿಸಿ, ಹಬ್ಬದ ನಂತರ ಅದೇ ಅಲೆಮಾರಿ ಬದುಕು ಸಾಗಿಸುತ್ತಾರೆ.

ಹರಕೆ ಹೊತ್ತುಕೊಂಡತಹ ಭಕ್ತರು, ವಲಸೆ ಹೋದವರು ಮೊಹರಂ ಹಬ್ಬಕ್ಕಾಗಿ ಬರುತ್ತಾರೆ. ತಮ್ಮ ತಮ್ಮ ನಂಬಿಕೆಯಂತೆ ಹುಲಿಯ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಕರ್ನಾಟಕದ ವಿವಿಧ

ಭಾಗಗಳಿಂದಲ್ಲದೇ ದೆಹಲಿ, ಬಿಹಾರ, ಗುಜರಾತ್‌ಗಳಿಂದಲೂ ಜನ ತಮ್ಮ ಹರಕೆ ತೀರಿಸಲು ಹುಲಿ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಈ ಹಗಲು ವೇಷಗಾರರು ತಮ್ಮ ಕೈಯಲ್ಲಿನ ಚಾಟಿಯಿಂದ ಜನರಿಗೆ ಮೃದುವಾಗಿ ಏಟು ಹೊಡೆದು ಗಮನ ಸೆಳೆಯುತ್ತಾರೆ.

ಎರಡು ವರ್ಷಗಳಿಗೊಮ್ಮೆ ಕುದರಿಮೋತಿಯಲ್ಲಿ ಮೊಹರಂ ಹಬ್ಬದ ಸಮಯದಲ್ಲಿ ಸಾವಿರಾರು ಡೇರೆಗಳು ಮೇಲೆದ್ದು ನಿಲ್ಲುತ್ತವೆ. ಕಡಿಮೆ ಎಂದರೂ ೧೦ ರಿಂದ ೧೫ ಸಾವಿರದಷ್ಟು ಜನರು ಬಂದು ಇಲ್ಲಿ ಕೆಲವು ದಿನ ಉಳಿಯುತ್ತಾರೆ. ಒಂದೊಂದು ಕುಟುಂಬಕ್ಕೆ ಒಂದು ಡೇರೆ. ಅಲ್ಲಿಯೇ ಅಡುಗೆ, ದಿನನಿತ್ಯದ ದಿನಚರಿ. ಇದಲ್ಲದೇ ಸುಮಾರು ೧ ಸಾವಿರ ಡೇರೆಗಳಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಿಂದ ಬಂದ ಜನರ ವಾಸವಾಗಿರುತ್ತದೆ. ಇದೇ ಸಮಯದಲ್ಲಿಯೇ ಈ ಅಲೆಮಾರಿ ಜನಾಂಗದ ಬಹುತೇಕ ಮದುವೆಗಳ ನಿಶ್ಚಿತಾರ್ಥ, ಲಗ್ನ, ನ್ಯಾಯ ತೀರ್ಮಾನ ಆಗುತ್ತವೆ. ತಮ್ಮದೇ ಪಂಚರ ನ್ಯಾಯ ತೀರ್ಮಾನಕ್ಕೆ ಈ ಜನಾಂಗದವರು ಬದ್ಧರಾಗಿರುತ್ತಾರಲ್ಲದೇ, ತಪ್ಪಿಗೆ ದಂಡ ವಿಧಿಸಲಾಗುತ್ತದೆ. ಆ ದಂಡದ ಹಣವನ್ನು ದರ್ಗಾಕ್ಕೆ ಕಾಣಿಕೆಯಾಗಿ ಸಲ್ಲಿಸಿ ಜನಾಂಗ ಮತ್ತೆ ತಮ್ಮ ಅಲೆಮಾರಿ ಜೀವನಕ್ಕೆ ಮುಂದೆ ಹೋಗುತ್ತಾರೆ.

ಒಂದು ಸಂಸ್ಕೃತಿಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಹಲವು ಜನಾಂಗದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಅನಿವಾರ್ಯತೆ ಇದೆ. ಸಾಂಸ್ಕೃತಿಕ ಮಾನವ ವಿಜ್ಞಾನದಲ್ಲಿ ಮಾನವ ಕುಲ ವಿಜ್ಞಾನ ಮತ್ತು ಮಾನವ ಕುಲ ವಿವರಣ ವಿಜ್ಞಾನ ಎನ್ನುವ ಎರಡು ಅಧ್ಯಯನ ವಿಷಯಗಳು ಬುಡಕಟ್ಟುಗಳ ಸಂಸ್ಕೃತಿಯನ್ನು ಅಭ್ಯಾಸ ಮಾಡುತ್ತವೆ. ಸಂಸ್ಕೃತಿ ಕಾಲದಿಂದ ಕಾಲಕ್ಕೆ ಬದಲಾಗುವುದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಸಾಂಸ್ಕೃತಿಕ ವ್ಯತ್ಯಾಸವನ್ನು ಅಧ್ಯಯನ ಮಾಡುವುದು ಅಷ್ಟೇ ಮುಖ್ಯವಾಗಿದೆ. ಆದುದರಿಂದ ಸಂಸ್ಕೃತಿಯ ವಿಕಾಸದ ಮೂರು ಹಂತಗಳಾದ ಆದಿವಾಸಿ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ, ನಗರ ಸಂಸ್ಕೃತಿಗಳನ್ನು ಗಮನಿಸಬೇಕಾಗುತ್ತದೆ. ಒಂದು ಸಮಾಜದಲ್ಲಿನ ಜನ ವಾಸ ಮಾಡುವ ಪ್ರದೇಶ ವಾಸ ಮಾಡುವ ವಿಧಾನದ ಆಧಾರದ ಮೇಲೆ ನಗರ ಸಂಸ್ಕೃತಿ ಮತ್ತು ಗ್ರಾಮೀಣ ಸಂಸ್ಕೃತಿ ಎಂದು ವಿಭಜಿಸಿ ನಿರ್ಧರಿಸಬಹುದಾಗಿದೆ. ಆದರೆ ಇವೆರಡರಿಂದಲೂ ದೂರವಿರುವ ಮತ್ತೊಂದು ವರ್ಗದ ಸಂಸ್ಕೃತಿ ಇದೆ. ಅದೇ ಬುಡಕಟ್ಟು ಸಂಸ್ಕೃತಿ. ಇಂಥವರನ್ನು ಅಲೆಮಾರಿಗಳೆನ್ನುತ್ತಾರೆ. ಅನೇಕ ಶತಮಾನಗಳಿಂದಲೂ ಬೆಟ್ಟ, ಗುಡ್ಡಗಳ ಪ್ರದೇಶಗಳಲ್ಲಿ, ದ್ವೀಪಗಳಲ್ಲಿ, ಮರಳು ಗಾಡಿನಲ್ಲಿ ವಾಸವಾಗಿರುವ ಸಾಮಾಜಿಕ ವರ್ಗಗಳು ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಪ್ರಭಾವಕ್ಕೆ ಸಿಕ್ಕರೆ ತಮ್ಮ ಸಂಸ್ಕೃತಿಯನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿರುವ ಜನಾಂಗವನ್ನು ಬುಡಕಟ್ಟು ಇಲ್ಲವೇ ಅಲೆಮಾರಿ ಜನಾಂಗಗಳೆಂದು ಕರೆಯುತ್ತಾರೆ. ಇಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಮಾಜದ ಪ್ರತಿಯೊಬ್ಬನನ್ನು ತಿಳಿದುಕೊಂಡಿರುತ್ತಾನೆ. ಇವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆ ರಕ್ತ ಸಂಬಂಧದ ಮೇಲೆ ಅವಲಂಬಿಸಿರುತ್ತದೆ. ಹೊರಗಿನ ಪ್ರತಿಯೊಬ್ಬನನ್ನು ಅನುಮಾನದಿಂದಲೇ ನೋಡುವ ಪದ್ಧತಿ ಈ ಜನರಲ್ಲಿ ಇರುತ್ತದೆ. ಇವರು ತಮ್ಮದೇ ಆದ ಆಚಾರ-ವಿಚಾರ, ಕಲೆ-ಸಾಹಿತ್ಯ ಹೊಂದಿರುತ್ತಾರೆ. ಇಂತಹ ಅಲೆಮಾರಿ ಜನಾಂಗದವರ ಪೈಕಿ ಹಗಲು ವೇಷಗಾರರು, ಸುಡುಗಾಡು ಸಿದ್ದರು, ಡೊಂಬರು, ಸಿಂಧೊಳ್ಳರು,

ಗೊಂಧಳಿಗರು, ಹಾವಾಡಿಗರು, ಜಾತಿಗಾರರು ಹಾಗೂ ಇನ್ನೂ ಅನೇಕರಿದ್ದಾರೆ.

ವಿಶ್ವದ ಮೂಲಿಗರೇ ಅಲೆಮಾರಿ ಆದಿವಾಸಿಗಳು. ಇವರಲ್ಲಿ ಹಲವು ವಿಧ. ಪ್ರಕೃತಿ ಮಡಿಲಿನ ಪಾರಂಪರಿಕ ಪಶುಪಾಲಕ ಅಲೆಮಾರಿ ಆದಿವಾಸಿಗಳು, ಪಾರಂಪರಿಕ ಧಾರ್ಮಿಕ ಭಿಕ್ಷಾವೃತ್ತಿಯ ಅಲೆಮಾರಿ ಆದಿವಾಸಿಗಳು ಮತ್ತು ಆಧುನಿಕ ವ್ಯಪರಿತ್ಯಗಳ ಹಿನ್ನೆಲೆಯಲ್ಲಿ ಉಗಮಗೊಂಡ ಅಲೆಮಾರಿ ಜನಸಮೂಹಗಳು. ಈ ಜನ ಸಮೂಹಗಳು ತಮ್ಮದೇ ಆದ ವಿಶಿಷ್ಟ ಹಾಗೂ ವಿಚಿತ್ರ ಜೀವನ ಶೈಲಿ, ಧಾರ್ಮಿಕ ಪದ್ಧತಿ, ಆಚರಣೆಗಳು, ನಂಬಿಕೆಗಳನ್ನು ಹೊಂದಿರುತ್ತವೆ. ಇವರು ಮೂಲತಃ ಅಲೆಮಾರಿಗಳಾಗಿರುವುದರಿಂದ, ಎಲ್ಲರೂ ವಿವಿಧ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿರುವುದರಿಂದ ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ವರ್ಷಕ್ಕೆ ಒಮ್ಮೆಯೋ, ಎರಡು ವರ್ಷಕ್ಕೆ ಒಮ್ಮೆಯೋ ಎಲ್ಲೋ ಒಂದು ಕಡೆ ಸೇರುವ ನಿರ್ಧಾರ ಕೈಗೊಂಡಿರಬೇಕು. ಆ ನಿರ್ಧಾರದಂತೆ ಅವರು ನಿಗದಿತ ಪ್ರದೇಶದಲ್ಲಿ ನಿಗದಿತ ಸಮಯದಲ್ಲಿ ಬೀಡು ಬಿಡುತ್ತಾರೆ. ಇದರಿಂದ ಅವರಿಗೆ ತಮ್ಮವರನ್ನು ಭೇಟಿಯಾಗಲು, ತಮ್ಮ ದೈವತ್ವದ ಆಚರಣೆಯ ಮೂಲಕ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು, ಆಚರಣೆ ಮತ್ತು ತಮ್ಮ ಪೂರ್ವ ನಿರ್ಧರಿತ ವೇಳಾಪಟ್ಟಿಯಂತೆ ಸಂಬಂಧಗಳನ್ನು ಬೆಳೆಸಿಕೊಳ್ಳುವ, ಕೊಡು-ಕೊಳ್ಳುವ ವ್ಯವಹಾರ ಮಾಡುವ ಸಂಪ್ರದಾಯ ಹಾಕಿಕೊಂಡಿರಬೇಕು. ಅಂತೆಯೇ ಅವರು ಒಂದು ಸ್ಥಳದಲ್ಲಿ ಒಂದು ನಿಗದಿತ ಸಮಯದಲ್ಲಿ ಬೀಡು ಬಿಟ್ಟು ತಮ್ಮ ಪರಂಪರೆ ಮೆರೆಯುತ್ತಾರೆ.

ಈ ಮೇಲಿನ ದೃಷ್ಟಿಯಲ್ಲಿ ವಿಚಾರಿಸಿದರೆ ಅಲೆಮಾರಿಗಳು ಕುದರಿಮೋತಿಯನ್ನು ತಮ್ಮ ಕೇಂದ್ರ ಸ್ಥಾನವನ್ನಾಗಿ, ಮೊಹರಂ ಆಚರಣೆಯ ಸಂದರ್ಭದಲ್ಲಿ ಆಗಮಿಸಲು ನಿರ್ಧರಿಸಿಕೊಂಡಿರಬೇಕು. ಅವರು ಮೊಹರಂ ಆಚರಣೆಯ ಸಂದರ್ಭದಲ್ಲಿ ಮೊಹರಂ ದೈವತ್ವದ ಮುಂದೆ ತಮ್ಮೆಲ್ಲ ಇಷ್ಟಾರ್ಥಗಳನ್ನು, ಹರಕೆಗಳನ್ನು, ಅಂದುಕೊಂಡದ್ದನ್ನು ಪೂರೈಸಿಕೊಳ್ಳಲು ವೇದಿಕೆಯನ್ನಾಗಿ ಮಾಡಿಕೊಂಡಿರಬೇಕು. ಈ ವೇದಿಕೆಯು ಮೊಹರಂ ಹಬ್ಬಕ್ಕೆ ಕಳೆ ತಂದುಕೊಟ್ಟಿದೆ. ಅಲೆಮಾರಿಗಳು ಬುಡಕಟ್ಟು ಜನಾಂಗಕ್ಕೆ ಸೇರಿದವರಾಗಿದ್ದರೂ, ಅವರ ವಿಶಿಷ್ಟ ಬದುಕು, ಅವರ ಸಾಹಿತ್ಯ, ಜೀವನ ಪದ್ಧತಿ, ಜನಪದ ವೈದ್ಯ, ಭಾಷೆ ಎಲ್ಲವೂ ಬಹಳಷ್ಟು ಉಪಯುಕ್ತ ಹಾಗೂ ಅವಶ್ಯಕವಾದುದಾಗಿದೆ.

ಅಲೆಮಾರಿಗಳ ಮೂಲ ಜಾತಿಯ ಬಗ್ಗೆ ಬಹಳಷ್ಟು ಗೊಂದಲಗಳಿವೆ. ಜಾತಿಗಳು ಹಿಂದೂ ಧರ್ಮದ ವೈದಿಕ ಸಂಪ್ರದಾಯದ ಹಿಡಿತಕ್ಕೆ ಹಿಂದಿನಿಂದಲೂ ಸಿಕ್ಕಿದ್ದರಿಂದ, ಈ ಜಾತಿಗಳ ಸಂಪ್ರದಾಯಗಳಲ್ಲಿ ಎಷ್ಟೇ ವ್ಯತ್ಯಾಸಗಳಿದ್ದರೂ ಮೂಲಭೂತವಾಗಿ ಹಿಂದೂ ಧರ್ಮದಿಂದ ಪ್ರತ್ಯೇಕ ಅಸ್ತಿತ್ವ ಪಡೆಯಲು ಇವಕ್ಕೆ ಸಾಧ್ಯವಾಗಿಲ್ಲ. ಬುಡಕಟ್ಟುಗಳು ಜಾತಿಗಳಾಗಿ ಪರಿವರ್ತನೆಗೊಂಡಿರುವ ಸಾಧ್ಯತೆಗಳೂ ಇವೆ.

ಇಂತಹ ಅಲೆಮಾರಿ ಜನಾಂಗಗಳು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಭಾರತದ ವಿಸ್ತಾರವಾದ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿವೆ. ಕೆಲವು ಜನಾಂಗಗಳು ಗುಡ್ಡಗಾಡು ಪ್ರದೇಶಗಳಲ್ಲಿ, ಕೆಲವು ಗ್ರಾಮೀಣ ಪ್ರದೇಶಗಳಲ್ಲಿ, ಕೆಲವು ಪಟ್ಟಣ ಪ್ರದೇಶಗಳಲ್ಲಿ ಅಲೆಮಾರಿಗಳಾಗಿ

ತಮ್ಮ ನಡೆ, ನುಡಿ, ವೃತ್ತಿ ಪ್ರವೃತ್ತಿಗಳಿಂದ ತಮ್ಮ ಸಾಂಸ್ಕೃತಿಕ ಅನೇಕ ಅಂಶಗಳನ್ನು ಇಂದಿಗೂ ಉಳಿಸಿಕೊಂಡು ಬಂದು, ಜೀವನ ಸಾಗಿಸುತ್ತಿದ್ದಾರೆ. ಇವರು ಯಾವ ಕಾಲದ ಪ್ರಭಾವಕ್ಕೂ, ಯಾರದೇ ಪ್ರಭಾವಕ್ಕೂ ಮಣಿಯದೇ ತಮ್ಮದೇ ಆದ ಸಂಪ್ರದಾಯದಿಂದ ತಮ್ಮತನವನ್ನು ಉಳಿಸಿಕೊಂಡು ಬಂದಿದ್ದಾರೆ. ಉಪಸಂಸ್ಕೃತಿಗೆ ಸೇರಿದ ಅಲೆಮಾರಿ ಜನಾಂಗದವರು ತಮ್ಮ ಸಂಸ್ಕೃತಿಗೆ ತಕ್ಕಂತೆ ವಾಸಿಸುವ ಸುತ್ತಮುತ್ತಲ ಪರಿಸರ, ವಾಸಪ್ರದೇಶ, ಪರಂಪರೆ, ಸಮಾಜ ರಚನೆ, ಸಾಮಾಜಿಕ ಸ್ಥಾನಮಾನ, ಸಂಪ್ರದಾಯ, ರೀತಿ-ರಿವಾಜು, ವೇಷ-ಭೂಷಣ, ಕುಲ-ಕಸುಬು, ಜನನ-ಮರಣ, ಮದುವೆ, ಆಹಾರ ಪದ್ಧತಿ, ಭಾಷೆ, ಕಲೆ-ಸಾಹಿತ್ಯ ಮುಂತಾದವುಗಳಲ್ಲಿ ಇವರು ತಮ್ಮ ವಿಶಿಷ್ಟತೆಯನ್ನು ಹೊಂದಿರುತ್ತಾರೆ.

ಇಂತಹ ವೈಶಿಷ್ಟ್ಯಪೂರ್ಣ ಬದುಕಿನ ದಿನಚರಿಯನ್ನು ಹೊಂದಿರುವ ಅಲೆಮಾರಿ ಜನಾಂಗದವರ ಬಗೆಗಿನ ಅಧ್ಯಯನವು ನನ್ನ ವ್ಯಾಪ್ತಿಗೆ ಬರುವಂತೆ ಕುದರಿಮೋತಿಯ ಮೊಹರಂ ಹಬ್ಬದ ಆಚರಣೆಯಲ್ಲಿ ಕಾರ್ಯಕ್ಷೇತ್ರ ಕೈಗೊಂಡಾಗ ಈ ಎಲ್ಲ ಮಹತ್ವದ ವಿಚಾರಗಳು ತಿಳಿದು ಬಂದವು. ಅವರು ನಡೆಸುವ ಜೀವನ ಪದ್ಧತಿ ಇಂದಿನ ಆಧುನಿಕ ಯುಗದ ಸಂದರ್ಭದಲ್ಲಿಯೂ ನಮಗೆ ಆಶ್ಚರ್ಯವುಂಟು ಮಾಡಿದರೂ, ಯಾವುದೇ ಬದಲಾವಣೆಗೆ ಜಗ್ಗದೇ ಅವರು ಆದಿಕಾಲದಿಂದ ತಮ್ಮ ಆಚರಣೆ, ನಂಬಿಕೆಗಳಿಗೇ ಬದ್ಧರಾಗಿ ನಿಂತಿರುವುದು ನಿಜಕ್ಕೂ ಅದ್ಭುತವಾಗಿದೆ.

ಕುದರಿಮೋತಿ ಮೊಹರಂ ಹಬ್ಬದ ಸಂದರ್ಭದಲ್ಲಿ ಅವರು ಮೊಹರಂ ಆಚರಣೆಯನ್ನು ಹೇಗೆ ಆಚರಿಸುತ್ತಾರೆಂದಷ್ಟೇ ಗಮನಿಸದೇ ಕಾರ್ಯಕ್ಷೇತ್ರದಲ್ಲಿ ಅವರ ವಿಶಿಷ್ಟ ಬದುಕಿನ ಹಲವು ಮಜಲುಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಲಾಯಿತು. ಆ ಅಧ್ಯಯನದ ಫಲವೇ ಈ ಸಂಶೋಧನಾ ಮಹಾ ಪ್ರಬಂಧ.

ಇಂತಹ ಮಹತ್ವದ ''ಕುದರಿಮೋತಿ ಮೊಹರಂ ಹಬ್ಬದ ಆಚರಣೆ ಮತ್ತು ಅಲೆಮಾರಿ ಜನಾಂಗಗಳು - ಒಂದು ಅಧ್ಯಯನದ'' ಈ ಸಂಶೋಧನಾ ಮಹಾಪ್ರಬಂಧ ಒಟ್ಟು ಏಳು ಅಧ್ಯಾಯಗಳನ್ನು ಹೊಂದಿದೆ. ಅವುಗಳಲ್ಲಿ ಮೊದಲನೆಯ ಅಧ್ಯಾಯ ''ಅಧ್ಯಯನದ ಉದ್ದೇಶ, ವ್ಯಾಪ್ತಿ' ಮತ್ತು ಮಹತ್ವ' ಇದರಲ್ಲಿ ಹೈದರಾಬಾದ್-ಕರ್ನಾಟಕವು ಮುಸಲ್ಮಾನ ರಾಜರುಗಳ ಆಡಳಿತಕ್ಕೆ ಒಳಪಟ್ಟಿತ್ತು. ದೇಶ ಸ್ವಾತಂತ್ರ್ಯಗೊಂಡ ಮೇಲೆ ಹದಿಮೂರು ತಿಂಗಳ ನಂತರ ಸ್ವಾತಂತ್ರ್ಯವನ್ನು ಪಡೆಯಿತು. ಹೈ.ಕ. ಭಾಗದಲ್ಲಿ ಕೊಪ್ಪಳ ಒಳಗೊಂಡಿದ್ದರಿಂದ ಸಹಜವಾಗಿ ಮುಸ್ಲಿಂ ಸಂಸ್ಕೃತಿಯ ಗಾಢ ಪ್ರಭಾವ ಹೆಚ್ಚಾಗಿದೆ. ಕೊಪ್ಪಳ ಜಿಲ್ಲೆಯ ಕುದರಿಮೋತಿ ಗ್ರಾಮದಲ್ಲಿ ಪ್ರತಿ ವರ್ಷ ಮೊಹರಂ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಇದೇ ಸಮಯದಲ್ಲಿ ಅಲೆಮಾರಿಗಳು ಪಾಲ್ಗೊಳ್ಳುತ್ತಾರೆ. ಇದು ಸಂಶೋಧನೆಯ ಮುಖ್ಯ ವಿಷಯವಾಗಿದೆ. ಇವುಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು, ಮಹತ್ವವನ್ನು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡು ಕೊಂಡಿದ್ದೇನೆ.

ಎರಡನೆಯ ಅಧ್ಯಾಯ ''ಕೊಪ್ಪಳ ಜಿಲ್ಲೆಯ ಭೌಗೋಳಿಕ, ಸಾಂಸ್ಕೃತಿಕ ಪರಿಸರ, ಹಿನ್ನೆಲೆ''.

ಇದರಲ್ಲಿ ಕೊಪ್ಪಳ ನಾಡು ಪುರಾಣಗಳ ಕಾಲದೊಂದಿಗೆ ಗುರುತಿಸಿಕೊಂಡಿರುವುದು ತಿಳಿದು ಬರುತ್ತದೆ. ಬೃಹತ್ ಶಿಲಾಯುಗ, ನೂತನ ಶಿಲಾಯುಗ, ರಾಮಾಯಣ, ಮಹಾಭಾರತದ ಮೊದಲಾದ ಕುರುಹುಗಳು ಇಲ್ಲಿವೆ. ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದಿರುವ ಅಶೋಕನ ಶಾಸನಗಳು ಕೊಪ್ಪಳದಲ್ಲಿ ಇರುವುದು ಹೆಮ್ಮೆ. ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟು ಕೊಪ್ಪಳವು ವಿವಿಧ ಕಾಲಘಟ್ಟಗಳಲ್ಲಿ ತನ್ನದೇ ಆದ ಹಿರಿಮೆಯನ್ನು ಮೆರೆದಿದೆ. ಈ ಕೊಪ್ಪಳದ ಸಾಂಸ್ಕೃತಿಕ ಪರಿಸರದ ಹಿನ್ನೆಲೆ ಅರಿತುಕೊಂಡು ಅಧ್ಯಯನ ಕೈಗೊಂಡಿದ್ದೇನೆ.

ಮೂರನೆಯ ಅಧ್ಯಾಯವಾದ " ಮೊಹರಂ ಹಬ್ಬದ ಹಿನ್ನೆಲೆ, ರಿವಾಯತ್ ಪದಗಳು ಮತ್ತು ಕುದರಿಮೋತಿ ಮೊಹರಂ ಆಚರಣೆ" ಇದರಲ್ಲಿ ಮೊಹರಂ ಹಬ್ಬದ ಐತಿಹಾಸಿಕತೆ, ನನ್ನ ವ್ಯಾಪ್ತಿಗೆ ಬರುವ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುದರಿಮೋತಿ ಗ್ರಾಮದಲ್ಲಿ ಆಚರಿಸುವ ಮೊಹರಂ ಆಚರಣೆ, ಆಚರಣೆಯ ಸ್ಥಳಗಳು, ಅವುಗಳ ಐತಿಹಾಸಿಕತೆ, ಮಹತ್ವ, ಆಚರಿಸುವ ವಿಧಾನ ಮತ್ತು ಮೊಹರಂ ಹಬ್ಬದಲ್ಲಿ ಹಾಡಲಾಡುವ ರಿವಾಯತ್ ಪದಗಳ ಅಧ್ಯಯನ ಮಾಡಿದ್ದೇನೆ. ಮೊಹರಂ ಹಬ್ಬದ ಮತ್ತು ರಿವಾಯತ್ ಪದಗಳ ವಿಶಿಷ್ಟತೆ, ಹಾಡುವ ಸಂದರ್ಭ, ಶೈಲಿ ಮತ್ತು ಜಿಲ್ಲೆಯ ಪ್ರಮುಖ ಕೇಂದ್ರವಾದ ಕುದರಿಮೋತಿಯ ಬಗ್ಗೆ ವಿಶೇಷವಾಗಿ ಕಾಳಜಿ ವಹಿಸಿದ್ದು ಈ ಅಧ್ಯಾಯದಲ್ಲಿ ಒಳಗೊಂಡಿದೆ.

ನಾಲ್ಕನೆಯ ಅಧ್ಯಾಯ "ಮೊಹರಂ ಹಬ್ಬಕ್ಕೆ ಆಗಮಿಸುವ ಅಲೆಮಾರಿ ಜನಾಂಗಗಳು" ಇದರಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ದೇಶದ ಮೂಲೆ ಮೂಲೆಗಳಿಂದ ಕುದರಿಮೋತಿ ಗ್ರಾಮಕ್ಕೆ ಆಗಮಿಸುವ ಹಗಲುವೇಷಗಾರರು, ಸುಡಗಾಡು ಸಿದ್ದರು, ಗೋಂಧಳಿಗರು, ಸಿಂಧೊಳ್ಳರು (ದುರಮುರಗಿಯವರು), ದೊಂಬರು, ಹಾವಾಡಿಗರು, ಜಾತಿಗಾರರು ಮೊದಲಾದವರ ಬದುಕಿನ ವಿವಿಧ ಮುಖಗಳು, ಸಾಂಸ್ಕೃತಿಕ ಮಜಲುಗಳು, ಸಂಪ್ರದಾಯ, ನಂಬಿಕೆ, ಆಚರಣೆ ಇವುಗಳನ್ನು ಮೊಹರಂ ಹಬ್ಬದ ಸಂದರ್ಭದಲ್ಲಿ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಬಹುಮುಖಿ ವಿಚಾರಗಳಿಂದ ಸಂಶೋಧನಾ ಅಧ್ಯಯನ ಮಾಡಿದ್ದೇನೆ.

ಐದನೆಯ ಅಧ್ಯಾಯ "ಅಲೆಮಾರಿಗಳ ಸಂಪ್ರದಾಯ, ನಂಬಿಕೆ ಆಚರಣೆಗಳು" ಇದರಲ್ಲಿ ಎಲ್ಲ ಅಲೆಮಾರಿ ಜನಾಂಗದವರ ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ವಸ್ತುನಿಷ್ಠ ವಿಷಯಗಳೊಂದಿಗೆ ಅಧ್ಯಯನ ಮಾಡಿದ್ದೇನೆ.

ಆರನೆಯ ಅಧ್ಯಾಯ "ಅಲೆಮಾರಿಗಳ ಸಮಸ್ಯೆಗಳು ಮತ್ತು ದೈವ ಸನ್ನಿಧಿಯಲ್ಲಿ ಕಂಡುಕೊಳ್ಳುವ ಪರಿಹಾರಗಳು" ಇದರಲ್ಲಿ ಕುದರಿಮೋತಿ ಗ್ರಾಮಕ್ಕೆ ಆಗಮಿಸುವ ಎಲ್ಲ ಅಲೆಮಾರಿ ಜನಾಂಗದವರ ತಮ್ಮ ಮೂಲ ದೈವತ್ವದ ಮೇಲೆ, ಕುದರಿಮೋತಿಯ ಕಂದನಕೇರಿ ಮಸೀದಿಯಲ್ಲಿ ಆಚರಿಸುವ ಮೊಹರಂ ದೈವದ ಸನ್ನಿಧಿಯಲ್ಲಿ ತಮ್ಮ ಸಮಸ್ಯೆಗಳಿಗೆ ಕಂಡುಕೊಳ್ಳುವ ಪರಿಹಾರಗಳ ಬಗ್ಗೆ ಅಧ್ಯಯನ ಮಾಡಿದ್ದೇನೆ.

ಇನ್ನು ಏಳನೆಯ ಮತ್ತು ಕೊನೆಯ ಅಧ್ಯಾಯವಾದ "ಸಮಾರೋಪದಲ್ಲಿ" ಎಲ್ಲ ವಸ್ತುನಿಷ್ಠ

ವಿಷಯುಗಳನ್ನು ತಿಳಿಸಿ ಸಂಶೋಧನಾ ಪರಂಪರೆಯಂತೆ ಸಮಾರೋಪವನ್ನು ಮಾಡಿ ಮುಕ್ತಾಯಗೊಳಿಸಿದ್ದೇನೆ.

ಒಟ್ಟಾರೆ ಮೊಹರಂ ಆಚರಣೆ ಕೇವಲ ಒಂದು ಜಾತಿಗೆ ಸೀಮಿತವಾದ, ಒಂದು ಧರ್ಮಕ್ಕೆ ಸೀಮಿತವಾದ ಹಬ್ಬಗಳಾಗಿರದೇ ಸರ್ವರಿಗೂ, ಸರ್ವ ಧರ್ಮಗಳಿಗೂ ಅನ್ವಯವಾಗುವ ವೈಚಾರಿಕತೆ, ಮಹತ್ವವನ್ನು ಒಳಗೊಂಡಿದೆ.

ಹೀಗೆ ಸಾಮಾಜಿಕ ಜಾಗೃತಿ, ದೈವ ಪರಂಪರೆ, ಪವಾಡ ಸಾದೃಶ್ಯತೆ, ಚರಿತ್ರೆ, ಕಥೆ, ಸವಾಲ್-ಜವಾಬ್ ಹೀಗೆ ವಿವಿಧ ಸ್ತರಗಳಲ್ಲಿ ವಿವಿಧ ರೀತಿಯಲ್ಲಿ ತನ್ನದೇ ಆದ ಭಾವನೆಗಳನ್ನು ವ್ಯಕ್ತಪಡಿಸುತ್ತ ಬಂದಿರುವ ಮೊಹರಂ ಹಬ್ಬದ ಆಚರಣೆ ಒಂದು ಅದ್ಭುತ ಹಬ್ಬ ಹೈದರಾಬಾದ - ಕರ್ನಾಟಕ ಪ್ರದೇಶದ ಭಾಗವಾಗಿರುವ ಕೊಪ್ಪಳ ಮತ್ತು ಕೊಪ್ಪಳ ಜಿಲ್ಲೆಯ ನಾಲ್ಕು ತಾಲೂಕುಗಳು ಮೊಹರಂ ಹಬ್ಬದ ಮತ್ತು ಕುದರಿಮೋತಿ ಮೊಹರಂ ಹಬ್ಬದ ವ್ಯಾಪ್ತಿಗೆ ಒಳಪಟ್ಟಂತೆ ಅನೇಕ ಮೊಹರಂ ಹಬ್ಬದ ಆಚರಣೆಯ ಸ್ಥಳಗಳು, ಮೊಹರಂ ಹಬ್ಬದ ಆಚರಣೆಯ ಬಗ್ಗೆ, ಮೊಹರಂ ಹಬ್ಬಕ್ಕೆ ಎರಡು ವರ್ಷಗಳಿಗೊಮ್ಮೆ ದೇಶದ ನಾನಾ ಮೂಲೆಗಳಿಂದ ಹರಿದು ಬರುವ ಅಲೆಮಾರಿ ಜನಾಂಗದ ಜನಸಾಗರ, ಅವರ ಜೀವನ ಕ್ರಮ, ಅವರ ಆಚರಣೆಗಳು, ನಂಬಿಕೆಗಳು ಮತ್ತು ಅವರ ದಿನಚರಿಗಳ ಬಗ್ಗೆ ಈ ಮಹಾಪ್ರಬಂಧ ಸಂಶೋಧನೆಯ ಸಮಗ್ರ ಸಂಶೋಧನಾ ಮಾಹಿತಿ ನೀಡುತ್ತದೆ.

ಅನುಬಂಧ

1) ಕೊಪ್ಪಳ ಜಿಲ್ಲೆಯ ನಕ್ಷೆ

2) ಕುದರಿಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿಗಳ ಕೆಲವು ಭಾವಚಿತ್ರಗಳು

3) ವಕ್ತೃಗಳ ಪರಿಚಯ

4) ಆಕರ ಗ್ರಂಥಗಳು

ಕೊಪ್ಪಳ ಜಿಲ್ಲೆಯ ನಕ್ಷೆ





ಕುದರಿಮೋತಿ ಮೊಹರಂ ಆಚರಣೆಯಲ್ಲಿ ಪ್ರತಿಷ್ಠಾಪಿಸಿರುವ ಹಜರತ್ ಹುಸೇನಿ ಆಲಂಮತ್ತು ಇನ್ನಿತರ ದೇವರುಗಳು



ಕುದರಿಮೋತಿ ಗ್ರಾಮದ ಮೊಹರಂ ಹಬ್ಬಕ್ಕೆ ಆಗಮಿಸುತ್ತಿರುವ ಅಲೆಮಾರಿ ಜನಾಂಗದವರು



ಕುದರಿಮೋತಿಯಲ್ಲಿ ತಾತ್ಕಾಲಿಕ ಡೇರೆಯಲ್ಲಿ ವಾಸವಾದ ಅಲೆಮಾರಿಗಳು ಕಲ್ಲುಗಳನ್ನೇ
ಒಲೆಗಳನ್ನಾಗಿಮಾಡಿಕೊಂಡು ಅಡುಗೆ ಮಾಡುತ್ತಿರುವುದು



ಕುದರಿಮೋತಿ ಮೊಹರಂಆಚರಣೆಯಲ್ಲಿ ಭಕ್ತರು ಹರಕೆಯನ್ನು ತೀರಿಸಲು ಹುಲಿವೇಷಧರಿಸಿ ಕುಣಿಯುತ್ತಿರುವುದು



ಕುದರಿಮೋತಿಯಮೊಹರಂ ಆಚರಣೆಗೆ ಬರುವ ಅಲೆಮಾರಿಗಳು ವಾಸಕ್ಕಾಗಿ ಡೇರೆಗಳನ್ನು ಹಾಕಿಬೀಡು ಬಿಟ್ಟಿರುವುದು



ಕುದರಿಮೋತಿ ಮೊಹರಂ ಆಚರಣೆಗೆ ಬರುವ ಅಲೆಮಾರಿ ಜನಾಂಗದವರಲ್ಲಿ ಒಬ್ಬರಾದ ಸುಡುಗಾಡುಸಿದ್ಧರು



ವೃತ್ತಿನಿರತ ಗೊಂಧಳಿಗರು ಮತ್ತು ಅವರ ವೇಷಭೂಷಣ



ಸಿಂಧೊಳ್ಳು (ದುರಮುರಗಿ) ಯವರ ವೇಷಭೊಷಣ



ಅಲೆಮಾರಿ ಡೊಂಬರ
ಡಂಬಿನ ಪ್ರದರ್ಶನದ ಕಲೆ

ಸುಡುಗಾಡುಸಿದ್ಧರು ಯಕ್ಷವಿದ್ಯೆ
ಪ್ರದರ್ಶಿಸುತ್ತಿರುವುದು



ವಕ್ತೃಗಳ ಪರಿಚಯ

ಕ್ರ.ಸಂ. ವಕ್ತೃಗಳ ಹೆಸರು	ವಯಸ್ಸು	ಶಿಕ್ಷಣ	ಉದ್ಯೋಗ	ಊರು
೧) ಬಾಬುಸಾಬ ಕಿಲ್ಲೇದಾರ	೭೬	ಅನಕ್ಷರಸ್ಥ	ರೈತ	ಬಹಾದ್ದೂರ ಬಂಡಿ
೨) ಮಾಬುಸಾಬ ಕಿಲ್ಲೇದಾರ	೭೦	ಅನಕ್ಷರಸ್ಥ	ರೈತ	ಬಹದ್ದೂರ ಬಂಡಿ
೩) ಅಬ್ದುಲ್ ರವುಫ್ ಕಿಲ್ಲೆದಾರ	೪೨	ಅಕ್ಷರಸ್ಥ	ಸಮಾಜಸೇವೆ	ಬಹದ್ದೂರ ಬಂಡಿ
೪) ಇಬ್ರಾಹಿಂಸಾಬ	೬೦	ಅನಕ್ಷರಸ್ಥ	ಮುಜಾವರ್	ಬಹಾದ್ದೂರ ಬಂಡಿ
೫) ಮರಿಯಪ್ಪ ಹರಿಜನ	೫೫	ಅನಕ್ಷರಸ್ಥ	ರೈತ	ಬಹಾದ್ದೂರ ಬಂಡಿ
೬) ಸಂಗಣ್ಣ ಭೂತಣ್ಣನವರ	೫೨	ಅಕ್ಷರಸ್ಥ	ಕಾರ್ಮಿಕ	ಚಿಕ್ಕ ಸಿಂದೋಗಿ
೭) ಕನಕಪ್ಪ ನಾಯಕ	೪೨	ಪದವಿ	ಪೋಲೀಸ್	ಚಿಕ್ಕ ಸಿಂದೋಗಿ
೮) ಹುಸೇನ-ಜ್ಯೋತಿ	೩೦-೨೬	ಅನಕ್ಷರಸ್ಥರು	ದಂಪತಿಗಳು	ಅಲೆಮಾರಿಗಳು
೯) ಜಮ್ಮಣ್ಣ	೪೫	ಅನಕ್ಷರಸ್ಥ	ಹಗಲುವೇಷಗಾರ	ಅಲೆಮಾರಿ
೧೦) ಫಕೀರಪ್ಪ ಚೌಡಿಕಿ	೧೮	ಅಕ್ಷರಸ್ಥ	ವಿದ್ಯಾರ್ಥಿ	ಕುದರಿಮೋತಿ
೧೧) ಲಕ್ಷ್ಮಣ್ಣ ದೊಡ್ಡಮನಿ	೪೦	ಅಕ್ಷರಸ್ಥ	ರೈತ	ಕುದರಿಮೋತಿ
೧೨) ಸುಬಿಮುನಿಯಪ್ಪ	೨೦	ಅನಕ್ಷರಸ್ಥ	ರೈತ	ಕುದರಿಮೋತಿ
೧೩) ಸಿಗ್ನಳ್ಳಿ ಮಂಜುನಾಥ	೩೦	ಅಕ್ಷರಸ್ಥ	ರೈತ	ಕುದರಿಮೋತಿ
೧೪) ಶಿವಪ್ಪ ದೊಡ್ಡಮನಿ	೪೦	ಅನಕ್ಷರಸ್ಥ	ರೈತ	ಕುದರಿಮೋತಿ
೧೫) ಹುಸೇನ್ ಮಕಾನ್‌ದಾರ	೨೦	ಅಕ್ಷರಸ್ಥ	ರೈತ	ಕುದರಿಮೋತಿ
೧೬) ಗೌಸುಸಾಬ	೩೫	ಅನಕ್ಷರಸ್ಥ	ರೈತ	ಕುದರಿಮೋತಿ
೧೭) ಹನುಮಂತ-ಸವಿತಾ	೩೩-೨೮	ಅನಕ್ಷರಸ್ಥರು	ದಂಪತಿಗಳು	ಅಲೆಮಾರಿಗಳು
೧೮) ಮೈನುದ್ದೀನ್ ಮಕಾನ್‌ದಾರ್	೪೬	ಅಕ್ಷರಸ್ಥ	ಮುಜಾವರ್	ಕುದರಿಮೋತಿ
೧೯) ಜನಾಬ್ ಹುಸೇನ್‌ಶಾ ಮಕಾನ್‌ದಾರ್	೫೦	ಅಕ್ಷರಸ್ಥ	ಮುಜಾವರ್	ಕುದರಿಮೋತಿ
೨೦) ಅಕ್ಬರ್ ಸಿ. ಕಾಲಿಮಿರ್ಚಿ	೪೦	ಅಕ್ಷರಸ್ಥ	ಫಾರ್ಮಸಿ	ಮಂಗಳೂರು
೨೧) ರಜಾಕ್‌ಸಾಬ ಬಿಸರಳ್ಳಿ	೭೦	ಅನಕ್ಷರಸ್ಥ	ರೈತ	ಬಿಸರಳ್ಳಿ
೨೨) ಇಬ್ರಾಹಿಂಸಾಬ್ ಕುದರಿಮೋತಿ	೩೩	ಅಕ್ಷರಸ್ಥ	ಉಪನ್ಯಾಸಕ	ಕೊಪ್ಪಳ

ಆಕರ ಗ್ರಂಥಗಳು

ಕ್ರ. ಸಂ.	ಪುಸ್ತಕದ ಹೆಸರು	ಲೇಖಕರು/ಪ್ರಕಾಶಕರು/ಮುದ್ರಣದ ವರ್ಷ
೧)	ತಿರುಳ್ಗನ್ನಡ	ಸಂ : ಎಚ್.ಎಸ್. ಪಾಟೀಲ, ಅಲ್ಲಮಪ್ರಭು ಬೆಟ್ಟದೂರು ಪ್ರಕಾಶಕರು : ಸ್ವಾಗತ ಸಮಿತಿ 62 ನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನ ಕೊಪ್ಪಳ - ೧೯೯೨
೨)	ಕೊಪ್ಪಳ ಸಾಂಸ್ಕೃತಿಕ ಪರಂಪರೆ	ಬಿ.ಸಿ. ಪಾಟೀಲ ಹರಿಹರ ಪ್ರಕಾಶನ, ಕೊಪ್ಪಳ - ೧೯೯೮
೩)	ಕೊಪ್ಪಳ ಜಿಲ್ಲಾ ದರ್ಶನ	ಸಂ. : ಪ್ರೊ. ಅಲ್ಲಮಪ್ರಭು ಬೆಟ್ಟದೂರು ಎಚ್. ಎಸ್. ಪಾಟೀಲ ಬೆಳ್ಳಿಬೆಳಕು ಮಾಲೆ, ಜಿಲ್ಲಾ ದರ್ಶನ ಸಂಪುಟ ಗು.ವಿ.ಗು. ಪ್ರಸಾರಾಂಗ - ೨೦೦೫
೪)	ಕರ್ನಾಟಕ ಮುಸ್ಲಿಂ ಜಾನಪದ	ಡಾ. ಷಹಸೀನಾ ಬೇಗಂ ಪ್ರಕಾಶಕರು : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೦
೫)	ಜಾನಪದ ಸೃಷ್ಟಿ-ದೃಷ್ಟಿ	ಹಸನಬಿ ಬೀಳಗಿ ಸಾಯಿ ಪ್ರಕಾಶನ, ಧಾರವಾಡ - ೨೦೦೦

೬)	ಸೂಫಿ ಸಂಪ್ರದಾಯ ತತ್ವಜ್ಞಾನ ಮತ್ತು ಕಾರ್ಯ	ಮೂಲ : ಸೇತುಮಾಧವರಾವ್ ಪಗಡಿ ಅನುವಾದ: ವಿಠಲ್‌ರಾವ್ ಗಾಯಕ್ವಾಡ್ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೪
೭)	ಇಸ್ಲಾಮ್ ಧರ್ಮ	ಸಯ್ಯದ್ ಅಬುಲ್ ಆಲಾ ಮೌದೂದಿ ಶಾಂತಿ ಪ್ರಕಾಶನ, ಮಂಗಳೂರು - ೧೯೯೩
೮)	ಕನ್ನಡ ಜಾನಪದ ಪ್ರಜ್ಞೆ	ಲೇಖಕರು : ಡಾ. ವೀರಣ್ಣ ದಂಡೆ ಪ್ರಕಾಶನ : ಗು.ವಿ.ಗು. - ೧೯೯೩
೯)	ಜಾನಪದ ಅಧ್ಯಯನ	ಲೇಖಕರು : ದೇ.ಜ.ಗೌ. ಪ್ರಕಾಶನ : ಕನ್ನಡ ಪುಸ್ತಕ ಪ್ರಾಧಿಕಾರ ಮೂರನೇ ಮುದ್ರಣ, - ೨೦೦೧
೧೦)	ಮೊಹರಂ ಪದಗಳು	ಡಾ. ದಸ್ತಗೀರ್ ಅಲ್ಲೀಬಾಯಿ ಪ್ರಕಾಶನ : ಐಬಿಎಚ್ ಪ್ರಕಾಶನ ಬೆಂಗಳೂರು, - ೧೯೮೪
೧೧)	ಕಲಬುರ್ಗಿ ಜಿಲ್ಲೆಯ ಮೊಹರಂ ಪದಗಳು	ಡಾ. ಚಿನ್ನಣ್ಣ ವಾಲೀಕಾರ ಪ್ರಕಾಶನ : ಮೈಸೂರು ವಿ.ವಿ. - ೧೯೮೩
೧೨)	ಕರ್ನಾಟಕದ ಸೂಫಿಗಳು	ಡಾ. ರಹಮತ್ ತರೀಕೆರೆ ಪ್ರಕಾಶನ : ಹಂಪಿ ವಿ.ವಿ. - ೧೯೯೮

೧೩)	ಜಾನಪದ ಕೈಪಿಡಿ	ಎಚ್.ಜಿ. ಲಕ್ಕಪ್ಪಗೌಡ ಪ್ರಕಾಶನ : ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, - ೧೯೯೭
೧೪)	ತಪ್ಪು ಕಲ್ಪನೆಗಳು .. ?	ಇಬ್ರಾಹೀಮ್ ಸಈದ್ ಶಾಂತಿ ಪ್ರಕಾಶನ, ಮಂಗಳೂರು - ೧೯೯೩
೧೫)	ಇಸ್ಲಾಂ ಸಂಸ್ಕೃತಿ	ಮೂಲ : ಪ್ರೊ. ಮಹಮ್ಮದ್ ಅಬ್ಬಾಸ್ ಶೂಸ್ತ್ರಿ ಅನುವಾದ : ಬಿ.ಎಂ.ಶ್ರೀ. ಪ್ರಕಾಶನ : ಮೈಸೂರು ವಿ.ವಿ., - ೧೯೪೮
೧೬)	ರಿವಾಯತ್ ಪದಗಳು	ಸಂ. ಶೇಜ್ಞು ಕಟ್ಟಿಮನಿ ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, - ೧೯೮೨
೧೭)	ರಿವಾಯತ್‌ಗಳು	ಸಂ. ಪ್ರೊ. ಶ್ರೀಮತಿ ಎಚ್.ಎಂ. ಬೀಳಗಿ ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, - ೧೯೮೨
೧೮)	ವಿಮೋಚನೆ	ಸಂ. ಅಲ್ಲಮಪ್ರಭು ಬೆಟ್ಟದೂರು, ಎಚ್.ಎಸ್. ಪಾಟೀಲ, ಗವಿಸಿದ್ದ ಎನ್. ಬಳ್ಳಾರಿ ಪ್ರಕಾಶಕರು : ಜಿಲ್ಲಾದಲಿತ ಕೊಪ್ಪಳ ೧೯೯೯

೧೯)	ಜಾನಪದ ಸ್ವರೂಪ	ಡಾ. ಹಾ.ಮಾ. ನಾಯಕ ಇ-ವಿ ಸ್ಮಾರಕ ಗ್ರಂಥಮಾಲೆ, ೧೯೭೧
೨೦)	ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು	ಡಾ. ಜಿ.ಶಂ. ಪರಮಶಿವಯ್ಯ ಪ್ರಕಾಶಕರು : ಮೈಸೂರು ವಿ.ವಿ., - ೧೯೭೦
೨೧)	ಜಾನಪದ ವೈವಿಧ್ಯ	ಡಾ. ಎಂ. ಭೈರೇಗೌಡ ಶಕ್ತಿ ಮುದ್ರಣ ಮತ್ತು ಪ್ರಕಾಶನ ಬೆಂಗಳೂರು, - ೧೯೯೯
೨೨)	ಹಗಲುವೇಷದವರ ಸಂಸ್ಕೃತಿ	ಯಳನಾಡು ಅಂಜನಪ್ಪ ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, - ೧೯೯೩
೨೩)	ಸುಡುಗಾಡು ಸಿದ್ದರ ಸಂಸ್ಕೃತಿ	ಡಾ. ಪಿ.ಕೆ. ಖಂಡೋಬಾ ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, - ೧೯೯೩
೨೪)	ಕರ್ನಾಟಕ ಸುಡುಗಾಡು ಸಿದ್ದರು - ಒಂದು ಅಧ್ಯಯನ	ಡಾ. ಟಿ.ಎಂ. ಭಾಸ್ಕರ ಪಿ.ಎಚ್.ಡಿ. ಮಹಾಪ್ರಬಂಧ ಗುಲಬರ್ಗಾ ವಿಶ್ವವಿದ್ಯಾಲಯ

೨೫)	ಸಿಂಧೊಳ್ಳು	ಡಾ. ದೊಡ್ಡಮನಿ ಲೋಕರಾಜ ಶ್ರೀನಿವಾಸ ಎಸ್. ರಾವುಲೋಳ್ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, - ೨೦೦೮
೨೬)	ದುರಮುರಗಿಯ ಸಂಸ್ಕೃತಿ	ಗೀತಾ ನಾಗಭೂಷಣ ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, - ೧೯೯೩
೨೭)	ಗೋಂಧಳಿ	ಶಿವಾನಂದ ಲ. ಪಾಚಂಗಿ ಉಪಸಂಸ್ಕೃತಿ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, - ೨೦೦೮
೨೮)	ಗೊಂದಲಿಗರು	ಡಾ. ನಿಂಗಣ್ಣ ಸಣ್ಣಕ್ಕಿ ಪಿ.ಎಚ್.ಡಿ. ಮಹಾಪ್ರಬಂಧ ವಿಶ್ವವಿದ್ಯಾಲಯ
೨೯)	ದೊಂಬರ ಸಂಸ್ಕೃತಿ	ದೇವೇಂದ್ರ ಕುಮಾರ ಸಿ. ಹಕಾರಿ ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, - ೧೯೯೩

೩೦) ಅಡವಿಚೆಂಚರ ಸಂಸ್ಕೃತಿ — ಪ್ರಹ್ಲಾದ್ ಬೆಟಗೇರಿ
ಉಪಸಂಸ್ಕೃತಿ ಅಧ್ಯಯನ,
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು, - ೧೯೯೩

೩೧) ಕಪ್ಪೆ ಹೊಲೆಯರ ಸಂಸ್ಕೃತಿ — ಕೇಶವ ಪ್ರಸಾದ
ಉಪಸಂಸ್ಕೃತಿ ಅಧ್ಯಯನ,
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು, - ೧೯೯೩

೩೧) ಕಪ್ಪೆ ಹೊಲೆಯರ ಸಂಸ್ಕೃತಿ — ಕೇಶವ ಪ್ರಸಾದ
ಉಪಸಂಸ್ಕೃತಿ ಅಧ್ಯಯನ,
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು, - ೧೯೯೩